ಷೇಕ್ಸ್‌ಪಿಯರ್ ಮಹಾಕವಿಯ

# ನಾಟಕ ಕಥಾನುವಾದ

---

# TALES FROM SHAKESPEARE

ADAPTED FROM THOSE WRITTEN BY CHARLES AND MARY LAMB

BY

V. L. NARASIMHA SASTRI

Mysore:
CHRISTIAN LITERATURE SOCIETY
1917

Price 8 As. ಕ್ರಯ ೮ ಅಣೆ.

NATIONAL LIBRARY
NO. 5051
DATE 10.3.61
CALCUTTA

PRINTED AT THE WESLEYAN MISSION PRESS,
MYSORE CITY.

# ಪೀಠಿಕೆ

ಭರತಖಂಡಕ್ಕೆ ಕಾಳಿದಾಸನು ಹೇಗೋ ಆಂಗ್ಲೇಯ ದೇಶಕ್ಕೆ ಷೇಕ್ಸ್ಪಿಯರ್ ಹಾಗೆ ಸುಪ್ರಸಿದ್ಧನಾದ ಕವಿಯಾಗಿರುತ್ತಾನೆ. ಆತನು ರಚಿಸಿದ ನಾಟಕಗಳು ಪಂಡಿತಪಾಮರರನ್ನು ಆನಂದಗೊಳಿಸುತ್ತ ಲೋಕವ್ಯವಹಾರವನ್ನೂ ನೀತಿಯನ್ನೂ ಬೋಧಿಸುತ್ತ ಸರ್ವದಾ ಸರ್ವರಿಂದಲೂ ಸಂಭಾವನೀಯವಾಗಿವೆ. ಆ ಕವಿಸಾರ್ವಭೌಮನ ನಾಟಕಗಳನ್ನು ವ್ಯಾಸಂಗ ಮಾಡುವವರಿಗೆ ಆ ನಾಟಕಗಳ ವಿಚಾರವನ್ನು ಸ್ವಲ್ಪ ಪರಿಚಯಗೊಳಿಸಬೇಕೆಂದು ಚಾರಲ್ಸ್ ಮತ್ತು ಮೇರಿ ಲಾಂಬ್ ಎಂಬುವವರು ಆ ನಾಟಕಗಳಲ್ಲಿ ಇತಿಹಾಸ ಸಂಬಂಧವಾದವುಗಳನ್ನು ಬಿಟ್ಟು ೨೦ ನಾಟಕಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಕಥಾರೂಪವಾಗಿ ರಚಿಸಿದರು. ಆ ಪುಸ್ತಕವನ್ನು ಇಂಗ್ಲಿಷ್ ಭಾಷಾಭ್ಯಾಸಿಗಳಲ್ಲಿ ಓದದವರೇ ಅಪೂರ್ವ.

ಆ ಕವಿಯ ನಾಟಕಗಳ ಕಥೆಯನ್ನು ಕನ್ನಡಿಗರಿಗೆ ಅರ್ಪಿಸುವ ಕುತೂಹಲದಿಂದ ನಾನು ಅವುಗಳನ್ನು ಭಾಷಾಂತರಿಸಲುಪಕ್ರಮಿಸಿ ಸದ್ಯಕ್ಕೆ ೮ ಕಥೆಗಳನ್ನು ಮಾತ್ರ ಪ್ರಕಟಿಸಿರುತ್ತೇನೆ. ಇವುಗಳಿಗೆ ನಮ್ಮ ದೇಶಬಾಂಧವರು ಕೊಡುವ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಿರುವೆನು. ಈ ಪುಸ್ತಕದಲ್ಲಿರಬಹುದಾದ ದೋಷಗಳನ್ನು ವಾಚಕರು ದಯಮಾಡಿ ತಿಳಿಸಿದರೆ ನಾನು ಬಹಳ ಕೃತಜ್ಞನಾಗಿರುವೆನು.

ತುಮಕೂರು,

ಮೇ, 1909. ವ್ಯಾಕರಣ ಲಕ್ಷ್ಮೀನರಸಿಂಹಶಾಸ್ತ್ರಿ.

1. Julius Caesar . 22 + 6 = 28
2. Antony & Cleopatra 23 + 6 = 29
3. Hamlet - 20 + 5 = 25
4. Macbeth 17 + 5 = 22
5. The Merchant of Venice 20 + 5 = 25
6. Twelfth Night 22 + 6 = 28
7. The Two Gentlemen of Verona 18 + 5 = 23

# ವಿಷಯ ಸೂಚನೆ

177


ಪುಟ

1 King Lear
ಲಿಯರ್ ಎಂಬ ಅರಸನು .... . . 1

2 As You Like It
ನಿನ್ನ ಇಷ್ಟದಂತೆ ..... ..... .... ..... 27

3 Two Gentlemen of Verona
ವೆರೋನಾ ನಗರದ ಇಬ್ಬರು ದೊಡ್ಡ ಮನುಷ್ಯರು .... . 51

4 Cymbeline
ಸಿಂಬಲೀನ್ .... ..... .... .... 74

5 Twelfth Night
ಹನ್ನೆರಡನೆಯ ರಾತ್ರಿ ..... ..... ... . 94

6 The Winter's Tale
ಹಿಮಕಾಲದ ಕಥೆಯು . . . .. 114

7 The Tempest
ಬಿರುಗಾಳಿಯು .... ..... ..... .... 130

8 All's Well That Ends Well
ಯಾವುದು ತೀರಿದ ಮೇಲೆ ಒಳ್ಳೆಯದೋ ಅದೇ ಒಳ್ಳೆಯದು ..... 146

# ಶುದ್ಧಾಶುದ್ಧ ಪತ್ರಿಕೆ

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 1 | 10 | ಸ್ಪರ್ಥೇ | ಸ್ಪರ್ದೇ |
| 2 | 2 | ಎಂದು | ಎಂದೂ |
| 3 | 22 | ವಾತ್ಸಲ | ವಾತ್ಸಲ್ಯ |
| 4 | 28 | ಹೊಗು | ಹೋಗು |
| 5 | 28 | ಗಿರುವಿರಿ | ಗಿರುವಿ |
| 6 | 9 | ಕುವರಿರಿಯು | ಕುವರಿಯು |
| 6 | 28 | ಸಹೋದರಿಯುಂತೆ | ಸಹೋದರಿಯುರಂತೆ |
| 7 | 21 | ದುಂದುಗ | ದಂದುಗ |
| 8 | 6 | ಅಸಲಾಸ್ಥತೆ | ಅಸ್ವಸ್ಥತೆ |
| 9 | 17 | ಅವಳ | ತನ್ನ |
| 9 | 23 | ತಕ್ಷಣ | ತತ್ಷಣ |
| 11 | 11 | ಸಲ್ಪಟ್ಟವರೆಂದು | ಸಲ್ಪಟ್ಟರೆಂದು |
| 11 | 18 | ಹೆಸರೇರು | ಹೆಸರೇನು |
| 12 | 27 | ಇವರ | ಇವಳ |
| 17 | 22 | ಅಸುರ | ಆಸುರ |
| 18 | 12 | ಕೊಂಡನು | ಕೊಂಡರು |
| 20 | 20 | ಬಿಕ್ಷುಕ | ಭಿಕ್ಷುಕ |
| 21 | 6 | ತರತಕ್ಕದ್ದು | ತರತಕ್ಕದು |
| 21 | 14 | ಸ್ನೇಹಾದಿಕಾರ | ಸ್ನೇಹಾಧಿಕಾರ |
| 22 | 18 | ಸ್ವಸ್ತ | ಸ್ವಸ್ಥ |
| 23 | 3 | ಹುಚ್ಚ | ಹುಚ್ಚು |
| 23 | 23 | ಇವರಿಂದ | ಇದರಿಂದ |
| 25 | 4 | ನಿಯಾಮಕ | ನ್ನಿಯಾಮಕ |
| 25 | 10 | ನಿರಪರಾಧತ್ವವೂ | ನಿರಪರಾಧವೂ |
| 25 | 15 | ದಳಗಳ | ದಳಗಳು |
| 26 | 12 | ಪ್ರಭುತ್ವವನ್ನು | ಪ್ರಭುವನ್ನು |
| 26 | 13 | ಅವರ | ಅವನ |
| 27 | 15 | ಓಳ್ಳೇ | ಒಳ್ಳೆ |

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 29 | 14 | ಲಕ್ಷಣದಿಂದ | ಲಕ್ಷಣಗಳಿಂದ |
| 29 | 29 | ಮಾಡಿತು | ಮಾಡಿಸಿತು |
| 30 | 17 | ಹೊಂದಿರಲೆಂದು | ಹೊಂದದಿರಲೆಂದು |
| 30 | 17 | ಹಾರೈಸಿದರು | ಹಾರೈಸಿದಳು. |
| 31 | 6 | ಜೀವವಂತ | ಜೀವಂತ |
| 31 | 25 | ಹೋಗುವಾದ | ಹೋಗುವಾಗ |
| 33 | 3–4 | ಸಹಧ್ಯಾಯಿ | ಸಹಾಧ್ಯಾಯಿ |
| 33 | 5 | ಜೀವವಂತ | ಜೀವಂತ |
| 36 | 11 | ಪ್ರೀತಿಸುತ್ತಿದ್ದ | ಪ್ರೀತಿಸುತ್ತಿದ್ದೆ |
| 38 | 12 | ದ್ರವ್ಯವಿಲ್ಲದೆ | ದ್ರವ್ಯವಿಲ್ಲಿದೆ |
| 41 | 6 | ಆಡಾವಾನೂ | ಆಡಾಮನೂ |
| 46 | 13 | ಉಭಯತರ | ಉಭಯರ |
| 48 | 23 | ಯೋಚಿಸಿದ್ದೇನೆಂ | ಯೋಚಿಸಿದ್ದೆನೆಂ |
| 49 | 14 | ಅಣ್ಣನ | ಅತ್ಯಂತ |
| 51 | 10 | ಲಿದ್ದರು | ಲಿದ್ದನು |
| 51 | 20 | ತೊಡಕ್ಕಿಲ್ಲದ | ತೊಡಕಿಲ್ಲದ |
| 55 | 17 | ತಕ್ಷಣ | ತತ್ಷಣ |
| 56 | 24 | ಲಾಗಿದ್ದಳು | ಳಾಗಿದ್ದಳು |
| 56 | 26 | ಅರವನೆಗೆ | ಅರಮನೆಗೆ |
| 66 | 12–13 | ಕೇಳಲ್ಲೊದೆ | ಕೇಳಲೊಲ್ಲದೆ |
| 67 | 7 | ಅಲಕ್ಷತೆ | ಅಲಕ್ಷ್ಯತೆ |
| 67 | 9 | ನನಷ್ಟೇ | ನನ್ನಷ್ಟೇ |
| 93 | 9 | ಜೀವವಂತ | ಜೀವಂತ |
| 97 | 27 | ಪ್ರೀತಿಸಿದರೆ | ಪ್ರೀತಿಸದಿದ್ದರೆ |
| 104 | 28 | ಸುಗಂಧ | ಸುಗಂಧಂ |
| 104 | 30 | ಬಾಳ್ವೆಗೆಣೆಯಾಗಿ | ಬಾಳ್ವೆಗೆಣೆಯಾಗಾ |
| 111 | ಮೊದಲನೇ ಪಙ್ತಿಯನ್ನು ಕೊನೆಯ ಪಙ್ತಿ ಮಾಡಿ | | |
| 112 | 22 | ಭ್ರಮೆಯಿಂದ | ಭ್ರಮೆಯ |
| 112 | 28 | ಲಕ್ಷವು | ಲಕ್ಷ್ಯವು |
| 113 | 7 | ಭಾವಿಸಲ್ಪಟ್ಟಿತು | ಭಾವಿಸಲ್ಪಟ್ಟಿತ್ತು |
| 138 | 7 | ಯಾಗವಿಯಾ | ಯಾಗುವಿಯಾ |
| 146 | 3 | ಕೈಗೊಳ್ಳು | ರಾಜ್ಯವನ್ನು ಕೈಗೊಳ್ಳು |
| 146 | 6 | ಉಳಿದಿದುವು | ಉಳಿದುವು |
| 156 | 15 | ಮಾತಾ ಡಿದಳು | ಮಾತಾಡಿದಳು |

# NOTE

The author of this book has no interest whatsoever in its sale.

**V. L. Narasimhasastri.**

All rights reserved by the publishers.

# ದ್ವಿತೀಯ ಮುದ್ರಣದ ಪೀಠಿಕೆ

ಪ್ರಥಮ ಮುದ್ರಣವು ತಕ್ಕಷ್ಟು ಜಾಗ್ರತೆಯಲ್ಲಿಯೇ ವಿಸ್ತಾರವಾಯಿತು ಕೆಲವು ಮಂದಿ ಸ್ನೇಹಿತರ ಹಿತೋಕ್ತಿಯಂತೆ ಈ ಪ್ರತಿಯನ್ನು ತಕ್ಕಮಟ್ಟಿಗೆ ಶೋಧಿಸಿರುವೆನು.

ಈ ಪುಸ್ತಕದ ಒಂದೊಂದು ಭಾಗವು ಒಂದೊಂದು ಸಲ ಮೈಸೂರು ದೇಶೀಯ ಅಪ್ಪರ್ ಸೆಕೆಂಡರಿ ಪರೀಕ್ಷೆಗೂ ಪಂಡಿತ ಪರೀಕ್ಷೆಗೂ ಮೈಸೂರು ವಿಶ್ವವಿದ್ಯಾಲಯದ B.A. ಪರೀಕ್ಷೆಗೂ ಪಾಠ ಪುಸ್ತಕವಾಗಿ ನಿಯಮಿಸಲ್ಪಟ್ಟುದುದಕ್ಕಾಗಿ ಪರೀಕ್ಷೆಗಳ ಕಾರ್ಯನಿರ್ವಾಹಕ ಸಭೆಯ ಅಧ್ಯಕ್ಷರಿಗೂ ಸಭಿಕರಿಗೂ ಕೃತಜ್ಞನಾಗಿರುವೆನು.

ಕನ್ನಡ ಭಾಷಾ ಸೇವೆಯ ವಿಚಾರದಲ್ಲಿ ಸ್ವಭಾವಾ ಸೇವೆಯಂತೆ ಆದರವುಳ್ಳ C. L. S. ಸಮಾಜದವರ ಉಪಕಾರವು ಚಿರಸ್ಮರಣೀಯವಾದುದು.

ಕನ್ನಡಿಗರಿಗೆ ಓದುವದಕ್ಕೆ ತ್ರೊಡ್ಡಕಾಗದಿರಲೆಂದು ಅಂಕಿತ ನಾಮಗಳಿಗೆ ಬದಲು ಕನ್ನಡ ಹೆಸರೇಕೆ ಇಡಬಾರದಾಗಿತ್ತು ಎಂದು ಪ್ರಶ್ನೆ ಬರಬಹುದು; ಅದಕ್ಕೆ ಅನೇಕ ಕಾರಣಗಳುಂಟು (1) ಕಥೆಯು ಪಶ್ಚಿಮ ದೇಶದ ಆ ಕಾಲದ ಜನರ ನಡೆನುಡಿಗಳನ್ನು ತಿಳಿಸುವುದು. (2) ಕಥೆಯ ಅಂಕಿತ ನಾಮಗಳನ್ನು ಸಹ ಮಹಾಕವಿ ಷೇಕ್ಸ್‌ಪಿಯರನು ಪಾತ್ರದ ಯೋಗ್ಯತೆಗೆ ಅನುಸಾರವಾಗಿ ಅನೇಕ ಸಂದರ್ಭಗಳಲ್ಲಿ ಕಲ್ಪಿಸಿ ಇಟ್ಟಿರುವನು. ನಾನು ಪಾತ್ರದ ಯೋಗ್ಯತೆಯನ್ನು ಅರಿತು ಹೆಸರನ್ನು ನಿರ್ಮಿಸಲು ಯತ್ನಿಸಿದೆನು, ಸಾಧ್ಯವಾಗಲಿಲ್ಲ.

ವಾಚಕ ಮಹಾಶಯರಲ್ಲಿ ಯಾರಾದರೂ ಆ ಇಂಗ್ಲಿಷ್ ಅಂಕಿತ ನಾಮಗಳಿಗೆ ಸರಿಯಾದ ಕನ್ನಡ ಅಂಕಿತ ನಾಮಗಳನ್ನು ತಿಳಿಸಿದರೆ ಅತ್ಯಂತ ಕೃತಜ್ಞನಾಗಿರುವೆನು.

ಇದರಲ್ಲಿರಬಹುದಾದ ದೋಷಗಳನ್ನು ವಾಚಕರು ದಯಮಾಡಿ ತಿಳಿಸಿದಲ್ಲಿ ಕೃತಜ್ಞನಾಗಿರುವೆನು.

ವ್ಯಾಕರಣ ಲಕ್ಷ್ಮೀನರಸಿಹ್ಮಶಾಸ್ತ್ರಿ.

ಡಿಸೆಂಬರ್ 1916,
ತುಂಕೂರು.

# ಷೇಕ್ಸ್‌ಪಿಯರ್ ಮಹಾ ಕವಿಯ ನಾಟಕ ಕಥಾನುವಾದ

## I. KING LEAR

## ೧. ಲಿಯರ್ ಎಂಬ ಅರಸನು

ಒಂದಾನೊಂದು ಕಾಲದಲ್ಲಿ ಬ್ರಿಟನ್ ದೇಶವನ್ನು ಲಿಯರ್ ಎಂಬ ಪ್ರಭುವು ಆಳುತ್ತಿದ್ದನು. ಆತನಿಗೆ ಗಾನರಲ್, ರೀಗನ್, ಕಾರ್ಡೀಲಿಯ, ಎಂಬ ಮೂವರು ಹೆಣ್ಣುಮಕ್ಕಳಿದ್ದರು. ಗಾನರಲ್‌ಳು ಆಲ್‌ಬನಿಯ ಡ್ಯೂಕಿಗೂ ರೀಗನ್‌ಳು ಕಾರನ್‌ವಾಲಿನ ಡ್ಯೂಕಿಗೂ ಪತ್ನಿಯರಾಗಿದ್ದರು. ಕಾರ್ಡೀಲಿಯಳನ್ನು ಮದುವೆಯಾಗುವದಕ್ಕಾಗಿ ಫ್ರಾನ್ಸಿನ ದೊರೆಯೂ ಬರ್ಗಂಡಿಯ ಡ್ಯೂಕೂ ಸ್ಪರ್ಧೆಗಾರರಾಗಿ ಲಿಯರನ ಆಸ್ಥಾನದಲ್ಲಿಯೇ ಇರುತ್ತಿದ್ದರು.

ಲಿಯರನು ವಯೋಧರ್ಮದಿಂದ ಬಡವಾಗಿ ರಾಜಕೀಯ ಕಾರ್ಯಭಾರದಿಂದ ನೊಂದುಹೋಗಿದ್ದನು. ಈತನಿಗೆ ೮೦ ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿತ್ತು. ಆದುದರಿಂದ ರಾಜಕೀಯ ಕಾರ್ಯಗಳಲ್ಲಿ ಇನ್ನು ಮುಂದೆ ಸ್ವಲ್ಪವೂ ಪ್ರವರ್ತಿಸದೆ, ಅವುಗಳನ್ನು ಯುವಕರಿಗೆ ವಹಿಸಿ, ಪರಮೇಶ್ವರಧ್ಯಾನದಲ್ಲಿರುತ್ತಾ ಇಹವ್ಯಾಪಾರಗಳಿಂದ ಮುಕ್ತನಾಗಬೇಕೆಂದು ಸಂಕಲ್ಪಮಾಡಿದನು. ಇದಕ್ಕಾಗಿ ಆತನು ತನ್ನ ಮಕ್ಕಳಲ್ಲಿ ಯಾರು ತನ್ನನ್ನು ವಿಶೇಷವಾಗಿ ಪ್ರೀತಿಸುತ್ತಾರೆಯೋ ಅವರಿಗೆ ಅವರ ಪ್ರೀತಿಗನುಗುಣವಾಗಿ ರಾಜ್ಯವನ್ನು ಭಾಗಮಾಡಿ ಕೊಡಬೇಕೆಂದು ತನ್ನ ಮೂವರು ಮಕ್ಕಳನ್ನು ತನ್ನ ಬಳಿಗೆ ಕರೆದನು.

ಹಿರಿಯ ಮಗಳಾದ ಗಾನರಲ್‌ಳು ತನಗೆ ತನ್ನ ಜನಕನಲ್ಲಿರುವ ಪ್ರೀತಿಯನ್ನು ವಿವರಿಸಲು ಮಾತುಗಳೇ ಸಾಲವೆಂದೂ ನೇತ್ರೇಂದ್ರಿಯ

ಕ್ಕಿಂತಲೂ ಜೀವಿತ ಮತ್ತು ಸ್ವಾತಂತ್ರ್ಯಗಳಿಗಿಂತಲೂ ಆತನು ಅಧಿಕ ವಿಶ್ವಾಸ ಪಾತ್ರನೆಂದು ಹೇಳಿದಳು. ಅರಸನು ಅವಳ ವದನದಿಂದಲೇ ಅವ ಳಿಗೆ ತನ್ನಲ್ಲಿರುವ ಪ್ರೇಮಾತಿಶಯವನ್ನು ಕೇಳಿ ಸಂತಸದಿಂದುಬ್ಬಿ, ಅವಳ ಮಾತುಗಳೆಲ್ಲಾ ಅವಳ ಹೃದಯದಿಂದ ಬಂದವುಗಳೆಂದು ಸ್ವಾಭಾ ವಿಕವಾದ ಜನಕ ವಾತ್ಸಲ್ಯದಿಂದ ಭಾವಿಸಿ, ತನ್ನ ಅಪಾರವಾದ ರಾಜ್ಯದ ಮೂರರಲ್ಲಿ ಒಂದಂಶವನ್ನು ಆ ಮಗಳಿಗೂ ಅಳಿಯನಿಗೂ ಅನು ಗ್ರಹಿಸಿದನು.

ಅನಂತರದಲ್ಲಿ ತನ್ನ ಎರಡನೆಯ ಮಗಳಾದ ರೀಗನ್‌ಳನ್ನು ಕರೆದು ಅವಳು ಏನು ಹೇಳುವಳೆಂಬುದನ್ನು ಕೇಳಿದನು. ಆಕೆಯು—“ ಓ ಜನ ಕನೇ, ಆ ವಿಧಾತನು ನನ್ನನ್ನೂ ನಮ್ಮ ಅಕ್ಕನನ್ನೂ ಒಂದೇ ಅಚ್ಚಿನಿಂದ ನಿರ್ಮಿಸಿದ್ದಾನೆ. ಆದರೆ ಅವಳು ತಮ್ಮಲ್ಲಿರುವ ವಿಶ್ವಾಸವನ್ನು ತಿಳಿಸುವ ದರಲ್ಲಿ ಸ್ವಲ್ಪ ಕಡಮೆಯಾಯಿತು. ಜನಕನೇ! ತಮ್ಮಲ್ಲಿ ನನಗಿರುವ ವಿಶ್ವಾಸಕ್ಕೆ ಸಮವಾವುದೂ ಇಲ್ಲ” ಎಂದಳು.

ಲಿಯರನೂ ಇವರು ಪಿತೃವಾತ್ಸಲ್ಯವುಳ್ಳವರೆಂದು ನೆನೆದುಕೊಂಡಿ ದ್ದನು. ಆದುದರಿಂದ ಇಂತಹ ಮಕ್ಕಳನ್ನು ಪಡೆದಿರುವ ತಾನು ಧನ್ಯ ನೆಂದುಕೊಂಡು, ಆಕೆಗೂ ಆಕೆಯ ಪತಿಗೂ ಗಾನರಲ್‌ಳಿಗೆ ಕೊಟ್ಟ ಭಾಗಕ್ಕಿಂತಲೂ ತಿಲಾಂಶವಾದರೂ ಕೊರತೆಯಿಲ್ಲದ ಇನ್ನೊಂದಂಶ ವನ್ನು ಅನುಗ್ರಹಿಸಿದನು.

ಅನಂತರದಲ್ಲಿ ತನ್ನ ಪ್ರೇಮಸರ್ವಸ್ವವೆಂದು ಕರೆಯುತ್ತಿದ್ದ ಕಿರಿಯ ಮಗಳಾದ ಕಾರ್ಡೀಲಿಯಳ ಕಡೆಗೆ ತಿರುಗಿ, ಅವಳು ಅವಳ ಅಕ್ಕಂದಿ ರಂತೆ ವಿಶ್ವಾಸಪೂರ್ಣವಾದ ಮಾತುಗಳಿಂದ ಕರ್ಣಾನಂದವನ್ನುಂಟುಮಾ ಡದಿರಲಾರಳು. ಅಷ್ಟೇಕೆ? ಅವರಿಬ್ಬರಿಗಿಂತಲೂ ಇವಳು ತಂದೆಯಿಂದ ಹೆಚ್ಚಾಗಿ ಪ್ರೀತಿಸಲ್ಪಡುತ್ತಿದ್ದ ಮುದ್ದು ಕೂಸಾದುದರಿಂದ ಅವರ ಮಧು ರಾಲಾಪಕ್ಕಿಂತಲೂ ಇವಳ ಮಾತುಗಳು ಮಧುರತರವಾಗಿರುತ್ತವೆಂದು ಕೊಂಡು, “ಮಗು, ನೀನೇನೆನ್ನುವಿ” ಎಂದನು. ಕಾರ್ಡೀಲಿಯಳು ತನ್ನ ಅಕ್ಕಂದಿರ ನಾಲಿಗೆಗೂ ಹೃದಯಕ್ಕೂ ಬಹು ದೂರವಿರುವದನ್ನು ಅರಿತವಳಾಗಿ, ಅವರ ಮುಖಸ್ತೋತ್ರದ ಮಾತುಗಳಿಂದ ಜಿಗುಪ್ಸೆಗೊಂ ಡಳು. ಅವರ ಈ ಪ್ರೋತ್ಸಾಹದ ಮಾತುಗಳು ತಂದೆಯಿಂದ ರಾಜ್ಯವನ್ನು ಪಡೆದುಕೊಂಡು ತಂದೆಯು ಜೀವಂತನಾಗಿರುವ ಕಾಲದಲ್ಲಿಯೇ ರಾಜ್ಯ

ವಾಳಬೇಕೆಂಬಭಿಲಾಷೆಯಿಂದ ಹುಟ್ಟಿದವುಗಳೆಂದು ಅರಿತು—“ಜನಕನೇ, ಕರ್ತವ್ಯತಃ ನಾನು ತಮ್ಮನ್ನು ಎಷ್ಟು ಪ್ರೀತಿಸಬೇಕೋ ಅಷ್ಟು ಪ್ರೀತಿಸುತ್ತೇನೆ. ಹೆಚ್ಚಾಗಿಯೂ ಇಲ್ಲ, ಕಡಮೆಯಾಗಿಯೂ ಇಲ್ಲ” ಎಂದಳು.

ಅರಸನು ತನ್ನ ಪ್ರಿಯ ಸುತೆಯ ಈ ರೀತಿಯಾದ ಮಾತುಗಳನ್ನು ಕೃತಘ್ನತೆಯೆಂದು ಭಾವಿಸಿ “ಎಲೌ ಕುವರಿಯೇ ಇನ್ನೊಮ್ಮೆ ಪರ್ಯಾಲೋಚಿಸಿ ನಿನ್ನ ಮಾತುಗಳನ್ನು ಸರಿಪಡಿಸಿಕೋ. ಇಲ್ಲದಿದ್ದರೆ ನಿರ್ಭಾಗ್ಯಳಾದೀಯೇ” ಎಂದನು

ಕಾರ್ಡೀಲಿಯ—“ಪ್ರಭುವೇ, ತಾವು ನನ್ನನ್ನು ಹೆತ್ತಿರಿ. ಲಾಲಿಸಿ ಪಾಲಿಸಿದಿರಿ. ಇವುಗಳಿಗೆ ಬದಲಾಗಿ ನಾನು ಏನುಮಾಡಬಲ್ಲೆನು! ಉಚಿತ ರೀತಿಯಲ್ಲಿ ಆ ಕರ್ತವ್ಯಗಳಿಗೆ ಪ್ರತಿಯನ್ನು ಸಮರ್ಪಿಸುವೆನು. ತಮಗೆ ವಿಧೇಯಳಾಗಿದ್ದು, ತಮ್ಮನ್ನು ಗೌರವಿಸುವೆನು. ನನ್ನ ಅಕ್ಕಂದಿರು ಹೇಳಿದಂತೆ ಹೇಳುವುದಕ್ಕೆ ನನಗೆ ವಾಕ್ಶಕ್ತಿಯಿಲ್ಲ. ಅಲ್ಲದೆ ತಮ್ಮನ್ನು ವಿನಾ ಇನ್ನಾವುದನ್ನೂ ಪ್ರೀತಿಸದಿರುವಂತೆ ವಾಗ್ದಾನವನ್ನೂ ಮಾಡಲಾರೆನು. ಅವರು ಹೇಳಿದಂತೆ, ಅವರ ಪ್ರೀತಿ ಸರ್ವಸ್ವವೂ ತಮ್ಮನ್ನು ವಿನಾ ಇನ್ನಾವುದನ್ನೂ ಹೊಂದದಿರುವ ಸಂದರ್ಭದಲ್ಲಿ ಅವರಿಗೆ ಪತಿಗಳೇತಕ್ಕೆ? ನಾನು ಮದುವೆಯಾದರೆ, ನನ್ನ ಪಾಣಿಗ್ರಹಣ ಮಾಡಿದಾತನು ನನ್ನ ಪ್ರೀತಿ ಕರ್ತವ್ಯಗಳ ಅರ್ಧಕ್ಕೆ ಸ್ವಾಮಿಯಾಗುವನು. ನನ್ನ ಸಹೋದರಿಯರಂತೆ ತಂದೆಯನ್ನು ಮಾತ್ರವೇ ಪ್ರೀತಿಸುವುದಕ್ಕಾಗಿ ನಾನು ಮದುವೆಯಾಗುವುದಿಲ್ಲ” ಎಂದಳು.

ಅರಸನ ಆ ಇಬ್ಬರು ಮಕ್ಕಳು ತಮ್ಮ ಪಿತೃವಾತ್ಸಲ್ಯವನ್ನು ನಟನೆಯಿಂದ ತೋರ್ಪಡಿಸಿಕೊಂಡರು. ಕಿರಿಯ ಮಗಳಾದರೋ ನಿಜವಾದ ವಾತ್ಸಲ್ಯವುಳ್ಳವಳಾಗಿದ್ದಳು. ಎಂದಾದರೂ ಈಕೆಯು ತನಗಿರುವ ಪ್ರೇಮಾತಿಶಯವನ್ನು ತಂದೆಗೆ ಅತಿ ವಿವರವಾಗಿ ಹೇಳುತ್ತಿದ್ದಳು. ಆದರೆ ಅವಳಿಗೆ ಅಯ್ಯೋ! ಪಾಪ! ಮಾತಿಗೆ ಬಣ್ಣವನ್ನು ಕಟ್ಟುವ ವಾಡಿಕೆಯು ಅಪರಿಚಯವಾಗಿತ್ತು. ಆದರಿಂದಲೇ ಆ ಮಾತುಗಳು ಕಿವಿಗೆ ಮಧುವನ್ನು ಕರೆಯುತ್ತಿರಲಿಲ್ಲ. ಆದರೆ ಅವಳು ತನ್ನ ಅಕ್ಕಂದಿರ ಕುಯುಕ್ತಿಯ, ಮುಖಸ್ತುತಿಯ ಮಾತುಗಳು ಅವರಿಗೆ ಅಪಾರವಾದ ಬಹುಮಾನಗಳನ್ನು ಕೊಡಿಸಿದುದನ್ನು ನೋಡಿ, ಜನಕನಲ್ಲಿ ವಾತ್ಸಲ್ಯವಿಡುವದು, ನಿಶ್ಶಬ್ದವಾಗಿರುವುದು, ಇವೇ ತಾನು ಕೈಗೊಳ್ಳಬೇಕಾದ ಮನೋಹರವಾದ ಕಾರ್ಯ

ಗಳೆಂದು ಬಗೆದಳು. ಇವಳ ಮಾತುಗಳು ಪ್ರತಿಫಲಾಪೇಕ್ಷೆಯಿಲ್ಲದೆ ನಿಷ್ಕಲ್ಮಷವಾದ ಪ್ರೀತಿಯಿಂದ ಆಡಿದ ಮಾತುಗಳು. ಇವಳ ಮಾತುಗಳು ಪ್ರದರ್ಶನಾರ್ಥವಾಗಿ ಅಲಂಕರಿಸಲ್ಪಡುವ ಪ್ರತಿಮೆಗಳಂತೆ ಶೋಭಾಯಮಾನವಾಗಿರದಿದ್ದರೂ ನಿಷ್ಕಲಂಕವಾದ ಸತ್ಯತೆಯಿಂದ ಕೂಡಿದ್ದುವು.

ಲಿಯರನು ಸರ್ವಸಂವೃದ್ಧತೆಯ ಒಳ್ಳೆಯ ಕಾಲದಲ್ಲಿಯೇ ವಿಪರೀತವಾದ ಕೋಪವನ್ನೂ ಅವಿಚಾರತೆಯನ್ನೂ ಉಳ್ಳವನಾಗಿದ್ದನು. ಹೀಗಿರಲು ವಾರ್ಧಿಕದ ಅರಳುಮರಳುತನದಿಂದ ಅವನ ವಿಚಾರ ಶಕ್ತಿಯ ಮೇಲೆ ಮೋಡಮುಚ್ಚಿದಂತಾಗಿದ್ದುದರಿಂದ ಸತ್ಯಾಭಾಸಕ್ಕೂ ಸತ್ಯಕ್ಕೂ ಇರುವ ತಾರತಮ್ಯವನ್ನು ಅರಿಯುವದಕ್ಕಾಗದೆ ಹೋಯಿತು. ಆದುದರಿಂದ ಆ ವೃದ್ಧ ಪ್ರಭುವಿಗೆ ದುರಹಂಕಾರದ ಮಾತುಗಳಂತೆ ತೋರಿದ ಕಾರ್ಡೀಲಿಯಳ ನಿಷ್ಕಪಟತೆಯ ಮಾತುಗಳು ರೋಷಾವೇಶವನ್ನುಂಟುಮಾಡಿದುವು. ಅವಳಿಗಾಗಿ ಉಳಿಸಿಟ್ಟಿದ್ದ ರಾಷ್ಟ್ರದ ಆ ಅಂಶವನ್ನು ಅವಳ ಅಕ್ಕಂದಿರಿಗೂ ಅವರ ಪತಿಗಳಿಗೂ ಸಮಭಾಗ ಮಾಡಿಕೊಟ್ಟನು. ಅನಂತರದಲ್ಲಿ ಅಳಿಯಂದಿರಾದ ಆಲ್‌ಬನಿಡ್ಯೂಕನ್ನೂ ಕಾರ್ನ್‌ವಾಲ್‌ಡ್ಯೂಕನ್ನೂ ಕರೆದು, ತನ್ನ ಸಭೆಯ ಮಧ್ಯದಲ್ಲಿ ತನ್ನ ಕಿರೀಟವನ್ನು ಅವರಿಗೆ ಕೊಟ್ಟು, ದೇಶದ ಪರಿಪಾಲನೆಯನ್ನೂ ಸುವರ್ಣಾದಾಯವನ್ನೂ ಸಮಸ್ತ ರಾಜಕಾರ್ಯ ನಿರ್ವಾಹವನ್ನೂ ಅವರಿಗೆ ಒಪ್ಪಿಸಿದನು. ಹೀಗೆ ಪ್ರಭುವಿಗಿರಬೇಕಾದುವುಗಳನ್ನೆಲ್ಲಾ ತ್ಯಜಿಸಿದರೂ ಪ್ರಭುವೆಂಬ ನಾಮಧೇಯವನ್ನು ಮಾತ್ರ ತಾನೇ ಇರಿಸಿಕೊಂಡು, ನೂರು ಮಂದಿ ಪರಿವಾರದೊಡನೆ ಒಬ್ಬೊಬ್ಬ ಕುವರಿಯ ಅರಮನೆಯಲ್ಲಿ ಒಂದೊಂದು ತಿಂಗಳಿನಂತೆ ಪೋಷಿತನಾಗಿರುವುದಾಗಿ ಹೇಳಿದನು. ಬುದ್ಧಿಗೇಡಿನಿಂದ ಇವನು ಮಾಡಿದ ಈ ತೆರದ ರಾಜ್ಯವಿನಿಯೋಗವೂ ಕೋಪಾಕುಲಿತನಾದುದೂ ಇವನ ಸಭಿಕರಿಗೆಲ್ಲಾ ಮಹದಾಶ್ಚರ್ಯವನ್ನೂ ವ್ಯಸನವನ್ನೂ ಉಂಟುಮಾಡಿದುವು. ಆದರೆ ರೌದ್ರಮನಸ್ಕನಾದ ಅರಸನ ಎದುರಿಗೆ ನಿಲ್ಲುವುದಕ್ಕೆ ಕೆಂಟ್ ಎಂಬ ಮಂತ್ರಿಗೆ ವಿನಾ ಇನ್ನಾರಿಗೂ ಧೈರ್ಯವಿರಲಿಲ್ಲ. ಅವನು ಕಾರ್ಡೀಲಿಯಳ ವಿಷಯವಾಗಿ ಸ್ವಲ್ಪ ಒಳ್ಳೆಯ ಮಾತುಗಳನ್ನು ಹೇಳಲುಪಕ್ರಮಿಸಲು, ಕೋಪೋದ್ದೀಪಿತನಾದ ಅರಸಿಗೆ ಮರಣಸಂಕಟದಂತೆ ವೇದನೆಯುಂಟಾಗಿ, ಅವನನ್ನು ದೂರ ತೊಲಗಿಹೋಗುವಂತೆ ಆಜ್ಞೆಮಾಡಿದನು. ಆದರೆ ಗುಣಶಾಲಿಯಾದ ಕೆಂಟ್‌ನು ಓಡಿಸ

ಲ್ಪಡತಕ್ಕವನಲ್ಲ. ಆತನು ನ್ಯಾಯನಿಷ್ಠೆಯಿಂದ ನಡೆಯತಕ್ಕ ಪ್ರಜೆಯಾಗಿ ಅರಸನನ್ನು ಸನ್ಮಾನಿಸುತ್ತ, ತಂದೆಯಂತೆ ಪ್ರೀತಿಸುತ್ತ ಸ್ವಾಮಿಯಂತೆ ಅನುಸರಿಸುತ್ತಲಿದ್ದನು. ಲಿಯರಿನ ಶತ್ರುನಾಶಕ್ಕಾಗಿ ಹೋಣೆಗೈಯಲು ತನ್ನ ಜೀವಿತಕ್ಕೆ ಮೌಲ್ಯವಿಟ್ಟಿದ್ದನಲ್ಲದೆ ಲಿಯರಿನ ಸುರಕ್ಷಿತಕ್ಕಾಗಿ ಆತ್ಮನಿವೇದನಕ್ಕೆ ಹೆದರದವನಾಗಿದ್ದನು. ಆದರೆ ಲಿಯರನು ತನಗೆ ತಾನೇ ಶತ್ರುವಾಗಿದ್ದನು. ಆದರೇನು ? ಪ್ರಭುಭಕ್ತನಾದ ಕೆಂಟನು ತನ್ನ ಮನೋಭಾವದ ಉದ್ದೇಶಗಳನ್ನು ಮರೆತುಬಿಡದೆ, ಪೌರುಷದಿಂದ ಲಿಯರನ ಕ್ಷೇಮಕ್ಕಾಗಿಯೇ ಅವನೊಡನೆವಾದಿಸಿದನು. ಲಿಯರನು ಚಿತ್ತವಿಭ್ರಾಂತನಾಗಿದ್ದುದರಿಂದ ಎಲ್ಲೆಯನ್ನು ಮೀರಿ ವಾದಿಸಿದನು. ಆತನು ಲಿಯರಿಗೆ ಹಿಂದಿನ ಕಾಲಗಳಲ್ಲಿ ಸ್ವಾಮಿಭಕ್ತಿಯುತನಾದ ಮಂತ್ರಾಲೋಚಕನಾಗಿದ್ದನು. ಆದುದರಿಂದ "ಎಲೈ ಪ್ರಭುವೇ, ಈಗಲೂ ನನ್ನದೃಷ್ಟಿಯಿಂದ ನೋಡಿ, ನನ್ನ ಮಂತ್ರಾಲೋಚನೆಯಂತೆ ನಡೆಯಿರಿ. (ಅರಸನು ಹಿಂದೆ ಅನೇಕ ಮಹಾಕಾರ್ಯಗಳನ್ನು ಇವನ ಯೋಚನೆಯಂತೆ ಮಾಡಿದ್ದನು). ತಮ್ಮ ಭಯಂಕರವಾದ ಅವಿಚಾರತೆಯನ್ನು ಚೆನ್ನಾಗಿ ಪರ್ಯಾಲೋಚಿಸಿ, ತಮ್ಮ ಕಿರಿಯ ಮಗಳಿಗೆ ಅಮಿತವಾದ ಪಿತೃವಾತ್ಸಲ್ಯವಿರುವುದು. ಇನ್ನಿಬ್ಬರು ಮಕ್ಕಳು ಬರಿದಾದ ಹೃದಯವುಳ್ಳವರಾಗಿ ವಾಗಾಡಂಬರವುಳ್ಳವರಾಗಿರುವರು. ನನ್ನ ಈ ಅಭಿಪ್ರಾಯಕ್ಕೆ ನನ್ನ ಪ್ರಾಣವನ್ನೇ ಹೊಣೆಗೈವೆನು. ಪದವಿಯು ಮೃಷಾಸ್ತೋತ್ರಕ್ಕೆ ಶರಣವಾಗಲು, ಅಧಿಕಾರವು ಅವಿವೇಕಕ್ಕೆ ಬೀಳಲು, ಘನತೆಯು ಸ್ಪಷ್ಟತೆಯನ್ನೇ ಕೈಗೊಳ್ಳಬೇಕು. ಎಲೈ ಅರಸೇ ! ನನ್ನ ಜೀವಿತವು ತಮ್ಮ ಸೇವೆಯಲ್ಲಿಯೇ ಇರುವಲ್ಲಿ, ತಮ್ಮ ಬೆದರಿಕೆಗಳು ನನಗೇನೂ ಮಾಡಲಾರವು. ನನ್ನ ಕರ್ತವ್ಯತೆಯನ್ನು ಮಾತನಾಡದಿರುವಂತೆ ತಡೆಯಲಾರವು" ಎಂದನು.

ಗುಣಾಢ್ಯನಾದ ಕೆಂಟ್‌ನ ಸತ್ಯ ಧುರೀಣತೆಯ ಸ್ವಾತಂತ್ರ್ಯವು ಅರಸಿನ ಕೋಪವಹ್ನಿಗೆ ಆಜ್ಯಾಹುತಿಯಂತಾಗಿ, ಪ್ರಾಣನಾಶಕರವಾದ ರೋಗವನ್ನು ಪ್ರೀತಿಸುತ್ತ ತನ್ನ ಭಿಷಜನನ್ನು ಕೊಲ್ಲುವ ಹುಚ್ಚು ರೋಗಿಯಂತೆ, ಲಿಯರನು ಆ ಸ್ವಾಮಿಭಕ್ತನಾದ ಸೇವಕನನ್ನು ಕುರಿತು—"ಎಲೈ, ನೀನು ನಮ್ಮ ಉದ್ದೇಶಕ್ಕೆ ಭಂಗತರಬೇಕೆಂಬ ಮಹದಹಂಕಾರವುಳ್ಳವನಾಗಿರುವಿರಿ. ನಮ್ಮ ಪದವಿಯಾಗಲಿ ಗೌರವವಾಗಲಿ ಇದನ್ನು ಸೈರಿಸಲಾರದು. ಆದುದರಿಂದ ರಾಜಾಜ್ಞೆಯನ್ನು ಕೇಳು—ಇನ್ನು ೫ ದಿನಗಳೊ

ಳಗಾಗಿ ನೀನು ನಮ್ಮ ರಾಜ್ಯವನ್ನು ಬಿಟ್ಟು ಹೊರಟುಹೋಗಬೇಕು. ಆರನೆಯ ದಿನ ನೀನು ರಾಜ್ಯದ ಎಲ್ಲಿಯೊಳಗಿದ್ದರೆ ಮೃತ್ಯುಸಾನ್ನಿಧ್ಯವನ್ನೈದುವಿ'' ಎಂದು ಮಹಾಕ್ರೂರಾಜ್ಞೆಯನ್ನು ಮಾಡಿದನು.

ಕೆಂಟ್‌ಸು ಅರಸನನ್ನು ಕುರಿತು—"ಎಲೈ ಅರಸನೇ, ನಿನ್ನ ಬುದ್ಧಿಯು ಈ ರೀತಿ ವಿಪರೀತವಾಗಲು ನಿನ್ನ ದೇಶದಲ್ಲಿರುವುದೇ ದೇಶಭ್ರಷ್ಟತ್ವ'' ನ್ಯಾಯವಾಗಿ ಯೋಚಿಸಿ, ವಿವೇಕಯುಕ್ತವಾಗಿ ಮಾತನ್ನಾಡಿದ ಕಾರ್ಡೀಲಿಯಳನ್ನು ಕುರಿತು—"ಎಲೌ! ಕನ್ಯಾರತ್ನವೇ, ನೀನು ಪೂಜ್ಯ ಗುಣವುಳ್ಳವಳು, ನಿನ್ನನ್ನು ದೇವರು ಸಲಹಲಿ!'' ಗ್ಯಾನರಲ್, ರೀಗನ್‌ಗಳನ್ನು ಕುರಿತು—"ಎಲೌ! ರಾಜಕುವರಿರಿಯರಿರಾ, ನಿಮ್ಮ ಮಾತುಗಳಲ್ಲಿ ಕಂಡುಬಂದ ಪಿತೃವಾತ್ಸಲ್ಯವು ಕಾರ್ಯತಃ ತೋರಿಬರಲಿ'' ಎಂದು ಹೇಳಿ, ಅರಸಿಗೆ ಶ್ರೇಯಃಪ್ರಾರ್ಥನೆಯನ್ನು ಮಾಡಿ, ಹೋಗುತ್ತಾ, "ನಾನು ಇನ್ನೊಂದು ಹೊಸ ದೇಶದಲ್ಲಿ ಎಂದಿನಂತೆಯೇ ಜೀವನಮಾಡಿಕೊಂಡಿರುವೆನು'' ಎಂದನು.

ಅನಂತರದಲ್ಲಿ ಲಿಯರನು ಬರ್‌ಗಂಡಿಯ ಡ್ಯೂಕನ್ನೂ ಫ್ರಾನ್ಸ್ ದೊರೆಯನ್ನೂ ಆಸ್ಥಾನಕ್ಕೆ ಬರಮಾಡಿಕೊಂಡು, "ಎಲೈ ಗುಣವಂತರಾದ ಯುವಕರಿರಾ, ಇಗೋ ನನ್ನ ಪ್ರೀತಿಯಿಂದ ಬಹಿಷ್ಕೃತಳಾಗಿ ನೀನೇ ಎನ್ನುವವರಿಲ್ಲದಂತೆ, ನಿಮ್ಮ ಕಾರ್ಡೀಲಿಯಳು ಇಲ್ಲಿರುವಳು. ಅವಳು ನಿಷ್ಕಪಟತೆಯೆಂದು ಹೇಳುವ ಅವಳ ಅಹಂಕಾರವೇ ಅವಳ ಸರ್ವಸ್ವ, ಅವಳಿಗೆ ನಮ್ಮ ಶಾಪವಲ್ಲದೇ ಮತ್ತೇನೂ ಬಳುವಳಿಯಿರುವುದಿಲ್ಲ. ಅವಳನ್ನು ವರಿಸುವಿರಾ? ತ್ಯಜಿಸುವಿರಾ? ನಿಮಗೆ ಇವಳಲ್ಲಿರುವ ಪ್ರೇಮಾತಿಶಯವನ್ನು ಗುಣವಂತಳಾದ ಬೇರೊಬ್ಬ ನಾರೀಮಣಿಯ ಕಡೆಗೆ ತಿರುಗಿಸುವಿರಾದರೆ ನನಗೆ ಸಂತೋಷವಾಗುವುದು'' ಎಂದನು. ಈ ಸ್ಥಿತಿಯಲ್ಲಿರುವ ಆಕೆಯನ್ನು ವಿವಾಹವಾಗಲು ಬರ್‌ಗಂಡಿಯ ಡ್ಯೂಕನು ಒಪ್ಪಲಿಲ್ಲ. ಅಯ್ಯೋ! ಪಾಪ! ಬಳುವಳಿಯಾಸೆಯಿಂದ ವಿವಾಹವಾಗಲೆಳಸಿದ್ದನು. ಆದರೆ ಫ್ರಾನ್ಸ್ ದೊರೆಯು, ಒಂದು ಗಳಿಗೆಯ ಕೆಳಗೆ ದೊರೆಗೆ ಪ್ರೇಮ ಸರ್ವಸ್ವಳಾಗಿದ್ದ ಮಗಳಲ್ಲಿ ಕ್ಷಣಮಾತ್ರದಲ್ಲಿ ಉಂಟಾದ ಈ ತೆರದ ಭಿನ್ನಪ್ರೇಮಕ್ಕಾಗಿ ಆಶ್ಚರ್ಯಭರಿತನಾಗಿ, ಕಾರ್ಡೀಲಿಯಳ ಮಹಾಪರಾಧವು ಅವಳಿಗೆ ಅವಳ ಸಹೋದರಿಯಂತೆ ವಾಗಾಡಂಬರವಿಲ್ಲದಿರುವಿಕೆಯೆಂದರಿತು, ಅರಸನನ್ನು ಕುರಿತು—"ಎಲೈ ನೃಪೋತ್ತಮನೆ,

ಈಕೆಯ ಸದ್ಗುಣಗಳೇ ಈಕೆಗೆ ಅಪಾರವಾದ ಒಂದು ದೇಶಕ್ಕಿಂತಲೂ ಅಮೌಲ್ಯವಾದ ಬಳುವಳಿ;'' ಕಾರ್ಡೀಲಿಯಳ ಕೈಯನ್ನು ಹಿಡಿದುಕೊಂಡು ''ಸೌಂದರ್ಯನಿಧಿಯಾದ ಕಾರ್ಡೀಲಿಯಾ, ನೀನು ಭಾಗ್ಯರಹಿತಳಾದುದರಿಂದ ಅಪರಿಮಿತವಾದ ಸಿರಿವಂತಳಾದೆ; ತೊರೆಯಲ್ಪಟ್ಟುದುದರಿಂದ ಅಮೌಲ್ಯಳಾದೆ; ತಿರಸ್ಕೃತಳಾದುದರಿಂದ ಪುರಸ್ಕೃತಳಾದೆ; ನಿನ್ನನ್ನು ನಿನ್ನ ಸುಗುಣಗಳಿಗಾಗಿ ನಾನು ಪರಿಗ್ರಹಿಸಿರುವೆನು. ಓಹೋ! ಎಷ್ಟು ಮಂದಿ ಜಲದಂಥ ವಿಶ್ವಾಸಗಾರರಾದ ಬರ್ಗಂಡಿಯ ಡ್ಯೂಕುಗಳು ಈ ನನ್ನ ಅಮೌಲ್ಯವಾದ ರತ್ನಕ್ಕೆ ಬೆಲೆಯನ್ನು ಕಟ್ಟಬಲ್ಲರು? ಕಾರ್ಡೀಲಿಯಾ, ಇವರನ್ನು ವಂದಿಸು. ನೀನಿಲ್ಲಿ ನಿರ್ದಯೆಯಿಂದ ಕಾಣಲ್ಪಟ್ಟು ತ್ಯಜಿಸಲ್ಪಟ್ಟರೂ, ನನಗೂ ರಮಣೀಯವಾದ ಫ್ರಾನ್ಸಿಗೂ ರಾಣಿಯಾಗಿ ನಿನ್ನ ಅಕ್ಕಂದಿರ ರಾಜ್ಯಗಳಿಗಿಂತಲೂ ಮನೋಹರವಾದ ರಾಜ್ಯವನ್ನು ಆಳುವಿ'' ಎಂದನು.

ಅನಂತರದಲ್ಲಿ ಕಾರ್ಡೀಲಿಯಳು ಕಣ್ಣೀರು ಕರೆಯುತ್ತಾ ''ಎಲೌ ಅಕ್ಕಂದಿರಾ, ತಂದೆಯನ್ನು ವಿಶ್ವಾಸದಿಂದ ನೋಡಿಕೊಳ್ಳಿರಿ. ನಿಮ್ಮ ಪಿತೃವಾತ್ಸಲ್ಯವು ಕಾರ್ಯತಃ ಪರಿಣಮಿಸಲಿ'' ಎಂದಳು. ಅದಕ್ಕವರು ಸಿಡುಕು ಮೋರೆಯಿಂದ ''ನಮ್ಮ ಕರ್ತವ್ಯಗಳನ್ನು ನೀನು ಉಪದೇಶಿಸಬೇಕಾದುದೇನೂ ಇಲ್ಲ. ಆದರೆ ಅದೃಷ್ಟದತ್ತಭಿಕ್ಷವಾಗಿ ನಿನ್ನನ್ನು ಪಡೆದ ಪತಿಯನ್ನು ನೀನು ಸಂತುಷ್ಟನಾಗಿರಿಸುವುದರಲ್ಲಿ ಪ್ರಯತ್ನಿಸು'' ಎಂದು ಮೂದಲಿಸುತ್ತ ಹೇಳಿದರು. ಕಾರ್ಡೀಲಿಯಳು ತನ್ನ ಅಕ್ಕಂದಿರ ಕುತ್ಸಿತ ಬುದ್ಧಿಯನ್ನರಿತವಳಾದುದರಿಂದ ತನ್ನ ತಂದೆಯು ಉತ್ತಮ ಪೋಷಣೆಯುಳ್ಳವನಲ್ಲಾ ಎಂಬ ದುಃಖದಿಂದ ದುಂಸುಗ ಹೃದಯಳಾಗಿ ಪತಿಯೊಡನೆ ಪ್ರಯಾಣ ಮಾಡಿದಳು.

ಕಾರ್ಡೀಲಿಯಳು ಅತ್ತ ಹೊರಡುತ್ತಲೇ ಅವಳ ಅಕ್ಕಂದಿರ ಪೈಶಾಚಿಕ ಗುಣವು ಅದರ ಸ್ವಭಾವಿಕ ವರ್ಣದೊಡನೆ ತೋರಿಬರಲುಪಕ್ರಮಿಸಿತು. ಹಿಂದೆ ಮಾಡಿಕೊಂಡಿದ್ದ ನಿಬಂಧನೆಯ ಪ್ರಕಾರ ಗಾನರಲ್‌ಳ ಅರಮನೆಯಲ್ಲಿ ಲಿಯರನಿರಬೇಕಾದ ಪ್ರಥಮ ಮಾಸವು ಮುಗಿಯುವುದರೊಳಗಾಗಿಯೇ, ಆ ವೃದ್ಧನೃಪತಿಗೆ ಮಾತಿಗೂ ಕಾರ್ಯಕ್ಕೂ ಇರುವ ತಾರತಮ್ಯವು ತಿಳಿಯಹತ್ತಿತು. ಈ ನೀಚಳು ತಂದೆಯಿಂದ ಹೊಂದಬೇಕಾದ ಸಮಸ್ತವನ್ನೂ ಅವನ ತಲೆಯ ಮೇಲಿದ್ದ ಕಿರೀಟವನ್ನೂ ಸಹ ಪಡೆ

ದುಕೊಂಡಿದ್ದಾಗ್ಯೂ ಆ ವೃದ್ಧನು ತಾನು ಇನ್ನೂ ದೊರೆಯಾಗಿರುವುದಾಗಿ ಭಾವಿಸಿಕೊಂಡು, ತದ್ಭ್ರಮೆಯ ತೃಪ್ತ್ಯರ್ಥವಾಗಿ, ತನ್ನದಾಗಿಟ್ಟುಕೊಂಡ, ಪ್ರಭುಚಿನ್ಹೆಯಶೇಷ ಸೂಚನೆಗಳಿಗೂ (ನೂರು ಮಂದಿ ಪರಿವಾರಕ್ಕಾಗಿ) ಮತ್ಸರಿಸಲುಪಕ್ರಮಿಸಿದಳು. ತಂದೆಯು ಗೋಚರಿಸಿದಾಗಲೆಲ್ಲಾ ಹುಬ್ಬು ಗಂಟಿಡುತ್ತಿದ್ದಳು. ಅವಳೊಡನೆ ಮಾತನಾಡಬೇಕೆಂದು ಬಯಸಿದಾಗ, ಅಸಲಾಸ್ಥತೆಯನ್ನು ನಟಿಸುತ್ತಿದ್ದಳು, ಅಥವಾ ಅವನ ದೃಷ್ಟಿಗೆ ಬೀಳದಿರುವುದಕ್ಕೆ ಏನಾದರೊಂದು ಮಾಡುವಳು. ಅವಳು ಅವನ ವಾರ್ಧಿಕವು ಕೆಲಸಕ್ಕೆ ಬಾರದ ಹೊರೆಯೆಂದೂ ಅವನ ಪರಿಜನರಿಂದ ನಿರುಪಯೋಗವಾದ ವೆಚ್ಚವೆಂದೂ ಭಾವಿಸಿದಳು ಪ್ರಭುವಿನ ವಿಷಯದಲ್ಲಿ ನಡೆಯಬೇಕಾದ ನಡೆನುಡಿಗಳಲ್ಲಿ ಅವಳು ಮಾತ್ರವೇ ತಾತ್ಸಾರವನ್ನು ಮಾಡುತ್ತಿರಲಿಲ್ಲ. ಅವಳ ಗುಟ್ಟಾದ ಪ್ರೇರಣೆಯಂತೆ ಅವಳ ಪ್ರತಿಭೃತ್ಯರೂ ಉದಾಸೀನದಿಂದ ಕಾಣುವರು. ಇಲ್ಲವೇ ಅವನಪ್ಪಣೆಯಂತೆ ನಡೆಯಲು ತಿರಸ್ಕರಿಸುವರು ಅಥವಾ ಮಹಾಗರ್ವದಿಂದ ಇವನ ಮಾತೇ ಕಿವಿಯ ಮೇಲೆ ಬೀಳದಿರುವಂತೆ ನಟಿಸುವರು. ಲಿಯರನಿಗೆ ತನ್ನ ಮಗಳ ನಡವಳಿಕೆಯಲ್ಲುಂಟಾದ ವ್ಯತ್ಯಾಸಗಳು ತಿಳಿಯದೆ ಹೋಗಲಿಲ್ಲ. ಪ್ರಾಯಶಃ ಜನರು ತಮ್ಮ ತಪ್ಪಿತಗಳಿಂದಲೂ ಫಲದಿಂದಲೂ ತಮಗೆ ಸಂಭವಿಸಿದ ಅಸಹ್ಯಪರಿಣಾಮಗಳನ್ನು ನಂಬುವುದಕ್ಕೆ ಒಡಂಬಡದಿರುವಂತೆಯೇ ಈತನೂ ಸಾಧ್ಯವಾದಷ್ಟು ಕಾಲ ತನ್ನ ಕುವರಿಯ ವ್ಯತ್ಯಸ್ತವಾದ ನಡವಳಿಕೆಯ ಕಡೆಗೆ ದೃಷ್ಟಿಯನ್ನಿಡಲಿಲ್ಲ.

ಮೃದುಮಧುರವಾದ ನಡೆನುಡಿಗಳು ಅನೃತವನ್ನೂ ಪೊಳ್ಳು ಹೃದಯವನ್ನೂ ಬಚ್ಚಿಟ್ಟಿರುವುದು ಅಸಾಧ್ಯವಾಗಿರುವಂತೆ, ಕಠಿಣವಾದ ನಡೆನುಡಿಗಳು ನಿಷ್ಕಲಂಕವಾದ ಪ್ರೀತಿವಾತ್ಸಲ್ಯಗಳನ್ನು ದೂರಗತವಾಗಿ ಮಾಡಲಾರವು. ಈ ಸಂಗತಿಯು ಲಿಯರನಿಂದ ಗಡೀಪಾರು ಮಾಡಲ್ಪಟ್ಟು, ಮುಂದೆ ಬ್ರಿಟನಲ್ಲಿದ್ದರೆ ಮರಣದಂಡನೆಗೆ ಗುರಿಮಾಡಲ್ಪಡುವುದಾಗಿ ಆಜ್ಞಪ್ತನಾಗಿದ್ದಾಗ್ಯೂ ತನ್ನ ಸ್ವಾಮಿಯಾದ ಅರಸನಿಗೆ ತಾನು ಪ್ರಯೋಜನಕರವಾಗಿರುವವರಿವೆಗೆ ಅಲ್ಲಿಯೇ ಇದ್ದು, ಬಂದ ಕಷ್ಟಗಳನೆಲ್ಲಾ ತಾಳಿಕೊಳ್ಳಲುದ್ದೇಶಿಸಿದ ಗುಣನಿಧಿಯಾದ ಕೆಂಟ್‌ನಲ್ಲಿ ಬಹು ಸ್ಪಷ್ಟವಾಗಿ ತೋರಿ ಬರುತ್ತಲಿತ್ತು. ಹಲವು ತಡವೆ ನಿಶ್ಚಲವಾದ ಪ್ರಭು ಭಕ್ತಿಯು ಎಂಥಾ ಹೇಯವಾದ ವೇಷಾಂತರಾವಲಂಬನೆಯನ್ನಾಗಲಿ ಕೈಗೊಳ್ಳಲು

ಬಲಾತ್ಕಾರ ಪಡಿಸುವದು. ಮತ್ತು ಎದುವರುವೆಗೆ ಯಾವಸ್ಥಳದಲ್ಲಿ ತಾನು ಪಡೆದ ಉಪಕೃತಿಗಾಗಿ, ಸೇವೆ ಮಾಡಲಾಸ್ಪದವಿರುವುದೊ, ಆವರಿವೆಗೆ ಸ್ವಾಮಿ ಭಕ್ತಿಯು ಯಾವುದನ್ನೂ ತುಚ್ಛವೆಂದು ಲೆಕ್ಕಿಸುವುದಿಲ್ಲ. ಕೆಂಟ್‌ನು ತನ್ನ ದೊಡ್ಡಸ್ತಿಕೆಯನ್ನೂ ಸಮಾರಂಭವನ್ನೂ ಒಂದು ಕಡೆ ಗೊತ್ತರಿಸಿ, ಭೃತ್ಯವೇಷವನ್ನು ಕೈಕೊಂಡು, ಅರಸಿನ ಬಳಿಗೆ ಹೋಗಿ, ತನ್ನನ್ನು ಸೇವಕನಾಗಿರಿಸಿಕೊಳ್ಳಬೇಕೆಂದು ಪ್ರಾರ್ಥಿಸಿದನು. ಅರಸನಿಗೆ ನವನೀತದಂತಹ ಬಾಯುಪಚಾರದ ಮಾತುಗಳಿಗೂ ಕಾರ್ಯಗಳಿಗೂ ತಾರತಮ್ಯವಿರುವುದನ್ನು ತನ್ನ ಸುತೆಯಲ್ಲಿ ಅರಿತಿದ್ದುದರಿಂದ ಕೆಂಟಿನ ಸ್ಪಷ್ಟವಾದ ಅಥವಾ ಮಂದವಾದ ಪ್ರತ್ಯುತ್ತರಗಳಿಂದ, ಸಂತುಷ್ಟನಾಗಿ ಕೇಯಾಸ್ ಎಂಬಭಿಧಾನವನ್ನಿಟ್ಟುಕೊಂಡಿದ್ದ ಈ ಮನುಷ್ಯನೇ ಒಂದಾನೊಂದು ಕಾಲದಲ್ಲಿ ತನಗೆ ಮಹಾ ಪ್ರೀತಿಪಾತ್ರನಾಗಿದ್ದ, ಉನ್ನತ ಪದವಿಯಲ್ಲಿದ್ದ, ಸಮರ್ಥನಾದ ಕೆಂಟ್ ಎಂದು ಸಂಶಯಗ್ರಸ್ತನಾಗದೆ, ಅವನನ್ನು ತನ್ನ ಭೃತ್ಯತ್ವಕ್ಕಂಗೀಕರಿಸಿದನು.

ಹೀಗಿರಲು ಆ ದಿನವೇ ಗಾನರಲ್‌ಳ ಪಾರುಪತ್ತೇಗಾರನಾದ ಆಸ್ವಾಳ್ಡನು ಲಿಯರನ ವಿಷಯದಲ್ಲಿ ಅಸನ್ಮಾನವಾಗಿ ನಡೆಯುತ್ತ ಅವನನ್ನು ದಿಟ್ಟತನದಿಂದ ನೋಡುತ್ತ ಪ್ರತ್ಯುತ್ತರ ಕೊಡುತ್ತಲಿದ್ದನು. ಹೀಗೆ ಮಾಡುವಂತೆ ಅವನು ಅವಳ ಒಡತಿಯಿಂದ ಗುಟ್ಟಾಗಿ ಪ್ರೇರಿಸಲ್ಪಟ್ಟಿದ್ದನೆಂದು ಹೇಳಲು ಯಾವ ಸಂಶಯವೂ ಇಲ್ಲ. ಕೇಯಾಸನಿಗೆ ಈ ಸಂದರ್ಭವು ತನ್ನ ಸ್ವಾಮಿ ಭಕ್ತಿಯನ್ನೂ ಪ್ರಭುವಾದ ತನ್ನ ಯಜಮಾನನಲ್ಲಿ ತನಗಿರುವ ಪ್ರೀತಿಯನ್ನೂ ತೋರಿಸಲನುಕೂಲಿಸಿತು.

ಕೇಯಾಸನು ತನ್ನ ಸ್ವಾಮಿಯ ವಿಷಯದಲ್ಲಿ ಇಷ್ಟು ಬಹಿರಂಗವಾದ ಅಪಮಾನವನ್ನು ಕೇಳಲು ಸೈರಿಸಲಾರದೆ, ಈ ವಿಚಾರವಾಗಿ ಹೆಚ್ಚು ಸಾವಕಾಶಮಾಡದೆ ತಕ್ಷಣದಲ್ಲಿಯೇ ಅವನ ಕಾಲುಗಳಿಗೆ ತೊಡರು ಕೊಟ್ಟು ಕೆಡವಿ ಆ ತುಚ್ಛನಡತೆಯ ದಾಸನನ್ನು ಬಚ್ಚಲಿಗೆ ತಳ್ಳಿಬಿಟ್ಟನು. ಈ ತೆರದ ಮಿತ್ರಭಾವದ ಸೇವೆಗೆ ಲಿಯರನು ಸಂತುಷ್ಟನಾಗಿ ಅವನಲ್ಲಿ ಅಪರಿಮಿತವಾದ ವಾತ್ಸಲ್ಯವುಳ್ಳವನಾದನು.

ಲಿಯರನಿಗೆ ಕೆಂಟ್‌ನು ಒಬ್ಬನು ಮಾತ್ರವೇ ಮಿತ್ರನಾಗಿರಲಿಲ್ಲ. ಸಾಮರ್ಥ್ಯವಿರುವಷ್ಟು ಮಟ್ಟಿಗೂ ಅರ್ಥವಿಲ್ಲದ ರೀತಿಯಿಂದ ತನ್ನ ಪ್ರೀತಿಯನ್ನು ತೋರಿಸುತ್ತಿದ್ದ ಪ್ರಭುಭಕ್ತಿಯುಳ್ಳ ಒಬ್ಬ ವಿದೂಷಕನೂ ಸ್ನೇಹಿತನಾಗಿದ್ದನು. ಆಗಿನ ವಾಡಿಕೆಯಂತೆ ಅರಮನೆಗಳಲ್ಲಿಯೂ ಶ್ರೀಮಂತರ

ಮನೆಗಳಲ್ಲಿಯೂ ಕೆಲಸಕಾರ್ಯಗಳಿಂದ ಬೇಸರಿಕೆಯುಂಟಾದ ಮೇಲೆ ಹಾಸ್ಯದಿಂದ ವಿನೋದಪಡಿಸುವದಕ್ಕಾಗಿ ವಿದೂಷಕರಿರುತ್ತಿದ್ದರು. ಅರಸನು ತನ್ನ ಕಿರೀಟಾದಿಗಳನ್ನು ಕೊಟ್ಟುಬಿಟ್ಟ ಮೇಲೆ ಈ ವಿದೂಷಕನು ತನ್ನ ಹಾಸ್ಯಕರವಾದ ಮಾತುಗಳಿಂದ ಆತನನ್ನು ಉಲ್ಲಾಸಗೊಳಿಸುತ್ತ (ತನ್ನ ಸ್ವಾಮಿಯು ಕಿರೀಟರಹಿತನಾಗಿ, ಸರ್ವಸ್ವವನ್ನೂ ತನ್ನ ಮಕ್ಕಳಿಗೆ ವಿನಿಯೋಗಿಸಿದ ಅವಿವೇಕತೆಯನ್ನು ಹಾಸ್ಯ ಮಾಡಿದಾಗ ಅವನಿಗೆ ಉಲ್ಲಾಸವಾಗದಿದ್ದಾಗ್ಯೂ) ಅವನನ್ನು ಅಂಟಿಕೊಂಡಂತೆ ಎಡಬಿಡದಿರುತ್ತಿದ್ದನು ಆ ಕಾಲಗಳಲ್ಲಿ ಅವನು ಹಲವು ವಿಕಟಪದ್ಯಗದ್ಯಗಳನ್ನು ಹೇಳುತ್ತಿದ್ದನು “ಇಂತಹ ಅರಸನು ಹೀಗೆ ಹುಚ್ಚರೊಡನೆ ಅಲೆಯಲು, ಅವರು ತಮಗೆ ಒದಗಿದ ಹಠಾತ್ತಾದ ಹರ್ಷಕ್ಕೆ ಬಾಷ್ಪಲೋಚನರಾದರು. ನಾನು ನನಗೊದಗಿದ ದುಃಖಕ್ಕಾಗಿ ಸಂಗೀತವನ್ನು ಹಾಡಿದೆನು”

ಇಂಥಾ ಕಾಡು ಹರಟೆಗಳನ್ನೂ ಸಣ್ಣ ಸಣ್ಣ ಪದ್ಯಗಳನ್ನೂ ವಿಶೇಷವಾಗಿ ಬಲ್ಲ, ವಿನೋದಗಳನ್ನು ಮಾಡುವ ಈ ವಿದೂಷಕನು ಗಾನರಲ್‌ಳ ಎದುರಿನಲ್ಲಿಯೇ ಸಂದರ್ಭಸಿಕ್ಕಿದಾಗಲೆಲ್ಲಾ ತನ್ನ ಸರಕನ್ನೆಲ್ಲಾ ಬಿಚ್ಚಿ, ಹೃದಯಶೂಲೆಯಾಗುವಂಥಾ ನಿಂದೆ ಹಾಸ್ಯಗಳಿಂದ ಕೂಡಿದ ಮಾತುಗಳನ್ನಾಡುತ್ತಿದ್ದನು ಈ ಅಯೋಗ್ಯಳಾದ ಕುವರಿಯಲ್ಲಿ ಅವಿವೇಕದಿಂದಭಿಮಾನವಿಟ್ಟೀ ಜನಕನಿಗೆ ಈ ರೀತಿಯಲ್ಲಿ ಸನ್ಮಾನವು ದಿನದಿನಕ್ಕೆ ತಗ್ಗುತ್ತಾ ಬಂತು. ಆದರೆ ಮೊದಲು ಮೊದಲು ಲಿಯರಸು ತನ್ನ ಕಿವಿಯನ್ನೂ ಕಣ್ಣನ್ನೂ ಸಹ ನಂಬಲಾರದೆ ಹೋದನು. ಹೀಗಿರಲು ಆಕೆಯು ಒಂದು ದಿನ ತಂದೆಯನ್ನು—“ತಂದೆಯೇ, ಸರ್ವಸ್ವಾತಂತ್ರ್ಯವುಳ್ಳ ಈ ತಮ್ಮ ವಿದೂಷಕನು ಮಾತ್ರವೇ ಅಲ್ಲ. ತಮ್ಮ ಗರ್ವೋದ್ಧತರಾದ ಪರಿಜನರೂ ಕೂಡ ಕಲಹಕ್ಕೆ ಕಾರಣವನ್ನು ಹುಡುಕುತ್ತಲೇ ಇದ್ದಾರೆ. ಇದರ ಪರಿಹಾರಕ್ಕಾಗಿ ಸಂಗತಿಯನ್ನು ತಮಗೆ ತಿಳಿಸಿದ್ದೇನೆ ತಾವು ಸುಮ್ಮನಿರುವುದನ್ನು ನೋಡಿದರೆ ತಮ್ಮ ಪ್ರೋತ್ಸಾಹದಿಂದಲೇ ಹೀಗೆಲ್ಲಾ ನಡೆಯುತ್ತಿರುವಂತೆ ಕಾಣುತ್ತದೆ ತಾವು ಈ ವಿಷಯದಲ್ಲುಪೇಕ್ಷೆಯಿಂದಿದ್ದರೆ, ತಮಗೆ ಅಸಮಾಧಾನವುಂಟಾದಾಗ್ಯೂ ವಿಧಿಯಿಲ್ಲದೆ, ರಾಜ್ಯಕ್ಷೇಮಾರ್ಥವಾಗಿ ಅಪರಾಧಕ್ಕೆ ತಕ್ಕ ಶಿಕ್ಷೆ ಮಾಡಬೇಕಾಗುವುದು.

ವಿದೂಷಕ—ಗೆಳೆಯಾ,

ಕಂದ|| ತನಗನ್ನ ಮಿತ್ತು ಶೈಶವ |
ದನುನಯದಿಂ ಪೊರೆದಕಾಗೆಗಾ ಕೋಗಿಲೆ ಲೋ |

ಜನಮುಂ ಕೊರ್ಕಿಂಕುರ್ಕುವು |
ದನೆ ಲೋಕದೊಳೀಗಳೀಕ್ಷಿಸಿರ್ದಪೆಯಲ್ತೇ ||

(ಪದ್ಯದ ಕೆಳಗೆ) ದೀಪವು ನಂದಿಹೋಯಿತು. ನಾವು ಅಂಧಕಾರದಲ್ಲಿಳಿದೆವು''

ಲಿಯರ್—"ಪುಣ್ಯಾತ್ಮಳೇ, ನೀನು ನಮ್ಮ ಮಗಳೋ?''

ಗಾನರಲ್—"ತಂದೆಯೇ, ತಮ್ಮ ಸ್ವಭಾವಕ್ಕೀಗುಂಟಾಗಿರುವ ವಿಕೃತಿಯನ್ನುಳಿದು, ಪ್ರಾಜ್ಞತೆಯನ್ನು ಕೈಗೊಳ್ಳಿರಿ.''

ವಿದೂಷಕ—"ಕುದುರೆಯನ್ನು ಗಾಡಿಯು ಯಾವಾಗ ಎಳೆಯುವುದೆಂಬುದನ್ನು ಕತ್ತೆಯು ಬಲ್ಲುದೇ?'' (ಲಿಯರನ ಅನಂತರದಲ್ಲಿ ಪದವಿಗೆ ಬರಬೇಕಾದ ಅವನ ಮಕ್ಕಳು ಅವನೆದುರಿನಲ್ಲಿಯೇ ಪದವಿಗೇರಿಸಲ್ಪಟ್ಟವರೆಂದಭಿಪ್ರಾಯ)

ಲಿಯರ್—"ನನ್ನನ್ನು ಯಾರಾದರೂ ಬಲ್ಲರೇ? ನಾನು ಲಿಯರನೇ? ಅವನಿಗೆ ನಯನಗಳಿವೆಯೇ? ನಾನು ಯಾರೆಂಬುದನ್ನು ಯಾರು ಹೇಳಬಲ್ಲರು?''

ವಿದೂಷಕ—"ಲಿಯರನ ಪ್ರತಿಬಿಂಬ.''

ಲಿಯರ್—"ನಾನು ಹಾಗೆಯೇ ತಿಳಿಯುವೆನು. ನನ್ನ ರಾಜಚಿಹ್ನೆ, ಬುದ್ಧಿ, ಜ್ಞಾನಗಳಿಂದ ನೋಡಿದರೆ ನನಗೆ ಹೆಣ್ಣು ಮಕ್ಕಳಿದ್ದರೆಂಬುದು ಅಪನಂಬಿಕೆಯಾಗಿದೆ. ಪುಣ್ಯಾತ್ಮಳೇ, ನಿನ್ನ ಹೆಸರೇನು?''

ಗಾನರಲ್—"ತಂದೆಯೇ, ಈ ನಟನೆಗಳಿಂದ ಫಲವಿಲ್ಲ. ತಮ್ಮ ಪ್ರಕೃತಿಯು ಯೌವನವನ್ನು ಬಿಟ್ಟಂತೆಯೇ ವಿವೇಕವನ್ನೂ ಬಿಡುತ್ತಲಿದೆ. ನಾನು ಹೇಳುವುದನ್ನು ಸರಿಯಾಗಿ ತಿಳಿದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ತಮ್ಮ ಜನರು ದೊಂಬಿಗಾರರು, ಮದ್ಯಪಾಯಿಗಳು, ಕಾಮುಕರು, ಮರ್ಯಾದೆಯರಿಯದವರು, ಬಾಧೆಗಾರರು ದುಂದುಗಾರರು. ನಮ್ಮ ಸುಂದರವಾದ ಅರಮನೆಯು ಅವರಿಂದ ಪಾನಗೃಹದಂತಾಗಿದೆ. ಆದುದರಿಂದ ಅವರನ್ನು ತ್ಯಜಿಸಿ, ತಮ್ಮ ವಯಸ್ಸಿನವರಾದ ಕೆಲವರನ್ನು ಇಟ್ಟುಕೊಳ್ಳಿರಿ. ಈ ಪರಿವಾರವು ಬರೇ ದುಂದುಗಾರಿಕೆಗೆ ಕಾರಣವಾಗಿರುತ್ತದೆ.''

ಲಿಯರ್—"ಅಹಾ! ತಮಸ್ಸೆ! ಪೈಶಾಚವೇ! ಎಲ್ಲಿ? ನಮ್ಮ ಪರಿವಾರವೆಲ್ಲಾ ಸಿದ್ಧವಾಗಲಿ. ಕುದುರೆಗಳಿಗೆ ಕಡಿವಾಣವನ್ನು ಹಾಕಿರಿ. ಛೀ! ಪಾಪಿಷ್ಠಳೇ! ನಿನ್ನನ್ನು ನಾನು ಬಾಧಿಸುವುದಿಲ್ಲ. ನನಗೆ ಇನ್ನೂ ಒಬ್ಬ ಮಗಳಿದ್ದಾಳೆ.''

ಗಾನರಲ್—“ ನೀವು ಸಹ ನಮ್ಮವರನ್ನು ಹೊಡೆಯುವಿರಿ. ತಮ್ಮ ಸ್ವಚ್ಛಂದದ ದೊಂಬಿಗಾರರು ತಮಗಿಂತಲೂ ಉನ್ನತಪದವಿಯಲ್ಲಿರುವವರಿಂದ ಸೇವೆಯನ್ನು ಬಯಸುತ್ತಾರೆ. ”

ಲಿಯರ್—“ ಮಿಂಚಿಹೋಯಿತು ! ಪಶ್ಚಾತ್ತಾಪವೇತಕ್ಕೆ ? (ಅಷ್ಟರಲ್ಲಿಯೇ ಆಲ್ಬನಿಯು ಅಲ್ಲಿಗೆ ಬರುವನು.) ಓ ! ಹೊ ! ಬಂದಿರಾ ! ಇದು ನಿಮಗೆ ನಮ್ಮತವೇ ? ಛೀ ! ಕೃತಘ್ನತೆಯೆ ! ಪಾಷಾಣ ಹೃದಯದ ಪಿಶಾಚವೇ ! ಮಹಾ ಘಟಸರ್ಪದಲ್ಲಿರುವುದಕ್ಕಿಂತಲೂ ಶಿಶುಹೃದಯದಲ್ಲಿ ಇಷ್ಟು ಭಯಂಕರವಾದ ವಿಷವೆ ? ”

ಆಲ್ಬನಿ—“ ಪ್ರಭುವೆ, ದಯವಿಟ್ಟು ಸಮಾಧಾನರಾಗಿರಿ. ನನಗೆ ಈ ಸಂಗತಿ ಏನೂ ತಿಳಿಯದಕಾರಣ ತಮಗೆ ನಾನು ನಿರಪರಾಧಿಯಾಗಿದ್ದೇನೆ. ”

ಲಿಯರ್—(ಇದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ, ಗಾನರಲ್ ಳನ್ನು ಕುರಿತು) “ ಎಲೈ, ಗೃಧ್ರವೇ, ನೀನು ಅನೃತವಾಡುವಿ ನನ್ನ ಪರಿವಾರದವರು ಯೋಗ್ಯರಾಗಿಯೂ ಮರ್ಯಾದೆಯನ್ನು ಒಲ್ಲವರಾಗಿಯೂ ಸ್ವಾಮಿಕಾರ್ಯನಿರತರಾಗಿಯೂ ಧೀರರಾಗಿಯೂ ಇದ್ದಾರೆ. ಅಂತವರನ್ನು (ತನ್ನ ತಲೆಯನ್ನು ಬಡಿದುಕೊಳ್ಳುತ್ತ) ಅಯ್ಯೋ ! ನನಗಿದ್ದ ವಿವೇಕವನ್ನು ಹೊರಕ್ಕೆ ತಳ್ಳಿ, ಅವಿವೇಕಕ್ಕಾಶ್ರಯ ಕೊಟ್ಟೆನಲ್ಲಾ ! ಅಯ್ಯೋ ! ಲಿಯರ್ ! ಅಯ್ಯೋ ! ಲಿಯರ್ ! ಕಾರ್ಡೀಲಿಯಳ ವಾಙ್ಮೌನತೆಯನ್ನು ಮಹಾಪರಾಧವೆಂದರಿತು, ಅಲ್ಲಿದ್ದ ಮಮತೆಯನ್ನು ಹೇಯವಾದೆಡೆಗೆ ತಿರುಗಿಸಿದೆಯಲ್ಲಾ ! ಅಯ್ಯೋ ! ಮರಳುತನವೇ ! ಹೊರಡಿರಿ ! ಹೊರಡಿರಿ ! ನನ್ನವರು ಹೊರಡಿರಿ ! ಎಲೈ ಪ್ರಕೃತಿ ದೇವತೆಯೇ, ಕೇಳು ದೇವತೆಯರಿರಾ, ಕೇಳಿರಿ ಇವಳಿಗೆ ಸಂತತಿಯನ್ನನುಗ್ರಹಿಸಲು ನಿಮಗೆ ಉದ್ದೇಶವಿದ್ದರೆ ಆ ಸಂಕಲ್ಪವನ್ನು ನಿಲ್ಲಿಸಿರಿ. ಅಥವಾ ಇವಳು ಗರ್ಭವತಿಯಾಗಲೇ ಬೇಕಾದರೆ, ಸಂತತಿಯನ್ನು ಪಡೆಯದಿರಲಿ ಅಥವಾ ಸಂತತಿಯಾದರೆ ಆ ಸಂತತಿಯು ಇವಳಿಂದ ನಾನು ಪಡೆದ ಅನುಭವವನ್ನು ಇವಳಿಗೆ ಕೊಡಲಿ ಕೃತಘ್ನವಾದ ಸಂತತಿಯನ್ನು ಉಂಟಾಗಿರುವುದು ಭಯಂಕರವಾದ ಸರ್ಪದಂಷ್ಟ್ರಕ್ಕಿಂತಲೂ ಎಷ್ಟು ತೀವ್ರವೆಂಬುದನ್ನು ಇವಳರಿಯಲಿ. ಇವರ ಸುಂದರವಾದ ತನುಲತೆಯು ಒಣಗಿ ಕಾಷ್ಠದಂತಾಗಲಿ. ಇವಳ ನಯನಗಳಿಂದ ಸತತವೂ ಜಲಧಾರೆಯು ಹೊರಡುತ್ತ, ಇವಳ ಕಪೋಲವನ್ನು ಕೊರೆಯಲಿ. ಅಯ್ಯೋ !

ಕೃತಘ್ನಳೆ! ನನ್ನ ಪೌರುಷವನ್ನು ಅಲ್ಲಾಡಿಸಿರುವೆಯಲ್ಲಾ! ಅಯ್ಯೋ! ಗೋಳಿಡುವ ಕಣ್ಣುಗಳಿರಾ! ನೀವೀಪಾಪಿಗೆ ಕಾರಣವನ್ನು ಹೇಳಿರಿ, ನನ್ನ ಮುಪ್ಪಿನ ಕಣ್ಣುಗಳಿಂದ ಬರುವ ಅಶ್ರುವರ್ಷಕ್ಕೆ ಇವಳಲ್ಲಿ ಕರುಣ ವಿಲ್ಲವೇ? ಚಿಂತೆಯಿಲ್ಲ ನನಗಿನ್ನೊಬ್ಬ ಮಗಳಿದ್ದಾಳೆ. ಅವಳು ನನ್ನಲ್ಲಿ ದಯಾವತಿಯಾಗಿಯೂ ನನ್ನ ಸೌಖ್ಯಾಭಿಲಾಷಿಣಿಯಾಗಿಯೂ ಇರುವಳು. ಅವಳಿದನ್ನು ಕೇಳಿದರೆ ನಿನ್ನನ್ನು ಶಿಕ್ಷಿಸದೆ ಬಿಡಳು. ನಾನು ಪರಿತ್ಯಜಿಸಿರುವೆನೆಂದು ನೀನರಿತಿರುವವುಗಳನ್ನು ಪುನಃ ಪಡೆದುಕೊಳ್ಳುವೆನು '' ಎಂದು (ಹೊರಡುವನು). ಹೀಗೆ ಮಹಾ ಭೀಕರವಾಗಿ ಅವಳನ್ನು ಶಪಿಸಿ, ಅವಳ ಕ್ರೌರ್ಯದಿಂದ ಸಂತಪ್ತನಾಗಿ ಲಿಯರನು ಮುಂದಾಗಿಯೇ ತನ್ನನ್ನು ಎದುರುಗೊಳ್ಳಲು ರೀಗನ್‌ಳು ಅಣಿಯಾಗುವದಕ್ಕವಕಾಶವಿರುವಂತೆ, ತನ್ನ ಬರುವಿಕೆಯನ್ನು ಸೂಚಿಸಿ, ಕಾಗದಗಳನ್ನು ಬರೆದು ತನ್ನ ಭೃತ್ಯನಾದ ಕೇಯಾಸನ್ನು ಕಳುಹಿಸಿ, ಪರಿವಾರದೊಡನೆ ಅವಳ ಬಳಿಗೆ ಹೊರಟನು. ಆದರೆ ಗಾನರಲ್‌ಳಿಗಿಂತಲೂ ರೀಗನ್‌ಳಲ್ಲಿ ಹೆಚ್ಚಾದ ಪಿತೃವಾತ್ಸಲ್ಯದ ಉಪಚಾರವನ್ನು ಪಡೆಯುವೆನೆಂದು ಲಿಯರನು ನಿರೀಕ್ಷಿಸಿಕೊಂಡುದು ಅವಿವೇಕವಾಯಿತು. (ಅಂದು ಗಾನರಲ್‌ಳು ತನಗೆ ಪಿತೃವಾತ್ಸಲ್ಯವೆಷ್ಟಿರುತ್ತೆಂಬುದನ್ನು ತಂದೆಗರುಹಿದ ಮೇಲೆ ರೀಗನ್‌ಳು—'' ಜನಕನೇ, ಈ ವಿಧಾತನು ನನ್ನನ್ನೂ ನಮ್ಮ ಅಕ್ಕನನ್ನೂ ಒಂದೇ ಅಚ್ಚಿನಿಂದ ನಿರ್ಮಿಸಿದ್ದಾನೆ ಆದ್ದರೆ ಅವಳು ಹೇಳಿದುದರಲ್ಲಿ ಕೊಂಚ ಕಡಮೆಯಾಯಿತು '' ಎಂದು ಹೇಳಿದಳಷ್ಟೆ. ಈ ಅರ್ಥವು ಅವಳ ಕೃತಘ್ನತೆಯ ಕಾರ್ಯದಲ್ಲಿ ಚೆನ್ನಾಗಿ ತೋರಿಬಂತು.)

ರೀಗನ್‌ಳು ಪತಿಸಮೇತಳಾಗಿ ಮಹಾ ವೈಭವಾಡಂಬರಗಳಿಂದ ಕೂಡಿದ ಆಸ್ಥಾನವುಳ್ಳವಳಾಗಿದ್ದಳು. ಆದರೆ ಇತ್ತ ಗಾನರಲ್‌ಳು ತನ್ನ ತಂದೆಯು ಹಟವಾದಿಯೆಂದೂ ದುರಾಗ್ರಹವುಳ್ಳವನೆಂದೂ ಅಪರಾಧವನ್ನು ಹೊರಿಸಿ, ಅವನೊಡನೆ ಬರುವ ಪರಿವಾರಕ್ಕೆಡೆಕೊಡದಿರುವಂತೆ ರೀಗನ್‌ಳಿಗೆ ಕಾಗದವನ್ನು ಬರೆದು ಕಳುಹಿಸಿದ್ದಂತೆ ಕಾಣುತ್ತದೆ. ಈ ಸೇವಕನು, ಕೇಯಾಸನು ರೀಗನ್‌ಳ ಅರಮನೆಯ ಬಳಿಯನ್ನು ಸೇರಿದ ಸಮಕಾಲದಲ್ಲಿಯೇ ತಲಪಿದನು. ಒಬ್ಬರನ್ನೊಬ್ಬರು ಸಂಧಿಸಿದರು. ಆ ದೂತನು ಹಿಂದೆ ಲಿಯರನ್ನು ದಿಟ್ಟತನದಿಂದ ಕಂಡುದುದಕ್ಕಾಗಿ ಕೇಯಾಸಿನಿಂದ ತೊಡರುಕೊಟ್ಟು ಕೆಡವಲ್ಪಟ್ಟ, ಅವನ ಹಗೆಯಾದ ಅಸ್ವಾಲ್ಡ್ ಎಂಬ ಪಾರುಪತ್ತೇಗಾರನಾಗಿದ್ದನು.

ಕೇಯೂಸನಿಗೆ ಅವನ ನೆರಳು ಕಂಡರೂ ಆಗುತ್ತಿರಲಿಲ್ಲ. ಅವನು ಏತಕ್ಕಾಗಿ ಅಲ್ಲಿಗೆ ಬಂದನೆಂದು ಸಂಶಯಪಟ್ಟು, ಅವನನ್ನು ದೂಷಿಸ ತೊಡಗಿ, ಜಗಳಕ್ಕೆ ಕರೆದನು. ಅವನು ಜಗಳಕ್ಕೊಡಂಬಡದಿರಲು, ಕೇಯೂಸನು ನ್ಯಾಯವಾದ ಕೋಪವನ್ನು ವಹಿಸಿ, ಕೇಡಿಗನಾದ ಅನ್ಯಾಯವಾರ್ತೆಗಳನ್ನು ತಲಪಿಸತಕ್ಕವನಿಗೆ ಮಾಡಬೇಕಾದ ಶಿಕ್ಷೆಯನ್ನು ಇವನಿಗೆ ಮಾಡಿದನು. ಈ ಸುದ್ದಿಯು ರೀಗಕ್‌ಳ ಮತ್ತು ಅವಳ ಪತಿಯ ಕಿವಿಯನ್ನು ಮುಟ್ಟಲು, ಕೇಯೂಸನು ಪ್ರಭುವಾದ ತನ್ನ ತಂದೆಯ ಕಡೆಯವನಾದುದರಿಂದ ಸನ್ಮಾನಕ್ಕೆ ಪಾತ್ರನಾಗಿದ್ದಾಗ್ಯೂ ಲಕ್ಷಿಸದೆ, ಸಂಕಲೆಯಿಂದ ಬಂಧಿಸಲ್ಪಡುವಂತೆ ಆಜ್ಞಾಪಿಸಲ್ಪಟ್ಟನು.

ಪ್ರಭುವು ರಾಜಭವನವನ್ನು ಪ್ರವೇಶಿಸುತ್ತಲೇ ತನ್ನ ಪ್ರೀತಿಪಾತ್ರನಾದ ಭೃತ್ಯ ಕೇಯೂಸನು ಈ ತೆರದ ಅಪಮಾನಸ್ಥಿತಿಯಲ್ಲಿ ಕುಳಿತಿರುವುದು ಆತನಿಗೆ ಮೊದಲು ಗೋಚರವಾಯಿತು. ಅಟ್ಟಹಾಸದಿಂದೆದುಗೊಳ್ಳಲ್ಪಡುವುದಾಗಿ ಭಾವಿಸಿಕೊಂಡಿದ್ದ ಆತನಿಗೆ, ಇದು ಅಶುಭಸೂಚನೆಯಲ್ಲವೆ? ಈ ಸೂಚನೆಯು ಕಾರ್ಯತಃ ಪರಿಣಮಿಸದೆ ಹೋಗಲಿಲ್ಲ. ತನ್ನ ಕುವರಿಯನ್ನೂ ಅಳಿಯನನ್ನೂ ನೋಡಬೇಕೆಂದು ಈತನು ವಿಚಾರಿಸಲು, ಅವರು ರಾತ್ರಿಯೆಲ್ಲಾ ಪ್ರಯಾಣ ಬಂದುದರಿಂದ ಆಯಾಸಗೊಂಡಿದ್ದಾರೆಂದು ಉತ್ತರ ಒರಲು, "ದೇಹಾಲಸ್ಯವಿದ್ದರೂ ಇರಬಹುದು. ಅನಾರೋಗ್ಯವು ಆರೋಗ್ಯ ಕಾಲದಲ್ಲಿ ನಾವು ಮಾಡತಕ್ಕ ಕಾರ್ಯಗಳನ್ನು ನಿರಾಕರಿಸುವುದು. ಏನು ಮಾಡುವುದು? ಸಹಿಸುತ್ತೇವೆ. (ಕೇಯೂಸನ್ನು ನೋಡಿ) ಅಯ್ಯೋ! ನಮ್ಮ ಭೃತ್ಯನು ಹೀಗೆ ಸಂಕಲೆಯಲ್ಲಿರಲು ನಾನು ನೋಡಿ ಸಹಿಸಬಹುದೆ? ಈತನ ಅವಸ್ಥೆಯನ್ನು ನೋಡಿದರೆ ಅವರು ಉದ್ದೇಶದಿಂದಲೇ ಹೀಗೆ ಮಾಡಿದ್ದಾರೆ. ಈಗಲೇ ನಾನು ಅವರನ್ನು ನೋಡಬೇಕು. ಅವರನ್ನು ಬರಬೇಕೆಂದು ನನ್ನ ಆಜ್ಞೆಯನ್ನು ತಿಳಿಸು. ಇಲ್ಲದಿದ್ದರೆ ಅವರ ಶಯನಗೃಹದ ಬಾಗಿಲನ್ನು ಒದೆದು, ಅವರು ನಿದ್ದೆಗೇಡಿನಿಂದ ಸಾಯುವಂತೆ ಮಾಡುವೆನು" ಎಂದನು.

ಒಬ್ಬನು—"ತಮ್ಮಲ್ಲಿ ಮನಸ್ತಾಪಗಳೇನೂ ಹುಟ್ಟದಿದ್ದರೆ ಸಾಕು." (ಹೋಗುವನು).

ಲಿಯರ್—"ಮನದಲ್ಲಿ ಉಕ್ಕಿಬರುವ ದುಃಖವೆ! ಸಮಾಧಾನವಾಗು! ಸಮಾಧಾನವಾಗು!"

ವಿದೂಷಕ—"ಗೆಳೆಯಾ:" (ವೃತ್ತ).

ಮನದೊಳ್ಚಿಂತಾನಲಂ ಮೂಡಿರಲೊಡಲುರಿಯುಂ ತಾಳದೆ !
ವ್ಯಾಘ್ರಮಂತಂ |
ದಿನಿವಾಲಂ ಪೊಯ್ದುಸಾಕುತ್ತದನಿಡಕುರಿಯುಂ ಕಾಯುಲಾ
ತ್ಮಪ್ರಭಾವ |
ಕ್ಕನುಸಾರಂ ಮಾಡದೇತಾಂ? ಬಿಡು ಮರುಗುವುದಂ ನಿನ್ನೊ
ಳುದ್ಭೂತರಾದಾ |
ವನಿತಾರತ್ನಂಗಳಿಂದೊಂದಿದೆಗಡ !ಸೊಗಮುಂ ಭೂಮಿಪಾ
ಲಾವಸಂತಾ |

ಇಷ್ಟೆಲ್ಲಾ ನಡೆಯುತ್ತಿರಲು, ರೀಗನ್‍ಳು ಪತಿಸಮೇತಳಾಗಿ ಅರಸನನ್ನು ಕುಶಲಪ್ರಶ್ನೆ ಮಾಡುವುದಕ್ಕಾಗಿ ಬಂದಳು. ಅವರ ಜತೆಯಲ್ಲಿ ಲಿಯರನ ವಿಚಾರವಾಗಿ ತನ್ನ ಮನಕ್ಕೆ ಬಂದಂತೆ ಸಂಗತಿಗಳನ್ನು ತಿಳಿಸಿ ಅವಳನ್ನು ಆತನಿಗೆ ಪ್ರತಿಪಕ್ಷವಾಗಿ ಮಾಡುವುದಕ್ಕಾಗೈತಂದಿದ್ದ, ನೃಪತಿಗೆ ಅಸಹ್ಯಕರಳಾದ ಗಾನರಲ್‍ಳೂ ಬಂದಳು

ಗಾನರಲ್‍ಳನ್ನು ಕಂಡು ಅರಸನು ಅಸಹ್ಯಪಟ್ಟನು. ರೀಗನ್‍ಳು ಗಾನರಲ್‍ಳ ಕೈಯನ್ನು ಹಿಡಿದುಕೊಂಡಿದ್ದುದು ಅವನಿಗೆ ಮತ್ತಷ್ಟು ವಿಷಾದವಾಯಿತು "ಎಲೈ ! ಗಾನರಲ್‍ಳೇ, ನರೆಗೂದಲಿಂದ ಕೂಡಿದ ಆ ಮುದುಕನ ಮುಖವನ್ನು ನೋಡುವುದಕ್ಕೆ ನಾಚಿಕೆಯಾಗುವುದಿಲ್ಲವೆ"? ಎಂದನು.

ರೀಗನ್—"ತಂದೆಯೇ, ತಮ್ಮ ಒಂದು ತಿಂಗಳ ಅವಧಿಯನ್ನು ಗಾನರಲ್‍ಳ ಅರಮನೆಯಲ್ಲಿ ಕಳೆದುಕೊಂಡು ಬರಬೇಕು. ಈಗ ನಾನು ತಮ್ಮ ಉಪಚಾರಕ್ಕೆ ಸಿದ್ಧಳಾಗಿಲ್ಲ. ತಮ್ಮ ಬುದ್ಧಿಯು ವಯೋಧರ್ಮದಿಂದ ತಮಗೆ ಅಧೀನವಾಗಿಲ್ಲವಾದುದರಿಂದ ನಮ್ಮ ಮಾತಿನಂತೆ ನಡೆಯುವುದು ಯೋಗ್ಯವಾಗಿರುವುದು. ಆದುದರಿಂದ ನಮ್ಮ ಅಕ್ಕನಿಷ್ಟದಂತೆ ತಮ್ಮಪರಿವಾರವನ್ನು ಅರ್ಧಕ್ಕೆ ತಗ್ಗಿಸಿಬಿಟ್ಟು, ಅಕ್ಕನವರ ಕ್ಷಮೆಯನ್ನು ಕೇಳಿ, ಆಕೆಯೊಡನೆ ದಯಮಾಡಿಸಿರಿ."

ಲಿಯರ್—"ಛೀ ! ಛೀ ! ಏನು ಮಾತಾಡಿದೆ ! ಏನು ! ಏನು! ಅವಳ ಮನೆಗೆ ಅರ್ಧಪರಿವಾರದೊಡನೆ ಹೋಗಬೇಕೆ ? ಅವಳ ಕ್ಷಮೆಯನ್ನು ಪ್ರಾರ್ಥಿಸಬೇಕೆ ? ಈ ಕೆಲಸವನ್ನು ಮಾತ್ರ ಮಾಡಲಾರೆನು. ನನ್ನ

ಸಂತೋಷಗಳಿಗೆ ಕಾರ್ಪಣ್ಯವನ್ನುಂಟುಮಾಡಿದವಳ ಮನೆಗೆ ನಾನು ಖಂಡಿತವಾಗಿ ಹೋಗುವುದಿಲ್ಲ. ಆದರೆ ನೀನು ನಾನು ಕೊಟ್ಟ ರಾಜ್ಯಾರ್ಧವನ್ನು ಇನ್ನೂ ಮರೆತಿಲ್ಲ. ಸಹಜಸಂಬಂಧವನ್ನೂ ಮಕ್ಕಳ ವೃತ್ತಿಯನ್ನೂ ಮರ್ಯಾದೆಯನ್ನೂ ಕೃತಜ್ಞತೆಯ ಪೂಜ್ಯತೆಯನ್ನೂ ಚೆನ್ನಾಗಿ ಬಲ್ಲೆ. ಅಲ್ಲದೆ ನಿನ್ನ ಕಣ್ಣುಗಳು ಅವಳ ಕಣ್ಣಿನಂತೆ ಭಯಂಕರವಾಗಿರದೆ, ಸೌಮ್ಯವಾಗಿಯೂ ಕರುಣಾಂತಃಕರಣವನ್ನು ಸೂಚಿಸತಕ್ಕವಾಗಿಯೂ ಇವೆ. ಆದುದರಿಂದ ನಾನು ನನ್ನ ೧೦೦ ಮಂದಿ ಪರಿವಾರದೊಡನೆ ನಿನ್ನಲ್ಲಿಯೇ ಇರುವೆನು. ಅವಳ ಮನೆಗೆ ಅರ್ಧ ಪರಿವಾರದೊಡನೆ ಹೋಗುವುದಕ್ಕಿಂತಲೂ ನನ್ನಿಂದ ರಾಜ್ಯದ ಭಾಗವನ್ನು ಪಡೆಯದೆ, ನನ್ನ ಕಿರಿಯ ಮಗಳನ್ನು ವರಿಸಿದ ಫ್ರಾನ್ಸ್ ದೊರೆಯಲ್ಲಿ ಅಲ್ಪವಾದ ಮಾಸಾಶನವನ್ನು ಯಾಚಿಸುವೆನು, ಮಗುವೇ; ನೀನೀಮಾತನ್ನು ಮನಸಾ ಆಡಿದೆಯೊ ?''

ರೀಗನ್—“ತಂದೆಯೇ, ದಿಟ. ತಾವು ವಿವೇಕದಿಂದ ಯೋಚಿಸಿ ನೋಡಿರಿ. ಏನು ೫೦ ಮಂದಿ ಪರಿವಾರವೆ ! ಅಷ್ಟು ಸಾಲದೆ ? ಹೆಚ್ಚಿನ ಅಗತ್ಯವೇನಿದೆ ? ಅಥವಾ ಅಷ್ಟುತಾನೆ ಏಕೆ ? ಆದರೆ ಒಂದು ತಿಂಗಳವಧಿಯು ಮುಗಿದ ಮೇಲೆ ನನ್ನ ಮನೆಗೆ ೨೫ ಮಂದಿಗಿಂತಲೂ ಹೆಚ್ಚು ಪರಿವಾರದಿಂದ ತಾವು ಬರಕೂಡದು ''

ಲಿಯರ್ (ಈ ಮಾತಿನಿಂದ ಎದೆಯೊಡದವನಾಗಿ) “ನಿಮಗೆ ನನ್ನ ಸರ್ವಸ್ವವನ್ನು ಕೊಟ್ಟೆನು. ನನ್ನ ದೇಹದ ಪೋಷಣೆಯನ್ನು ನಿಮ್ಮಧೀನಮಾಡಿ, ಮರ್ಯಾದಾರ್ಥವಾಗಿ ಈ ಅಲ್ಪ ಪರಿವಾರವನ್ನಿಟ್ಟುಕೊಂಡೆನು. ಅದನ್ನು ನೀವು ಪೋಷಿಸಲಾರಿರಾ ? ರೀಗನ್ ಳೆ, ೨೫ ಮಂದಿ ಪರಿವಾರದೊಡನೆ ಬರಬೇಕೆ ? ಗಾನರಲ್‌ಳೇ, ನೀನು ೫೦ ಮಂದಿ ಪರಿವಾರವನ್ನಿಟ್ಟುಕೊಳ್ಳುವಂತೆ ಹೇಳಿದೆ, ರೀಗನ್‌ಳು ೨೫ ಮಂದಿ ಪರಿವಾರವನ್ನಿಟ್ಟುಕೊಳ್ಳುವಂತೆ ಹೇಳಿದಳು. ಆದುದರಿಂದ ನಿನ್ನ ವಿಶ್ವಾಸವೇ ಇಮ್ಮಡಿಯಾಗಿದೆ. ನಾನು ನಿನ್ನೊಡನೆ ಬರುವೆನು.''

ಗಾನರಲ್—“ತಂದೆಯೇ, ತಾವು ನಮ್ಮ ಅರಮನೆಯಲ್ಲಿರುವಾಗ್ಯೆ ನನ್ನ ಭೃತ್ಯರೂ ರೀಗನ್‌ಳ ಅರಮನೆಯಲ್ಲಿರುವಾಗ್ಗೆ ಅವಳ ಭೃತ್ಯರೂ ತಮ್ಮ ಸೇವೆ ಮಾಡುವರು. ಅವರು ತಮ್ಮ ಸೇವೆಯಲ್ಲೇನಾದರೂ ಉಪೇಕ್ಷೆ ತೋರಿಸಿದಲ್ಲಿ ಅವರನ್ನು ನಾವು ದಂಡಿಸುವೆವು. ಆದುದರಿಂದ ೨೫ ಮಂದಿ ಪರಿವಾರವು ತಾನೇ ಏಕೆ ? ಅಥವಾ ೧೦ ಮಂದಿ ತಾನೇ

ಏಕೆ ? ಈ ಮಂದಿ ತಾನೇ ಏಕೆ ? '' ಅಂದಳು. ಹೀಗೆ ನೀಚರಾದ ಆ ಇಬ್ಬರು ಹೆಣ್ಣು ಮಕ್ಕಳು ತಮ್ಮಲ್ಲಿ ಅಮಿತವಾದ ಪ್ರೇಮಾಂತಃಕರಣವುಳ್ಳ ಜನಕನಲ್ಲಿ ಒಬ್ಬರನ್ನೊಬ್ಬರು ತಮ್ಮ ಕ್ರೌರ್ಯತೆಯಿಂದ ಮಿಗಿಲಾದವರೆನ್ನಿಸಿಕೊಳ್ಳಲು ಪ್ರಯತ್ನಿಸುತ್ತ, ಆತನು ಒಮ್ಮೆ ರಾಜನಾಗಿದ್ದನೆಂಬ ರಾಜಚಿಹ್ನೆಯ ಸೂಚಿತಾರ್ಥವಾಗಿಟ್ಟುಕೊಂಡಿದ್ದ ಮರ್ಯಾದಾರ್ಥವಾದ ಪರಿವಾರವನ್ನು ಮೆಟ್ಟಲು ಮೆಟ್ಟಲಾಗಿ ತಗ್ಗಿಸತೊಡಗಿದರು ಆದರೆ ಗಾನರಲ್, ರೀಗನ್‌ರು ಹೇಳಿದಂತೆ ಸುಖಸಂಪತ್ತಿಗೆ ಇಷ್ಟು ದೊಡ್ಡ ಪರಿವಾರವೇನೂ ಅತ್ಯವಶ್ಯಕವಲ್ಲವಾದರೂ ಲಕ್ಷಾಧಿಕನಾಗಿದ್ದವನು ಭಿಕ್ಷುಕನಂತಾಗುವುದು ಮಹಾಕಷ್ಟತರವಾದ ಮಾರ್ಪಾಟಲ್ಲವೆ ? ಸಾಸಿರ ಸಂಖ್ಯಾಕರಾದ ಪರಿವಾರಕ್ಕಾಜ್ಞೆ ಮಾಡುತ್ತಿದ್ದವನಿಗೆ ಒಬ್ಬ ಸೇವಕನೂ ಇಲ್ಲದಂತಾಗುವುದು ಕಷ್ಟತರವಾದ ಮಾರ್ಪಾಟಲ್ಲವೆ ?

ಲಿಯರ್—‘‘ ಅವಶ್ಯಕತೆಯನ್ನು ಕುರಿತು ಚರ್ಚಿಸಬೇಡ. ಅತ್ಯಂತ ರಿಕ್ತರಲ್ಲಿಯೂ ಅವಶ್ಯಕವಾಗದಿರುವ ಅತ್ಯಲ್ಪ ಮೌಲ್ಯದ ಪದಾರ್ಥಗಳೆಷ್ಟೋ ಇರುವುವು. ಪ್ರಕೃತಿ ಸಂರಕ್ಷಣೆಯಲ್ಲಿ ಅವಶ್ಯಕತೆಯನ್ನೇ ಮೀರದಿರುವುದಾದರೆ ಮನುಷ್ಯರ ಜೀವನವು ಮೃಗಜೀವನದಂತೆ ಸುಲಭವಾಗಿಯೇ ಇರುವುದು. ಶರೀರ ಸಂರಕ್ಷಣೆಯೂ ಆಡಂಬರವೂ ಭೇದವಾದುದು. ಸಹಜವಾಗಿಯೂ ಶರೀರ ಸಂರಕ್ಷಣೆಯನ್ನು ಮಾಡಿದ ಕೇವಲ ಆಡಂಬರವೇ ಪ್ರಾಧಾನ್ಯವಾದ ಉಡಿಗೆತೊಡಿಗೆಗಳು ಹೇಗೆ ಅವಶ್ಯಕ ? ಅಯ್ಯೋ ! ದೇವರುಗಳಿರಾ, ಸಹನೆಯೆಂಬ ಭಾಗ್ಯವನ್ನಾದರೂ ನಿರ್ಭಾಗ್ಯನಾದ ಮುದುಕನಾದ ನನ್ನಲ್ಲಿ ಕೃಪೆಯಿಟ್ಟು ಕೊಡಬಾರದೆ ? ನೀವು ಈ ಹಾಳು ಹೆಣ್ಣುಮಕ್ಕಳಿಗೆ ಈ ಕ್ರೂರ ಹೃದಯವನ್ನು ಕೊಟ್ಟಿರುವಿರಾದರೆ ಅವರ ಅಸುರಕೃತ್ಯಗಳನ್ನು ಸಹಿಸಲು ನನಗೆ ಮೌಢ್ಯವನ್ನೂ ಸಹನೆಯನ್ನೂ ಕೊಡಬೇಡಿರಿ. ಸ್ತ್ರೀಯರ ನಯನಧಾರೆಯು ನನ್ನ ಪೌರುಷವನ್ನು ಕಳೆಗುಂದಿಸದಿರಲಿ. ಎಲೌ, ಅಸುರನಾರಿಯರಿರಾ ! ನಿಮ್ಮ ಕೆಟ್ಟತನಕ್ಕಾಗಿ ನಿಮಗೆ ಬುದ್ಧಿ ಕಲಿಸುವೆನು. ಏನು ಮಾಡುವೆನು ಬಲ್ಲಿರಾ ! ಏನು ಮಾಡುವೆನೋ ನಾನೇ ಅರಿಯೆನು. ಈ ಪ್ರಪಂಚವೇ ತಲ್ಲಣಿಸುವಂತೆ ಮಾಡಿ, ಉದಾಹರಣೆಯನ್ನು ತೋರಿಸುವೆನು. ನಾನು ಅಳುವೆನೆಂದು ನೀವು ತಿಳಿದಿರುವಿರಿ. ಇಲ್ಲ, ನಾನು ದುಃಖಪಡುವುದಿಲ್ಲ. ಆದರೂ ಗೆಳೆಯಾ, ನಿನಗಾಗಿ ನಾನು ಚಿಂತಿಸುತ್ತಿರುವೆನು. ಅಯ್ಯೋ ! ನನಗೆ ಚಿತ್ತವಿಭ್ರಮಣೆಯಾಗುತ್ತಿದೆ '' ಎಂದು ಎಲ್ಲರೂ ಹೊರಟರು

ಹೀಗೆ ಅರಸನು ನಿಷ್ಫಲವಾದ ತನ್ನ ದುರ್ಬಲವಾದ ಬಾಹುಗಳಿಂದ ಮಾಡಲಸದಳವಾದ ಗೊಡ್ಡು ಬೆದರಿಕೆ ಮಾತುಗಳನ್ನು ಆಡುತ್ತಿರಲು ರಾತ್ರಿಯಾಯಿತು ಮಹತ್ತಾದ ಚಂಡಮಾರುತವು, ಗುಡುಗು, ಸಿಡಿಲು, ಮಿಂಚು, ಮಳೆಗಳು ಪ್ರಾಪ್ತವಾದವು. ಆದರೂ ಆ ಘಾತುಕರಾದ ಮಕ್ಕಳು ಅರಸಿನ ಪರಿವಾರಕ್ಕಾಸ್ಪದವನ್ನು ಕೊಡಕೂಡದೆಂಬ ತಮ್ಮ ಪ್ರತಿಜ್ಞೆಯನ್ನು ಬಿಡದೆಯೇ ಇರಲು, ಅರಸು ಇಂಥಾ ನಿರ್ಘೃಣರಾದ ಮಕ್ಕಳ ಮನೆ ಛಾವಣಿಯ ಆಶ್ರಯಕ್ಕಿಂತಲೂ ಭೀಕರವಾದ ಚಂಡವಾತದೊಡನೆ ಹೋರಾಡುವುದೇ ಉತ್ತಮವೆಂದು, ಕುದುರೆಗಳು ಸಿದ್ಧವಾಗಲೆಂದಾಜ್ಞಾಪಿಸಿದನು

ಆ ಪಾಪಿಗಳು "ಸ್ವಚ್ಛಂದಚಾರಿಗಳು ತಾವಾಗಿ ತಂದುಕೊಳ್ಳುವ ಬಾಧೆಗಳೇ ಅವರಿಗೆ ತಕ್ಕ ಶಿಕ್ಷೆ" ಎಂದು ಹೇಳುತ್ತ, ಅರಸನು ಹಾಗೆಯೇ ಹೋಗಲೆಂದು ಬಿಟ್ಟು ಬಾಗಿಲನ್ನು ಮುಚ್ಚಿಕೊಂಡನು.

ಪರಿವಾರ ರಹಿತನಾಗಿರುವುದಕ್ಕಿಂತಲೂ ಪರಿವಾರವನವಶ್ಯಕವೆಂಬ ಮಕ್ಕಳ ಕೃತಘ್ನತೆಯ ಮಾತು ಅರಸನಿಗೆ ಹೃದಯಶೂಲವಾದುದರಿಂದಲೂ ರಾಜ್ಯವನ್ನು ಅವಿಚಾರದಿಂದ ಕೊಟ್ಟು ಬಿಟ್ಟುದುದರಿಂದುಂಟಾದ ಮಹದ್ವ್ಯಸನದಿಂದಲೂ ಅವನ ಬುದ್ಧಿಯು ಹದ್ದು ತಪ್ಪಿಹೋಯಿತು

ಈ ನಿರ್ಭಾಗ್ಯನಾದ ವೃದ್ಧನು ತನ್ನ ಸುತೆಯರ ನಿರ್ದಯೆಗಿಂತಲೂ ಪ್ರಕೃತಿಯು ಕಠಿಣತರವಲ್ಲವೆಂದು ನೆನೆದು, ಅವುಗಳೊಡನೆ ಹೋರಾಡಲು ತವಕಿಸುತ್ತಾ ಹೊರಟುಹೋದಾಗ ರಾತ್ರಿಯು ಮಹಾ ಕಾಳಿಮೆಯಾಗಿತ್ತು. ಗಾಳಿಯು ಬಹು ರಭಸವಾಗಿತ್ತು ಮಳೆಯೂ ಗುಡುಗೂ ಮಿಂಚೂ ಸಿಡಿಲೂ ಚಂಡಮಾರುತವೂ ಹೆಚ್ಚಾಗುತ್ತಾ ಬಂದವು. ಅನೇಕ ಹರಿದಾರಿಗಳ ವರೆಗೆ ನಿಲ್ಲುವದಕ್ಕೂ ಕೂಡ ನೆರಳಿಲ್ಲದ ಬೈಲು ಪ್ರದೇಶದಲ್ಲಿ ವನಸ್ಥಿ ಅಲೆದಾಡುತ್ತ, ಕೊನೆಗೆ ಅರಸನೂ ಅವನ ಛಾಯೆಯಂತಿದ್ದ ವಿದೂಷಕನೂ ಒಂದು ಪರ್ವತದ ಗವಿಗೆ ಸನ್ನಿಹಿತರಾದರು. ಅರಸನಿಗೆ ಆಗಲೇ ಹುಚ್ಚು ವಿಪರೀತವಾಗಿತ್ತು. ಆದುದರಿಂದ ಅವನು ಪ್ರಕೃತಿಗಳನ್ನು ಕುರಿತು—"ಎಲೈ! ಮಾರುತನೆ! ನಿನ್ನ ಪರಾಕ್ರಮವನ್ನೆಲ್ಲಾ ತೋರಿಸು. ನನ್ನ ನಗರದ ಪ್ರತಿಯುಪ್ಪರಿಗೆಗಳನ್ನೂ ದೇವಾಲಯಗಳ ಗೋಪುರಗಳನ್ನೂ ಕೆಳಕ್ಕೆ ಕೆಡಹು ಎಲೆ ಮಹಾವರ್ಷವೇ! ಈ ಭೂಮಿಯನ್ನೇ ನೀರಿನಿಂದ ಮುಳುಗಿಸಿಬಿಡು. ಎಲೆ! ಮೇಘನಾದವೆ! ನೀನು

ಕೃತಘ್ನರ ಕಿವಿಗಳನ್ನು ಮುಚ್ಚಿಸು. ಎಲೆ! ಸಿಡಿಲೆ! ನೀನು ಸೃಷ್ಟಿಯು ನ್ನು ನಿರ್ನಾಮಮಾಡು

ವೃ| ಹರನೀಂಶಿಕ್ಷಿಸುಸಾಪರಾಧಗುಣರೆಂಬಾಜಾರಚೋರರ್ಕಳಂ|
ಸುರೆಯಂ ಸೇವಿಪರಂ ಕೃತಘ್ನಜನರಂ ವಿಶ್ವಾಸಘಾತರ್ಕಳಂ ||
ಪರರೈಶ್ವರ್ಯಕೆ ಸೈಸದಿರ್ಪಜನರಂ ಈರಾತ್ರಿಯೊಳ್ ದುಃಖಿಸು |
ತ್ತಿರುವೆಮ್ಮಂಪೊರೆ ಸತ್ಕೃಪಾದ್ರ್ರಮನದಿಂಕಾರುಣ್ಯಸಾರಾಕರಾ||

ಅರಸನು ತನ್ನ ದುರ್ದಶೆಯನ್ನು ಮರೆಯುವಂತೆ, ಈ ವಿದೂಷಕನು ಬಹು ಬುದ್ಧಿಚಮತ್ಕಾರವಾದ ಹಾಸ್ಯಗರ್ಭಿತವಾದ ಮಾತುಗಳಿಂದ— “ಮಿತ್ರನೇ, ಈ ರಾತ್ರಿಯು ಬಹು ಭೀಕರವಾಗಿದೆ. ಇದನ್ನು ನಾವು ದಾಟುವುದು ಮಹಾಪ್ರಯಾಸ. ಪ್ರಮಾಣವಾಗಿಯೂ ಇಂಥಾ ರಾತ್ರಿಯು ಎಂತಹ ದುರಹಂಕಾರವಾದ ಜನರನ್ನಾದರೂ ಮೃದುಮಾಡು ವಂತಿದೆ. ಆದುದರಿಂದ ನಿನ್ನ ಪುತ್ರಿಯರಲ್ಲಿಗೆ ಹೋಗಿ, ಅವರ ಅನುಗ್ರಹ ವನ್ನು ಯಾಚಿಸುವುದುತ್ತಮವಲ್ಲವೆ? ಲೋಕದಲ್ಲಿ ಸ್ವಲ್ಪವಾದರೂ ಬುದ್ಧಿಯಿರತಕ್ಕವನಿಗೆ ಈ ಮಳೆ ಗಾಳಿಗಳೇನು ಮಾಡುವುವು? ಪ್ರತಿದಿನವೂ ಇಂತಹ ಮಳೆಯೇ ಬಂದರೂ ಪ್ರಾಪ್ತಿಗೆ ತಕ್ಕ ಫಲದಿಂದ ತೃಪ್ತರಾಗಿರ ಬೇಕು” ಎಂದನು

ಹೀಗೆ ಅತ್ಯಲ್ಪಪರಿವಾರದೊಡನೆ ಅಲೆದಾಡುತ್ತಿದ್ದ ಈ ಚಕ್ರವರ್ತಿ ಯನ್ನು ರಾಜಭಕ್ತಿಧುರೀಣನಾದ ಗುಣಶಾಲಿಯಾದ ಈಗ ಕೇಯಾಸ್ ಎಂಬಭಿದಾನದಿಂದ ಪ್ರಭುವಿನ ಸಹಚರನಾಗಿ ಅವನ ಸಮೀಪದಲ್ಲಿಯೇ ಇದ್ದರೂ ಅರಸನಿಂದ ಅರಿಯಲ್ಪಡದ ಕೆಂಟನು ಕಂಡು— “ಹಾ! ಪ್ರಭುವೇ, ಇಲ್ಲಿರುವಿಯಾ! ಆಹಾ! ನಿಶಿಯನ್ನೇ ಪ್ರೀತಿಸತಕ್ಕ ಪ್ರಾಣಿ ಗಳು ಸಹ ಇಂತಹ ಘೋರನಿಶಿಯನ್ನು ಪ್ರೀತಿಸವು! ಈ ಪ್ರಚಂಡವಾದ ಬಿರುಗಾಳಿಯು ಪ್ರಾಣಿಗಳನ್ನೆಲ್ಲಾ ಅವುಗಳ ಗವಿಗಳನ್ನು ಸೇರಿಕೊಳ್ಳು ವಂತೆ ಮಾಡಿರುವದು. ಹೀಗಿರಲು ಮನುಷ್ಯ ಪ್ರಕೃತಿಗೆ ಈ ಕಷ್ಟವನ್ನು ಸೈರಿಸಲಾಗುತ್ತದೆಯೇ?

ಕಂದ|| ಪರುಷತಯಿಂದುರೆಬೀಸುವ |
ಬಿರುಗಾಳಿಯುಮಳೆಯುಪೆಟ್ಟನೇತೆರನಕಟಾ ||
ನರವರನೆಸಹಿಸುವೈ ನೀಂ |
ನಿರುಕಿಪೆನೆಂತೈ | ಬಳಲ್ದನಿನ್ನೀಸ್ಥಿತಿಯಂ ||

ಲಿಯರನು ಅವನನ್ನು ಗದರಿಸಿದನು. ಆ ಮೇಲೆ, ‘‘ಎಲೈ, ಪ್ರಬಲಕರವಾದ ಹಿಂಸೆಯಿಂದ ಬಾಧಿತನಾಗಿರುವಲ್ಲಿ, ಈ ಅಲ್ಪವಾದ ತೊಂದರೆಗಳು ನನಗೇನೂ ಮಾಡಲಾರವು. ಮನವು ಭಾರರಹಿತವಾಗಿರುವಾಗ್ಯೆ ಶರೀರವು ಜಾಗರೂಕತೆಯ ಪೋಷಣೆಯನ್ನೆಳಸುವುದು. ಮನಸ್ಸು ಬಹು ದೊಡ್ಡ ಬಿರುಗಾಳಿಯಿಂದ ಚಲಿತವಾಗಿರುವಲ್ಲಿ, ಈ ಗಾಳಿ ಏನುಮಾಡುವುದು ? ಈ ಮಹಾ ವರ್ಷಕ್ಕಿಂತಲೂ ಬಲವಾದ ಶರವರ್ಷವು ಹೃದಯವನ್ನು ಸುಚ್ಚುತ್ತಿರಲು, ಈ ಮಳೆಹನಿಗಳೇನು ಮಾಡಬಲ್ಲವು ? ಕಾಡ್ಗಿಚ್ಚಿನಂತೆ ಆ ಪಿತೃದ್ರೋಹಿಗಳ ಕೃತಘ್ನತಾಗ್ನಿಯು ನನ್ನ ಹೃದಯವನ್ನು ಸುಡುತ್ತಿರಲು, ಮೇಘಗರ್ಜನೆಯು, ಸಿಡಿಲು, ಮಿಂಚು ಇವುಗಳೇನು ಮಾಡಬಲ್ಲವು ? ಆಹಾ ! ಆಹಾರವನ್ನು ಎತ್ತಿಕೊಟ್ಟು ದುದಕ್ಕಾಗಿ ಕೈಯನ್ನು ಬಾಯಿಕಚ್ಚುವುದು ; ಮಕ್ಕಳಿಗೆ ಕೈ, ಬಾಯಿ, ಆಹಾರ ಮತ್ತು ಸರ್ವಸ್ವವಾಗಿರತಕ್ಕ ಪಿತೃಗಳು ನಿರ್ಘೃಣತೆಯಿಂದ ಕಾಣಲ್ಪಡುವುದು ಎರಡೂ ಒಂದೇಯಲ್ಲವೇ ! ’’ ಎಂದನು.

ಆದರೂ ಈ ಗುಣವಂತನಾದ ಕೇಯಸನು, ಅರಸನು ಬಯಲಿನಲ್ಲಿ ಚಂಡವಾತಕ್ಕೆದುರಾಗಿ ನಿಲ್ಲಲಾರನೆಂದು ಭಾವಿಸಿ, ತನ್ನ ಉಪಚಾರದ ಮಾತುಗಳಿಂದ ಒತ್ತಾಯಮಾಡುತ್ತ, ಕೊನೆಗೆ ಬಳಿಯಲ್ಲಿದ್ದ ಆ ಗವಿಯೊಳಕ್ಕೆ ಪ್ರವೇಶಿಸುವಂತೆ ಮಾಡಿದನು ಮೊದಲು ವಿದೂಷಕನು ಒಳಕ್ಕೆ ಹೋಗಿ ಪಿಶಾಚವನ್ನು ಕಂಡೆನೆಂದು ಹೆದರಿ, ಕ್ಷಣಕಾಲದಲ್ಲಿ ಹಿಂತಿರುಗಿದನು. ಮುಂದೆ ಪರೀಕ್ಷಿಸಿ ನೋಡಲು, ಅಲ್ಲಿ ವಾಸಕ್ಕಾಗಿ ಆ ಗವಿಯನ್ನು ಆಶ್ರಯಿಸಿಕೊಂಡಿರುವ ಒಬ್ಬ ಹುಚ್ಚು ಬಿಕ್ಷುಕನಿದ್ದನು.

ಪಿಶಾಚಗಳನ್ನು ಕುರಿತು ಅವನಾಡುತ್ತಿದ್ದ ಮಾತು ಈ ವಿದೂಷಕನಿಗೆ ಭಯಪ್ರದವಾಯಿತು. ಈ ಭಿಕ್ಷುಕರು ದಿಟವಾಗಿ ಹುಚ್ಚರಾಗಿಯೋ ಅಥವಾ ಹುಚ್ಚರಂತೆ ವೇಷವನ್ನು ಧರಿಸಿಕೊಂಡವರಾಗಿಯೋ ‘‘ಜೋಗಪ್ಪನಿಗೆ ಯಾರಾದರೂ ಧರ್ಮಕೊಡಿರಿ’’ ಎಂದು ಕೂಗುತ್ತಾ, ಮೊಳೆಗಳಿಂದಲೂ ಚೂರಿಗಳಿಂದಲೂ ಶರೀರದ ರಕ್ತವನ್ನೀಚೆಗೆ ತೆಗೆಯುತ್ತಾ, ಹಲವು ತಡವೆ ಪ್ರಾರ್ಥನೆಗಳಿಂದಲೂ ಹಲವು ತಡವೆ ತಮ್ಮ ಹುಚ್ಚು ಬೈಗುಳಿಂದಲೂ ಸಾಧುಗಳಾದ ಹಳ್ಳಿಯವರನ್ನು ಭಯಗೊಳಿಸಿಯೋ, ಅಥವಾ ಮನಮರುಗಿಸಿಯೋ ಭಿಕ್ಷಕೊಡುವಂತೆ ಮಾಡುತ್ತ ದೇಶದಮೇಲೆದಾಡುತ್ತಿದ್ದರು.

5051 d·10·3·61 Re·0·50

ಈ ನಿರ್ಭಾಗ್ಯನು ಇವರಂತೆ ಒಬ್ಬನಾಗಿದ್ದನು. ಬೆತ್ತಲಾಗಿರುವುದಕ್ಕೆ ಬದಲಾಗಿ ಒಂದು ಕಂಬಳಿಯ ತುಂಡನ್ನು ಸೊಂಟಕ್ಕೆ ಸುತ್ತಿಕೊಂಡಿರುವ ಅವನ ದುರವಸ್ಥೆಯನ್ನು ಅರಸನು ನೋಡಿ, ಅವನು ಹೆಣ್ಣುಮಕ್ಕಳಿಗೆ ಸರ್ವಸ್ವವನ್ನೂ ಕೊಟ್ಟುಬಿಟ್ಟು ಈ ಸ್ಥಿತಿಗೆ ಬಂದ ಜನಕನಾಗಿರುವನೆಂದು ನಿಶ್ಚಯಿಸಿ ಕೊಂಡನು. ಮನುಷ್ಯನನ್ನು ಇಂತಹ ಶೋಚನೀಯವಾದ ದುರವಸ್ಥೆಗೆ ತರತಕ್ಕುದ್ದು, ನಿರ್ದಯೆಯ ಹೆಣ್ಣುಮಕ್ಕಳಲ್ಲದೆ ಅನ್ಯಾವುದೂ ಅಲ್ಲವೆಂದು ತಿಳಿದಿದ್ದನು. ಅರಸಿನ ಈ ಮಾತಿನಿಂದಲೂ ಅಡಿಗಡಿಗೆ ಆತನಾಡುತ್ತಿಗ್ದ ಇಂತಹ ಕಾಡು ಹರಟೆಗಳಿಂದಲೂ ಅರಸಿನ ಬುದ್ಧಿಯು ಆತನ ಮಕ್ಕಳ ಕಠಿಣಭಾಷೆಯಿಂದ ವೈಕಲ್ಯವಾಗಿರುವುದೆಂದು ಕೇಯೂಸನು ಸ್ಪಷ್ಟವಾಗರಿತನು. ಕೆಂಟ್‌ನ ರಾಜಭಕ್ತಿಧುರೀಣತೆಯು ಅದುವರೆಗೆ ಮಾಡಿದ್ದ ಪ್ರಭುಸೇವೆಗಿಂತಲೂ ಅತ್ಯವಶ್ಯಕವಾದ ಸೇವೆಯನ್ನು ಕೈಗೊಳ್ಳಲು ಆಸ್ಪದವನ್ನು ಪಡೆಯಿತು. ಮರುದಿನ ಪ್ರಾತಃಕಾಲದಲ್ಲಿ ಅವನು ರಾಜಭಕ್ತಿಯುತರಾದ ಇನ್ನೂ ಕೆಲವು ಸೇವಕರ ಸಹಾಯದಿಂದ ತನ್ನ ಸ್ನೇಹಾಧಿಕಾರವ್ಯಾಪ್ತಿಯು ವಿಶೇಷವಾಗಿರುವ ಡೋವರನ ಭವನಕ್ಕೆ ಅರಸನನ್ನು ಎತ್ತಿಕೊಂಡು ಹೋದನು.

ಅನಂತರದಲ್ಲಿ ಫ್ರಾನ್ಸ್ ದೇಶಕ್ಕೆ ಯಾನಮಾಡಿ, ಅರಸಿನ ಆಸ್ಥಾನವನ್ನು ತಲುಪಿ, ಕಾರ್ಡೀಲಿಯಳ ಸನ್ನಿಧಿಯಲ್ಲಿ ಆಕೆಯ ತಂದೆಯ ಶೋಚನೀಯವಾದ ಸ್ಥಿತಿಯನ್ನು ಮನಮುರುಗಿಸುವಂಥಾ ಮಾತುಗಳಿಂದಲೂ ಅವಳ ಅಕ್ಕಂದಿರ ಪಾಷಾಣದಂಥಾ ನಿರ್ದಯೆಯ ಕೃತ್ಯಗಳನ್ನೆಲ್ಲಾ ಅವುಗಳ ಸ್ವಾಭಾವಿಕವರ್ಣಗಳಿಂದ ಸಜೀವವಾಗಿರುವಂತೆಯೂ ತಿಳಿಸಿದನು. ಇದನ್ನೆಲ್ಲಾ ಆಲಿಸಿದ ಪಿತೃಭಕ್ತಿನಿರತಳಾದ ಕಾರ್ಡೀಲಿಯಾ ವನಿತಾಮಣಿಯು—“ಹಾ! ಜನಕನೇ! ಜನಕನೇ! ನಿನಗಿಂತು ದುರವಸ್ಥೆಯು ಪ್ರಾಪ್ತವಾಯಿತೆ! ಹಾ! ಸಹೋದರಿಯರಿರಾ! ಸ್ತ್ರೀಜಾತಿಗೇ ಕಳಂಕವನ್ನು ತಂದಿರಾ! ಅಯ್ಯೋ! ಅಸುರವೇ! ಅಕಟಕಟಾ! ಮಹಾ ಕ್ರೌರ್ಯವೇ! ಆ ಮಹಾ ವರ್ಷ ಸಮಯದಲ್ಲಿ ತನ್ನನ್ನು ಕಚ್ಚಿದ ಶತ್ರುವಿನ ನಾಯನ್ನೂ ಸಹ ಹೊರಕ್ಕೋಡಿಸದೆ ಬೆಚ್ಚಗೆ ಮನೆಯಲ್ಲಿ ನಿಲ್ಲಿಸಿಕೊಳ್ಳಬೇಕಾದ ಆ ಕಗ್ಗತ್ತಲೆಯ ರಾತ್ರಿಯಲ್ಲಿ, ದಯಾಪರನಾದ ವೃದ್ಧಜನಕನನ್ನು ಹೊರಹೊರಡಿಸುವರೆ!” ಎಂದು ಹಂಬಲಿಸುತ್ತಾ, ನಯನಾಶ್ರುಪೂರಿತಳಾಗಿ, ತನ್ನ ನೀಚ ಸಹೋದರಿಯರನ್ನೂ ಅವರ ಪತಿ

ಗಳನ್ನೂ ಶಿಕ್ಷಿಸಿ ತನ್ನ ಪಿತೃವನ್ನು ಪುನಃ ,ಸಿಂಹಾಸನದಲ್ಲಿ ಕುಳ್ಳಿರಿಸಲು ಸಾಕಾಗುವಷ್ಟು ಸೈನ್ಯಸಮೇತಳಾಗಿ ಬ್ರಿಟನ್ನಿಗೆ ಹೋಗಿಬರಲು ಅಪ್ಪಣೆ ಕೊಡಬೇಕೆಂದು ಭೂಕಾಂತನಾದ ತನ್ನ ಕಾಂತನನ್ನು ಪ್ರಾರ್ಥಿಸಿದಳು. ಆತನು ತನ್ನ ನಲ್ಲಳ ಪ್ರಾರ್ಥನೆಗೆ ಸಮ್ಮತಿಯನ್ನೀಯಲು, ಆಕೆಯು ಸೈನ್ಯಸಮೇತಳಾಗಿ ಸಮುದ್ರವನ್ನು ಹಾಯ್ದು ಡೋವರಿನಲ್ಲಿ ಹಡಗಿಳಿದಳು.

ಕೆಂಟನು ಫ್ರಾನ್ಸಿಗೆ ಹೋಗುವಾಗ್ಗೆ ಅರಸನು ಹುಚ್ಚು ಹಿಡಿದವನಾಗಿರುವುದರಿಂದ ಅವನನ್ನು ಜಾಗರೂಕತೆಯಿಂದ ನೋಡಿಕೊಂಡಿರುವಂತೆ ಅವನ ಮೇಲೆ ಕಾಯುವವರನ್ನು ನಿಯಮಿಸಿದ್ದನು. ಹೇಗೋ ಅವರಿಂದ ತಪ್ಪಿಸಿಕೊಂಡು ಹೊರಟುಹೋಗಿ ಹುಲ್ಲು ಸೊಪ್ಪು ಬಳ್ಳಿಗಳಿಂದಲೂ ಕಾಡು ಹೂಗಳಿಂದಲೂ ಕಿರೀಟವನ್ನು ಮಾಡಿಟ್ಟುಕೊಂಡು, ಕೇವಲ ಹುಚ್ಚಿನಿಂದ ಗಟ್ಟಿಯಾಗಿ ತನ್ನಷ್ಟಕ್ಕೆ ತಾನೇ ಹಾಡುತ್ತ, ಬಹು ಶೋಚನೀಯವಾದ ಅವಸ್ಥೆಯಿಂದ ಮಗ್ಗುಲಿನ ಹೊಲಗಳಲ್ಲಿ ಅಲೆದಾಡುತ್ತಿದ್ದ ಲಿಯರನನ್ನು ಕಾರ್ಡೀಲಿಯಳ ಪರಿವಾರದವರು ಹುಡುಕಿ ಕರೆತಂದರು. ತಂದೆಯನ್ನು ಸಂದರ್ಶಿಸಬೇಕೆಂದು ಕಾರ್ಡೀಲಿಯಳು ಮನಸಾ ಆತುರಗೊಂಡಿದ್ದಾಗ್ಯೂ ನಿದ್ರೆಯಿಂದಲೂ ಮೂಲಿಕಾ ಪ್ರಯೋಗದಿಂದಲೂ ಆತನು ಹೆಚ್ಚು ಸ್ವಸ್ಥತೆಯನ್ನು ಪುನಃ ಪಡೆಯುವವರೆಗೆ ವೈದ್ಯರ ಹಿತವಾದದಮೇರೆಗೆ ಆಕೆಯು ಸುಮ್ಮನಿರಬೇಕಾಗಿತ್ತು. ಅರಸನು ಸ್ವಸ್ಥನಾಗಲು, ತನ್ನ ರತ್ನಾಭರಣಗಳೂ ಸುವರ್ಣವೂ ಕೊಡಲ್ಪಡುವದಾಗಿ ಕಾರ್ಡೀಲಿಯಳಿಂದ ವಾಗ್ದಾನಮಾಡಲ್ಪಟ್ಟಿದ್ದ, ಆ ಬುದ್ಧಿವಂತರಾದ ವೈದ್ಯರ ಸಹಾಯದಿಂದ ಮಗಳು ಜಾಗ್ರತೆಯಲ್ಲಿಯೇ ತನ್ನ ತಂದೆಯನ್ನು ನೋಡುವಂತಾದಳು.

ಈ ತಂದೆಮಕ್ಕಳ ಸಂದರ್ಶವು ಕನಿಕರವನ್ನುಂಟುಮಾಡುವ ಎಂತಹ ನೋಟವಾಗಿದೆ! ದುರ್ಬಲನಾದ ವೃದ್ಧನಾದ ನೃಪತಿಯು ತನ್ನ ಒಂದಾನೊಂದು ಕಾಲದ ಮುದ್ದು ಕಂದನನ್ನು ನೋಡಿದುದರಿಂದ ಪಡೆದ ಆನಂದಕ್ಕೂ ತನ್ನ ಅಸಂತೋಷದಿಂದ ಅತ್ಯಲ್ಪವಾದ ತಪ್ಪಿತಕ್ಕಾಗಿ ಪರಿತ್ಯಕ್ತಳಾದ ಅವಳಿಂದ ಪಡೆಯುತ್ತಿರುವ ಇಂತಹ ಪಿತೃವಾತ್ಸಲ್ಯದ ಉಪಚಾರಕ್ಕಾಗಿ ಉದ್ಭವಿಸಿದ ಲಜ್ಜೆಗೂ ಆಗುತ್ತಿರುವ ಹೋರಾಟವು ಕನಿಕರವನ್ನುಂಟುಮಾಡುವ ಎಂತಹ ನೋಟವಾಗಿದೆ! ಇಂತು ಆನಂದಲಜ್ಜೆಗಳು ಅವನ

ಲ್ಲಿ ಕಳೆದುಳಿದ ಚಿತ್ತಭ್ರಮಣೆಯೊಡನೆ ಹೋರಾಡಲು, ಅವನು ಅರ್ಧ ಬುದ್ಧಿಯಿಂದಲೂ ಅರ್ಧ ಹುಚ್ಚಿನಿಂದಲೂ "ಬೇಡಿಕೊಳ್ಳುವೆನು. ನನ್ನನ್ನು ನೋಡಿ ನಗಬೇಡಿರಿ. ನಾನೊಬ್ಬ ಹುಚ್ಚಮುದುಕ. ನನಗೀಗ ಬುದ್ಧಿಯು ಸ್ವಾಧೀನವಿರುವಂತಿಲ್ಲ. ನೀನು ಯಾರೆಂಬುವುದನ್ನೂ ಆ ಮನುಷ್ಯ ನಾರೆಂಬುದನ್ನೂ ಹೇಳು. ನಾನೀಗೆಲ್ಲಿದ್ದೇನೆ? ನನ್ನ ಬುದ್ಧಿಯನ್ನೆಲ್ಲಾ ವೆಚ್ಚಮಾಡಿ ನೋಡಿದರೂ ಈ ಉಡಿಗೆಯಾವುದೋ ತಿಳಿಯಲಿಲ್ಲ. ಕಳೆದರಾತ್ರಿ ನಾನೆಲ್ಲಿದ್ದೆನೆಂಬುದೂ ನನಗೆ ಜ್ಞಾಪಕವಿಲ್ಲ. ನಗಬೇಡಿ. ನಾನು ಒಬ್ಬ ಮನುಷ್ಯ, ಈಕೆಯು ನನ್ನ ಮಗಳಾಗಿರುವಂತೆ ನಂಬುತ್ತೇನೆ" ಎಂದನು.

ಕಾರ್ಡೀಲಿಯಾ—"ಜನಕನೇ, ನಾನು ತಮ್ಮ ಕುವರಿ, ತಮ್ಮ ಕುವರಿ."

ಲಿಯರ್—"ಮಗುವೆ! ಅಳಬೇಡ. ಕಣ್ಣೀರನ್ನು ಒರೆಸಿಕೊ. ಬೇಡಿಕೊಳ್ಳುವೆನು. ದುಃಖಿಸಬೇಡ. ನನಗೆ ನೀನು ವಿಷವನ್ನು ಕೊಟ್ಟಾಗ್ಯೂ ಕುಡಿಯುವೆನು. ನೀನು ನನ್ನನ್ನು ಪ್ರೀತಿಸಲು ಕಾರಣವಿಲ್ಲವೆಂದು ತಿಳಿದಿರುವೆನು. ಅವರು ಕಾರಣವಿದ್ದರೂ ಪ್ರೀತಿಸುವುದಿಲ್ಲ. ನನಗೆ ಜ್ಞಾಪಕವಿರುವ ಮಟ್ಟಿಗೆ ನನಗೆ ಅನ್ಯಾಯವನ್ನೇ ಮಾಡಿರುವರು. ಮಗುವೆ, ಕ್ಷಮಿಸು, ಕ್ಷಮಿಸು" ಎಂದು ಮೊಣಕಾಲೂರಿ ಕುಳಿತುಕೊಳ್ಳಲುದ್ಯುಕ್ತನಾಗಲು, ಕಾರ್ಡೀಲಿಯುಳು—"ತಂದೆಯೇ, ಕಾರಣವೇನೂ ಇಲ್ಲ. ಸಮಾಧಾನನಾಗು. ತಂದೆಯೇ, ನನ್ನನ್ನು ನೋಡು. ನನ್ನನ್ನು ನೀನು ವಂದಿಸುವುದೆ! ನಿನ್ನ ಪೂಜ್ಯವಾದ ಕರವನ್ನು ನನ್ನ ತಲೆಯಮೇಲಿಟ್ಟು ಹರಸು" ಎಂದು ಚರಣಕ್ಕೆರಗಿ, "ತಂದೆಯೇ, ನಾನು ತಮ್ಮ ಚರಣಾರವಿಂದವನ್ನು ಕಣ್ಣಿನ ನೀರಿಂದ ತೊಳೆದು, ಅವರ ನಿರ್ದಯೆಯಿಂದಾದ ನೋವನ್ನು ದೂರಮಾಡುವೆನು. ಇವರಿಂದ ಆ ಪಾಪಿಗಳೇ ನಾಚಿಕೊಳ್ಳಲಿ" ಎಂದು ತಂದೆಯನ್ನು ಉಪಚರಿಸುತ್ತಿದ್ದಳು.

ಚಲಿತವಾದ ತಂತಿಗಳ ವಾದ್ಯವು ಸರಿಯಾಗಿ ಬಿಗಿಯಲ್ಪಟ್ಟು ಇಂಪಾಗಿ ಧ್ವನಿಕೊಡುವಂತೆ ಮಾಡಲ್ಪಡುವ ಹಾಗೆ ಲಿಯರನ ಆ ಇಬ್ಬರು ಮಕ್ಕಳ ಕ್ರೌರ್ಯತೆಯಿಂದ ಚಲಿತವಾದ ಅವನ ಮನಸ್ಸನ್ನೂ ಬುದ್ಧಿಯನ್ನೂ ಸುಖನಿದ್ರೆಯಿಂದಲೂ ಮೂಲಿಕೆಗಳಿಂದಲೂ ಕಾರ್ಡೀಲಿಯುಳೂ ಅವಳ ವೈದ್ಯರೂ ಸರಿಪಡಿಸುವುದರಲ್ಲಿ ಜಯಶೀಲರಾದರು. ಆದುದರಿಂದ

ಆರ್ಯನಾದ ನೃಪತಿಯನ್ನು ಕರ್ತವ್ಯಜ್ಞಗಳಾದ, ಜನಕವಾತ್ಸಲ್ಯಯುಕ್ತೆಳಾದ ಮಗಳ ಸಂರಕ್ಷಣೆಯಲ್ಲಿಟ್ಟು, ಆ ಕ್ರೂರಿಗಳಾದ ಹೆಣ್ಣು ಮಕ್ಕಳನ್ನು ಕುರಿತು ಸ್ವಲ್ಪ ಪ್ರಸ್ತಾಪಿಸೋಣ.

ತಂದೆಯ ವಿಷಯದಲ್ಲಿಯೇ ಅಷ್ಟೊಂದು ಅಸಹಜ ಗುಣವುಳ್ಳವರಾಗಿದ್ದ ಆ ರಕ್ಕಸಿಯರು, ತಮ್ಮ ನಿಜಭರ್ತೃಗಳ ವಿಷಯದಲ್ಲಿ ವಿಶ್ವಾಸವುಳ್ಳವರಾಗಿದ್ದರೆಂದು ನಿರೀಕ್ಷಿಸಲು ಕಾರಣವೇನೂ ಇಲ್ಲ. ಅವರಿಗೆ ತಮ್ಮ ಪತಿಗಳನ್ನು ಕರ್ತವ್ಯತಃ ಸಂದರ್ಶಿಸುವುದೂ ಪ್ರೀತಿಸುವುದೂ ಸಹ ಬಲು ಬೇಗನೆ ಭಾರವಾಗಿ ಪರಿಣಮಿಸಿತು. ತಮ್ಮನುರಾಗವನ್ನು ಮತ್ತೊಬ್ಬನಲ್ಲಿಟ್ಟಿರುವುದನ್ನು ಸ್ಪಷ್ಟತರವಾಗಿ ತೋರಿಸಿದರು. ಇವರ ನ್ಯಾಯವಿರುದ್ಧವಾದ ಪ್ರೇಮಕ್ಕೆ ಪಾತ್ರನಾದವನು ತನ್ನ ಕೃತ್ರಿಮಗಳಿಂದ ಮುಂದಿನ ಅರ್‌ಲ್ ಪದವಿಗೆ ನ್ಯಾಯವಾದ ಬಾಧ್ಯಸ್ಥನಾದ ಎಡ್‌ಗರ್‌ನಿಗೆ ಬಾಧ್ಯತೆಯನ್ನು ತಪ್ಪಿಸಿ, ತನ್ನ ತಂದೆಯು ನೀಚನೆಂಬದಾಗಿ ಕಾರ್ನ್‌ವಾಲ್ ಡ್ಯೂಕಿನಲ್ಲಿ ಅಪಲಪಿಸಿ, ಆತನನ್ನು ಕಷ್ಟಕ್ಕೆ ಗುರಿಮಾಡಿ, ತಾನೇ ಅರ್‌ಲ್ ಆದ ಗ್ಲಾಸ್ಟರಿನ ವೇಶ್ಯಾತ್ಮಜನಾದ ಎಡ್‌ಮಂಡನು. ಎಂಥಾ ಸುಗುಣ ಸಂಪನ್ನ! ಹಂದಿಗಳಿಗೆ ಕೆಸರು ಪರಿಮಳವಲ್ಲವೆ? ಹೀಗಿರುವಲ್ಲಿ ರೀಗನ್‌ಳ ಪತಿಯಾದ ಕಾರ್ನ್‌ವಾಲ್ ಡ್ಯೂಕನು ಗ್ಲಾಸ್ಟರ್‌ನನ್ನು ದ್ರೋಹಿ ಎಂದು ಹಿಡಿದು ಶಿಕ್ಷಿಸುತ್ತಿರುವಾಗ್ಯೆ, ಗ್ಲಾಸ್ಟರಿನ ಒಬ್ಬ ಭೃತ್ಯನ ಕತ್ತಿಯ ಪೆಟ್ಟಿನ ವೇದನೆಯಿಂದ ಮೃತನಾದನು. ಒಡನೆಯೇ ರೀಗನ್‌ಳು ಗ್ಲಾಸ್ಟರಿನ ಅರ್‌ಲ್ ಆದ ಎಡ್‌ಮಂಡನನ್ನು ವಿವಾಹ ಮಾಡಿಕೊಳ್ಳುವುದಾಗಿ ಪ್ರಸಿದ್ಧಪಡಿಸಿದಳು. ಎಡ್‌ಮಂಡನು ರೀಗನ್‌ಳಲ್ಲಿಯೂ ಗಾನರಲ್‌ಳಲ್ಲಿಯೂ ಪ್ರೇಮವುಳ್ಳವನಾಗಿರುವುದಾಗಿ ಅವರಲ್ಲಿ ಬೇರೆ ಬೇರೆಯಾಗಿ ಅನೇಕ ತಡವೆ ಹೇಳಿದ್ದನು. ರೀಗನ್‌ಳು ಈತನನ್ನು ವಿವಾಹ ಮಾಡಿಕೊಳ್ಳುವಳೆಂಬ ವಾರ್ತೆಯನ್ನು ಕೇಳಿ, ಗಾನರಲ್‌ಳು, ತನ್ನನುಜೆಯನ್ನು ನಿರ್ನಾಮಗೊಳಿಸಲು ವಿಷವನ್ನು ಪ್ರಯೋಗಿಸಿದಳು. ಆದರೆ ಈ ವಿಚಾರವೆಲ್ಲಾ ಗಾನರಲ್‌ಳ ಪತಿಯಾದ ಆಲ್‌ಬನಿಯ ಡ್ಯೂಕಿಗೆ ತಿಳಿಯಬಂದುದರಿಂದ ಆತನು ಅವಳನ್ನು ಅವಳ ಅಕೃತ್ಯಕ್ಕಾಗಿಯೂ ನ್ಯಾಯವಿರುದ್ಧವಾದ ಕಾಮುಕತನಕ್ಕಾಗಿಯೂ ಬಂಧನದಲ್ಲಿಟ್ಟನು. ಅವಳು ತನ್ನ ಪ್ರಯಣಮಾರ್ಗಕ್ಕುಂಟಾದ ವಿಘ್ನದಿಂದಲೂ ಕೋಪೋದ್ರೇಕದಿಂದಲೂ ಅಲ್ಲಿಯೇ ಆತ್ಮಹತ್ಯವನ್ನು ಮಾಡಿಕೊಂಡಳು.

ಹೀಗೆ ಆ ಸರ್ವಚೈತನ್ಯವಾದ ಪರಮಾತ್ಮನ ಆಜ್ಞೆಯಂತೆ ಆ ನೀಚರಾದ ಹೆಣ್ಣು ಮಕ್ಕಳು ಕಾಲಾಧೀನರಾದರು.

ಹೀಗೆ ಅರ್ಹತೆಗನುಗುಣವಾದ ಮೃತಿಯನ್ನು ನೀಡಿದ ಆ ಜಗನ್ನಿಯಾಮಕನಾದ ಸ್ವಾಮಿಯ ನ್ಯಾಯವಿಚಕ್ಷಣತೆಯನ್ನು ಕುರಿತು ಆಶ್ಚರ್ಯಭರಿತರಾಗಿ ನೋಡುತಲಿದ್ದ ಜನರ ದೃಷ್ಟಿಯು, ಯಾರ ಯೋಗ್ಯವಾದ ಕಾರ್ಯಗಳು ಅಧಿಕ ಶುಭತತಿಯಿಂದ ಪರಿಣಮಿಸುವಂತೆ ಕಾಣುತಲಿತ್ತೋ, ಆ ಅರಸಿನ ಕನಿಷ್ಠ ಪುತ್ರಿಯಾದ ಅಸದೃಶ ಸದ್ವರ್ತನವುಳ್ಳ ಕಾರ್ಡೀಲಿಯಳ ಅದೃಷ್ಟವು ಬಹು ಸಂತಾಪಕರವಾಗಿ ಆ ಅವೇದ್ಯನಾದ ಸ್ವಾಮಿಯ ಚಿತ್ತದಂತೆ ಪರಿಣಮಿಸಿದುದರ ಕಡೆಗೆ ಕ್ಷಣರುಚಿಯಂತೆ ಕ್ಷಣಮಾತ್ರದಲ್ಲಿ ತಿರುಗಿತು. "ನಿರಪರಾಧತ್ವವೂ ದೈವಭಕ್ತಿಯೂ ಲೋಕದಲ್ಲಿ ಸರ್ವಕಾಲದಲ್ಲಿಯೂ ವಿಜಯದಾಯಕವಾಗುವುದು ಖಂಡಿತವಾದ ನಿಶ್ಚಯವಲ್ಲ" (ಸತ್ಯವೇ ನಿತ್ಯವೆಂದು ಹಲವು ತಡವೆ ಹೇಳುವುದಕ್ಕಾಗುವುದಿಲ್ಲ) ಎಂದು ಜನರು ಅಂದುಕೊಂಡರು.

ಗ್ಲಾಸ್ಟರ್‌ನ ನೀಚನಾದ ಅರ್ಲ್ ಎಡ್ಮಂಡನ ಅಧ್ಯಕ್ಷತೆಯಲ್ಲಿ ಹೋಗಿದ್ದ ಗಾನರಲ್ ಮತ್ತು ರೀಗನ್ನರ ದಳಗಳ ಕಾರ್ಡೀಲಿಯಳ ದಳವನ್ನು ಜಯಿಸಿದುವು. ಲೀಯರ್‌ನೂ ಕಾರ್ಡೀಲಿಯಳೂ ಕೈಸೆರೆ ಹಿಡಿಯಲ್ಪಟ್ಟರು. "ಕಾರ್ಡೀಲಿಯಳು ನಿರಾಶೆಯಿಂದ ನೇಣು ಹಾಕಿಕೊಂಡಂತೆ ಪ್ರವಾದವನ್ನು ಹುಟ್ಟಿಸಿ, ಅವಳನ್ನು ಸಂಹರಿಸಿಬಿಟ್ಟರೆ, ದುಃಖಭಾರದಿಂದ ಲಿಯರಸೂ ದೈವಾಧೀನನಾಗುವನು. ಅಲ್‌ಬನಿಯ ಡ್ಯೂಕನು ಯುದ್ಧದಲ್ಲಿ ಮೃತನಾಗದಿದ್ದರೆ ಅನುಕೂಲವಾದ ಸಂದರ್ಭ ಸಿಕ್ಕಿದೊಡನೆ ಆತನನ್ನು ಸಂಹರಿಸು ಅನಂತರದಲ್ಲಿ ನಿರ್ಬಾಧೆಯೊಡನೆ ನಾವು ಸುಖವಾಗಿರಬಹುದು" ಎಂದು ಗಾನರಲ್‌ಳು ಎಡ್ಮಂಡಿಗೆ ಹೇಳಿದ್ದಳು. ತದನುಗುಣವಾಗಿಯೋ, ಅಥವಾ ಸಿಂಹಾಸನಕ್ಕೂ ತನಗೂ ನಡುವೆ ಯಾರೂ ಇಲ್ಲದಿರುವಂತೆ ಮಾಡಿಕೊಳ್ಳಬೇಕೆಂಬ ದುರಾಶೆಯಿಂದಲೋ, ಈ ನೀಚನಾದ ಎಡ್ಮಂಡನು ಕಾರ್ಡೀಲಿಯಳನ್ನು ನೇಣು ಹಾಕಿಸಿದನು. ಜಗದೀಶನು ಪಿತೃವಾತ್ಸಲ್ಯ ಕರ್ತವ್ಯಗಳ ಪ್ರಖ್ಯಾತವಾದ ಉದಾಹರಣೆಯನ್ನು ಈ ನಾರೀರತ್ನದ ಮೂಲಕವಾಗಿ ಪ್ರಪಂಚಕ್ಕೆ ತೋರಿಸಿದ ಮೇಲೆ, ಆಕೆಯನ್ನು ಆ ಸಣ್ಣ ವಯಸ್ಸಿನಲ್ಲಿಯೇ ತನ್ನ ಸನ್ನಿಧಾನಕ್ಕೆ ಕರೆದುಕೊಂಡನು.

ದಯಾರ್ದ್ರಹೃದಯಳಾದ ಆ ಮಗುವಿನ ಅನಂತರದಲ್ಲಿ ಲಿಯರನು ಬಹುಕಾಲ ಜೀವವಂತನಾಗಿರಲಿಲ್ಲ. ಲಿಯರನು ಮೃತನಾಗುವುದಕ್ಕೆ ಮುಂಚಿತವಾಗಿ ಅವನು ಅವನ ಹೆಣ್ಣುಮಕ್ಕಳ ನಿರ್ದಯೆಗೆ ಸಿಕ್ಕಿದ ಮೊದಲು, ಈ ಮಹಾ ಘೋರವಾದ ಶೋಕದಿಂದ ಕ್ಷಯಿಸುವವರೆಗೂ, ಆತನ ಚರಣಸೇವೆಯಲ್ಲಿರುವ ಕೇಯಾಸನೇ ತಾನೆಂದು ಕೆಂಟನು ಸ್ವಸ್ವರೂಪವನ್ನು ಆತನಿಗೆ ತಿಳಿಸಲು ಪ್ರಯತ್ನಿಸಿದನು. ಆದರೆ ಲಿಯರನ ಚಲಿತವಾಗಿದ್ದ ಬುದ್ಧಿಗೆ ಯಾವುದನ್ನೂ ತಿಳಿದುಕೊಳ್ಳುವುದಕ್ಕಾಗದೇ ಹೋಯಿತು. ಆದುದರಿಂದ ಕೆಂಟನು ಇಂಥಾ ಸಮಯದಲ್ಲಿ ಈ ಸಂಗತಿಯನ್ನು ಸ್ಪಷ್ಟಗೊಳಿಸುವುದಕ್ಕಾಗಿ ಮಾತನಾಡಿ ಅರಸನನ್ನು ತೊಂದರೆಗೊಳಿಸುವುದು ಸರಿಯಲ್ಲವೆಂದು ಯೋಚಿಸಿದನು. ಲಿಯರನ ಮರಣಾನಂತರದಲ್ಲಿ ಆ ಪ್ರಭುಭಕ್ತನಾದ ಭೃತ್ಯನು ವಾರ್ಧಿಕದಿಂದಲೂ ತನ್ನ ಸ್ವಾಮಿಯು ಪಟ್ಟಕಷ್ಟಗಳ ಚಿಂತೆಯಿಂದಲೂ ಪರಲೋಕಕ್ಕೆ ತನ್ನ ಪ್ರಭುತ್ವವನ್ನನುಸರಿಸಿದನು.

ದೈವಾಧೀನರಾದ ಲಿಯರ್ ಮತ್ತು ಅವರ ಮೂರು ಮಂದಿ ಹೆಣ್ಣುಮಕ್ಕಳನ್ನು ಕುರಿತ ವಿಷಯವೇ ನಮ್ಮ ಕಥೆಯಾದುದರಿಂದ ಗ್ಲಾಸ್ಟರ್‌ನ ಅರ್ಲ್ ಪದವಿಗೆ ನ್ಯಾಯವಾಗಿ ಬಾಧ್ಯನಾದ ಎಡ್‌ಗರ್‌ನಿಂದ ಎಡ್‌ಮಂಡನ ದ್ರೋಹ ಬುದ್ಧಿಯು ಪ್ರಕಟೀಕೃತನಾಗಿ, ಇಬ್ಬರಿಗೂ ನಡೆದ ದ್ವಂದ್ವಯುದ್ಧದಲ್ಲಿ ಎಡ್‌ಮಂಡನು ಹೇಗೆ ಮೃತನಾದನೆಂಬುದೂ, ಕಾರ್ಡೀಲಿಯಳ ಮರಣವಿಷಯದಲ್ಲಿ ನಿರಪರಾಧಿಯಾಗಿಯೂ, ಪಿತೃವನ್ನು ನಿರ್ದಯೆಯಿಂದ ಕಾಣುವುದರಲ್ಲಿ ತನ್ನ ಸತಿಗೆ ಪ್ರೋತ್ಸಾಹಕನಲ್ಲವಾಗಿಯೂ ಇದ್ದ ಗಾನರಲ್‌ಳ ಪತಿ ಆಲ್‌ಬನಿಯ ಡ್ಯೂಕನು ಲಿಯರನ ಮರಣಾನಂತರ ಹೇಗೆ ಬ್ರಿಟನ್ ಸಿಂಹಾಸನವೇರಿದನೆಂಬುದೂ, ಈ ಸ್ಥಳದಲ್ಲಿ ವಿವರಿಸಲ್ಪಡಬೇಕಾದುದನವಶ್ಯವಾಗಿದೆ.

[ನ್ಯಾಯವಾಗಿ ದಂಡೆತ್ತಿಕೊಂಡು ಬಂದ, ಪಿತೃವಾತ್ಸಲ್ಯಪೂರ್ಣಳಾದ ಕಾರ್ಡೀಲಿಯಳನ್ನು (ಕಥೆಯಲ್ಲಿ) ಕೊಲ್ಲುವುದಕ್ಕಿಂತ ಅನ್ಯದೇಶೀಯರಾದ ಫ್ರಾನ್ಸಿನವರಿಂದ ಬ್ರಿಟನ್ನವರನ್ನು ಅಪಜಯಗೊಳಿಸುವುದು ಬ್ರಿಟನ್ ದೇಶೀಯನಾದ ಷೇಕ್ಸ್‌ಪಿಯರಿಗೆ ಹೆಚ್ಚು ಸಂತಾಪಕರವಾಗಿದ್ದುದು ಸಹಜವಾದುದರಿಂದ ಕಥೆಯು ಈ ರೀತಿಯಾಗಿ ಪರಿಸಮಾಪ್ತವಾಯಿತು.]

"ರವಿ ಕಾಣದುದನ್ನು ಕವಿ ಕಾಣುವನು."

# II. AS YOU LIKE IT

# ೨. ಮನಸ್ಸಿಗೆ ಬಂದಂತೆ

ಹಲವು ಆಧಿಪತ್ಯಗಳಾಗಿ ವಿಂಗಡಿಸಲ್ಪಟ್ಟಿದ್ದ ಫ್ರಾನ್ಸಿನ ಒಂದು ಭಾಗವನ್ನು ಆಳುತ್ತಿದ್ದ ಒಬ್ಬ ಡ್ಯೂಕ ಎಂಬ ಪ್ರಭುವನ್ನು ಅವನ ತಮ್ಮನು ಗಡೀಪಾರು ಮಾಡಿ, ಆ ಪ್ರಾಂತ್ಯವನ್ನು ತಾನು ಆಳ ತೊಡಗಿದನು. ಹೀಗೆ ರಾಜ್ಯದಿಂದ ಓಡಿಸಲ್ಪಟ್ಟ ಈತನು ಕೆಲವು ಜನ ಆಪ್ತರಾದ ಅನುಚರೊಡನೆ ಆರಡನ್ ಎಂಬ ಕಾಡಿನಲ್ಲಿ ಅಜ್ಞಾತವಾಸಮಾಡಿಕೊಂಡಿದ್ದನು. ಅಲ್ಲಿ ಆತನು ತನಗಾಗಿ ಅರಣ್ಯವಾಸಮಾಡುವುದಕ್ಕೆ ಬಂದ ತನ್ನ ಮಿತ್ರರೊಡನೇ ವಾಸವಾಗಿದ್ದನು. ಅತ್ತ ಈ ಡ್ಯೂಕನ ಸ್ನೇಹಿತರ ಭೂಮಿಗಳನ್ನೂ ಸುವರ್ಣಾದಾಯಗಳನ್ನೂ ಆ ರಾಜ್ಯಾಪಹಾರಿಯೇ ಅನುಭವಿಸುತ್ತಾ ಧನಿಕನಾದನು. ವನವಾಸವು ಇವರಿಗೆ ಅಭ್ಯಾಸವಾಗಿ ಹೋದುದರಿಂದ ನಿಶ್ಚಿಂತೆಯಾಗಿರುವ ಈ ಜೀವಿತವು ವೈಭವಾಡಂಬರಗಳಿಂದ ಅಲಂಕೃತನಾದ ರಾಜಪರಿವಾರದವನ ಜೀವಿತಕ್ಕಿಂತಲೂ ಇನಿದಾಗಿತ್ತು. ಅಲ್ಲಿ ಅವರು ಇಂಗ್ಲೆಂಡಿನಲ್ಲಿ ಪೂರ್ವದಲ್ಲಿದ್ದ ರಾಬಿನ್‌ಹುಡ್‌ನಂತೆ ವಾಸವಾಗಿದ್ದರು. ಆ ಓಳ್ಳೇ ಕಾಲದಲ್ಲಿ ನಡೆಯುತ್ತಿದಂತೆಯೇ ಈ ಅರಣ್ಯಕ್ಕೂ ಪ್ರತಿದಿನದಲ್ಲಿಯೂ ಆಸ್ಥಾನದಿಂದ ದೊಡ್ಡ ಮನೆತನದ ಯುವಕರು ಬಂದು ಸಂತೋಷವಾಗಿ ದಿನವನ್ನು ಕ್ಷಣದಂತೆ ಕಳೆಯುತ್ತಿದ್ದರು. ವಸಂತರುತುವಿನಲ್ಲಿ ಅವರು ಆ ಅರಣ್ಯದ ಮಹಾ ವೃಕ್ಷಗಳ ನೆರಳಿನಲ್ಲಿ ಸೇರಿ, ಅಲ್ಲಿ ವಾಸವಾಗಿದ್ದ ಚಿತ್ರವಿಚಿತ್ರವಾದ ಚುಕ್ಕೆಗಳುಳ್ಳ ಅತಿ ಮನೋಹರವಾಗಿದ್ದ ಹುಲ್ಲೆಗಳ ವಿನೋದಕರವಾದ ಆಟವನ್ನು ನೋಡುತ್ತಲಿದ್ದರು. ಇಂಥಾ ಈ ಹುಲ್ಲೆಗಳನ್ನು ಬೇಟೆಮಾಡುವುದು ಅವರಿಗೆ ಬಹು ಸಂಕಟವಾಗಿದ್ದರೂ, ಹಸಿವು ಅವುಗಳನ್ನು ಕೊಲ್ಲುವಂತೆ ಮಾಡುತ್ತಿತ್ತು. ಡ್ಯೂಕನು ಅಸಹ್ಯವಾದ ಚಳಿಯನ್ನು ಸಮಾಧಾನದಿಂದ ಸಹಿಸಿಕೊಂಡು, "ನನ್ನ ಮೇಲೆ ಬೀಸತಕ್ಕ ಈ ಶೈತ್ಯದ ಗಾಳಿಯು ನನಗೆ ಮಂತ್ರಾಲೋಚಕನಂತಿದೆ, ಅದು ನನ್ನನ್ನು ಮೃಷಾಸ್ತುತಿಮಾಡದೆ ನನ್ನ ಈಗಿನ ಸ್ಥಿತಿಯನ್ನು ಸರಿಯಾಗಿ ತಿಳಿಸುತ್ತದೆ. ಈ ಶೀತಮಾರುತನು ಇಷ್ಟು ಕಠಿಣವಾಗಿ ನನ್ನನ್ನು ಘಾತಿಸಿದರೂ ನಿರ್ದಯೆ, ಕೃತಘ್ನತೆಯುಷ್ಟು ತೀವ್ರವಾ

ಗಿ ಬೇರೆ ಇಲ್ಲ. ಜನರು ತಮಗೊದಗಿದ ತೊಂದರೆಗಳನ್ನು ಶಪಿಸುವವರಾಗಿರುತ್ತಾರೆ. ವಿಷವನ್ನು ಧರಿಸಿರುವ ಭಯಂಕರವಾದ ಸರ್ಪದ ತಲೆಯಲ್ಲಿರುವ ಅಮೌಲ್ಯವಾದ ರತ್ನವು ಹೇಗೆ ಔಷಧಗಳಿಗಾಗಿ ಪರಿಗ್ರಹಿಸಲ್ಪಡುವುದೋ ಹಾಗೆಯೇ ಕಷ್ಟಗಳಿಂದಲೂ ಹಲವು ಪ್ರಯೋಜನಗಳನ್ನು ಸಂಗ್ರಹಿಸಿಕೊಳ್ಳಬೇಕು '' ಎಂದು ಹೇಳುತ್ತಾ, ಶ್ರಮಸಹನ ಶೀಲನಾಗಿ ಪ್ರತಿಯೊಂದು ವಸ್ತುವಿನಿಂದಲೂ ಒಂದೊಂದು ತತ್ವವನ್ನು ಸಂಗ್ರಹಿಸತೊಡಗಿದನು. ಜನಗೋಷ್ಠಿಯ ತೊಡಕುಗಳಿಂದ ಮುಕ್ತನಾಗಿ ಈ ರೀತಿಯಲ್ಲಿ ಈತನು ತತ್ವಸಂಗ್ರಹದಲ್ಲಿರಲು, ಮರದಲ್ಲಿ ನಾಲಿಗೆಯನ್ನೂ ಪ್ರವಾಹಗಳಲ್ಲಿ ಗ್ರಂಥಗಳನ್ನೂ ಶಿಲೆಗಳಲ್ಲಿ ಜ್ಞಾನೋಪದೇಶಗಳನ್ನೂ ಪ್ರತಿಯೊಂದರಲ್ಲಿಯೂ ಒಳ್ಳೆಯದನ್ನು ಕಾಣಬಲ್ಲವನಾದನು.

ಗಡೀಪಾರು ಮಾಡಲ್ಪಟ್ಟಿದ್ದ ಈ ಡ್ಯೂಕಿನ ಒಬ್ಬಳೇ ಮಗಳಾದ ರೊಸಾಲೆಂಡ್‌ಳನ್ನು ಅವಳ ಚಿಕ್ಕಪ್ಪನಾದ ಡ್ಯೂಕ್ ಫ್ರೆಡರಿಕನು ತನ್ನ ಪುತ್ರಿಯಾದ ಸೆಲಿಯಾಳ ಜೊತೆಗಾಗಿ ತನ್ನ ಅರಮನೆಯಲ್ಲಿಯೇ ಇರಿಸಿಕೊಂಡನು. ಈ ಇಬ್ಬರು ನಾರಿಯರು ಎಡೆಬಿಡಲರಿಯದ ಸ್ನೇಹವುಳ್ಳವರಾಗಿದ್ದರು. ತಂದೆಗಳಿಗಿದ್ದ ಪರಸ್ಪರ ಶತ್ರುತ್ವವು ಇವರ ಸ್ನೇಹವನ್ನು ಲೇಶಮಾತ್ರವೂ ಕಳೆಗುಂದಿಸಲಾರದುದಾಗಿತ್ತು. ರೊಸಾಲೆಂಡಳ ತಂದೆಯನ್ನು ತನ್ನ ತಂದೆಯು ಅನ್ಯಾಯವಾಗಿ ರಾಜ್ಯಭ್ರಷ್ಟನನ್ನಾಗಿ ಮಾಡಿದುದಕ್ಕಾಗಿ ಆಕೆಯು ಅದನ್ನು ಮರೆಯುವಂತೆ ಮಾಡಲು ಸೆಲಿಯಾಳು ಪೇಚಾಡುತ್ತಿದ್ದಳು. ತನ್ನ ತಂದೆಯು ರಾಜ್ಯಭ್ರಷ್ಟನಾಗಿರುವುದೂ ತಾನು ತನ್ನ ತಂದೆಯ ರಾಜ್ಯವನ್ನು ಅಪಹರಿಸಿದ ಚಿಕ್ಕಪ್ಪನ ಅಧೀನದಲ್ಲಿರುವುದೂ ರೊಸಾಲೆಂಡಳ ಸ್ಮರಣೆಗೆ ಬಂದು ಆಕೆಯು ಚಿಂತಾಕ್ರಾಂತಳಾಗಲು ಸೆಲಿಯಾಳ ಸಮಸ್ತ ಕಾರ್ಯಗಳು ಅವಳನ್ನು ಸಮಾಧಾನಗೊಳಿಸುವುವಾಗಿರುತ್ತಿದ್ದುವು.

ಒಂದು ದಿನ ಸೆಲಿಯಾಳು—“ ಅಕ್ಕ, ಸಂತೋಷದಿಂದಿರು '' ಎಂದು ಎಂದಿನಂತೆ ದಯೆಯೊಡನೆ ಮಾತನಾಡುತ್ತಿರಲು ಡ್ಯೂಕನ ಕಡೆಯಿಂದ ಒಬ್ಬ ಭೃತ್ಯನು ಬಂದು—“ ಇನ್ನು ಸ್ವಲ್ಪ ಹೊತ್ತಿನೊಳಗಾಗಿ ಅರಮನೆಯ ಮುಂದೆ ಮಲ್ಲಕಾಳಗವಾಗುವುದು. ನೀವು ನೋಡುವುದಕ್ಕೆ ಇಷ್ಟಪಟ್ಟರೆ ಒಡನೆಯೇ ಬರಬಹುದು '' ಎಂದು ಹೇಳಿದನು. ಇದು ರೊಸಾಲೆಂಡಳನ್ನು ಆನಂದಗೊಳಿಸುವುದೆಂದು ಸೆಲಿಯಾಳು ನೆನೆದು, ನೋಟಕ್ಕೆ ಹೋಗಲೊಪ್ಪಿದಳು.

ಈಗ ಈ ಮಲ್ಲಕಾಳಗವು ಹಳ್ಳಿಗಾಡಿನ ಅನಾಗರೀಕರಲ್ಲಿ ವಾಡಿಕೆಯಾಗಿದ್ದರೂ ಆ ಕಾಲದಲ್ಲಿ ಅದು ರಾಜರ ಆಸ್ಥಾನಗಳಲ್ಲಿಯೂ ಚೆಲುವೆಯರಾದ ನಾರಿಯರೆದುರಿನಲ್ಲಿಯೂ ರಾಜಕುವರಿಯರೆದುರಿನಲ್ಲಿಯೂ ನಡೆಯುತ್ತಿದ್ದ ವಿನೋದಗಳಲ್ಲಿ ಬಹು ಪ್ರೀತಿಪಾತ್ರವಾದುದಾಗಿತ್ತು. ಆದುದರಿಂದ ಈ ಮಲ್ಲಕಾಳಗವನ್ನು ನೋಡಲು ರೊಸಾಲೆಂಡಳೂ ಸೆಲಿಯಾಳೂ ಹೋದರು. ಇಂಥಾ ಮಲ್ಲಕಾಳಗಗಳಲ್ಲಿ ಬಲು ಮಂದಿಯನ್ನು ಸಂಹರಿಸಿಬಿಟ್ಟಿದ್ದ, ಒಬ್ಬ ವಯಸ್ಕನಾದ ಬಲಿಷ್ಠನು ಆ ಕಲೆಯಲ್ಲಿ ಅಭ್ಯಾಸವಿಲ್ಲದ ಬಲು ಸಣ್ಣ ಹರಯದ ಒಬ್ಬ ಯುವಕನೊಡನೆ ಮಲ್ಲಯುದ್ಧ ಮಾಡತಕ್ಕವನಾಗಿದ್ದನು. ನೋಟಕರೆಲ್ಲರೂ ಈ ಯುವಕನು ದಿಟವಾಗಿಯೂ ಸಂಹೃತನಾಗುವನೆಂದು ಯೋಚಿಸಿಕೊಂಡಿದ್ದರು. ಇವರೂ ಈ ಕಾಳಗವು ಶೋಕಕರವಾದ ನೋಟವೆಂದು ತಿಳಿದುಕೊಂಡರು.

ಡ್ಯೂಕ್ ಫ್ರೆಡರಿಕನು ರೊಸಾಲೆಂಡಳನ್ನೂ ಸೆಲಿಯಾಳನ್ನೂ ನೋಡಿದ ಕೂಡಲೆ “ಎಲೌ, ಕುವರಿಯರೇ, ನೀವು ಮಲ್ಲಯುದ್ಧವನ್ನು ನೋಡಲು ಬಂದಿರುವಿರಾ ? ಈ ಮನುಷ್ಯರಲ್ಲಿರುವ ವಿಷಮಲಕ್ಷಣದಿಂದ ನಿಮಗಿದರಲ್ಲಿ ಸಂತೋಷವೇನೂ ಇರಲಾರದು. ಈ ಯುವಕನ ಮೇಲೆ ನನಗಿರುವ ಪಶ್ಚಾತ್ತಾಪದಿಂದ ಅವನನ್ನು ಮಲ್ಲಯುದ್ಧಕ್ಕೆ ಹೋಗದಿರಲೆಂದು ಕೋರುತ್ತೇನೆ. ಎಲೌ ಕುವರಿಯರೇ, ಅವನೊಡನೆ ಮಾತನಾಡಿ ಅವನ ಮನಸ್ಸನ್ನು ಅಲುಗಿಸಲಾಗುತ್ತದೆಯೇನೋ, ನೋಡಿರಿ” ಎಂದನು.

ಭೂತದಯೆ ಪಶ್ಚಾತ್ತಾಪಗಳಿಂದ ಕೂಡಿದ ಈ ಕಾರ್ಯವನ್ನು ನೆರವೇರಿಸಲು ಈ ಸ್ತ್ರೀಯರು ಸಂಪೂರ್ಣವಾಗಿ ಮನಸಾ ಸಿದ್ಧರಾಗಿಯೇ ಇದ್ದರು. ಮೊದಲು ಸೆಲಿಯಾಳು ಅವನು ತನ್ನ ಉದ್ದೇಶವನ್ನು ಬಿಡುವನೆಂದು ಆ ಅಪರಿಚಿತನನ್ನು ದಯಾಪೂರ್ವಕವಾದ ಮಾತುಗಳಿಂದುಪಚರಿಸಿದಳು. ಅನಂತರ ರೊಸಾಲೆಂಡಳು ಅವನಿಗೆ ಒದಗುವುದಾದ ಅಪಾಯಕ್ಕಾಗಿ ಬಹು ಸಂತಪ್ತಳಾಗಿ ಅಮೃತದ ಸೋನೆಯಂತೆ ಬಹು ದಯೆಯಿಂದ ಅವನನ್ನು ಮಾತನಾಡಿಸಿದಳು. ಆದರೆ ಅವಳ ಮೃದುವಾದ ಮಾತುಗಳು ಅವನನ್ನು ಕಾರ್ಯಪರಾಙ್ಮುಖನನ್ನಾಗಿ ಮಾಡುವುದಕ್ಕೆ ಬದಲಾಗಿ ಈ ಸುಂದರಿಯ ದೃಷ್ಟಿಯಲ್ಲಿ ತನ್ನನ್ನು ತನ್ನ ಸಾಮರ್ಥ್ಯದಿಂದ ತೋರ್ಪಡಿಸಿಕೊಳ್ಳಬೇಕೆಂದು ಅವನಿಂದ ಸ್ಥಿರಸಂಕಲ್ಪಮಾಡಿತು. “ಗುಣರೂಪ

ಭೂಷಿತೆಯರಾದ ಮಂಗಳಾಂಗಿಯರಿರಾ, ನಿಮ್ಮ ಮಾತನ್ನು ನೆರವೇರಿಸಲಾರದೆ ಚಿಂತಾಕ್ರಾಂತನಾಗಿದ್ದೇನೆ. ಆದರೆ ನಿಮ್ಮ ರಮಣೀಯವಾದ ದೃಷ್ಟಿಯೂ ಪೂಜ್ಯವಾದ ಕೃಪೆಯೂ ನನ್ನೊಡನೆ ನನ್ನ ಕಾರ್ಯಕ್ಕೆ ನೆರವಾಗಿರಲಿ. ನಾನು ಪರಾಜಿತನಾದರೆ ಎಂದೂ ಯಶಸ್ಸನ್ನು ಪಡೆಯದ ಒಬ್ಬನು ಅವಮಾನಿತನಾದಂತಾಗುವುದು. ಪ್ರಾಣವನ್ನು ಬಿಟ್ಟರೆ ಸಾವನ್ನು ಬಯಸುತ್ತಿದ್ದವನು ಸತ್ತಂತಾಗುವುದು. ನನಗಾಗಿ ಸಂಕಟಪಡತಕ್ಕವರಾರೂ ಇಲ್ಲದುದರಿಂದ ನನ್ನ ಸ್ನೇಹಿತರಿಗೆ ನಾನು ದ್ರೋಹವನ್ನು ಮಾಡಿದಂತಾಗಲಿ, ಅಥವಾ ಇಲ್ಲಿ ನನಗೇನೂ ಇಲ್ಲದಿರುವುದರಿಂದ ಪ್ರಪಂಚಕ್ಕೆ ಒಂದು ಬಾಧೆಯನ್ನಾದರೂ ಮಾಡಿದಂತಾಗಲಿಲ್ಲ. ಆದರೆ ನಾನು ಆಕ್ರಮಿಸಿಕೊಂಡಿರುವ ಭೂಮಿಯ ಮೇಲಣ ಸ್ಥಳವು ತೆರವು ಮಾಡಲ್ಪಟ್ಟರೆ ಉತ್ತಮರಿಗೆ ಸ್ಥಳವಾಗುವುದು '' ಎಂದು ಹೇಳಿದನು. ಅವರ ಮೃದುವಾದ ಪಶ್ಚಾತ್ತಾಪಯುಕ್ತವಾದ ಪ್ರಾರ್ಥನೆಯನ್ನು ನೆರವೇರಿಸಲಾರೆನೆಂದು ಇವನು ಹೇಳಿದ ಈ ನಮ್ರವಾದ ಗಂಭೀರವಾದ ಮಾತುಗಳಿಂದ ಅವರು ಇವನ ವಿಷಯದಲ್ಲಿ ಮತ್ತಷ್ಟು ಕ್ಷೇಮ ಚಿಂತಕರಾದರು.

ಆ ಮೇಲೆ ಮಲ್ಲಯುದ್ಧಕ್ಕುಪಕ್ರಮವಾಯಿತು. ಸೆಲಿಯಾಳು ಆ ಅಪರಿಚಿತನಾದ ಯುವಕನು ಹಿಂಸೆ ಹೊಂದಿರಲೆಂದು ಹಾರೈಸಿದರು. ಆದರೆ ರೊಸಾಲೆಂಡಳು ಅವನಿಗಾಗಿ ಬಹು ಚಿಂತಿಸಿದಳು. ನೀನೇ ಎನ್ನುವವರಿಲ್ಲದೆ ಮರಣವನ್ನು ಬಯಸುತ್ತಿರುವುದಾಗಿ ಅವನು ಹೇಳಿದ ಮಾತು ರೊಸಾಲೆಂಡಳಿಗೆ ತಾನೂ ಅವನಂತೆಯೇ ನಿರ್ಭಾಗ್ಯಳಾಗಿರುವುದನ್ನು ಸ್ಮೃತಿಗೆ ತಂದಿತು. ಇವಳು ಅವನ ವಿಷಯದಲ್ಲಿ ಹೊಂದಿದ ಅಮಿತವಾದ ಕನಿಕರವೂ ಅವನು ಮಲ್ಲಯುದ್ಧವನ್ನು ಮಾಡುತ್ತಾ ಅಪಾಯದಲ್ಲಿರುವಾಗ್ಯೆ ಅವನ ಹಿತಕ್ಕಾಗಿ ಇವಳು ಪಡುತ್ತಿದ್ದ ಅಪಾರವಾದ ಚಿಂತೆಯೂ ಆ ಗಳಿಗೆಯಲ್ಲಿಯೇ ಇವಳು ಅವನಲ್ಲಿ ಮೋಹಗೊಂಡಳೆಂದು ಹೇಳುವಂತಿದ್ದುವು. ಆ ಅಪರಿಚಿತನಾದ ಯುವಕನಿಗಾಗಿ ಈ ಸುಂದರಿಯರಾದ ವನಿತಾಮಣಿಗಳು ತೋರಿದ ದಯೆಯಿಂದ ಅವನು ಧೈರ್ಯವನ್ನೂ ಬಲವನ್ನೂ ಹೊಂದಿ ಅಚ್ಚರಿಯಾದ ಸಾಹಸದಿಂದ ತನ್ನ ಪ್ರತಿಕಕ್ಷಿಯನ್ನು ಸಂಪೂರ್ಣವಾಗಿ ಸೋಲಿಸಿಬಿಟ್ಟನು. ಅವನು ತಿಂದ ಪೆಟ್ಟುಗಳಿಂದ ಕೆಲವು ಗಳಿಗೆಗಳ ವರಿವೆಗೆ ಮಾತನಾಡುವುದಕ್ಕೂ ಆಗದೆ ಸ್ತಂಭದಂತಿದ್ದನು.

ಡ್ಯೂಕ್ ಫ್ರೆಡರಿಕನು ಆ ಅಪರಿಚಿತನಾದ ಯುವಕನನ್ನು ಅವನ ಧೈರ್ಯಕ್ಕೂ ಬುದ್ಧಿಗೂ ಮೆಚ್ಚಿ ತನ್ನ ಪೋಷಣೆಯಲ್ಲಿರಿಸಿಕೊಳ್ಳುವ ಉದ್ದೇಶದಿಂದ ಅವನ ಹೆಸರನ್ನು ವಿಚಾರಿಸಿದನು. ಅದಕ್ಕವನು ತನ್ನ ಹೆಸರು ಆರ್ಲಾಂಡೋವೆಂದೂ ಸರ್ ರೊಲಾಂಡ್ ಡೆಬಾಯ್ಸ್‌ನ ಕಿರಿಯಮಗನೆಂದೂ ಹೇಳಿದನು. ಸರ್ ರೊಲಾಂಡ್ ಡೆಬಾಯ್ಸ್‌ನು ಕೆಲವು ಕಾಲದ ಹಿಂದೆಯೇ ದೈವಾಧೀನನಾಗಿದ್ದನು. ಅವನು ಜೀವವಂತನಾಗಿರುವಾಗ್ಯೆ ಅರಣ್ಯವಾಸದಲ್ಲಿರುವ ಡ್ಯೂಕಿಗೆ ನಿಜವಾದ ಪ್ರಜೆಯಾಗಿಯೂ ಪ್ರಿಯಮಿತ್ರನಾಗಿಯೂ ಇದ್ದನು. ಆರ್ಲಾಂಡೋವು ಗಡೀಪಾರಾದ ತನ್ನ ಅಣ್ಣನ ಸ್ನೇಹಿತನ ಮಗನೆಂದು ಡ್ಯೂಕನು ಕೇಳಿದ ಕೂಡಲೇ, ಆ ಧೀರ ಯುವಕನ ಮೇಲೆ ಇವನಿಗಿದ್ದ ಪ್ರೀತಿಯು ಅಸಂತೋಷವಾಗಿ ಪರಿಣಮಿಸಿ, ಆ ಸ್ಥಳವನ್ನು ಬಲು ಸಿಟ್ಟಿನಿಂದಲೇ ಬಿಟ್ಟು ಹೊರಟುಹೋದನು. ಹೋಗುತ್ತ ತನ್ನ ಅಣ್ಣನ ಸ್ನೇಹಿತರ ಹೆಸರನ್ನು ಕೇಳುವುದನ್ನು ಸಹ ಸಹಿಸಲಾರದಿದ್ದರೂ ಆ ಯುವಕನ ಧೈರ್ಯಶೌರ್ಯಗಳನ್ನು ಶ್ಲಾಘಿಸುತ್ತ ''ಆರ್ಲಾಂಡೋವು ಇನ್ನಾರ ಮಗನಾಗಿಯಾಗಿದರೂ ಇರಬಾರದಾಗಿತ್ತೇ'' ಎಂದುಕೊಂಡನು.

ರೊಸಾಲೆಂಡಳು ತನ್ನ ಪ್ರೀತಿಪಾತ್ರನು ತನ್ನ ತಂದೆಯ ಪೂರ್ವದ ಮಿತ್ರನ ಮಗನೆಂದು ತಿಳಿದು ವಿಕಸಿತ ಹೃದಯಳಾಗಿ ಸೆಲಿಯಾಳನ್ನು ಕುರಿತು—''ನನ್ನ ತಂದೆಯು ಸರ್ ರೊಲಾಂಡೊ ಡೆಬಾಯ್ಸ್‌ನನ್ನು ಪ್ರೀತಿಸುತ್ತಿದ್ದನು. ಆ ಯುವಕನು ಅವನ ಮಗನೆಂದು ನನಗೆ ಆಗಲೇ ತಿಳಿದಿದ್ದರೆ ಅವನು ಆ ಸಾಹಸಕಾರ್ಯ ತತ್ಪರನಾಗುವುದಕ್ಕೆ ಮುಂಚೆ ನಾನು ಮಾಡಿದ ಪ್ರಾರ್ಥನೆಗಳ ಜೊತೆಯಲ್ಲಿ ಕಣ್ಣೀರನ್ನು ಕರೆಯುತ್ತಿದ್ದೆನು'' ಎಂದಳು. ಅನಂತರದಲ್ಲಿ ಈ ವನಿತೆಯರಿಬ್ಬರೂ ಅವನ ಸಮೀಪಕ್ಕೆ ಹೋಗಿ ಡ್ಯೂಕನು ತೋರಿದ ಆಕಸ್ಮಿಕವಾದ ಅಸಂತೋಷದಿಂದ ಅವನು ಭಯಭ್ರಾಂತನಾಗಿರುವುದನ್ನು ನೋಡಿ, ಪ್ರೋತ್ಸಾಹಕರವಾದ ಮಾತುಗಳನ್ನಾಡಿ ಹೊರಟುಹೋಗುವಾಗ ರೊಸಾಲೆಂಡಳು ದಯಾಪರವಾದ ಮಾತುಗಳನ್ನಾಡುತ್ತ ತನ್ನ ಕಂಠದಿಂದ ಒಂದು ಹಾರವನ್ನು ತೆಗೆದು—''ಎಲೈ ಮಹಾಶಯನೇ, ನನಗಾಗಿ ನೀನು ಇದನ್ನು ಧರಿಸಿರು. ನಾನು ಮಂದಭಾಗ್ಯಳು. ಹಾಗಲ್ಲದಿದ್ದರೆ ಇದಕ್ಕಿಂತಲೂ ಅಮೌಲ್ಯವಾದ ಸಂಭಾವನೆಯನ್ನು ಕೊಡುತ್ತಿದ್ದೆನು'' ಎಂದು ಹೇಳಿದಳು.

ಈ ಸಾರಥಿಯರು ಈರ್ವರೇ ಇರುವ ಕಾಲದಲ್ಲಿ ರೊಸಾಲೆಂಡಳ ಮಾತು ಇನ್ನೂ ಆರ್ಲಾಂಡೋವಿನ ವಿಷಯವಾಗಿಯೇ ನಡೆಯುತ್ತಿರಲು ತನ್ನ ಸಹೋದರಿಯು ಸ್ಫುರದ್ರೂಪಿಯಾದ ಮಲ್ಲಗಾಳಗದ ಆ ಯುವಕ ನಲ್ಲಿ ಮೋಹವಶಳಾದಳೆಂದು ಸೆಲಿಯಾಳು ತಿಳಿದು, ಅವಳನ್ನು ಕುರಿತು— "ನೀನಿಷ್ಟು ಆಕಸ್ಮಿಕವಾಗಿ ಅವನಲ್ಲಿ ಮೋಹಗೊಂಡಿರುವುದು ನ್ಯಾಯ ವೇ?" ಎಂದಳು.

ರೊಸಾಲೆಂಡಳು—"ನನ್ನ ಜನಕನು ಅವನ ತಂದೆಯನ್ನು ಬಹು ವಾಗಿ ಪ್ರೀತಿಸುತ್ತಿದ್ದನು" ಎಂದಳು.

ಸೆಲಿಯಾ—"ಆದುದರಿಂದ ನೀನು ಅವನ ಮಗನನ್ನು ಬಹುವಾಗಿ ಪ್ರೀತಿಸಬೇಕೇನು? ಹಾಗಾದರೆ ನಮ್ಮ ತಂದೆಯು ಅವನ ತಂದೆಯನ್ನು ದ್ವೇಷಿಸುವುದರಿಂದ ನಾನು ಅವನನ್ನು ದ್ವೇಷಿಸಬೇಕಲ್ಲವೇ? ಆದರೂ ನಾನು ಆರ್ಲಾಂಡೋವನ್ನು ದ್ವೇಷಿಸೆನು" ಎಂದಳು.

ಸರ್ ರೊಲಾಂಡ್ ಡಿಬಾಯ್ಸನ ಮಗನನ್ನು ನೋಡಿದುದರಿಂದ ಕಿಡಿಕಿಡಿಯಾದ ಫ್ರೆಡರಿಕನಿಗೆ ತನ್ನ ಅಣ್ಣನ ಸ್ನೇಹಿತರಲ್ಲಿ ಅನೇಕರು ಜ್ಞಾಪಕಕ್ಕೆ ಬಂದರು. ಜನರು ತನ್ನ ಅಣ್ಣನ ಮಗಳನ್ನು ಅವಳ ಸದ್ವರ್ತನಕ್ಕಾಗಿ ಶ್ಲಾಘಿಸುವುದನ್ನೂ ಗುಣವಂತನಾದ ತಂದೆಗಾಗಿ ಅವಳಲ್ಲಿ ಕನಿಕರಪಡುವುದನ್ನೂ ಕಂಡು, ಕೆಲವುಕಾಲ ಅಸಮಾಧಾನದಿಂದಿದ್ದ ಇವನಿಗೆ ಅವಳಲ್ಲಿ ಹೊಟ್ಟೆಯಕಿಚ್ಚು ತಟ್ಟನೆ ಎದ್ದಿತು. ಹೀಗಿರಲು ಸೆಲಿಯಾಳು ಮತ್ತು ರೊಸಾಲೆಂಡಳು ಆರ್ಲಾಂಡೋವಿನ ವಿಚಾರವಾಗಿ ಮಾತನಾಡುತ್ತಿರುವಾಗ್ಗೆ ಇವನು ಅವರ ಅಂತಃಪುರವನ್ನು ಪ್ರವೇಶಿಸಿ, ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ ರೊಸಾಲೆಂಡಳು ಆ ಕ್ಷಣದಲ್ಲಿಯೇ ಅರಮನೆಯನ್ನು ಬಿಟ್ಟು ಗಡೀಪಾರಾಗಿ ತನ್ನ ತಂದೆಯನ್ನು ಹಿಂಬಾಲಿಸ ಬೇಕೆಂದು ಆಜ್ಞೆಮಾಡಿದನು. ಸೆಲಿಯಾಳು ತಂದೆಯನ್ನು ಹೀಗೆ ಮಾಡ ದಿರುವಂತೆ ಪರಿಪರಿಯಾಗಿ ಬೇಡಿಕೊಳ್ಳಲು, "ರೊಸಾಲೆಂಡಳನ್ನು ನಿನ ಗಾಗಿ ಇಲ್ಲಿರಿಸಿಕೊಂಡಿದ್ದೆನು. ಇನ್ನು ಮುಂದೆ ಆಗುವುದಿಲ್ಲ" ಎಂದು ಅವಳ ಪ್ರಾರ್ಥನೆಯನ್ನು ನಿಷ್ಫಲಮಾಡಿದನು.

ಇದಕ್ಕೆ ಸೆಲಿಯಾಳು—"ತಂದೆಯೇ, ನೀನೇ ಇವಳನ್ನು ಇಲ್ಲಿರಿ ಸಿಕೊಂಡಿದ್ದೆ. ನಾನವಳ ಯೋಗ್ಯತೆಯನ್ನರಿತುಕೊಳ್ಳಲು ಬಲು ಚಿಕ್ಕ ವಳಾಗಿದ್ದೆನಾದುದರಿಂದ ಇವಳನ್ನು ಇಲ್ಲಿಯೇ ಇರಿಸಿಕೊಳ್ಳಬೇಕೆಂದು

ನಾನು ನಿಮ್ಮನ್ನು ಬೇಡಿಕೊಂಡಿರಲಿಲ್ಲ. ಈಗಲಾದರೋ ಇವಳ ಯೋಗ್ಯತೆಯನ್ನು ನಾನು ಬಲ್ಲೆನು. ನಾವಿಬ್ಬರೂ ಒಂದೇ ಕಡೆಯಲ್ಲಿ ಶಯನಿಸುತ್ತಿದ್ದೆವು. ಒಂದೇ ಕಾಲದಲ್ಲಿ ಏಳುತ್ತಿದ್ದೆವು. ಓದಿನಲ್ಲಿ ಸಹ ಧ್ಯಾಯಿಗಳಾಗುತ್ತಾ, ಜೊತೆಯಲ್ಲಿ ಊಟಮಾಡುತ್ತಿದ್ದೆವು. ಅಂಥಾ ಇವಳ ಜೊತೆಯನ್ನು ಬಿಟ್ಟು ನಾನು ಜೀವವಂತಳಾಗಿರಲಾರೆನು'' ಎಂದಳು.

ಫ್ರೆಡರಿಕ್—''ಎಲೌ ಕುವರಿಯೇ, ಇವಳು ತಂತ್ರಗಾತಿ. ಇವಳ ಮೃದುತ್ವವೂ ಮಿತಭಾಷಣವೂ ಸಹನಗುಣವೂ ಜನಶ್ಲಾಘನೆಯನ್ನು ಪಡೆದು, ಜನರಿಗೆ ಇವಳ ವಿಷಯದಲ್ಲಿ ಕನಿಕರವನ್ನುಂಟುಮಾಡುತ್ತಿವೆ. ಇವಳು ಹೋಗಲು ನೀನು ಗುಣವಂತೆಯೂಗಿಯೂ ಶೋಭಾಯಮಾನಳಾಗಿಯೂ ಕಾಣುವಿಯಾದುದರಿಂದ ಇವಳ ವಿಚಾರವಾಗಿ ನೀನು ವಹಿಸಿಕೊಂಡು ಮಾತನಾಡುವುದು ಅವಿವೇಕ. ಆದುದರಿಂದ ಈ ವಿಚಾರದಲ್ಲಿ ತುಟಿಯನ್ನು ಬಿಚ್ಚಬೇಡ, ಇವಳ ವಿಚಾರದಲ್ಲಿ ನನ್ನ ಆಜ್ಞೆಯು ಖಂಡಿತವಾದದ್ದು.''

ಸೆಲಿಯಾಳು ತನ್ನ ತಂದೆಯ ಮನವನ್ನು ಕರಗಿಸಿ ರೊಸಾಲೆಂಡಳನ್ನು ತನ್ನ ಜೊತೆಯಲ್ಲಿರುವಂತೆ ಮಾಡಿಕೊಳ್ಳಲಾರೆನೆಂದು ಅರಿತೊಡನೆಯೇ, ಆ ರಾತ್ರಿಯಲ್ಲಿ ಅರಮನೆಯನ್ನು ಬಿಟ್ಟು ತನ್ನ ಗೆಳತಿಯ ಜೊತೆಯಲ್ಲಿ ಆರಡ್ ಅರಣ್ಯದಲ್ಲಿರುವ ರೊಸಾಲೆಂಡಳ ತಂದೆಯಾದ ಡ್ಯೂಕನನ್ನು ಹುಡುಕಲು ಹೊರಡಬೇಕೆಂದು ನಿಷ್ಕರ್ಷಿಸಿಕೊಂಡಳು. ಪ್ರಯಾಣ ಹೊರಡುವುದಕ್ಕೆ ಮುಂಚಿತವಾಗಿ ಸೆಲಿಯಾಳು, ಹೆಂಗಸರಾದ ತಾವು ಅಮೌಲ್ಯವಾದ ಈ ಉಡಿಗೆತೊಡಿಗೆಗಳನ್ನು ಧರಿಸಿಕೊಂಡು, ಪ್ರಯಾಣ ಮಾಡುವುದು ಅಪಾಯಕ್ಕೆ ಕಾರಣವೆಂದು ಯೋಚಿಸಿ, ತಾವಿಬ್ಬರೂ ಗ್ರಾಮ್ಯಸ್ತ್ರೀಯರಂತೆ ಉಡಿಗೆಯನ್ನು ಹಾಕಿಕೊಳ್ಳುವುದರಿಂದ ತಮ್ಮ ಸ್ಥಿತಿಯನ್ನು ಮರೆಮಾಡಿಕೊಳ್ಳಬೇಕೆಂದು ಹೇಳಿದಳು. ರೊಸಾಲೆಂಡಳು—''ದಿಟ, ಆದರೆ ನಮ್ಮಿಬ್ಬರಲ್ಲಿ ಒಬ್ಬಳು ಪುರುಷವೇಷವನ್ನು ಧರಿಸಿಕೊಂಡರೆ ಇನ್ನೂ ಕ್ಷೇಮವಾಗಿರುವುದು'' ಎಂದಳು. ಇದನ್ನು ಇಬ್ಬರೂ ಅನುಮೋದಿಸಿದರು. ಇವರಿಬ್ಬರಲ್ಲಿ ರೊಸಾಲೆಂಡಳು ಸ್ವಲ್ಪ ಉದ್ದವಾಗಿದ್ದುದರಿಂದ ಗ್ರಾಮ್ಯಪುರುಷನಂತೆಯೂ ಸೆಲಿಯಾಳು ಗ್ರಾಮ್ಯಕನ್ಯಕೆಯಂತೆಯೂ ಉಡಿಗೆಗಳನ್ನು ಧರಿಸಿಕೊಂಡು ಅಣ್ಣತಂಗಿಯರೆಂದು

ಹೇಳಿಕೊಳ್ಳುತ್ತ, ರೊಸಾಲೆಂಡಳು ' ಗಾನಿಮೀಡ್ ' ಎಂದೂ ಸೆಲಿಯಾಳು ' ಎಲೀನ ' ಎಂದೂ ಅಭಿಧಾನಗಳನ್ನಿಟ್ಟುಕೊಂಡು ಹೊರಡುವುದಾಗಿ ನಿಷ್ಕರ್ಷಿಸಿಕೊಂಡರು.

ಈ ರೀತಿಯಲ್ಲಿ ರಾಯಗುವರಿಯರು ವೇಷಗಳನ್ನು ಬದಲುಮಾಡಿಕೊಂಡು ಖರ್ಚು ವೆಚ್ಚಗಳಿಗಾಗಿ ತಮ್ಮ ಹಣ ಕಾಸುಗಳನ್ನೂ ಒಡವೆ ವಸ್ತುಗಳನ್ನೂ ತೆಗೆದುಕೊಂಡು ಹೊರಟರು. ಆರಡನ್ ಎಂಬ ಅರಣ್ಯವು ಈ ಡ್ಯೂಕನ ದೇಶದ ಮೇರೆಯಾಚೇ ಕಡೆಯಲ್ಲಿರುವುದರಿಂದ ಇವರ ಪ್ರಯಾಣವು ಬಹು ದೀರ್ಘವಾಗಿತ್ತು.

ಗಾನಿಮೀಡ್ ಎಂಬ ಹೆಸರಿನ ರೊಸಾಲೆಂಡಳು ಪುರುಷ ವೇಷವನ್ನು ಧರಿಸಿದುದಕ್ಕನುಗುಣವಾಗಿ ಪುರುಷನ ಧೈರ್ಯವನ್ನೂ ಕೈಗೊಂಡಂತೆ ಕಾಣಿಸಿದಳು. ಸೆಲಿಯಾಳು ತನ್ನನ್ನು ಆ ದೀರ್ಘವಾದ ಪಯಣದಲ್ಲಿ ಹಿಂಬಾಲಿಸಿ ಹೊರಡುವುದಲ್ಲಿ ತೋರಿಸಿದ ನಿಜಮೈತ್ರಿಯ ನಿಷ್ಕಳಂಕವಾದ ಅಭಿಮಾನಕ್ಕೆ ಪ್ರತಿಫಲವಾಗಿ ಎಲೀನಳೆಂಬ ಗ್ರಾಮ್ಯ ಕನ್ಯಕೆಯ ಶ್ರಮಸಹಿಷ್ಣುವಾದ ಸ್ಥಿರಚಿತ್ತವುಳ್ಳ ಅಣ್ಣ ಗಾನಿಮೀಡ್ ಎಂಬುವನೇ ನಿಜವಾಗಿಯೂ ತಾನಾಗಿರುವಂತೆ ರೊಸಾಲೆಂಡಳು ಉಲ್ಲಾಸದಿಂದ ಸ್ಥೈರ್ಯವುಳ್ಳವಳಾದಳು.

ಇವರು ಆರಡನ್ ಎಂಬ ಅರಣ್ಯವನ್ನು ಪ್ರವೇಶಿಸಿದರು. ಇವರಿಗೆ ದಾರಿಯಲ್ಲಿ ಸಿಕ್ಕುತ್ತಿದ್ದಂತೆ ಅನುಕೂಲವಾದ ಸತ್ರಾದಿಗಳೇನೂ ಅಲ್ಲಿ ಕಾಣಬರಲಿಲ್ಲ. ಹಸಿವು ನಿದ್ದೆಗಳಿಂದ ಇವರು ಸಂತಪ್ತರಾಗಿದ್ದರೂ ದಾರಿಯುದ್ದಕ್ಕೂ ಉಲ್ಲಾಸದಿಂದ ವಿನೋದವಾಗಿ ಮಾತನಾಡಿಕೊಂಡು ತನ್ನ ತಂಗಿಯನ್ನು ಆಹ್ಲಾದಗೊಳಿಸುತ್ತಾ ಬರುತ್ತಿದ್ದ ಗಾನಿಮೀಡನು ಎಲೀನಳನ್ನು ಕುರಿತು—“ನಾನು ಸಂತಪ್ತನಾಗಿದ್ದೇನೆ. ನನ್ನ ಹೃದಯವು ಇನ್ನೀ ಪುರುಷವೇಷವನ್ನು ಅಲಕ್ಷಿಸಿ ಹೆಂಗಸಿನ ಹಾಗೆ ತೋರಿಸಿಕೊಳ್ಳುವಂತಾಗಿದೆ” ಎಂದನು.

ಎಲೀನಳು—“ಅಯ್ಯೋ! ನಾನು ಮುಂದೆ ಇನ್ನೊಂದು ಹೆಜ್ಜೆಯನ್ನೂ ಇಡಲಾರೆನು” ಎಂದಳು.

ಇಷ್ಟರಲ್ಲಿಯೇ ಗಾನಿಮೀಡನು ಸ್ವಭಾವತಃ ಅಬಲೆಯರಾದವರಿಗೆ ಸೌಕರ್ಯವನ್ನು ಮಾಡಿಕೊಟ್ಟು ಆದರಿಸುವುದು ಪುರುಷನ ಕರ್ತವ್ಯವೆಂದು ಪ್ರಯತ್ನ ಪೂರ್ವಕವಾಗಿ ಜ್ಞಾಪಕ ಮಾಡಿಕೊಂಡು, ತನ್ನ

ತಂಗಿಗೆ ತಾನು ಧೈರ್ಯಶಾಲಿಯೆಂಬುದನ್ನು ತೋರಿಸಿಕೊಳ್ಳುವುದಕ್ಕಾಗಿ —"ಎಲೌ, ನನ್ನ ಪ್ರಿಯ ಸಹೋದರಿಯೇ, ಎಲೀನಳೇ, ಸಮಾಧಾನಳಾಗು, ಬಾ, ಆರಡರ್ ಅರಣ್ಯದಲ್ಲಿ ನಮ್ಮ ಪ್ರಯಾಣವು ಮುಗಿಯುತ್ತಾ ಬಂತು" ಎಂದು ಸಮಾಧಾನ ಪಡಿಸಿದಳು. ಆದರೆ ಪುರುಷನಂತೆ ಕಾಣಿಸಿಕೊಳ್ಳಬೇಕೆಂದು ವೇಷವನ್ನು ಧರಿಸಿದವರ ಪೌರುಷವೂ ಬಲಾತ್ಕಾರವಾಗಿ ಕೈಗೊಂಡ ಧೈರ್ಯವೂ ಎಷ್ಟು ಹೊತ್ತು ಇರುವುವು! ಅವು ಎಷ್ಟು ಹೊತ್ತು ರಕ್ಷಿಸಬಲ್ಲುವು! ಅವರು ಆರಡರ್ ಅರಣ್ಯವನ್ನು ತಲಪಿದಾಗ್ಗೂ ಡ್ಯೂಕನನ್ನು ಎಲ್ಲಿ ಹೋದರೆ ಕಾಣಬಹುದೋ ಎಂಬುದು ಅವರಿಗೆ ತಿಳಿಯದು. ಇವರು ಹಸಿವು ಸಂಕಟಗಳಿಂದ ಬಸವಳಿಯುತ್ತ ಹಚ್ಚನೆಯ ಹುಲ್ಲಿನ ಮೇಲೆ ಕುಳಿತರು. ಭಗವತ್ಕೃಪೆಯಿಂದ ಅಕಸ್ಮಾತ್ತಾಗಿ ಆ ದಾರಿಯಲ್ಲಿ ಒಬ್ಬ ಗ್ರಾಮವಾಸಿಯು ಹೋಗುವ ಸಂದರ್ಭಬಿದ್ದು ಅವನು ಅಲ್ಲಿಗೆ ಬಂದನು. ಅವನು ಹಾಗೆ ಬಾರದಿದ್ದರೆ ಈ ದಣಿದ ಯುವತಿಯರು ದಾರಿ ತಪ್ಪಿದವರಾಗುತ್ತಿದ್ದರು. ಇವರ ಪ್ರಯಾಣವು ದುಃಖಕರವಾಗಿ ಪರಿಣಮಿಸುತ್ತಿತ್ತು. ಹಸಿವಿನಿಂದ ಸಾಯುತ್ತಿದ್ದರು. ಗಾನಿಮೀಡನು ಆವನನ್ನು ಕಂಡೊಡನೆಯೇ ಇನ್ನೊಂದಾವೃತ್ತಿ ಪುರುಷನಂತೆ ಸ್ಥೈರ್ಯದಿಂದ ಮಾತನಾಡಲು ಪ್ರಯತ್ನಿಸಿ—"ಎಲೈ ರೈತನೇ, ಭೂತದಯಾಪಶ್ಚಾತ್ತಾಪವಾಗಲಿ ಅಥವಾ ದ್ರವ್ಯವಾಗಲಿ ನಮಗೆ ಈ ನಿರ್ಜನ ಪ್ರದೇಶದಲ್ಲಿ ಆತಿಥ್ಯವನ್ನು ದೊರಕಿಸಿ ಕೊಡುವುದಾಗಿದ್ದರೆ, ಇದೋ ನನ್ನ ತಂಗಿಯಾದ ಈ ಹುಡುಗಿಯು ಪ್ರಯಾಣದಿಂದ ಆಯಾಸಗೊಂಡಿರುವಳು. ಹಸಿವಿನಿಂದ ಬಸವಳಿಯುತ್ತಿರುವಳು. ನಮ್ಮನ್ನಲ್ಲಿಗೆ ದಯಮಾಡಿ ಕರೆದುಕೊಂಡು ಹೋಗು" ಎಂದು ಹೇಳಿದಳು. ಆ ಮನುಷ್ಯನು ತಾನು ಒಂದು ಕುರಿಯ ಮಂದೆಯನ್ನು ಕಾಯುವ ಕುರುಬನೆಂದೂ ತನ್ನ ಧಣಿಯ ಮನೆಯು ಈಗತಾನೆ ಮಾರಲ್ಪಡುವುದಾಗಿದೆಯೆಂದೂ ಆದುದರಿಂದ ಇವರಿಗೆ ಬಹು ಬಡತನದ ಆತಿಥ್ಯವು ಮಾತ್ರ ದೊರೆಯುವದೆಂದೂ ತನ್ನ ಜೊತೆಯಲ್ಲಿ ಬಂದರೆ ಸಂತೋಷದಿಂದ ಅಲ್ಲಿರುವುದರಲ್ಲಿ ಇವರಿಗೂ ಆತಿಥ್ಯವು ದೊರೆಯುವುದು ಎಂದು ಉತ್ತರವನ್ನು ಕೊಟ್ಟನು. ಆಗ ಶ್ರಮವು ಜಾಗ್ರತೆಯಲ್ಲಿಯೇ ಪರಿಹಾರವಾಗುವುದೆಂಬ ಭರವಸೆಯು ಇವರಿಗೆ ನೂತನ ಶಕ್ತಿಯನ್ನುಂಟುಮಾಡಿತು. ಆ ಮೇಲೆ ಇವರು ಆ ಸ್ಥಳವನ್ನು ತಲಪುತ್ತಲೇ ಆ ಕುರುಬನ ಮನೆಯನ್ನೂ ಕುರಿಯ ಮಂದೆಯನ್ನೂ

ಕೊಂಡುಕೊಂಡು ತಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದವನನ್ನೇ ಅದರ ಕಾವಲುಗಾರನಾಗಿರುವಂತೆ ನಿಯಮಿಸಿದರು. ಅದೃಷ್ಟವಶಾತ್ ಇದರಿಂದ ಇವರಿಗೆ ವಾಸವಾಗಿರಲು ಲಕ್ಷಣವಾಗಿರುವ ಒಂದು ಗುಡಿಸಲೂ ಆಹಾರ ಸಾಮಗ್ರಿಗಳೂ ದೊರೆಯಲು, ಆ ಅರಣ್ಯದ ಯಾವ ಪ್ರಾಂತದಲ್ಲಿ ಡ್ಯೂಕನು ವಾಸವಾಗಿರುವನೆಂಬುವುದು ಗೊತ್ತಾಗುವವರೆಗೂ ಅಲ್ಲಿಯೇ ವಾಸವಾಗಿರಬೇಕೆಂದು ನಿಷ್ಕರ್ಷಿಸಿಕೊಂಡರು. ಇವರು ತಾವು ದಾರಿ ನಡೆದ ಆಯಾಸವನ್ನು ಪರಿಹರಿಸಿಕೊಂಡನಂತರ ಈ ಬಗೆಯ ಹೊಸದಾದ ಜೀವಿಕೆಯನ್ನೂ ತಾವು ಧರಿಸಿಕೊಂಡಿರುವ ಕುರುಬರ ವೇಷವನ್ನೂ ಬಹುವಾಗಿ ಮೆಚ್ಚಿಕೊಂಡರು. ಆದರೂ ಗಾನಿಮೀಡನು, ಸರ್‌ರೊಲಾಂಡನು ತನ್ನ ತಂದೆಯ ಮಿತ್ರನಾಗಿದ್ದುದರಿಂದ ಅವನ ಮಗನಾದ ಆರ್ಲಾಂಡೊವನ್ನು ತಾನು ವಿಶೇಷವಾಗಿ ಪ್ರೀತಿಸುತ್ತಿದ್ದನೆಂದೂ ತಾನು ರೊಸಾಲೆಂಡಳೆಂದೂ ಆಗಾಗ್ಯೆ ಜ್ಞಾಪಕಮಾಡಿಕೊಳ್ಳುತ್ತಿದ್ದನು.

ಆರ್ಲಾಂಡೊವು ಸರ್ ರೊಲಾಂಡ್ ಡೆಬಾಯನ ಕಿರಿಯಮಗನು. ಇವನು ತನ್ನ ತಂದೆಯು ಸಾಯುವ ಕಾಲದಲ್ಲಿ ಚಿಕ್ಕವನಾಗಿದ್ದನು. ಆದುದರಿಂದ ಅವನು ಅವಸಾನಕಾಲದಲ್ಲಿ ಇವನಿಗೆ ಸರಿಯಾಗಿ ವಿದ್ಯಾಭ್ಯಾಸ ಮಾಡಿಸಿ, ಪುರಾತನವಾದ ತಮ್ಮ ಮನೆತದ ಘನತೆಗೆ ತಕ್ಕಂತಿರಲು, ಸೌಕರ್ಯಗಳನ್ನುಂಟುಮಾಡಿಡಬೇಕೆಂದು ತನ್ನ ಹಿರಿಯ ಮಗನಾದ ಆಲಿವರನಿಗೆ ಆಜ್ಞಾಪಿಸಿ, ಅವನಿಂದ ಮಾತು ತೆಗೆದುಕೊಂಡು ಅವನನ್ನು ಹರಸಿ ಮೃತನಾದನು. ಆದರೇನು ? ಆಲಿವರನು ಅಯೋಗ್ಯನಾದ ಸಹೋದರನಾಗಿ ಕಾಣಬಂದನು. ಮರಣತಲ್ಪದಲ್ಲಿದ್ದ ತನ್ನ ತಂದೆಯ ಮಾತುಗಳನ್ನು ಗೌರವಿಸದೆ, ತನ್ನ ತಮ್ಮನನ್ನು ವಿದ್ಯಾಶಾಲೆಗೆ ಕಳುಹಿಸದೆ, ಏನೂ ಕಲಿಸದೆ, ಸಂಪೂರ್ಣವಾದ ಅಲಕ್ಷ್ಯದಿಂದ ಮನೆಯಲ್ಲಿಯೇ ಇರಿಸಿಕೊಂಡನು. ಆದರೆ ಆರ್ಲಾಂಡೊವು ಬಹು ಜಾಗರೂಕತೆಯಿಂದ ವಿದ್ಯಾಭ್ಯಾಸ ಮಾಡಿಸಲ್ಪಟ್ಟ ಯುವಕನಂತೆ ತನ್ನ ಸ್ವಭಾವದಿಂದಲೂ ಮನಸ್ಸಿನ ಶ್ರೇಷ್ಠವಾದ ಗಾಂಭೀರ್ಯ ಗುಣಗಳಿಂದಲೂ ತನ್ನ ಪೂಜ್ಯನಾದ ತಂದೆಗೆ ಬಹುಮಟ್ಟಿಗೆ ಸದೃಶನಾದನು. ಆಲಿವರನು ಆರ್ಲಾಂಡೊವಿನ ಸ್ಫುರದ್ರೂಪಕ್ಕೂ ಅಶಿಕ್ಷಿತನಾದಾಗ್ಯೂ ಗೌರವಪ್ರದವಾದ ಇವನ ನಡವಳಿಕೆಗೂ ಇವನಲ್ಲಿ ಮಾತ್ಸರ್ಯವನ್ನಿಟ್ಟನು. ಕಡೆಕಡೆಗೆ ಅವನನ್ನು

ಸಂಹರಿಸಿಬಿಡಬೇಕೆಂದು ಯೋಚಿಸಿಕೊಂಡನು. ಈ ತನ್ನ ದುರುದ್ದೇಶವು ಸಫಲವಾಗಲು ಹಿಂದೆ ಹೇಳಿರುವಂತೆ ಮಲ್ಲಗಾಳಗದಲ್ಲಿ ಬಹು ಜನರನ್ನು ಮೃತ್ಯುವಶ ಮಾಡಿದ್ದ ಆ ಮಲ್ಲಯುದ್ಧ ವಿಶಾರದನೊಡನೆ ಕಾಳಗನೂ ಡುವಂತೆ ಇವನನ್ನು ಪ್ರೋತ್ಸಾಹಿಸಲು, ಕೆಲ ಜನರನ್ನು ಪ್ರೇರಿಸಿದನು. ಈ ಕ್ರೂರನಾದ ಅಣ್ಣನ ಅಲಕ್ಷ್ಯವೇ ಅಯ್ಯೋ! ಎನ್ನುವವರು ತನಗಿಲ್ಲ ದಿರುವುದರಿಂದ ಮರಣವನ್ನು ಬಯಸುತ್ತೇನೆಂದು ಆರ್ಲಾಂಡೊವು ಹೇಳುವಂತೆ ಮಾಡಿತು. ಆದರೆ ಆಲಿವರನ ದುರುದ್ದೇಶದಂತೆ ನಡೆ ಯದೆ ತನ್ನ ತಮ್ಮನೇ ಮಲ್ಲಯುದ್ಧದಲ್ಲಿ ಜಯಶಾಲಿಯಾಗಲು ಅವನ ಮಾತ್ಸರ್ಯಕ್ಕೂ ದ್ವೇಷಬುದ್ಧಿಗೂ ಮೇರೆಯೇ ಇಲ್ಲದಂ ತಾಯಿತು. ಆರ್ಲಾಂಡೊವು ಮಲಗುವ ಮನೆಯಲ್ಲಿಯೇ ಅವನನ್ನು ಸುಟ್ಟುಬಿಡಬೇಕೆಂದು ಪ್ರತಿಜ್ಞೆ ಮಾಡಿಕೊಂಡನು. ಇವನು ಮಾಡಿಕೊಂಡ ಪ್ರತಿಜ್ಞೆಯನ್ನು ಇವರ ತಂದೆಯಲ್ಲಿ ಸ್ವಾಮಿಭಕ್ತಿಯುಳ್ಳ ಒಬ್ಬ ವೃದ್ಧ ನಾದ ಭೃತ್ಯನು ಹೊಂಚು ಕೇಳಿದನು. ಆರ್ಲಾಂಡೊವು ತನ್ನ ಸ್ವಾಮಿ ಯಾದ ಸರ್‌ರೊಲಾಂಡನ್ನು ಹೋಲುತ್ತಿದ್ದುದರಿಂದ ಈ ಭೃತ್ಯನಿಗೆ ಅವ ನಲ್ಲಿ ಪರಮ ವಿಶ್ವಾಸವಿತ್ತು. ಈ ವೃದ್ಧನು ಡ್ಯೂಕನ ಅರಮನೆಯಿಂದ ಆರ್ಲಾಂಡೊವು ಹಿಂತಿರುಗಿ ಬರುವಾಗಲೇ ಅವನನ್ನು ನೋಡಬೇಕೆಂದು ಹೊರಟು, ಅವನನ್ನು ಕಂಡೊಡನೆಯೇ ತನ್ನ ಪ್ರೀತಿಪಾತ್ರನಾದ ಚಿಕ್ಕ ಯಜಮಾನನು ಸಿಕ್ಕಿರುವ ಗಂಡಾಂತರದಿಂದ ಇವನಿಗೆ ಉಂಟಾದ ಸಂಕ ಟವು—"ಓ ನನ್ನ ಗುಣವಂತನಾದ ಸ್ವಾಮಿಯೇ, ಪ್ರಿಯನಾದ ಪ್ರಭು ವೇ, ಸರ್‌ರೊಲಾಂಡನ್ನು ಸ್ಮೃತಿಗೆ ತರುವ ಪ್ರತಿಬಿಂಬವೇ, ನೀನೇಕೆ ಗುಣವಂತನಾಗಿದ್ದೀಯೇ! ಏಕೆ ಧೈರ್ಯಶಾಲಿಯಾಗಿದ್ದೀಯೆ! ಏತಕ್ಕೆ ಬುದ್ಧಿ ಇಲ್ಲದೆ ಆ ಮಲ್ಲಯುದ್ಧ ವಿಶಾರದನನ್ನು ಜಯಿಸಿದೆ! ನಿನ್ನ ಯಶಸ್ಸು ನೀನು ಮನೆಗೆ ಬರುವದಕ್ಕಿಂತ ಮುಂಚಿತವಾಗಿಯೇ ವಿಶ್ರುತ ವಾಗಿದೆ" ಎಂದು ಇವನನ್ನು ಆವೇಶದಿಂದಾಡಿಸಿತು. ಆರ್ಲಾಂಡೊವು ಇವನು ಹೇಳಿದ ಮಾತುಗಳಿಂದ ಆಶ್ಚರ್ಯಭರಿತನಾಗಿ ಸಮಾಚಾರವನ್ನು ತಿಳಿಸಬೇಕೆಂದು ಕೇಳಿದನು. ಅನಂತರದಲ್ಲಿ ಆ ವೃದ್ಧನು ಇವನ ಅಣ್ಣನು ಇವನ ಮೇಲೆ ದ್ವೇಷವಿಟ್ಟಿರುವುದನ್ನೂ ಡ್ಯೂಕನ ಅರಮನೆಯಲ್ಲಿ ಮಲ್ಲ ಯುದ್ಧದೊಳಗೆ ಇವನು ವಿಜಯಿಯಾದುದು ಇವನ ಅಣ್ಣನಿಗೆ ಮತ್ತಷ್ಟು ಹೊಟ್ಟೇಕಿಚ್ಚನ್ನುಂಟುಮಾಡಿರುವುದನ್ನೂ ಇವನು ಮಲಗುವ ಮನೆಗೆ

ರಾತ್ರಿಯಲ್ಲಿ ಬೆಂಕಿ ಹೊತ್ತಿಸಿ ಇವನನ್ನು ನಾಶಮಾಡಬೇಕೆಂದಿರುವುದನ್ನೂ ಈ ಅಪಾಯದಿಂದ ತಪ್ಪಿಸಿಕೊಳ್ಳಬೇಕಾದರೆ ಕ್ಷಣಮಾತ್ರದಲ್ಲಿಯೇ ಓಡಿಹೋಗಬೇಕೆಂದೂ ತಿಳಿಸಿದನು. ಆಡಾಮನು (ಈ ಸಾಧುವಾದ ವೃದ್ಧನ ಹೆಸರು ಆಡಾಂ) ಆರ್ಲಾಂಡೊವಿನಲ್ಲಿ ಹಣವಿಲ್ಲದಿರುವುದನ್ನು ತಿಳಿದುಕೊಂಡಿದ್ದ ಕಾರಣ ಸ್ವಾರ್ಜಿತವಾದ ತನ್ನ ಸ್ವಲ್ಪ ಹಣವನ್ನು ಜೊತೆಯಲ್ಲಿಯೇ ತಂದಿದ್ದನು. ‹‹ ಎಲೈ ಸ್ವಾಮಿಯೇ, ನನ್ನ ಅವಯವಗಳಲ್ಲಿ ಶಕ್ತಿಯು ಕುಂದಿಹೋಗಿ ಸೇವೆ ಮಾಡಲು ಆಗದೆ ಹೋದ ಮೇಲೆ ಜೀವನಾರ್ಥವಾಗಿ, ನಿಮ್ಮ ತಂದೆಯ ಸೇವೆಯನ್ನು ಮಾಡಿಕೊಂಡಿದ್ದಾಗ್ಗೆ ಬಹು ಜಾಗರೂಕತೆಯಿಂದ ೫೦೦ ಕ್ರೌನ್‌ಗಳನ್ನು ಕೂಡಿಸಿಟ್ಟಿದ್ದೇನೆ. ಸುಲಿಗೆಯಿಂದ ಜೀವಿಸತಕ್ಕ ಜೀವಿಗಳನ್ನು ಸಹ ಸಲಹುವ ದೇವರು ನನ್ನನ್ನು ಕಾಪಾಡುವುದಿಲ್ಲವೇ ? ಸಾತ್ವಿಕವಾದ ಗುಬ್ಬಿಗಳಿಗೆ ಆಹಾರವನ್ನು ನೀಡುವುದಿಲ್ಲವೆ ? ಇದೋ, ದ್ರವ್ಯವಿಲ್ಲದೆ ಇದನ್ನೆಲ್ಲಾ ನಿನಗೆ ಕೊಡುವೆನು. ನನ್ನನ್ನು ನಿನ್ನ ಭೃತ್ಯನನ್ನಾಗಿ ಪರಿಗ್ರಹಿಸು. ನಾನು ಮುದುಕನಾಗಿ ಕಂಡರೂ ನಿನ್ನ ಎಲ್ಲಾ ಕೆಲಸಗಳನ್ನೂ ಯೌವನಸ್ಥನಂತೆ ಮಾಡಬಲ್ಲೆನು ’’ ಎಂದನು.

ಆರ್ಲಾಂಡೊವು—‹‹ ಎಲೈ ಪೂಜ್ಯನಾದ ವೃದ್ಧನೇ, ನಿನ್ನಲ್ಲಿ ಹಿಂದಿನ ಕಾಲದ ಒಳ್ಳೇ ಭೃತ್ಯಲಕ್ಷಣವು ಹೇಗೆ ಕಾಣಬರುತ್ತಿರುವುದು ! ನೀನು ಈಗಿನ ಕಾಲಕ್ಕನುರೂಪಿಯಾದವನಲ್ಲ. ನಾವಿಬ್ಬರೂ ಒಟ್ಟಾಗಿ ಹೊರಡೋಣ. ಯೌವನದಲ್ಲಿ ನೀನು ಆರ್ಜಿಸಿದ ವಿತ್ತವು ವೆಚ್ಚವಾಗುವುದಕ್ಕೆ ಮುಂಚಿತವಾಗಿ ನಮ್ಮಿಬ್ಬರ ಜೀವನಾರ್ಥವಾಗಿ ಏನಾದರೊಂದು ಉಪಾಯವನ್ನು ದೊರಕಿಸುತ್ತೇನೆ ’’ ಎಂದನು. ಅನಂತರದಲ್ಲಿ ಈ ಸ್ವಾಮಿಭಕ್ತಿಪರಾಯಣನಾದ ಭೃತ್ಯನೂ ಅವನ ಪ್ರೀತಿಪಾತ್ರನಾದ ಸ್ವಾಮಿಯೂ ಯಾವ ಹಾದಿಯಲ್ಲಿ ಹೋಗಬೇಕೆಂಬುದು ನಿಶ್ಚಿತವಾಗದೆ ಪ್ರಯಾಣ ಹೊರಟರು. ಆದಾಗ್ಯೂ ಆರಡನ್ ಎಂಬ ಅರಣ್ಯವನ್ನು ಸೇರಿದರು. ಅಲ್ಲಿ ಗಾನಿಮಿಡ್ ಮತ್ತು ಎಲೀನಳೂ ಕ್ಷುತ್ತಿನಿಂದ ಪಟ್ಟ ತೊಂದರೆಯೇ ಇವರಿಗೂ ಅನುಭವಕ್ಕೆ ಬಂತು. ಇವರು ಹಸಿವು ಬಾಯಾರಿಕೆಗಳಿಂದಲೂ ದಣುವಿನಿಂದಲೂ ಸಂಪೂರ್ಣವಾಗಿ ಕಂಗೆಡುವವರೆಗೂ ಮನುಷ್ಯರಿಲ್ಲಿಲ್ಲಿ ಯಾದರೂ ವಾಸವಾಗಿದ್ದಾರೆಯೇ ಎಂದು ಹುಡುಕಿಕೊಂಡು ಅಲೆದಾಡಿದರು. ಕೊನೆಗೆ ಆಡಾಮನು—‹‹ ಓ ಪ್ರೀತಿಯುತನಾದ ಸ್ವಾಮಿಯೇ,

ನಾನು ಕ್ಷುತ್ತಿನಿಂದ ಸಾಯುವೆನು. ಮುಂದೆ ಒಂದು ಹೆಜ್ಜೆಯನ್ನೂ ಇಡಲಾರೆನು. ನಾನು ಈ ಬಳಿಯಲ್ಲಿ ಸಮಾಧಿಯಾಗುವೆನು. ದೇವರು ನಿನಗೆ ಶುಭವನ್ನುಂಟುಮಾಡಲಿ '' ಎಂದು ಹೇಳುತ್ತ ನೆಲದ ಮೇಲೆ ಮಲಗಿಕೊಂಡನು. ಆರ್ಲಾಂಡೊವು ತನ್ನ ಭೃತ್ಯನಿರುವ ಸ್ಥಿತಿಯನ್ನು ನೋಡಿ, ಅವನನ್ನು ತನ್ನ ತೋಳುಗಳಲ್ಲಿ ಎತ್ತಿಕೊಂಡು ರಮ್ಯವಾದ ಗಿಡಗಳ ನೆರಳಿಗೆ ಹೋಗಿ—''ಆಡಾಮನೇ, ಸ್ವಲ್ಪ ಸಂತೈಸಿಕೊ, ಸ್ವಲ್ಪ ಹರ್ಷಮುಖನಾಗು. ಈ ಸ್ಥಳದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊ. ಅಯ್ಯೋ! ಸಾಯುವೆನೆಂದು ಹೇಳಬೇಡ! ನಿನಗೆ ಆಹಾರವನ್ನು ಒದಗಿಸಿಕೊಂಡು ಬರುವೆನು '' ಎಂದು ಹೇಳಿ ಆಹಾರಾರ್ಥಿಯಾಗಿ ಹೊರಟನು. ದೈವವಶಾತ್ತು ಇವನು ಡ್ಯೂಕನಿದ್ದ ಅರಣ್ಯ ಪ್ರಾಂತ್ಯವನ್ನು ತಲಪಿದನು. ಅಲ್ಲಿ ಆ ಮಹಾಶಯನಾದ ಡ್ಯೂಕನು ಗುಡಾರಗಳೇನೂ ಇಲ್ಲದೆ ಮಹಾವೃಕ್ಷಗಳ ನೆಳಲಿನ ಆಶ್ರಯದಲ್ಲಿ ಮಿತ್ರಮಂಡಲಿಯೊಡನೆ ಹುಲ್ಲಿನ ಮೇಲೆ ಕುಳಿತುಕೊಂಡು ಊಟಕ್ಕೇಳಲು ಅಣಿಮಾಡಿಕೊಳ್ಳುತ್ತಿದನು.

ಹಸಿವಿನಿಂದ ನಿರಾಶೆಯುಳ್ಳವನಾಗಿ ಅವರ ಆಹಾರವನ್ನು ಬಲಾತ್ಕಾರದಿಂದ ಕಸುಕೊಳ್ಳುವ ಉದ್ದೇಶದಿಂದ ಆರ್ಲಾಂಡೊವು ಕತ್ತಿಯನ್ನು ಹಿರಿದುಕೊಂಡು—'' ತಾಳಿ, ತಾಳಿ, ಇನ್ನು ಒಂದು ತುತ್ತನ್ನಾದರೂ ತಿಂದೀರಿ. ನಿಮ್ಮ ಆಹಾರವನ್ನು ನಾನು ಪಡೆದುಕೊಳ್ಳಬೇಕು '' ಎಂದನು.

ಡ್ಯೂಕ್—'' ಎಲೈ, ನೀನೇನು ನಿರಾಶೆಯಿಂದ ಈ ಧೈರ್ಯವನ್ನು ತಳೆದವನೋ? ಅಥವಾ ಯೋಗ್ಯವಾದ ನಡವಳಿಕೆಗಳನ್ನು ಜರೆಯತಕ್ಕ ಒರಟು ಮನುಷ್ಯನೋ? '' ಎಂದು ಕೇಳಿದನು.

ಆರ್ಲಾಂಡೊ—'' ಸ್ವಾಮಿ, ನಾನು ಹಸಿವಿನಿಂದ ಸಾಯುತ್ತಿದ್ದೇನೆ.''

ಡ್ಯೂಕ್—'' ಹಾಗಾದರೆ ಸ್ವಾಗತ ಇಲ್ಲಿ ಕುಳಿತುಕೊಂಡು ನಮ್ಮ ಜೊತೆಯಲ್ಲಿ ಊಟಮಾಡು.''

ಆರ್ಲಾಂಡೊವು ಈ ಗಂಭೀರವಾದ ಮಾತುಗಳನ್ನು ಕೇಳಿ, ತನ್ನ ಕತ್ತಿಯನ್ನು ಒರೆಗೆ ಸೇರಿಸಿ, ತಾನು ಮಾಡಿದ ಒರಟುತನಕ್ಕಾಗಿ ಲಜ್ಜಾಭಾರದಿಂದ ತಗ್ಗಿ— '' ಸ್ವಾಮಿ, ತಮ್ಮನ್ನು ಬೇಡಿಕೊಳ್ಳುತ್ತೇನೆ. ಕ್ಷಮಿಸಿರಿ. ಈ ಪ್ರಾಂತಗಳಲ್ಲಿರುವವರೆಲ್ಲಾ ಕ್ರೂರಗುಣವುಳ್ಳವರೆಂದು ನೆನೆದು ಆಜ್ಞೆಮಾಡತಕ್ಕ ರೀತಿಯಿಂದ ನಿಷ್ಠುರಗಾರನಾಗಿ ತಮ್ಮನ್ನು

ಕಂಡೆನು. ಅಂಧಕಾರವನ್ನುಂಟುಮಾಡುವ ಒತ್ತಾದ ಕೊಂಬೆಗಳುಳ್ಳ ಮರದ ನೆರಳಿನಲ್ಲಿ ಕಾಲವನ್ನು ಕಳೆಯುತ್ತ, ಈ ನಿರ್ಜನವಾದ ಪ್ರದೇಶದಲ್ಲಿ ವಾಸಮಾಡುವ ನೀವು ಯಾವ ಬಗೆಯ ಮನುಜರಾಗಿ ಯಾದರೂ ಇರಿ ; ನೀವು ಇದಕ್ಕಿಂತಲೂ ಒಳ್ಳೇ ಕಾಲವನ್ನು ನೋಡಿದವ ರಾಗಿಯೂ ದೇವಸ್ಥಾನಗಳಲ್ಲಿ ಪ್ರಾರ್ಥನಾರ್ಥವಾಗಿ ಬಾರಿಸಲ್ಪಡುವ ಗಂಟೆಗಳ ಶಬ್ದವನ್ನಾಲಿಸಿದವರಾಗಿಯೂ ಸಾಧುಗಳೊಡನೆ ಊಟಕ್ಕೆ ಕುಳಿತಿದ್ದವರಾಗಿಯೂ ಪಶ್ಚಾತ್ತಾಪವೆಂಬುದೇನೆಂದು ಅರಿತು ಕನಿಕರ ಗೊಂಡು ಕಣ್ಣೀರು ಹಾಕಿದವರಾಗಿಯೂ ಇದ್ದರೆ, ಈ ನಮ್ರವಾದ ಮಾತುಗಳು ನನ್ನನ್ನು ಕರುಣೆಯಿಂದಾದರಿಸುವಂತೆ ನಿಮ್ಮ ಮನಸ್ಸನ್ನು ಮರುಗಿಸಲಿ.''

ಡ್ಯೂಕನು—''ಎಲೈ, ನಾವು ಅಂಥಾ ಮನುಷ್ಯರೇ. ನೀನು ಹೇಳು ವಂತೆ ನಾವು ಒಳ್ಳೇ ಕಾಲವನ್ನು ನೋಡಿರುತ್ತೇವೆ. ಪ್ರಕೃತ ಸಮಯದಲ್ಲಿ ನಮ್ಮ ವಾಸಸ್ಥಾನವು ಈ ಭಯಂಕರವಾದ ಅರಣ್ಯವಾಗಿದ್ದರೂ ದೇವರ ಪ್ರಾರ್ಥನಾರ್ಥವಾಗಿ ಬಾರಿಸಲ್ಪಡುವ ಘಂಟಾನಾದಗಳುಳ್ಳ ಪುರಗಳೂ ನಗರಗಳೂ ನಮ್ಮ ವಾಸಸ್ಥಾನಗಳಾಗಿದ್ದುವು. ಸಾಧುಗಳ ಜೊತೆಯಲ್ಲಿ ಭೋಜನಮಾಡುವ ಸುಕೃತವೂ ನಮಗಿತ್ತು. ಪವಿತ್ರವಾದ ಕನಿಕರದಿಂ ದುಂಟಾದ ದುಃಖದ ಕಣ್ಣೀರನ್ನೂ ಸುರಿಸಿದ್ದೇವೆ. ಆದುದರಿಂದ ಇಲ್ಲಿ ಕುಳಿತುಕೊಂಡು ನಿನಗೆ ತೃಪ್ತಿಯುಂಟಾಗುವಷ್ಟು ಊಟಮಾಡು.''

ಆರ್ಲಾಂಡೊವು—''ಸ್ವಾಮಿ, ನನ್ನಲ್ಲಿ ಪರಿಶುದ್ಧವಾದ ಪ್ರೇಮ ವುಳ್ಳ ಒಬ್ಬ ವೃದ್ಧನು ಈ ದೀರ್ಘವಾದ ಪಯಣದಲ್ಲಿ ನನ್ನನ್ನು ಹಿಂಬಾ ಲಿಸಿಕೊಂಡು ಬಂದು ನಡೆಯಲಾರದೆ ಮುಪ್ಪಿನಿಂದಲೂ ಹಸಿವಿನಿಂದಲೂ ಶಕ್ತಿಗುಂದಿದವನಾಗಿ ಬಿದ್ದಿರುತ್ತಾನೆ. ಅವನು ಆಹಾರದಿಂದ ತೃಪ್ತನಾ ಗುವ ವರೆಗೂ ನಾನು ಒಂದು ತುತ್ತನ್ನೂ ಮುಟ್ಟಲಾರೆನು.''

ಡ್ಯೂಕ್—''ಹೋಗಿ ಅವನನ್ನು ಕರೆದುಕೊಂಡು ಬಾ. ನೀನು ಬರುವ ವರೆಗೂ ನಾವೂ ಊಟಮಾಡುವುದಿಲ್ಲ.''

ಆರ್ಲಾಂಡೊವು ತನ್ನ ಮರಿಗಳನ್ನು ಹುಡುಕಿಕೊಂಡು ಬಂದು ಅವಕ್ಕೆ ಆಹಾರವನ್ನು ನೀಡುವ ತಾಯಿಜಿಂಕೆಯಂತೆ ಹೊರಟು ಹೋಗಿ ಆಡಾಮನನ್ನು ಎತ್ತಿಕೊಂಡು ಜಾಗ್ರತೆಯಲ್ಲಿಯೇ ಹಿಂತಿರುಗಿದನು.

ಡ್ಯೂಕ್—''ಎಲೈ ಪೂಜ್ಯಗಾತ್ರನೆ, ಕುಳಿತುಕೊ ; ನಿಮ್ಮಿಬ್ಬ ರಿಗೂ ಸ್ವಾಗತವಾಗಲಿ.''

ಅನಂತರದಲ್ಲಿ ಆ ವೃದ್ಧನಿಗೆ ಊಟಕ್ಕಿಟ್ಟು ಉಪಚರಿಸಿದರು. ಅವನು ಚೇತರಿಸಿಕೊಂಡು ಪುನಃ ಆರೋಗ್ಯವನ್ನೂ ಬಲವನ್ನೂ ಹೊಂದಿದನು. ಡ್ಯೂಕನು, ಆರ್ಲಾಂಡೊವು ತನ್ನ ಮಿತ್ರನಾದ ಸರ್ ರೊಲಾಂಡ್ ಡೆಬಾಯಸಿನ ಮಗನೆಂದು ವಿಚಾರದಿಂದರಿತು, ಅವನನ್ನು ತನ್ನ ಪೋಷಣೆಯಲ್ಲಿಟ್ಟುಕೊಂಡನು. ಆರ್ಲಾಂಡೊವು ಅವನ ವೃದ್ಧಭೃತ್ಯನಾದ ಆಡಾವಾನೂ ಸಹ ಆ ಅರಣ್ಯದಲ್ಲಿ ಡ್ಯೂಕನ ಜೊತೆಯಲ್ಲಿ ವಾಸಮಾಡಿಕೊಂಡಿದ್ದರು.

ಗಾನಿಮೀಡನೂ ಎಲೀನಳೂ ಆ ಅರಣ್ಯವನ್ನು ಸೇರಿ ಆ ಗುಡಿಸಲನ್ನು ಕೊಂಡುಕೊಂಡ ಮೇಲೆ ಸ್ವಲ್ಪ ಕಾಲದಲ್ಲಿಯೇ ಆರ್ಲಾಂಡೊವು ಆ ಅರಣ್ಯವನ್ನು ತಲಪಿದನು.

ರೊಸಾಲೆಂಡಳ ಹೆಸರು ಮರಗಳಲ್ಲಿ ಕೆತ್ತಲ್ಪಟ್ಟಿರುವುದನ್ನೂ ಅವುಗಳಿಗೆ ಅವಳನ್ನು ಸಂಬೋಧಿಸಿರುವ ವಿರಹಸೂಚಕ ಪದಗಳು ಅಂಟಿಸಲ್ಪಟ್ಟಿರುವುದನ್ನೂ ಗಾನಿಮೀಡನೂ ಎಲೀನಳೂ ನೋಡಿ, ಇದು ಹೇಗೆ ಸಂಭವಿಸಿತೆಂದು ಆಶ್ಚರ್ಯಭರಿತರಾಗಿರುವಾಗ್ಗೆ ಆರ್ಲಾಂಡೊವನ್ನು ಸಂಧಿಸಿದರು. ರೊಸಾಲೆಂಡಳು ಅವನಿಗೆ ಕೊಟ್ಟಿದ್ದ ಸರಪಣಿಯಂತಿರುವ ಕಂಠಾಭರಣವು ಇವನ ಕುತ್ತಿಗೆಯಲ್ಲಿರುವುದನ್ನು ಕಂಡರು. ಆರ್ಲಾಂಡೊವು ಯಾರ ಹೆಸರನ್ನು ಗಿಡಗಳಲ್ಲಿ ಕೆತ್ತುವುದರಲ್ಲಿಯೂ ಯಾರ ರೂಪವನ್ನು ಶ್ಲಾಘಿಸಿ ಪದ್ಯಗಳನ್ನು ರಚಿಸುವುದರಲ್ಲಿಯೂ ಕಾಲವನ್ನೆಲ್ಲಾ ವಿನಿಯೋಗಿಸುತ್ತಿರುವನೋ ಯಾವಳು ತನ್ನ ಗಂಭೀರವಾದ ನಿಗರ್ವದಿಂದಲೂ ದಯೆಯಿಂದಲೂ ತನ್ನ ಮನಸ್ಸನ್ನು ಗೆದ್ದಿರುವಳೋ ಆ ಸ್ಫುರದ್ರೂಪಿಯಾದ ರಾಜಕುವರಿ ಆದ ರೊಸಾಲೆಂಡಳು ಈ ಗಾನಿಮೀಡನೆಂದು ಅರಿಯಲಾರದೆ ಹೋದನು. ಆದರೆ ಈ ಲಕ್ಷಣವಾದ ಕುರುಬ ಹುಡುಗನ ಚೆಲುವಿಕೆಯಿಂದ ಸಂತುಷ್ಟನಾಗಿ ಅವನೊಡನೆ ಮಾತಾಡ ತೊಡಗಿದನು. ರೊಸಾಲೆಂಡಳಲ್ಲಿ ಕಾಣುವ ರೂಪವು ಗಾನಿಮೀಡನಲ್ಲಿ ಸ್ವಲ್ಪ ಪ್ರತಿಫಲಿಸುತ್ತಿರುವುದಾದರೂ ನಾರೀಮಣಿಯ ಘನವಾದ ಸದ್ವರ್ತನವು ಇವನಲ್ಲಿಲ್ಲವೆಂದು ಯೋಚಿಸಿದನು. ಏಕೆಂದರೆ ಯುವಕರು ಸಜಾತಿಯವರಲ್ಲಿ ಮಾತನಾಡುವಾಗ್ಗೆ ಹೇಗೆ ತಡೆಬಡೆಯಿಲ್ಲದೆ ನಡೆದುಕೊಳ್ಳುವರೋ ಆ ನಡವಳಿಕೆಯು ಗಾನಿಮೀಡನಲ್ಲಿ ಅವನಿಗೆ ಗೋಚರವಾಯಿತು. ಗಾನಿಮೀಡನು ಆರ್ಲಾಂಡೊವನ್ನು ಕುರಿತು

ಧಾರಾಳವಾಗಿಯೂ ವಿನೋದವಾಗಿಯೂ ಒಬ್ಬ ವಿರಹಿಯ ವಿಚಾರ ವಾಗಿ ಮಾತನಾಡುವವನಂತೆ ಹೀಗೆಂದನು—“ನಮ್ಮ ಅರಣ್ಯದಲ್ಲಿ ಯಾವನೋ ಒಬ್ಬನು ಅಲೆಯುತ್ತ, ರೊಸಾಲೆಂಡೋ ಎಂದು ಕೆತ್ತುವುದ ರಿಂದ ನಮ್ಮ ಎಳೆದಾದ ವೃಕ್ಷಗಳನ್ನೆಲ್ಲಾ ಕೆಡಿಸುತ್ತಿದ್ದಾನೆ. ಪರಿಮಳ ಯುಕ್ತವಾದ ಪುಷ್ಪಗಳನ್ನು ಬಿಡುವ ಗಿಡಗಳಿಗೆ ಗಂಭೀರವಾದ ವಿರಹ ಗೀತಗಳನ್ನೂ ಪುಷ್ಪಗಳನ್ನು ಬಿಡದ ಮುಳ್ಳು ಗಿಡಗಳಿಗೆ ಶೋಕವನ್ನು ಸೂಚಿಸುವ ವಿಯೋಗ ಗೀತಗಳನ್ನೂ ರೋಸಾಲೆಂಡಳ ಗುಣಕಥನ ರೂಪ ವಾಗಿ ಬರೆದು ನೇತುಹಾಕುವನು. ನಾನು ಈ ವಿರಹಿಯನ್ನು ಕಂಡರೆ ಅವನ ವಿರಹ ವೇದನೆಯನ್ನು ಜಾಗ್ರತೆಯಾಗಿ ಗುಣಪಡಿಸುವಂಥಾ ಒಳ್ಳೇ ಸಲಹೆಗಳನ್ನು ಕೊಡುವೆನು” ಎಂದನು.

ಇದಕ್ಕೆ ಆರ್ಲಾಂಡೊವು—“ನೀನು ಯಾರ ವಿಷಯದಲ್ಲಿ ಈವ ರೆಗೆ ಮಾತನಾಡಿದಿಯೋ ಆ ವಿರಹಿಯೇ ನಾನು. ನೀನು ಕೊಡುವ ಸಲಹೆಗಳೇನು ?”

ಗಾನಿಮೀಡ್—“ನೀನು ಪ್ರತಿದಿನವೂ ಈ ಗುಡಿಸಲಿಗೆ ಬರು ತ್ತಿರು ನಾನು ರೊಸಾಲೆಂಡಳಂತೆ ವೇಷವನ್ನು ಧರಿಸುತ್ತೇನೆ ನಾನು ರೊಸಾಲೆಂಡಳಾಗಿದ್ದರೆ ಅವಳು ನಿನ್ನನ್ನು ವರಿಸುವಂತೆ ಮಾಡುವುದಕ್ಕಾಗಿ ನೀನು ಹೇಗೆ ನಡೆದುಕೊಳ್ಳಬೇಕಾಗಿತ್ತೋ, ಆ ಕಲ್ಪಿತ ಪ್ರೇಮವನ್ನು ನನ್ನಲ್ಲಿ ತೋರಿಸು. ಕೊನೆಗೆ ನಿನ್ನ ವಿರಹದಿಂದ ನೀನು ಲಜ್ಜಾನ್ವಿತನಾ ಗುವ ವರೆಗೂ ಭ್ರಮೆಯುಳ್ಳ ನಾರಿಯರು ತಮ್ಮ ಪ್ರಿಯರ ವಿಷಯದಲ್ಲಿ ನಡೆದುಕೊಳ್ಳುವ ಚಂಚಲವಾದ ನಡವಳಿಕೆಗಳನ್ನು ನಾನು ಅನುಕರಿಸು ತ್ತೇನೆ ಇದೇ ನಾನು ನಿನ್ನ ವಿರಹ ವೇದನೆಯನ್ನು ಗುಣಪಡಿಸುವ ಮಾರ್ಗ” ಎಂದನು.

ಆರ್ಲಾಂಡೊವಿಗೆ ಈ ವಿರಹ ವೇದನಾಪರಿಹಾರೋಪಾಯದಲ್ಲಿ ನಂಬುಗೆ ಏನೂಯಿಲ್ಲದೇ ಇದ್ದರೂ ದಿನ ದಿನವೂ ಅವರ ಗುಡಿಸಲಿಗೆ ಬರು ವುದಾಗಿ ಒಪ್ಪಿಕೊಂಡು ಅದರಂತೆ ಮಾಡುತ್ತಿದ್ದನು. ಆರ್ಲಾಂಡೊವು ಕುರುಬರ ಹುಡುಗನಾದ ಗಾನಿಮೀಡನನ್ನು ರೊಸಾಲೆಂಡ್ ಎಂದು ಕರೆ ಯುತ್ತ ಕೃತ್ರಿಮಿಗಳಾದ ಯುವಕರು ನಾರಿಯರನ್ನು ವರಿಸುವಂತೆ ಮಾಡಿಕೊಳ್ಳುವುದರಲ್ಲಿ ಯಾವಯಾವುದನ್ನುಪಯೋಗಿಸಲು ಸಂತುಷ್ಟ ರಾಗಿರುತ್ತಾರೋ ಅಂಥಾ ಮಧುರವಾದ ಮಾತುಗಳನ್ನೂ ಮುಖಸ್ತು

ತಿಯ ವಚನಗಳನ್ನೂ ಪ್ರತಿದಿನವೂ ಆಡುತ್ತಿದ್ದನು. ಹೇಗಾದರೂ ಆರ್ಲಾಂಡೊವು ರೊಸಾಲೆಂಡಳಲ್ಲಿ ಹೊಂದಿರುವ ವ್ಯಾಮೋಹದ ಬೇನೆಯನ್ನು ಗಾನಿಮಿಾಡನು ದಿನ ದಿನಕ್ಕೆ ಗುಣಮಾಡುವಂತೆ ತೋರುತ್ತಿರಲಿಲ್ಲ. ಇವೆಲ್ಲವೂ ವಿನೋದಕರವಾದ ಆಟಗಳೆಂದು ಆರ್ಲಾಂಡೊವು ಯೋಚಿಸಿದ್ದರೂ (ಗಾನಿಮಿಾಡನೇ ತನ್ನ ನಿಜವಾದ ರೊಸಾಲೆಂಡಳೆಂದು ಇವನು ಕನಸಿನಲ್ಲಿಯೂ ಭಾವಿಸದೇ ಇದ್ದರೂ) ಅವನಿಗೆ ತನ್ನ ಅಂತರಂಗದ ಪ್ರೇಮಾತಿಶಯವನ್ನೆಲ್ಲಾ ಹೇಳುವುದಕ್ಕೆ ದೊರಕಿದ ಈ ಸಂದರ್ಭದಿಂದ ಆ ಮಧುರಮಯವಾದ ಪ್ರೇಮಪೂರ್ಣವಾದ ಮಾತುಗಳೆಲ್ಲವೂ ಗಾನಿಮಿಾಡನ್ನು ಸಂತೋಷ ಪಡಿಸಿದಂತೆಯೇ ಆರ್ಲಾಂಡೊವಿನ ಮನಸ್ಸನ್ನೂ ಹರ್ಷಗೊಳಿಸಿತು ಈ ರೀತಿಯಲ್ಲಿ ಇವರು ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದರು. ಇದು ಗಾನಿಮಿಾಡನ್ನು ಸಂತಸಗೊಳಿಸುವುದೆಂದರಿತಿದ್ದ ಸುಶೀಲೆಯಾದ ಎಲೀನಳು ಅವರ ಹಾದಿಗೆ ಅಡ್ಡಲಾಗಲಿಲ್ಲ. ಹಾಸ್ಯಾಸ್ಪದವಾದ ಈ ಪ್ರೇಮಪ್ರದರ್ಶನವು ಅವಳನ್ನು ವಿನೋದಪಡಿಸುತ್ತಿದ್ದುದರಿಂದ ಡ್ಯೂಕನು ಆ ಅರಣ್ಯದಲ್ಲಿ ಆಶ್ರಯಮಾಡಿಕೊಂಡಿರುವ ಸ್ಥಳವು ಆರ್ಲಾಂಡೊವಿನಿಂದ ತಿಳಿಯ ಬಂದಿದ್ದಾಗ್ಯೂ ರೊಸಾಲೆಂಡಳು ತನ್ನ ತಂದೆಯ ದರ್ಶನವನ್ನು ಮಾಡಿಕೊಳ್ಳಲಿಲ್ಲವೆಂದು ಗಾನಿಮಿಾಡನ ಜ್ಞಾಪಕಕ್ಕೆ ತರಬೇಕೆಂಬುದು ಎಲೀನಳ ಲಕ್ಷ್ಯಕ್ಕೆ ಬರಲಿಲ್ಲ.

ಗಾನಿಮಿಾಡನು ಒಂದು ತಡವೆ ಡ್ಯೂಕನನ್ನು ಸಂಧಿಸಿ ಕೆಲಹೊತ್ತು ಮಾತುಗಳನ್ನಾಡುತ್ತಿದ್ದನು. ಆಗ ಡ್ಯೂಕನು—"ನೀನು ಯಾವ ವಂಶದಲ್ಲಿ ಹುಟ್ಟಿದವನು?" ಎಂದು ಕೇಳಿದನು. ಅದಕ್ಕೆ ಗಾನಿಮಿಾಡನು—"ನೀನು ಉದ್ಭವಿಸಿದಂಥಾ ಕುಲದಿಂದಲೇ ನಾನೂ ಹುಟ್ಟಿದೆ" ಎಂದು ಹೇಳಲು, ಈ ಲಕ್ಷಣವಂತನಾದ ಕುರುಬ ಹುಡುಗನು ಹೇಗೆ ರಾಜಸಂತತಿಯವನೆಂದು ಡ್ಯೂಕನು ಸಂಶಯಪಟ್ಟವನಾಗಿ ಮಂದಸ್ಮಿತವದನನಾದನು. ಡ್ಯೂಕನು ಇದರಿಂದ ಸಂತುಷ್ಟನಾಗಿರುವುದನ್ನು ಗಾನಿಮಿಾಡನು ನೋಡಿ ಇನ್ನೂ ಕೆಲವು ಕಾಲದ ವರೆಗೆ ಮುಂದಿನ ವಿವರಗಳನ್ನು ತಿಳಿಸಲು ಸಾವಕಾಶಮಾಡಿದನು.

ಒಂದು ದಿನ ಪ್ರಾತಃಕಾಲದಲ್ಲಿ ಆರ್ಲಾಂಡೊವು ಗಾನಿಮಿಾಡನ್ನು ನೋಡುವುದಕ್ಕೆ ಹೋಗುತ್ತಿರಲು, ನೆಲದ ಮೇಲೆ ಮಲಗಿ ನಿದ್ರಿಸುತ್ತಿರುವ

ಒಬ್ಬನನ್ನು ಕಂಡನು. ಅವನ ಕುತ್ತಿಗೆಯನ್ನು ಒಂದು ಹಸುರು ಹೆಬ್ಬಾವು ಸುತ್ತುಹಾಕಿಕೊಂಡಿತ್ತು. ಆರ್ಲಾಂಡೊವು ಸಮೀಪವಾಗುತ್ತಿರುವುದನ್ನು ಆ ಸರ್ಪವು ಕಂಡು ಸದ್ದಿಲ್ಲದೆ ಹೊದರುಗಳೊಳಕ್ಕೆ ಹರಿದುಹೋಯಿತು. ಆರ್ಲಾಂಡೊವು ಇನ್ನೂ ಹತ್ತಿರಕ್ಕೆ ಹೋಗಲು ಆ ಮನುಷ್ಯನು ನಿದ್ದೆಯಿಂದೇಳುವುದನ್ನೇ ನಿರೀಕ್ಷಿಸುತ್ತ, ಬೆಕ್ಕಿನಂತೆ ಹೊಂಚುಹಾಕುತ್ತ ಗದ್ದವನ್ನು ನೆಲದಮೇಲಿಟ್ಟುಕೊಂಡು ಮಲಗಿದ್ದ ಒಂದು ಹೆಣ್ಣು ಸಿಂಹವನ್ನು ಕಂಡನು. (ಸಿಂಹಗಳು ನಿದ್ರಿಸುತ್ತಿರುವ ಅಥವಾ ಸತ್ತಿರುವ ಪ್ರಾಣಿಗಳನ್ನು ತಿನ್ನುವುದಿಲ್ಲವೆಂದು ಪ್ರವಾದವುಂಟು.) ಇದನ್ನು ನೋಡಲು ಆ ಮನುಷ್ಯನನ್ನು ಸರ್ಪ ಮತ್ತು ಸಿಂಹಗಳ ಗಂಡಾಂತರದಿಂದ ತಪ್ಪಿಸಿ ಸಲಹುವುದಕ್ಕಾಗಿ ಭಗವಂತನೇ ಈ ಆರ್ಲಾಂಡೊವನ್ನು ಕಳುಹಿಸಿದನೋ ಏನೋ ಎನ್ನುವಂತಿತ್ತು. ಆರ್ಲಾಂಡೊವು ಅವನ ಮುಖವನ್ನು ನೋಡಿದಾಗ ಈ ಉಭಯಗಂಡಾಂತರಗಳಿಗೆ ಗುರಿಯಾಗಿ ನಿದ್ರಿಸುತ್ತಲಿರುವವನು ತನ್ನನ್ನು ಬಹು ಕ್ರೌರ್ಯದಿಂದ ಕಾಣುತ್ತಾ, ಬೆಂಕಿಯಿಂದ ನಾಶನಮಾಡಿಬಿಡುವೆನೆಂದು ಯೋಚಿಸಿದ್ದ ತನ್ನ ಅಣ್ಣನಾದ ಆಲಿವರನೆಂದು ಗೊತ್ತಾಯಿತು. ಆಗ ಅವನನ್ನು ಆ ಹಸಿದ ಸಿಂಹದ ಆಹಾರಾರ್ಥವಾಗಿ ಬಿಟ್ಟುಬಿಡಬೇಕೆಂದು ಇವನು ಬಹು ಮಟ್ಟಿಗೆ ಪ್ರೇರಿತನಾದನು. ಆದರೆ ಸಹೋದರವಾತ್ಸಲ್ಯವೂ ಇವನ ಘನವಾದ ಸ್ವಭಾವವೂ ಇವನಿಗೆ ತನ್ನ ಅಣ್ಣನ ಮೇಲೆ ಹುಟ್ಟಿದ ಮೊದಲಿನ ದುರಾಗ್ರಹವನ್ನು ಜಯಿಸಿಬಿಟ್ಟುವು. ಆದುದರಿಂದ ಇವನು ಕತ್ತಿಯನ್ನು ಹಿರಿದುಕೊಂಡು ಆ ಸಿಂಹದ ಮೇಲೆ ನುಗ್ಗಿದನು. ಅದರೊಡನೆ ಹೋರಾಡುವಾಗ ಇವನ ಒಂದು ಬಾಹುವು ಶಸ್ತ್ರದಂತಿರುವ ಅದರ ಉಗುರುಗಳಿಂದ ಗಾಯವಾದರೂ ಹಿಂದೆಗೆಯದೆ ಅದನ್ನು ತನ್ನ ಕತ್ತಿಯಿಂದ ಹೊಡೆದು ಸಂಹರಿಸಿಬಿಟ್ಟನು. ಹೀಗೆ ಇವನು ತನ್ನ ಅಣ್ಣನ ಪ್ರಾಣಾಪಾಯವನ್ನು ವಿಷ ಸರ್ಪದ ದೆಸೆಯಿಂದಲೂ ಭಯಂಕರವಾದ ಸಿಂಹದ ದೆಸೆಯಿಂದಲೂ ತಪ್ಪಿಸಿ, ಅವನನ್ನು ರಕ್ಷಿಸಿದನು. ಆರ್ಲಾಂಡೊವು ಸಿಂಹದೊಡನೆ ಹೋರಾಡುತ್ತಿರುವಾಗ್ಗೆ ಆಲಿವರನು ಎಚ್ಚರಗೊಂಡು ತಾನು ಯಾರನ್ನು ಬಹು ಕ್ರೌರ್ಯದಿಂದ ಕಾಣುತ್ತಿದ್ದನೋ ಅಂಥಾ ಆರ್ಲಾಂಡೊವಿನ ಆತ್ಮನಿವೇದನದಿಂದ ರಕ್ಷಿತನಾಗಿರುವುದನ್ನು ಕಂಡನು. ಒಡನೆಯೇ ಲಜ್ಜೆಯೂ ಪಶ್ಚಾತ್ತಾಪವೂ ಅವನನ್ನು ಮುತ್ತಿಗೆ ಹಾಕಿದುವು. ತನ್ನ ಅಯೋಗ್ಯವಾದ ನಡತೆಗಳಿಗಾಗಿ ಸಂತಾಪಪಟ್ಟು, ಕಣ್ಣೀರುಕರೆ

ಯುತ್ತಾ, ತನ್ನ ತಮ್ಮನ ಕ್ಷಮೆಯನ್ನು ಕೇಳಿಕೊಂಡನು. ಆರ್ಲಾಂಡೊವು ಅವನ ಅನುತಾಪ ಬುದ್ಧಿಗಾಗಿ ಸಂತೋಷಪಟ್ಟು ಅವನನ್ನು ಮನ್ನಿಸಿದನು. ಅನಂತರದಲ್ಲಿ ಒಬ್ಬರನ್ನೊಬ್ಬರು ಆಲಿಂಗನೆಮಾಡಿಕೊಂಡರು. ಆರ್ಲಾಂಡೊವನ್ನು ನಾಶನಮಾಡಬೇಕೆಂಬ ಸಂಕಲ್ಪದಿಂದ ಆಲಿವರನು ಈ ಅರಣ್ಯಕ್ಕೆ ಬಂದವನಾಗಿದ್ದರೂ, ಆ ಗಳಿಗೆಯಿಂದ ನಿಜವಾದ ಸಹೋದರವಾತ್ಸಲ್ಯವು ಅವನಲ್ಲಿ ಉದಯವಾಯಿತು.

ಆರ್ಲಾಂಡೊವಿಗೆ ತೋಳಿನ ಮೇಲಾದ ಗಾಯದಿಂದ ಬಹು ರಕ್ತವು ಸುರಿದುಹೋಗಿ ಗಾನಿಮಿಾಡನ್ನು ನೋಡುವುದಕ್ಕೆ ಹೋಗಲು ನಿಶ್ಶಕ್ತನಾಗಿ—“ನಾನು ಯಾರನ್ನು ವಿನೋದಾರ್ಥವಾಗಿ ನನ್ನ ರೊಸಾಲೆಂಡ್ ಎಂದು ಕರೆಯುತ್ತಿರುವೆನೋ, ಆ ಗಾನಿಮಿಾಡನ ಬಳಿಗೆ ಹೋಗಿ ತನಗುಂಟಾದ ಅಪಾಯವನ್ನು ತಿಳಿಸಬೇಕು” ಎಂದು ತನ್ನ ಅಣ್ಣನನ್ನು ಕೇಳಿಕೊಂಡನು. ತದನುಗುಣವಾಗಿ ಆಲಿವರನು ಹೋಗಿ ಗಾನಿಮಿಾಡ್ ಎಲೀನ ಇವರಿಗೆ ಆರ್ಲಾಂಡೊವು ತನ್ನ ಪ್ರಾಣವನ್ನು ಹೇಗೆ ಉಳಿಸಿದನೆಂಬ ಸಂಗತಿಯನ್ನೂ ಅವನ ಧೀರತೆಯನ್ನೂ ದೈವವಶಾತ್ ತಾನು ಹೊಂದಿದ ಅಪಾಯದ ಬಿಡುಗಡೆಯ ಕಥೆಯನ್ನೂ ಆರ್ಲಾಂಡೊವನ್ನು ಕ್ರೌರ್ಯದಿಂದ ಕಾಣುತ್ತಿದ್ದ ತಾನೇ ಅವನ ಅಣ್ಣನೆಂದು ತನ್ನ ತಪ್ಪನ್ನು ಅವರಲ್ಲಿ ಹೇಳಿಕೊಂಡು ಈಗ ಇಬ್ಬರೂ ಅನ್ಯೋನ್ಯಾನುರಾಗದಿಂದಿದ್ದೇವೆಂದು ತಿಳಿಸಿದನು. ಆಲಿವರನು ತನ್ನ ಅಪರಾಧಗಳಿಗಾಗಿ ಪಡುತ್ತಿರುವ ನಿಷ್ಕಪಟವಾದ ದುಃಖದಿಂದ ಎಲೀನಳ ಕರುಣಾಂತಃಕರುಣವು ಕರಗಿ ಆಗಲೇ ಅವಳು ಅವನಲ್ಲಿ ಮೋಹಗೊಂಡಳು. ತನ್ನ ಅಪರಾಧಗಳಿಗಾಗಿ ತಾನು ಸಂತಪಿಸುತ್ತಿರುವುದನ್ನು ಕೇಳಿ, ಅವಳು ಬಹು ಕನಿಕರಪಡುತ್ತಿರುವುದನ್ನು ನೋಡಿ, ಆಲಿವರನೂ ಆಕ್ಷಣದಲ್ಲಿಯೇ ಅವಳಲ್ಲಿ ಮೋಹಗೊಂಡನು. ಹೀಗೆ ಪರಸ್ಪರಾನುರಾಗವು ಇವರಿಬ್ಬರ ಹೃದಯಗಳನ್ನು ಪ್ರವೇಶಿಸುತ್ತಿರಲು, ಆರ್ಲಾಂಡೊವು ಸಿಂಹದಿಂದ ಗಾಯಮಾಡಲ್ಪಟ್ಟು ಅಪಾಯಕ್ಕೆ ಗುರಿಯಾದನೆಂಬುದನ್ನು ಕೇಳಿ ಬಸವಳಿದ ಗಾನಿಮಿಾಡನ ವಿಷಯದಲ್ಲಿ ಆಲಿವರನು ಅಲಕ್ಷ್ಯದಿಂದಿರಲಿಲ್ಲ. ಗಾನಿಮಿಾಡನು ಸಚೈತನ್ಯನಾದ ಮೇಲೆ ತಾನು ರೊಸಾಲೆಂಡಳೆಂದು ಭಾವಿಸಿಕೊಂಡು ಮೂರ್ಛಾವಸ್ಥೆಯ ಪ್ರತಿರೂಪವನ್ನು ಹೊಂದಿದ್ದುದಾಗಿ ನಟಿಸಿ—“ಎಲೈ ಆಲಿವರನೇ, ನಾನು ಎಷ್ಟು ಚೆನ್ನಾಗಿ ಮೂರ್ಛಾವಸ್ಥೆಯ ಪ್ರತಿರೂಪವನ್ನು ತೋರಿಸಿದೆನೆಂ

ಬುದನ್ನು ನಿನ್ನ ತಮ್ಮನಿಗೆ ಹೇಳು '' ಎಂದನು. ಆದರೆ ಅವನು ದಿಟವಾಗಿಯೂ ಈ ಸುದ್ದಿಯಿಂದ ಬಸವಳಿದನೆಂಬುದನ್ನು ಆ ಯುವಕನ ಕಳೆಗುಂದಿದ ಮುಖದಿಂದ ಆಲಿವರನು ತಿಳಿದುಕೊಂಡು—'' ಎಲೈ ಯುವಕನೇ, ನೀನು ಮೂರ್ಛಾವಸ್ಥೆಯ ಪ್ರತಿರೂಪವನ್ನು ಮಾತ್ರ ತೋರಿಸಿದ್ದರೆ ಮನುಷ್ಯನಂತೆ ಸ್ಥೈರ್ಯವನ್ನು ಹೊಂದು '' ಎಂದನು.

ಗಾನಿಮಿಡನು—'' ಹಾಗೆಯೇ ಮಾಡುತ್ತೇನೆ, ಆದರೆ ನಾನು ನ್ಯಾಯವಾಗಿ ಹೆಂಗಸಾಗಿರಬೇಕಾಗಿತ್ತು. ''

ಆಲಿವರನು ಅಲ್ಲಿ ಬಲುಹೊತ್ತು ಇದ್ದುಬಿಟ್ಟನು. ಕೊನೆಗೆ ತನ್ನ ತಮ್ಮನ ಬಳಿಗೆ ಹಿಂತಿರುಗಿ ಬಂದ ಮೇಲೆ, ಅನೇಕ ಸಮಾಚಾರಗಳನ್ನು ಹೇಳಬೇಕಾಗಿತ್ತು. ಆರ್ಲಾಂಡೊವು ಗಾಯಪಟ್ಟಿದ್ದಾನೆಂದು ಕೇಳಿದ ವಾರ್ತೆಯಿಂದ ಗಾನಿಮಿಡನು ಕಂಗೆಟ್ಟುದನ್ನು ಹೇಳಿದುದಲ್ಲದೆ, ತಾನು ಎಲೀನಳೆಂಬ ರೂಪವತಿಯಾದ ಕುರುಬರ ಕನ್ಯೆಯಲ್ಲಿ ಮೋಹಗೊಂಡೆನೆಂಬುದನ್ನೂ ಉಭಯತರ ಪ್ರಥಮಸಂದರ್ಶನದಲ್ಲಿ ಅವಳು ತನ್ನ ಅಭಿಲಾಷೆಗೆ ಚೆನ್ನಾಗಿ ಕಿವಿಗೊಟ್ಟಿರುವಳೆಂಬುದನ್ನೂ ಹೇಳಿದನು. ನಿಶ್ಚಿತಾರ್ಥವಾಗಿದ್ದರೆ ಹೇಗೋ ಹಾಗೆ ತಾನು ಎಲೀನಳನ್ನು ಮದುವೆಮಾಡಿಕೊಳ್ಳುವುದಾಗಿಯೂ ಅವಳಲ್ಲಿ ತನಗಿರುವ ಪ್ರೇಮದಿಂದ ತಾನು ಅಲ್ಲಿಯೇ ಕುರುಬನಾಗಿ ಜೀವಿಸುವುದಾಗಿಯೂ ಊರಿನಲ್ಲಿ ತಮ್ಮ ಜಿಂದಿಗೆ ಮನೆಮಾರುಗಳನ್ನು ಆರ್ಲಾಂಡೊವಿಗೆ ಒಪ್ಪಿಸಿಬಿಡುವುದಾಗಿಯೂ ಹೇಳಿದನು.

ಆರ್ಲಾಂಡೊವು—'' ನನಗೆ ಸಮ್ಮತವಾಗಿದೆ. ನಿಮ್ಮ ವಿವಾಹವು ನಾಳೆಯೇ ಆಗಲಿ ನಾನು ಡ್ಯೂಕನನ್ನೂ ಅವನ ಮಿತ್ರರನ್ನೂ ಕರೆದು ತರುವೆನು. ಹೋಗಿ, ಆ ಕನ್ಯೆಯನ್ನು ವಿವಾಹಕ್ಕೆ ಒಪ್ಪುವಂತೆ ಸಮ್ಮತಿಪಡಿಸು. ನೋಡು, ಅವಳ ಅಣ್ಣನು ಇತ್ತಲೇ ಬರುತ್ತಿರುವುದರಿಂದ ಅವಳೊಬ್ಬಳೇ ಇದ್ದಾಳೆ. ''

ಆಲಿವರನು ಎಲೀನಳ ಬಳಿಗೆ ಹೊರಟನು. ಯಾರ ಬರುವಿಕೆಯನ್ನು ಆರ್ಲಾಂಡೊವು ನೋಡಿದ್ದನೋ ಆ ಗಾನಿಮಿಡನು ಗಾಯಪಟ್ಟ ತನ್ನ ಸ್ನೇಹಿತನ ಆರೋಗ್ಯವನ್ನು ವಿಚಾರಿಸುವುದಕ್ಕಾಗಿ ಅಲ್ಲಿಗೆ ಬಂದನು. ಆಲಿವರನೂ ಎಲೀನಳೂ ಕ್ಷಣಕಾಲದಲ್ಲಿ ಪರಸ್ಪರ ಮೋಹಿತರಾದ ಸಮಾಚಾರವನ್ನು ಕುರಿತು ಗಾನಿಮಿಡನು ಮಾತನಾಡತೊಡಗುತ್ತಲೇ, ಆರ್ಲಾಂಡೊವು ತನ್ನ ಅಣ್ಣನಿಗೆ ಆ ಲಕ್ಷಣವಾದ ಕುರುಬರ ಕನ್ಯೆಯನ್ನು

ನಾಳೆಯೇ ಮದುವೆಮಾಡಿಕೊಳ್ಳುವಂತೆ ಒಡಂಬಡಿಸೆಂದು ಹೇಳಿ, ಆ ದಿನವೇ ತಾನು ರೊಸಾಲೆಂಡಳನ್ನು ವಿವಾಹವಾಗಲು ಎಷ್ಟೋ ಕುತೂಹಲಭರಿತನಾಗಿದ್ದೇನೆಂದೂ ಹಂಬಲಿಸಿದನು.

ಈ ಕ್ರಮವನ್ನು ಬಲುಚೆನ್ನಾಗಿ ಅಂಗೀಕರಿಸಿದ ಗಾನಿಮೀಡನು ಆರ್ಲಾಂಡೊವು ದಿಟವಾಗಿಯೂ ತಾನು ಹೇಳುವಂತೆ ರೊಸಾಲೆಂಡಳನ್ನು ಪ್ರೀತಿಸುವುದಾದರೆ, ಇಷ್ಟಸಿದ್ಧಿಯುಳ್ಳವನಾಗುವನೆಂದೂ ಇವನನ್ನು ಮದುವೆಮಾಡಿಕೊಳ್ಳಲು ರೊಸಾಲೆಂಡಳು ಒಪ್ಪಿಕೊಂಡವಳಾಗಿ ನಾಳೆ ಬೆಳಿಗ್ಗೆ ಸ್ವಸ್ವರೂಪದಿಂದ ಸಿದ್ಧಳಾಗುವಂತೆ ತಾನು ಮಾಡುವುದಾಗಿಯೂ ಹೇಳಿದನು.

ಗಾನಿಮೀಡನೇ ರೊಸಾಲೆಂಡಳಾಗಿದ್ದುದರಿಂದ ತಾನು ಸುಲಭವಾಗಿ ಮಾಡಬಹುದಾದ ಈ ಕಾರ್ಯವನ್ನು ಯಕ್ಷಿಣೀ ಸಹಾಯದಿಂದ ನೆರವೇರಿಸುವುದಾಗಿಯೂ ತಾನು ಪ್ರಸಿದ್ಧಮಾಂತ್ರಿಕನಾದ ತನ್ನ ಚಿಕ್ಕ ತಂದೆಯಿಂದ ಯಕ್ಷಿಣಿಯನ್ನು ಅಭ್ಯಾಸಮಾಡಿರುವುದಾಗಿಯೂ ಹೇಳಿದಳು.

ಪ್ರೇಮಲೋಲನಾದ ಆರ್ಲಾಂಡೊವು ತಾನು ಕೇಳಿದುದನ್ನು ಅರ್ಧ ನಂಬುತ್ತ, ಅರ್ಧ ಸಂಶಯಪಡುತ್ತ, ಗಾನಿಮೀಡನನ್ನು ಕುರಿತು— ‘‘ ನೀನು ಹೇಳಿರುವುದು ನಿನ್ನ ನಿಜವಾದ ಮನೋಗತವೇ ? ’’ ಎಂದು ಕೇಳಿದನು.

ಗಾನಿಮೀಡನು—‘‘ ನನ್ನ ಸತ್ಯವಾಗಿಯೂ ನಾನು ಮಾಡುವೆನು. ಆದುದರಿಂದ ಅಲಂಕೃತನಾಗು. ಡ್ಯೂಕನನ್ನೂ ಅವನ ಮಿತ್ರಮಂಡಲಿಯನ್ನೂ ಬರಮಾಡು. ನೀನು ನಾಳೆ ರೊಸಾಲೆಂಡಳನ್ನೂ ಅಲಿವರನು ಎಲೀನಳನ್ನೂ ಪಾಣಿಗ್ರಹಣಮಾಡಿಕೊಳ್ಳುವಿರಿ. ನೀನು ರೊಸಾಲೆಂಡಳನ್ನು ಪಾಣಿಗ್ರಹಣಮಾಡಿಕೊಳ್ಳುವದಾದರೆ ಅವಳಲ್ಲಿಯೇ ಇರುವಳೆಂದು ತಿಳಿ ’’ ಎಂದನು.

ಮರುದಿನ ಪ್ರಾತಃಕಾಲ ಆಲಿವರನು ಎಲೀನಳನ್ನು ವಿವಾಹಕ್ಕೆ ಒಡಂಬಡಿಸಿ ಅವಳ ಜೊತೆಯಲ್ಲಿ ಡ್ಯೂಕನ ಸಮಕ್ಷಮಕ್ಕೆ ಬಂದನು. ಇವರ ಜೊತೆಯಲ್ಲಿ ಆರ್ಲಾಂಡೊವೂ ಬಂದನು. ಎರಡು ವಿವಾಹಗಳನ್ನು ಮಾಡುವದಕ್ಕಾಗಿ ಅವರೆಲ್ಲರೂ ನೆರೆದಿದ್ದರು. ಅಲ್ಲಿ ಒಬ್ಬಳು ವಧುವು ಮಾತ್ರವೇ ಕಾಣಬರುತ್ತಿದ್ದುದರಿಂದ ಅವರಿಗೆ ಬಹು ಯೋಚನೆಯೂ ಆಶ್ಚರ್ಯವೂ ಉಂಟಾದುವು. ಆದರೆ ಅವರಲ್ಲನೇಕರು ಗಾನಿಮೀಡನು

ಆರ್ಲಾಂಡೊವನ್ನು ಹಾಸ್ಯಮಾಡುತ್ತಿರುವುದಾಗಿ ಯೋಚಿಸಿದರು. ಈ ಅದ್ಭುತವಾದ ರೀತಿಯಿಂದ ಕರತರಲ್ಪಡುವವಳು ತನ್ನ ಮಗಳೆಂದು ಡ್ಯೂಕನು ಕೇಳಿ—“ ಎಲೈ ಆರ್ಲಾಂಡೊವೇ, ಆ ಕುರುಬರ ಹುಡುಗನು ವಾಗ್ದಾನ ಮಾಡಿರುವಂತೆ ದಿಟವಾಗಿ ನಡಿಸುವನೆಂದು ನೀನು ನಂಬಿರುವಿಯಾ ” ಎನ್ನಲು, ಅವನು ತನಗೇನೂ ಯೋಚನೆಯೇ ತೋರುವುದಿಲ್ಲವೆಂದು ಹೇಳುತ್ತಿರುವಲ್ಲಿ ಗಾನಿಮಿೂಡನು ಪ್ರವೇಶಿಸಿ—“ ಸ್ವಾಮಿೂ, ತಮ್ಮ ಮಗಳನ್ನು ನಾನು ಕರೆದುತಂದರೆ ಈ ವಿವಾಹಕ್ಕೆ ಒಪ್ಪುವಿರಾ ? ” ಎಂದು ಡ್ಯೂಕನನ್ನು ಕೇಳಿದನು.

ಡ್ಯೂಕನು—“ ಅಗತ್ಯವಾಗಿಯೂ ಒಪ್ಪುವೆನು. ಅವಳ ಸಮೇತ ಕೊಡುವುದಕ್ಕೆ ನನಗೆ ರಾಜ್ಯಗಳಿಲ್ಲವಲ್ಲಾ ! ಎಂಬುದೊಂದೇ ವ್ಯಥೆ ” ಎಂದನು.

ಗಾನಿಮಿೂಡನು ಆರ್ಲಾಂಡೊವನ್ನು ಕುರಿತು—“ಅವಳನ್ನು ಕರೆದು ತಂದರೆ ನೀನು ಮದುವೆಯಾಗುವೆನೆಂದು ಹೇಳುವಿಯಲ್ಲವೆ ? ”

ಆರ್ಲಾಂಡೊವು—“ ಮದುವೆಯಾಗುವೆನು. ನಾನು ಅನೇಕ ದೇಶಗಳಿಗೆ ಅರಸಾಗಿರಬಾರದಾಗಿತ್ತೆ! ಎಂಬುದೇ ನನ್ನ ಚಿಂತೆ ” ಎಂದನು.

ಅನಂತರದಲ್ಲಿ ಗಾನಿಮಿೂಡನೂ ಎಲೀನಳೂ ಸಹ ಒಟ್ಟಾಗಿ ಹೊರಕ್ಕೆ ಹೊರಟರು. ಗಾನಿಮಿೂಡನು ತನ್ನ ಗಂಡುಡಿಗೆಯನ್ನು ತೆಗೆದುಹಾಕಿ ಹೆಣ್ಣುಡಿಗೆಯನ್ನು ಧರಿಸಿಕೊಳ್ಳಲು, ಯಕ್ಷಿಣಿಯ ಸಹಾಯವಿಲ್ಲದೆ ಜಾಗ್ರತೆಯಾಗಿಯೇ ರೊಸಾಲೆಂಡಳಾದನು. ಎಲೀನಳು ಧರಿಸಿಕೊಂಡಿದ್ದ ಗ್ರಾಮ್ಯವಾದ ಉಡಿಗೆಯನ್ನು ಪರಿತ್ಯಜಿಸಿ ಸ್ವಲ್ಪಶ್ರಮದಿಂದ ಸೆಲಿಯಳಾದಳು. ಗಾನಿಮಿೂಡನೂ ಎಲೀನಳೂ ಹೊರಕ್ಕೆ ಹೋಗುತ್ತಿರುವಾಗ್ಗೆ ಡ್ಯೂಕನು ಆರ್ಲಾಂಡೊವನ್ನು ಕುರಿತು—ಗಾನಿಮಿೂಡನು ತನ್ನ ಮಗಳಾದ ರೊಸಾಲೆಂಡಳಂತಿರುವುದಾಗಿ ತಾನು ಯೋಚಿಸಿದ್ದೇನೆಂದನು. ತಾನೂ ಸಹ ಅದೇ ಹೋಲಿಕೆಯನ್ನು ನೋಡಿರುವುದಾಗಿ ಆರ್ಲಾಂಡೊವು ಹೇಳಿದನು. ರೊಸಾಲೆಂಡಳೂ ಸೆಲಿಯಳೂ ತಮ್ಮ ಉಡಿಗೆಗಳನ್ನು ಧರಿಸಿಕೊಂಡು ಜಾಗ್ರತೆಯಾಗಿ ಹಿಂತಿರುಗಿದುದರಿಂದ ಇದು ಹೇಗೆ ಕೊನೆಮುಟ್ಟುವುದೆಂದು ಅವರು ಬಹುಕಾಲ ಆಶ್ಚರ್ಯಪಡಬೇಕಾಗಿರಲಿಲ್ಲ. ರೊಸಾಲೆಂಡಳು ತನ್ನ ಜನಕನ ಚರಣಗಳಿಗೆರಗಿ, ಅವನ ಆಶೀರ್ವಾದವನ್ನು ಪ್ರಾರ್ಥಿಸಿ, ತಾನು ಇಲ್ಲಿಗೆ ಬಂದುದು ಯಕ್ಷಿಣೀ ಬಲ

ದಿಂದಲೆಂದು ಹೆಚ್ಚು ಕಾಲ ನಟಿಸಲಿಲ್ಲ. ಅವಳು ಅಷ್ಟು ಥಟ್ಟನೆ ಗೋಚರಳಾದುದು ಯಕ್ಷಿಣಿಯಿಂದಲೇ ಸಂಭವಿಸಿದಂತಿರುವುದಾಗಿ ಅಲ್ಲಿದ್ದವರೆಲ್ಲರೂ ಆಶ್ಚರ್ಯಪಟ್ಟರು. ಆದರೆ ರೊಸಾಲೆಂಡಳು ತನ್ನ ತಂದೆಯಲ್ಲಿ ಇನ್ನೂ ಹೆಚ್ಚಾಗಿ ಹುಡುಗಾಟವನ್ನು ಮಾಡಲೊಲ್ಲದೆ ತನಗಾದ ಗಡೀಪಾರನ್ನೂ ಕುರುಬರ ಹುಡುಗನಂತೆ ತಾನು ಆ ಅರಣ್ಯದಲ್ಲಿ ವಾಸಮಾಡಿಕೊಂಡಿದ್ದುದನ್ನೂ ತನ್ನ ಚಿಕ್ಕಪ್ಪನ ಮಗಳಾದ ಸೆಲಿಯಾಳು ತನ್ನ ತಂಗಿಯಂತಿದ್ದುದನ್ನೂ ಅವನಿಗೆ ತಿಳಿಸಿದಳು.

ಡ್ಯೂಕನು ಈ ವಿವಾಹವಿಚಾರದಲ್ಲಿ ಕೊಟ್ಟಿದ್ದ ಸಮ್ಮತಿಯನ್ನು ಸ್ಥಿರಪಡಿಸಿದನು. ರೊಸಾಲೆಂಡ್ ಆರ್ಲಾಂಡೊಗಳಿಗೂ ಸೆಲಿಯಾ ಆಲಿವರರಿಗೂ ಏಕಕಾಲದಲ್ಲಿ ಪರಿಣಯಗಳಾದುವು. ವಿವಾಹಾದಿಗಳಲ್ಲಿ ವಾಡಿಕೆಯಾದ ವೈಭವೋತ್ಸವಗಳೊಡನೆ ಈ ವಿವಾಹಗಳು ಈ ಮಹಾರಣ್ಯದಲ್ಲಿ ಜರುಗಿಸಲ್ಪಡಲಾಗದಿದ್ದರೂ ಇಂಥ ಸಂತೋಷಪ್ರದವಾದ ವಿವಾಹದ ದಿನವು ಹಿಂದೆ ಎಂದೆಂದಿಗೂ ಬಂದಿರಲಿಲ್ಲ. ಗುಣವಂತನಾದ ಈ ಡ್ಯೂಕನೂ ಸಹಜ ಪ್ರೇಮಯುತರಾದ ಆ ದಂಪತಿಗಳೂ ಅಣ್ಣನ ಆನಂದದಿಂದ ರಮ್ಯವಾದ ತಳಿರುಗಳ ತಂಪಾದ ನೆರಳಿನಲ್ಲಿ ಭೋಜನ ಮಾಡುತ್ತ ಕುಳಿತಿರಲು, ಅನಿರೀಕ್ಷ್ಯನಾದ ಒಬ್ಬ ದೂತನು ಈ ಡ್ಯೂಕಿನ ರಾಜ್ಯವು ಪುನಃ ಇವನಿಗೆ ಲಭ್ಯವಾಗಿರುವುದೆಂಬ ಸಂತೋಷವಾರ್ತೆಯನ್ನು ಅರುಹಲು ಬಂದನು.

ಆ ರಾಜ್ಯಾಪಹಾರಿಯಾದ ಡ್ಯೂಕ್ ಫ್ರೆಡರಿಕನು ತನ್ನ ಮಗಳಾದ ಸೆಲಿಯಾಳು ಪಲಾಯನಮಾಡಿದುದರಿಂದ ಕೆರಳಿಹೋಗಿದ್ದನು. ಅರಣ್ಯವಾಸದಲ್ಲಿರುವ ತನ್ನ ಅಣ್ಣನನ್ನು ಸೇರುವುದಕ್ಕಾಗಿ ಪ್ರತಿ ದಿನದಲ್ಲಿಯೂ ಘನವಂತರಾದ ಜನರನೇಕರು ಆರಡನ್ ಅರಣ್ಯಕ್ಕೆ ಹೋಗುತ್ತಿರುವರೆಂಬುದನ್ನು ಕೇಳಿ, ತನ್ನ ಅಣ್ಣನು ದುರ್ದಶೆಯಲ್ಲೂ ಅಷ್ಟೊಂದು ಸನ್ಮಾನಿತನಾಗುತ್ತಿರುವುದಕ್ಕಾಗಿ ಮಾತ್ಸರ್ಯವನ್ನು ತಳೆದು, ತನ್ನ ಅಣ್ಣನನ್ನು ಸ್ವಾಧೀನಮಾಡಿಕೊಂಡು, ಅವನನ್ನು ಅವನ ವಿಶ್ವಾಸಪಾತ್ರರಾದ ಸ್ನೇಹಿತರ ಸಮೇತವಾಗಿ ಕತ್ತಿಗೆ ತುತ್ತು ಮಾಡಲೆಳಸಿ, ತಾನೇ ಒಂದು ದೊಡ್ಡ ಸೈನ್ಯದ ಅಗ್ರಗಾಮಿಯಾಗಿ ಆ ಅರಣ್ಯಕ್ಕೆ ಅಭಿಮುಖನಾದನು. ಆದರೆ ಆಶ್ಚರ್ಯಕರವಾದ ದೈವಸಂಕಲ್ಪದಿಂದ ಅವನು ಆ ಮಹಾರಣ್ಯದ ಸೆರಗನ್ನು ಸೇರುತ್ತಲೇ ಒಬ್ಬ ಭಕ್ತನಾದ ವಾನಪ್ರಸ್ಥಾಶ್ರಮಿಯನ್ನು ಕಂಡನು.

ಆತನೊಡನೆ ಬಲುಹೊತ್ತು ಮಾತನಾಡುತ್ತಿರಲು, ಕೊನೆಗೆ ಆತನು ಇವನ ಹೃದಯವನ್ನು ದುರುದ್ದೇಶ ರಹಿತವಾಗಿ ಮಾಡಿ ಸನ್ಮಾರ್ಗಕ್ಕೆ ತಿರುಗಿಸಿದನು.

ಅಲ್ಲಿಂದ ಮುಂದೆ ಅವನು ನಿಜವಾದ ಪಶ್ಚಾತ್ತಾಪವುಳ್ಳವನಾಗಿ ಅನ್ಯಾಯವಾಗಿ ಆಕ್ರಮಿಸಿಕೊಂಡಿರುವ ರಾಜ್ಯದ ಮೇಲಣ ತನ್ನ ಬಾಧ್ಯತೆಯನ್ನು ಪರಿತ್ಯಾಗಮಾಡಿ ತನ್ನ ಜೀವಿತದ ಮುಂದಿನ ದಿನಗಳನ್ನು ಧರ್ಮಾಶ್ರಮದಲ್ಲಿ ಕಳೆಯುವುದಾಗಿ ನಿಷ್ಕರ್ಷಿಸಿಕೊಂಡನು.

ಅವನು ಹೃದಯವನ್ನು ಹೊಕ್ಕ ಅನುತಾಪದ ಪ್ರಥಮಕಾರ್ಯವು ತಾನು ಇಷ್ಟೊಂದುಕಾಲ ಆಕ್ರಮಿಸಿಕೊಂಡಿದ್ದ ಅಣ್ಣನ ರಾಜ್ಯವನ್ನೂ ಅದರ ಜೊತೆಯಲ್ಲಿಯೇ ಅವನ ದುರ್ದಶೆಯಲ್ಲಿ ಅವನೊಡನಿರುವ ಅವನ ಸ್ನೇಹಿತರ ಭೂಮಿಕಾಣಿಗಳನ್ನೂ ಅವನಿಗೆ ಒಪ್ಪಿಸಿರುವಂತೆ ತಿಳಿಸಲು (ಹಿಂದೆಯೇ ತಿಳಿಸಿರುವಂತೆ) ದೂತನನ್ನು ಕಳುಹಿಸಿದುದಾಗಿತ್ತು.

ಅನಿರೀಕ್ಷ್ಯವಾದ ಈ ಸಂತೋಷವಾರ್ತೆಯು ಆ ರಾಜಕುಮಾರಿಯರ ವಿವಾಹಮಹೋತ್ಸವದ ಸಂತೋಷವನ್ನು ಉನ್ನತಗೆಯ್ಯಲು ಸರಿಯಾದ ಕಾಲದಲ್ಲಿ ಬಂತು. ಸೆಲಿಯಾಳು ರೊಸಾಲೆಂಡಳ ತಂದೆಯಾದ ಡ್ಯೂಕಿಗೆ ಶುಭೋದಯವಾದುದಕ್ಕಾಗಿ ತನಗೆ ಆನಂದವಾಯಿತೆಂದು ಹೇಳಿದಳು.

ಸೆಲಿಯಾಳು ಮುಂದೆ ರಾಜ್ಯಾಧಿಕಾರಿಣಿಯಾಗುವುದು ಅವಳ ತಂದೆಯು ರಾಜ್ಯದ ಬಾಧ್ಯತೆಯನ್ನು ಪರಿತ್ಯಜಿಸಿದುದರಿಂದ ತಪ್ಪಿಹೋಗಿ ರೊಸಾಲೆಂಡಳಿಗೆ ಲಭ್ಯವಾದರೂ ಅವಳಿಗೆ ಶುಭತತಿಯುಂಟಾಗಲೆಂದು ನಿಷ್ಕಳಂಕವಾದ ಪ್ರೀತಿಯಿಂದ ಹರಸಿದಳು.

ಈ ಇಬ್ಬರು ವನಿತೆಯರ ಪರಸ್ಪರಾನುರಾಗವು ಅಕುಟಿಲತೆಯಿಂದ ಸಂಪೂರ್ಣತೆಯನ್ನು ಪಡೆದಿತ್ತು.

ವನವಾಸದಲ್ಲಿ ತನ್ನೊಡನಿದ್ದ ಆ ನಿಜಮಿತ್ರರಿಗೆ ಸಂಭಾವನೆಮಾಡಲು, ಡ್ಯೂಕಿಗೆ ಸಮಯವು ದೊರಕಿತು. ಡ್ಯೂಕನ ಕಷ್ಟದಲ್ಲಿ ಸಹನೆಯಿಂದ ಭಾಗಿಗಳಾಗಿದ್ದ ಆ ಗುಣವಂತರಾದ ಸಹಚರರು ಶಾಂತಿಸಮೃದ್ಧಿಗಳೊಡನೆ ಈಗ ತಮ್ಮ ಡ್ಯೂಕಿನ ಅರಮನೆಗೆ ಹಿಂತಿರುಗುವಲ್ಲಿ ಅವರ ಸಂತೋಷಕ್ಕೆ ಪಾರವುಂಟೆ ?

## III. TWO GENTLEMEN OF VERONA

## ೩. ವೆರೋನಾ ನಗರದ ಇಬ್ಬರು ದೊಡ್ಡ ಮನುಷ್ಯರು

ವೆರೋನಾ ನಗರದಲ್ಲಿ ವೆಲಂಟೈನ್, ಪ್ರೋಟಿಯಸ್ ಎಂಬಿಬ್ಬರು ಯೌವನಸ್ಥರಾದ ದೊಡ್ಡಮನುಷ್ಯರಿದ್ದರು. ಇವರು ಬಹು ಕಾಲದಿಂದಲೂ ರೂಢಮೂಲವಾದ ಮೈತ್ರಿಯುಳ್ಳವರಾಗಿದ್ದರು. ಇವರು ಜೊತೆಯಲ್ಲೇ ವಿದ್ಯಾಭ್ಯಾಸಮಾಡುತ್ತಲಿದ್ದರು ಪ್ರೋಟಿಯಸನು ತಾನು ಮೋಹಿಸಿದ್ದ ನಾರಿಯ ಸಂದರ್ಶನಕ್ಕಾಗಿ ಹೋಗಿದ್ದಾಗ್ಗೆ ವಿನಾ ಇವರಿಬ್ಬರೂ ತಮ್ಮ ವಿರಾಮಸಮಯವನ್ನು ಒಬ್ಬನು ಮತ್ತೊಬ್ಬನ ಜೊತೆಯಲ್ಲಿಯೇ ಕಳೆಯುತ್ತಲಿದ್ದರು. ಪ್ರೋಟಿಯಸನು ತನ್ನ ಪ್ರಿಯಳಲ್ಲಿಗೆ ಅಡಿಗಡಿಗೆ ಹೋಗುತ್ತಲಿದ್ದುದೂ ಇವನು ಆ ರೂಪವತಿಯಾದ ಜೂಲಿಯಳಲ್ಲಿ ಮೋಹಪರವಶನಾಗಿರುವುದೂ ಮಾತ್ರವೇ ಈ ಸ್ನೇಹಿತರಲ್ಲಿ ಸರಿಬೀಳದ ವಿಷಯಗಳಾಗಿದ್ದುವು ಪ್ರೋಟಿಯಸನು ಮೋಹಪರವಶನಾಗಿರುವುದು ಮಾತ್ರವಲ್ಲದೆ ಯಾವಾಗಲೂ ತನ್ನ ಪ್ರಿಯಳಾದ ಜೂಲಿಯಳ ವಿಷಯವಾದ ಪ್ರಸ್ತಾಪಗಳನ್ನೇ ಮಾತನಾಡುತ್ತಿದುದು ವೆಲಂಟೈನನಿಗೆ ಕೇಳುವುದಕ್ಕೆ ಬೇಸರಿಕೆಯನುಂಟುಮಾಡುತ್ತಲಿತ್ತು. ಆದುದರಿಂದ ವೆಲಂಟೈನನು ನಗುನಗುತ್ತಲೆ ಅಜ್ಞಾನವೆಂಬ ಕತ್ತಲೆಯನ್ನು ಕವಿಸುವ ಮೋಹವನ್ನು ಕುರಿತು ಅಪಹಾಸ್ಯಮಾಡುತ್ತ ಪ್ರೇಮ ಪರವಶನಾದ ಪ್ರೋಟಿಯಸನ ಹಂಬಲಿಕೆ, ಆಸೆ ಮತ್ತು ಭೀತಿಗಳಿಂದ ತುಂಬಿದ ಜೀವಿತಕ್ಕಿಂತಲೂ ತನ್ನ ತೊಡಕ್ಕಿಲ್ಲದ ಸುಖಜೀವಿತವು ಬಹು ಹಿತವಾದುದೆಂದೂ ತನ್ನ ಮನಸ್ಸನ್ನು ಇಂಥಾ ಕೆಲಸಕ್ಕೆ ಬಾರದ ಕುತೂಹಲಗಳು ಎಂದಿಗೂ ಪ್ರವೇಶ ಮಾಡದಿರಲೆಂದೂ ಹೇಳುತ್ತಲಿದ್ದನು.

ಹೀಗಿರಲು ಒಂದುದಿನ ವೆಲಂಟೈನನು ತಾನು ಮೈಲಾನಿಗೆ ಹೋಗುವುದರಿಂದ ತಮ್ಮಿಬ್ಬರಿಗೂ ಕೆಲವುಕಾಲದ ಅಗಲಿಕೆಯಾಗುವುದೆಂದು ಹೇಳುವುದಕ್ಕಾಗಿ ಪ್ರೋಟಿಯಸನ ಬಳಿಗೆ ಬಂದನು. ಪ್ರೋಟಿಯಸನು ಮಿತ್ರನ ಅಗಲುವಿಕೆಯನ್ನು ಸಹಿಸಲಾರದೆ, ಹಲವುಬಗೆಯಾಗಿ ತರ್ಕಿಸಿದ

ನು. ಆದರೆ ವೆಲಂಟೈನನು—“ ಪ್ರಿಯನಾದ ಪ್ರೋಟಿಯುಸನೇ, ನನ್ನ ಪ್ರಯಾಣವನ್ನು ಸಮ್ಮತಿಸು. ನಾನು ಮೈಗಳ್ಳನಂತೆ ಮನೆಯಲ್ಲಿಯೇ ಇದ್ದುಕೊಂಡು ಸೋಮಾರಿತನದಿಂದ ನನ್ನ ಯೌವನಕಾಲವನ್ನು ವ್ಯರ್ಥಗೊಳಿಸಲಾರೆನು. ಮನೆಯಲ್ಲಿಯೇ ಸೇರಿಕೊಂಡಿರತಕ್ಕ ಯುವಕರಿಗೆ ಮನೆಯ ವಿಷಯವಾದ ತಿಳುವಳಿಕೆ ಮಾತ್ರ ಇರುತ್ತದೆ ನಿನ್ನ ಸನ್ಮಾನಿತಳಾದ ಜೂಲಿಯಳ ಮಧುರವಾದ ಕಡೆಗಣ್ಣೋಟದಿಂದ ನೀನು ಬಂಧಿಸಲ್ಪಡದಿದ್ದರೆ, ಲೋಕದಲ್ಲಿರುವ ಆಶ್ಚರ್ಯಕರವಾದ ನೋಟಗಳನ್ನು ನೋಡುವುದಕ್ಕಾಗಿ ನೀನು ನನ್ನೊಡನೇ ಬರಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತಿದ್ದೆನು. ಆದರೆ ನೀನು ಮೋಹಪರವಶನಾಗಿಯೂ ಪ್ರೇಮಲೋಲನಾಗಿಯೂ ಇರುವಿ. ನಿನ್ನ ವ್ಯಾಮೋಹವು ಫಲದಾಯಕವಾಗಲಿ ”

ಅವರಿಬ್ಬರು ತಮ್ಮ ದೃಢವಾದ ಸ್ನೇಹದ ಅನ್ಯೋನ್ಯಾನುರಾಗದ ಮಾತುಗಳನ್ನಾಡಿಕೊಳ್ಳುತ್ತ ಒಬ್ಬರನ್ನೊಬ್ಬರು ಅಗಲಿದರು. ಪ್ರೋಟಿಯಸನು—“ ಎಲೈ ಮಿತ್ರನಾದ ವೆಲಂಟೈನನೇ, ನಿನಗೆ ಶುಭವಾಗಲಿ, ಹೋಗಿ ಬಾ ನಿನ್ನ ದೇಶಸಂಚಾರದಲ್ಲಿ ಅಪೂರ್ವವಾದ ವಸ್ತುಗಳನ್ನು ಏನಾದರೂ ಕಂಡರೆ ನನ್ನನ್ನು ಜ್ಞಾಪಕಮಾಡಿಕೋ. ನಾನು ನಿನ್ನ ಸುಖಸಂವೃದ್ಧಿಯಲ್ಲಿ ಭಾಗಸ್ಥನೆಂದು ಹಾರೈಸು. ”

ಆ ದಿನವೇ ವೆಲಂಟೈನನು ಮೈಲಾನ್ ಕಡೆಗೆ ಪ್ರಯಾಣಹೊರಟನು. ಅವನು ಹೊರಡುತ್ತಲೆ ಇತ್ತ ಪ್ರೋಟಿಯುಸನು ತನ್ನ ಪ್ರಿಯಳಾದ ಜೂಲಿಯಳಿಗೆ ಕಾಗದ ಬರೆಯುವುದಕ್ಕಾಗಿ ಕುಳಿತು ಬರೆದು, ಆ ಕಾಗದವನ್ನು ಜೂಲಿಯಳಿಗೆ ಕೊಡುವಂತೆ ಅವಳ ಪರಿಚಾರಿಣಿಯಾದ ಲೂಸೆಟ್ಟಳ ವಶಕ್ಕೆ ಕೊಟ್ಟನು.

ಜೂಲಿಯಳನ್ನು ಪ್ರೋಟಿಯುಸನು ಪ್ರೀತಿಸುತ್ತಿದ್ದಂತೆಯೇ ಅವಳೂ ಇವನಲ್ಲಿ ಪ್ರೀತಿಯುಳ್ಳವಳಾಗಿದ್ದಳು. ಆದರೆ ಅವಳು ಗಾಂಭೀರ್ಯವಾದ ಮನೋಭಾವವುಳ್ಳವಳಾಗಿದ್ದಳು. ತನ್ನ ಅನುರಾಗವು ತನ್ನ ಪರಿಚಾರಿಣಿಯರಿಗೆ ತಿಳಿಯಬರುವುದು ತನ್ನ ಘನತೆಗೆ ಲೋಪವೆಂದು ಯೋಚಿಸಿದ್ದಳು. ಆದುದರಿಂದ ತಾನು ಪ್ರೋಟಿಯುಸನ ಪ್ರೇಮಾತಿಶಯವನ್ನು ಅರಿಯದಿರುವಂತೆ ತೋರ್ಪಡಿಸಿಕೊಂಡಳು. ಇದರಿಂದ ಆತನಿಗೆ ಅವಳನ್ನು ವರಿಸುವಂತೆ ಮಾಡುವುದರಲ್ಲಿ ಬಹು ಶ್ರಮವುಂಟಾಯಿತು.

ಲೂಸೆಟ್ಟಳು ಆ ಕಾಗದವನ್ನು ಜೂಲಿಯಳಿಗೆ ಕೊಡುವುದಕ್ಕೆ ಹೋದಾಗ ಅವಳದನ್ನು ತೆಗೆದುಕೊಳ್ಳಲೊಲ್ಲದೆ ಪ್ರೋಟಿಯಸನಿಂದ ಕಾಗದವನ್ನು ತೆಗೆದುಕೊಂಡು ಬಂದುದಕ್ಕಾಗಿ ಅವಳನ್ನು ಗದರಿಸಿ, ಕೊಠಡಿಯನ್ನು ಬಿಟ್ಟು ಹೊರಟುಹೋಗುವಂತೆ ಆಜ್ಞಾಪಿಸಿದಳು. ಆದರೆ ಆ ಪತ್ರದ ಬರವಣಿಗೆಯ ಅರ್ಥವೇನೆಂಬುದನ್ನು ನೋಡಬೇಕೆಂಬ ಬಯಕೆಯು ವಿಶೇಷವಾದುದರಿಂದ ಜಾಗ್ರತೆಯಲ್ಲೇ ಲೂಸೆಟ್ಟಳನ್ನು ಒಳಕ್ಕೆ ಕರೆದಳು. ಅವಳು ಒಳಕ್ಕೆ ಬರುತ್ತಲೇ—"ಈಗ ಗಂಟೆಯೆಷ್ಟು ?" ಎಂದು ಕೇಳಿದಳು ತನ್ನ ಒಡತಿಯು ಈಗ ಹೊತ್ತೆಷ್ಟಾಗಿದೆ ಎಂಬುದನ್ನು ಅರಿಯುವುದಕ್ಕಿಂತಲೂ ಆ ಪತ್ರವನ್ನು ನೋಡುವುದರಲ್ಲಿ ಹೆಚ್ಚಾದ ಕುತೂಹಲವುಳ್ಳವಳೆಂಬುವುದನ್ನು ಅವಳು ಬಲ್ಲವಳಾದುದರಿಂದ ಅವಳ ಮಾತಿಗೆ ಉತ್ತರ ಕೊಡುವುದಕ್ಕೆ ಬದಲಾಗಿ ಆ ತಿರಸ್ಕರಿಸಲ್ಪಟ್ಟ ಪತ್ರವನ್ನು ಪುನಃ ಕೊಟ್ಟಳು. ತಾನೇನನ್ನು ಬಯಸಿದಳೆಂಬುವುದನ್ನು ತನ್ನ ಪರಿಚಾರಿಣಿಯು ಅರಿತಂತೆ ನಡೆದುದಕ್ಕಾಗಿ ಜೂಲಿಯಳು ಕುಪಿತಳಾಗಿ ಆ ಕಾಗದವನ್ನು ಚೂರುಚೂರಾಗಿ ಹರಿದು, ನೆಲದ ಮೇಲೆ ಬಿಸುಟಳು.

ತನ್ನ ಭೃತ್ಯಳನ್ನು ಕೊಠಡಿಯಿಂದ ಹೊರಟು ಹೋಗೆಂದು ಇನ್ನೊಮ್ಮೆ ಆಜ್ಞಾಪಿಸಿದಳು. ಲೂಸೆಟ್ಟಳು ಹೊರಟು ಹೋಗುವಾಗ್ಗೆ, ಹರಿದುಹಾಕಿದ ಆ ಪತ್ರದ ಚೂರುಗಳನ್ನು ಆರಿಸಿಕೊಳ್ಳುವುದಕ್ಕಾಗಿ ನಿಂತಳು. ಆದರೆ ಅವುಗಳನ್ನು ಹಾಗೆ ಕಳೆದುಕೊಳ್ಳುವುದಕ್ಕೊಡಂಬಡದ ಜೂಲಿಯಳು ಸುಳ್ಳು ಸಿಟ್ಟಿನಿಂದ—"ಎಲೌ ! ದಾಸಿಯೇ, ಹೊರಟು ಹೋಗು. ಈ ಕಾಗದದ ಚೂರುಗಳಿಲ್ಲಿಯೇ ಬಿದ್ದಿರಲಿ. ನನ್ನ ಕೋಪವನ್ನು ಹೆಚ್ಚಿಸುವುದಕ್ಕಾಗಿ ಇವುಗಳನ್ನು ಜೋಡಿಸುವಿಯಾ ?" ಎಂದಳು.

ಜೂಲಿಯಳು ಆ ಕಾಗದವನ್ನು ಹೇಗೆ ಹರಿದುಹಾಕಿದಳೋ ಹಾಗೆಯೇ ಅವುಗಳನ್ನು ಜೋಡಿಸ ತೊಡಗಿದಳು. ಅವಳು ಮೊದಲು, "ವ್ಯಾಮೋಹದಿಂದ ಗಾಯಮಾಡಲ್ಪಟ್ಟ ಪ್ರೋಟಿಯಸ್" ಎಂಬ ಹೆಸರನ್ನು ಜೋಡಿಸಿ, ಇದಕ್ಕಾಗಿಯೂ ಅವಳು ಹೇಳಿದಂತೆ ಗಾಯಮಾಡಲ್ಪಟ್ಟ (ಹರಿದುಹಾಕಲ್ಪಟ್ಟ) ಕಾಗದದ ಚೂರುಗಳನ್ನು ಸೇರಿಸುವುದರಿಂದುಂಟಾದ ಇಂಥಾ ಪ್ರೇಮಪೂರ್ಣವಾದ ಮಾತುಗಳಿಗಾಗಿಯೂ ಶೋಕಿಸುತ್ತಾ, "ವ್ಯಾಮೋಹದಿಂದ ಗಾಯಮಾಡಲ್ಪಟ್ಟ ಪ್ರೋಟಿ

ಯಸ್ '' ನನ್ನನ್ನು ಉದ್ದೇಶಿಸಿ, ಆ ಕಾಗದದ ಚೂರುಗಳನ್ನು ಕುರಿತು ಮಾತನಾಡುತ್ತ ''ನಿಮಗಾಗಿರುವ ಗಾಯಗಳೆಲ್ಲಾ ಗುಣವಾಗುವ ವರೆಗೂ ನನ್ನ ಹೃದಯವೆಂಬ ಮಂಚದಲ್ಲಿ ನಿಮ್ಮನ್ನಿರಿಸುವೆನು. ನಾನು ನಿಮಗೆ ಮಾಡಿದ್ದ ದ್ರೋಹದ ಕ್ಷಮಾಪಣೆಗಾಗಿ ಪ್ರತಿಚೂರನ್ನೂ ಹಲವು ತಡವೆ ಮುತ್ತಿಡುವೆನು '' ಎಂದಳು.

ಈ ಪ್ರಕಾರವಾಗಿ ಆಕೆಯು ರಮಣೀಯಳಾದ ನಾರಿಯಂತೆ ಬಾಲ್ಯಾವಸ್ಥೆಗನುಗುಣವಾದ ಮಾತುಗಳನ್ನಾಡುತ್ತ ಆ ಚೂರುಗಳನ್ನೆಲ್ಲಾ ಸೇರಿಸಿದರೂ ಪೂರ್ಣತೆಯನ್ನು ಹೊಂದಿಸಲಾರದೆ, ಇನಿದಾದ ಪ್ರಣಯಸೂಚಕವಾದ ಆ ಪತ್ರವನ್ನು ನಾಶಗೊಳಿಸಿದ ತನ್ನ ಕೃತಘ್ನತೆಗಾಗಿ ಚಿಂತಾಕ್ರಾಂತಳಾಗಿ ಹಿಂದಿನವುಗಳಿಗಿಂತಲೂ ಅತ್ಯಂತ ದಯಾಪೂರ್ಣವಾದ ಕಾಗದವನ್ನು ಪ್ರೋಟಿಯಸನಿಗೆ ಬರೆದಳು.

ಆ ಅನುಗ್ರಹದ ಪತ್ರವನ್ನು ಪಡೆದುದರಿಂದ ಪ್ರೋಟಿಯಸನು ಆನಂದಭರಿತನಾಗಿ ಅದನ್ನು ಓದುತ್ತಾ, ''ಮಧುರವಾದ ವಿಶ್ವಾಸ, ಇನಿದಾದ ಪಙ್ಕ್ತಿಗಳು, ತೃಪ್ತಿಕರವಾದ ಜೀವಿತ'' ಎಂದು ಗಟ್ಟಿಯಾಗಿ ಹೇಳಿದನು. ಇವನು ಹೀಗೆ ಹರ್ಷಾವೇಶದಲ್ಲಿರುವಾಗ್ಗೆ ಇವನ ತಂದೆಯು ಬಂದನು. ಆ ವೃದ್ಧಮಹಾಶಯನು—''ಓ! ಹೊ! ಸುಕುಮಾರನೆ, ನೀನೇನು ಕಾಗದವನ್ನು ಓದುತ್ತಲಿದ್ದೀಯಾ?'' ಎಂದನು.

ಪ್ರೋಟಿಯಸ್—''ಜನಕನೇ, ಮೈಲಾನಿನಲ್ಲಿರುವ ನನ್ನ ಮಿತ್ರನಾದ ವೆಲಂಟೈನ್‌ನಿಂದ ಬಂದ ಕಾಗದವನ್ನು.''

ತಂದೆ—''ಎಲ್ಲಿ? ಇಲ್ಲಿ ಕೊಡು; ಸಮಾಚಾರವೇನು? ನೋಡೋಣ''

ಪ್ರೋಟಿಯಸನು ಬೆದರಿದವನಾಗಿ—''ತಂದೆಯೇ, ಅದರಲ್ಲಿ ವಿಶೇಷ ಸಮಾಚಾರವೇನೂ ಇಲ್ಲ. ಆದರೆ ತಾನು ಮೈಲಾನ್‌ನ ಡ್ಯೂಕಿನಿಂದ ಎಷ್ಟು ಪ್ರೀತಿಸಲ್ಪಡುತ್ತಿರುವನೆಂದೂ ಡ್ಯೂಕನು ತನಗೆ ಪ್ರತಿದಿನವೂ ಸನ್ಮಾನಗಳನ್ನು ಅನುಗ್ರಹಿಸುತ್ತಿರುವನೆಂದೂ ಅವನ ಕಷ್ಟಸುಖಗಳಲ್ಲಿ ಭಾಗಿಯಾದ ನಾನು ಆತನೊಡನೆ ಇರಬೇಕೆಂದು ಎಷ್ಟುಮಟ್ಟಿಗೆ ಬಯಸುತ್ತಿರುವನೆಂದೂ ಬರೆದಿದ್ದಾನೆ.''

ತಂದೆ—''ಅವನ ಬಯಕೆಯು ನಿನಗೆ ಹೇಗಿದೆ?''

ಪ್ರೋಟಿಯಸ್—''ಮಿತ್ರನ ಅಭಿಲಾಷೆಯಂತೆ ನಡೆಯಲಾರದ ಜನಕನ ಅಧೀನದಲ್ಲಿರುವವನಂತೆ'' ಎಂದನು.

ಸ್ವಲ್ಪಹೊತ್ತಿನ ಮುಂಚೆ ಪ್ರೋಟಿಯುಸನ ಜನಕನು ಈ ವಿಷಯವಾಗಿಯೇ ತನ್ನ ಸ್ನೇಹಿತನೊಡನೆ ಮಾತನಾಡುತಲಿದ್ದನು. ಆ ಗೆಳೆಯನು— "ಮಿತ್ರನೇ, ಅನೇಕರು ತಮ್ಮ ಕುವರರನ್ನು ದೇಶಾಂತರಗಳಲ್ಲಿ ಉದ್ಯೋಗ ವೃದ್ಧಿಯನ್ನು ಕಾಣುವುದಕ್ಕಾಗಿ ಕಳುಹಿಸುತ್ತಿರುವಲ್ಲಿ ನೀವು ಮಾತ್ರ ನಿಮ್ಮ ಕುವರನ ಯೌವನಕಾಲವು ಮನೆಯಲ್ಲಿಯೇ ವ್ಯರ್ಥವಾಗುವಂತೆ ಮಾಡಿ, ಅವನನ್ನು ಕಂಗೆಡಿಸುತ್ತಿರುವುದು ನನಗೆ ಬಹು ಆಶ್ಚರ್ಯಕರವಾಗಿದೆ ಕೆಲರು ರಣರಂಗಗಳಲ್ಲಿ ತಮ್ಮ ಅದೃಷ್ಟಗಳನ್ನು ಪರೀಕ್ಷಿಸುವುದಕ್ಕೂ ಕೆಲರು ದೂರದಲ್ಲಿರುವ ದ್ವೀಪಗಳನ್ನು ಕಂಡುಹಿಡಿಯುವುದಕ್ಕೂ ಕೆಲರು ಅನ್ಯ ದೇಶಗಳ ಸಕಲ ವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುವುದಕ್ಕೂ ಕಳುಹಿಸಲ್ಪಟ್ಟಿದ್ದಾರೆ. ನಿಮ್ಮ ಕುವರನ ಗಳೆಯನಾದ ವೆಲಂಟೈನನು ಮೈಲಾರ್‌ಡ್ಯೂಕಿನ ಆಸ್ಥಾನಕ್ಕೆ ಹೋಗಿರುವನು ತಮ್ಮ ಕುವರನೂ ಇವುಗಳಲ್ಲಿ ಯಾವುದಕ್ಕಾದರೂ ಅರ್ಹನಾಗಿದ್ದಾನೆ. ಯೌವನದಲ್ಲಿ ದೇಶ ಸಂಚಾರಮಾಡದಿರುವುದು ವಾರ್ಧಿಕದಲ್ಲಿ ಅವನಿಗೆ ಅತ್ಯಂತ ನಷ್ಟಕ್ಕೆ ಕಾರಣವಾಗುವುದು" ಎಂದನು. ಪ್ರೋಟಿಯುಸನ ಜನಕನು ತನ್ನ ಮಿತ್ರನ ಹಿತಚಿಂತನೆಯು ಪ್ರಯೋಜನಕರವಾದುದೆಂದು ಯೋಚಿಸಿದನು. ವೆಲಂಟೈನನು ತನ್ನನ್ನು ಜೊತೆಯಲ್ಲಿರಬೇಕೆಂಬ ಅಭಿಲಾಷೆಯುಳ್ಳವನಾಗಿದ್ದಾನೆಂದು ಪ್ರೋಟಿಯುಸನು ಹೇಳಿದುದನ್ನು ಕೇಳಿ, ತಕ್ಷಣದಲ್ಲಿಯೇ ತನ್ನ ಕುವರನನ್ನು ಮೈಲಾರ್‌ಗೆ ಕಳುಹಿಸಲು ದೃಢಸಂಕಲ್ಪಮಾಡಿದನು. ತನ್ನ ಆಜ್ಞೆಗೆ ಕಾರಣವೇನೆಂದು ಕುರಿತ ವಿಚಾರಕ್ಕಿಷ್ಟಪಡದ, ಖಂಡಿತಗಾರನಾದ ಈ ವೃದ್ಧನು ತನ್ನ ಪ್ರಕೃತಿಗನುಗುಣವಾಗಿ— "ಎಲೈ! ಕುವರನೇ, ನಿನ್ನ ಮಿತ್ರನಾದ ವೆಲಂಟೈನನ ಅಪೇಕ್ಷೆಯೇ ನನ್ನ ಅಭಿಮತ" ಎಂದನು. ಇದರಿಂದ ತನ್ನ ಕುವರನು ಆಶ್ಚರ್ಯಭರಿತನಾಗಿರುವುದನ್ನು ಕಂಡು — "ನಾನು ನಿನ್ನನ್ನು ಕೆಲವು ಕಾಲ ಮೈಲಾರ್‌ಡ್ಯೂಕನ ಆಸ್ಥಾನದಲ್ಲಿರಿಸಬೇಕೆಂದು ನಿಷ್ಕರ್ಷೆಮಾಡಿರುವುದಕ್ಕಾಗಿ ಆಶ್ಚರ್ಯಭರಿತನಾಗಬೇಡ. ಏಕೆಂದರೆ, ನನ್ನಭಿಲಾಷೆಗೆ ಬಂದುದನ್ನು ಖಂಡಿತವಾಗಿಯೂ ಮಾಡುವೆನು. ನಾಳೆಯೇ ಪ್ರಯಾಣ ಹೊರಡಲು ಸಿದ್ಧನಾಗು. ನಾನು ಖಂಡಿತಗಾರನಾದುದರಿಂದ ಏನೂ ನೆಪಗಳನ್ನು ತರಬೇಡ" ಎಂದನು.

ಸ್ಥಿರ ಸಂಕಲ್ಪವುಳ್ಳ ತನ್ನ ತಂದೆಯೊಡನೆ ಈ ವಿಷಯದಲ್ಲಿ ಆಕ್ಷೇಪಣೆಗಳನ್ನು ಮಾಡುವುದರಿಂದೇನೂ ಫಲವಿಲ್ಲವೆಂದು ಪ್ರೋಟಿಯುಸನಿಗೆ

ತಿಳಿದಿತ್ತು. ಜೂಲಿಯಳ ಕಾಗದದ ವಿಚಾರವಾಗಿ ಇವನು ಆಡಿದ ಸುಳ್ಳು ಮಾತಿನಿಂದ ಅವಳ ಅಗಲುವಿಕೆಯ ದುಃಖಾನುಭವಕ್ಕೆ ಕಾರಣವಾಯಿತೆಂದು ತನ್ನ ಸುಳ್ಳಿಗಾಗಿ ತನ್ನನ್ನು ನಿಂದಿಸಿಕೊಂಡನು. ಬಹುಕಾಲದ ವರೆಗೆ ತನ್ನ ನಲ್ಲನಾದ ಪ್ರೋಟಿಯುಸನನ್ನು ಅಗಲಿರಬೇಕಾದ ಸಂಗತಿಯು ಜೂಲಿಯಳಿಗೆ ತಿಳಿಯಿತು. ಅವಳು ಹೆಚ್ಚು ಹೊತ್ತು ಉದಾಸೀನತೆಯನ್ನು ತೋರ್ಪಡಿಸಿಕೊಳ್ಳಲಿಲ್ಲ. ಇಬ್ಬರೂ ತಮ್ಮ ಪ್ರೇಮಾತಿಶಯಗಳನ್ನೂ ಅಚಂಚಲವಾದ ಅನುರಾಗವನ್ನೂ ಪ್ರಮಾಣ ಪೂರ್ವಕವಾಗಿ ಹೇಳಿಕೊಳ್ಳುತ್ತ ಕಣ್ಣೀರುಹಾಕುತ್ತ ಪರಸ್ಪರ ಶುಭವನ್ನು ಹಾರೈಸುತ್ತ ಅಗಲಿದರು. ಇಬ್ಬರೂ ತಮ್ಮ ಅಂಗುಳೀಯಕಗಳನ್ನು ಬದಲು ಮಾಡಿಕೊಂಡು, ಒಬ್ಬರೊಬ್ಬರ ಜ್ಞಾಪಕಾರ್ಥವಾಗಿ ಅವುಗಳನ್ನು ಧರಿಸಿಕೊಂಡಿರುವುದಾಗಿ ವಾಗ್ದಾನಮಾಡಿದರು. ಈ ಪ್ರಕಾರವಾಗಿ ಪ್ರೋಟಿಯುಸನು ಶೋಕಾಕ್ರಾಂತನಾಗಿ ತನ್ನಿನಿಯಳಿಂದ ಅನುಮತಿಯನ್ನು ಪಡೆದು, ತನ್ನ ಗೆಳೆಯನಾದ ವೆಲಂಟೈನನು ವಾಸವಾಗಿರುವ ಮೈಲಾನ್‌ನಿಗೆ ಪ್ರಯಾಣೋನ್ಮುಖನಾದನು. ಮೈಲಾನ್‌ಡ್ಯೂಕಿನಿಂದ ತಾನು ಸನ್ಮಾನಿತನಾಗಿರುವುದಾಗಿ ವೆಲಂಟೈನನು ಬರೆದಿದ್ದಾನೆಂದು ಪ್ರೋಟಿಯುಸನು ತನ್ನ ತಂದೆಗೆ ಸುಳ್ಳುಹೇಳಿದ್ದನಷ್ಟೆ. ಆದರೆ ದಿಟವಾಗಿಯೂ ಮೈಲಾನ್‌ಡ್ಯೂಕಿಗೆ ವೆಲಂಟೈನ್ನಲ್ಲಿ ಬಹು ದಯೆಯಿತ್ತು. ಆದರೆ ವೆಲಂಟೈನನು ಆಶೆಯ ಹಂಬಲಿಕೆಯುಳ್ಳ ಭೀತಿಯಿಂದ ಕೂಡಿದ ಜೀವಿತಕ್ಕಿಂತಲೂ ತನ್ನ ತೊಡಕಿಲ್ಲದ ಸುಖಜೀವಿತವು ಮೇಲಾದುದೆಂದು ಹೇಳುತ್ತಲಿದ್ದ ಅಹಂಕಾರದ ಮಾತುಗಳನ್ನು ತ್ಯಜಿಸಿ, ಅವನೂ ವ್ಯಾಮೋಹಗ್ರಸ್ತನಾಗಿರುವ ಸಂಗತಿಯು ಪ್ರೋಟಿಯುಸನಿಗೆ ಕನಸಿನಲ್ಲಿಯೂ ತಿಳಿದಿರಲಿಲ್ಲ.

ವೆಲಂಟೈನ್‌ನಲ್ಲಿ ಈ ರೀತಿಯಾಗಿ ಆಶ್ಚರ್ಯಕರವಾದ ವ್ಯತ್ಯಾಸವನ್ನುಂಟುಮಾಡಿದವಳು ಮೈಲಾನಿನ ಡ್ಯೂಕಿನ ಮಗಳಾದ ಸೆಲ್ವಿಯ ಎಂಬ ನಾರೀಮಣಿಯು. ಅವಳೂ ಇವನಲ್ಲಿ ಅನುರಕ್ತಳಾಗಿದ್ದಳು. ಡ್ಯೂಕನು ವೆಲಂಟೈನನಲ್ಲಿ ಬಹು ದಯೆಯನ್ನು ತೋರಿಸುತ್ತ, ಅವನನ್ನು ಪ್ರತಿದಿನವೂ ಅರಮನೆಗೆ ಕರೆಸಿಕೊಳ್ಳುತ್ತಿದ್ದಾಗ್ಯೂ, ತನ್ನ ಕುವರಿಯನ್ನು ಥ್ಯೂರೋ ಎಂಬೊಬ್ಬ ಐಶ್ವರ್ಯವಂತನಿಗೆ ಕೊಟ್ಟು ಮದುವೆಮಾಡಬೇಕೆಂದು ಉದ್ದೇಶಿಸಿದ್ದ ಕಾರಣ, ಇವರು ತಮ್ಮ ಪರಸ್ಪರಾನುರಾಗವನ್ನು ಡ್ಯೂಕಿನ ತಿಳುವಳಿಕೆಗೆ ಮರೆಯಾಗಿಟ್ಟಿದ್ದರು. ವೆಲಂಟೈನನಿಗಿದ್ದ ತಿಳುವಳಿಕೆ, ಮನೋಹ

ರವಾದ ಗುಣ ಇವುಗಳಲ್ಲಿ ಒಂದೂ ಥ್ಯೂರೋವಿನಲ್ಲಿಲ್ಲದ ಕಾರಣ ದಿಂದ ಸೆಲ್ವಿಯಳು ಅವನನ್ನು ತಿರಸ್ಕರಿಸುತ್ತಿದ್ದಳು.

ಈ ಸ್ಪರ್ಧೆಗಾರರಾದ ಇಬ್ಬರೂ ಒಂದು ತಡವೆ ಸೆಲ್ವಿಯಳ ದರ್ಶನಕ್ಕಾಗಿ ಹೋಗಿರುವಾಗ ಥ್ಯೂರೋವು ಆಡುತ್ತಲಿದ್ದ ಮಾತುಗಳನ್ನು ವೆಲಂಟೈನನು ಪರಿಹಾಸ್ಯಮಾಡುತ್ತ, ಸೆಲ್ವಿಯಳನ್ನು ವಿನೋದಪಡಿಸುತ್ತಿದ್ದನು. ಹೀಗಿರುವಲ್ಲಿ ಡ್ಯೂಕನು ಅಲ್ಲಿಗೆ ಬಂದು, ವೆಲಂಟೈನನ ಸ್ನೇಹಿತನಾದ ಪ್ರೋಟಿಯುಸನ ಬರುವಿಕೆಯ ಸಂತೋಷವಾರ್ತೆಯನ್ನು ಅವನಿಗೆ ಹೇಳಿದನು.

ವೆಲಂಟೈನ್—"ನಾನು ಬಯಸುತ್ತಿದುದೇ ಅವನ ಸಂದರ್ಶನ; ಪ್ರಭುವೇ, ನಾನು ನನ್ನ ವಯಸ್ಸನ್ನು ಮೈಗಳ್ಳತನದಿಂದ ವ್ಯರ್ಥಮಾಡಿ ಕೊಂಡಿದ್ದಾಗ್ಯೂ ಸಕಲ ಮಹಾಗುಣಾನ್ವಿತನಾದ ಮಿತ್ರನನ್ನುಂಟಾಗಿರುವೆನು."

ಡ್ಯೂಕ್ —"ಹಾಗಾದರೆ ಅವನ ಅರ್ಹತೆಗನುಗುಣವಾಗಿ ಅವನನ್ನು ಉಪಚಾರದಿಂದ ಸ್ವೀಕರಿಸಿರಿ. ಕುವರಿಯೇ, ನಾನು ಹೇಳಿದುದು ನಿನಗೆ ಮತ್ತು ಥ್ಯೂರೋವಿಗೆ ವೆಲಂಟೈನನಿಗೆ ಈ ವಿಚಾರವಾಗಿ ಹೇಳಬೇಕಾದುದೇ ಇಲ್ಲ" ಎಂದನು.

ಪ್ರೋಟಿಯುಸನ ಆಗಮನವು ಇವರ ಮಾತು ಕಥೆಗಳಿಗೆ ಅಡಚಣೆಯನ್ನುಂಟುಮಾಡಿತು. ವೆಲಂಟೈನನು—"ಎಲೈ, ಗುಣವಂತಳಾದ ಸೆಲ್ವಿಯಾ! ನನ್ನ ಜೊತೆಗಾರನಾದ ಇವನನ್ನು ನನ್ನಂತೆಯೇ ತಮ್ಮ ಭೃತ್ಯತ್ವಕ್ಕೆ ಅಂಗೀಕರಿಸಿರಿ" ಎಂದು ಪ್ರೋಟಿಯುಸನನ್ನು ಆಕೆಗೆ ಪರಿಚಯ ಮಾಡಿಸಿದನು. ಅಲ್ಲಿಂದ ಇವರು ಹೊರಟನಂತರ, ಇವರಿಬ್ಬರೇ ಇರುವಾಗ್ಗೆ ವೆಲಂಟೈನನು ಪ್ರೋಟಿಯುಸನನ್ನು ಕುರಿತು—"ಮಿತ್ರನೇ, ಊರಿನಲ್ಲಿ ಎಲ್ಲರೂ ಕುಶಲದಿಂದಿರುವರೇ! ನಿನ್ನ ಪ್ರಿಯೆಯು ಸುಖವಾಗಿದ್ದಾಳೆಯೆ? ನಿಮ್ಮ ಪ್ರೇಮವು ವೃದ್ಧಿ ಹೊಂದುತ್ತಲಿದೆಯೆ!" ಎಂದನು.

ಪ್ರೋಟಿಯುಸ್—"ಸಖನೇ, ಊರಿನಲ್ಲಿ ನಮ್ಮ ಮಿತ್ರರೆಲ್ಲರೂ ಕುಶಲದಿಂದಿದ್ದಾರೆ ನನ್ನ ಪ್ರಣಯ ವಿಚಾರವಾದ ಕಥೆಗಳು ನಿನಗೆ ಆಯಾಸವನ್ನು ಉಂಟುಮಾಡುತ್ತಲಿದ್ದುವು. ಆ ವಿಚಾರವಾದ ಮಾತಿನಲ್ಲಿ ನಿನಗೆ ಆದರಣೆಯಿಲ್ಲವೆಂಬುದನ್ನು ನಾನು ಬಲ್ಲೆನು."

ವೆಲಂಟೈನ್—"ಮಿತ್ರನೇ, ದಿಟ; ಆದರೆ ಆ ಜನ್ಮವು ಈಗ ಬದಲಾಗಿದೆ. ಮನ್ಮಥನು, ನಾನು ಮಾಡಿದ ತಿರಸ್ಕಾರಕ್ಕಾಗಿ ಹಗೆ ತೀರಿಸಿ

ಕೊಳ್ಳಲು ಈಗ ನನ್ನ ಎಳೆಯಲ್ಪಟ್ಟ ನಯನಗಳ ನಿದ್ರೆಯನ್ನು ಬೇಟೆಯಾಡಿ, ಅವುಗಳನ್ನು ನನ್ನ ಹೃದಯದ ಶೋಕಕ್ಕೆ ಕಾವಲುಗಾರರನ್ನಾಗಿ ಮಾಡಿದ್ದಾನೆ. ಗುಣವಂತನಾದ ಪ್ರೋಟಿಯಸನೇ, ನನ್ನನ್ನು ಹೀಗೆ ದೀನನನ್ನಾಗಿ ಮಾಡಿದ ಮಾರನಿಗಿಂತಲೂ ಶೂರನಿಲ್ಲ. ಅವನ ಶಿಕ್ಷೆಗಿಂತಲೂ ಲೋಕದಲ್ಲಿ ಕ್ರೂರವಾದುದು ಇನ್ನೊಂದಿಲ್ಲ. ಅವನ ಸೇವೆಗಿಂತಲೂ ಮಿಗಿಲಾದ ಸಂತೋಷವೇ ಇಲ್ಲ. ಈಗ ನಾನು ಪ್ರಣಯ ವಿಚಾರವನ್ನುಳಿದ ಸಲ್ಲಾಪಗಳಾವುವನ್ನೂ ಕೇಳಲೊಲ್ಲೆನು. ಅನುರಾಗದ ನಾಮ ಶ್ರವಣಮಾತ್ರದಿಂದ ನಾನು ಆಹಾರ ನಿದ್ರೆಗಳನ್ನೆಲ್ಲಾ ಪರಿತ್ಯಜಿಸ ಬಲ್ಲೆನು '' ಎಂದನು.

ವ್ಯಾಮೋಹವು ತನ್ನ ಮನಸ್ಸಿನಲ್ಲಿ ಉಂಟುಮಾಡಿರುವ ಬದಲಾವಣೆಗಳನ್ನು ವೆಲಂಟೈನನು ಒಪ್ಪಿಕೊಂಡುದು ಅವನ ಸ್ನೇಹಿತನಾದ ಪ್ರೋಟಿಯಸನಿಗೆ ದೊಡ್ಡ ಜಯೋತ್ಸವವಾಗಿತ್ತು.

ಪ್ರೋಟಿಯಸ್—'' ಮಿತ್ರನೇ, ನಿನ್ನ ದೃಷ್ಟಿಯಿಂದಲೇ ನಿನ್ನ ಸ್ಥಿತಿಯನ್ನರಿತೆನು. ಆ ಮೂರ್ತಿಯಲ್ಲವೇ, ನಿನ್ನಿಂದ ಆರಾಧಿಸಲ್ಪಟ್ಟವಳು ? ''

ವೆಲಂಟೈನ್—'' ಸಖನೇ, ದಿಟ; ಆಕೆಯು ಅಪ್ಸರಸ್ತ್ರೀಯಲ್ಲವೆ ? ''

ಪ್ರೋಟಿಯಸ್— '' ಅಲ್ಲವಯ್ಯಾ, ಅಲ್ಲ. ಆಕೆಯು ರೂಪವತಿಯಾದ ನಾರಿ. ನಾನು ಮೃಷಾಸ್ತುತಿ ಮಾಡಲೊಲ್ಲೆನು.''

ವೆಲಂಟೈನ್—ಹಾಗೆನ್ನಬೇಡ, ಏಕೆಂದರೆ ಅನುರಾಗವು ಹೊಗಳುವಿಕೆಯಿಂದ ಹಿಗ್ಗುತ್ತದೆ.

ಪ್ರೋಟಿಯಸ್— '' ಮಿತ್ರನೇ, ನಾನು ಹೀಗೆಯೇ ಬೇನೆಪಡುತ್ತಿರುವಾಗ್ಗೆ ನೀನು ಔಷಧವನ್ನು ಕೊಡುತ್ತಿರಲಿಲ್ಲವೇ ? ನಾನು ಅವುಗಳನ್ನು ಈಗ ನಿನಗೆ ಕೊಡಬೇಕಾಗಿದೆ.''

ವೆಲಂಟೈನ್—'' ಹಾಗಾದರೆ ಅವಳ ವಾಸ್ತವವಾದ ರೂಪಲಾವಣ್ಯಗಳೆಂಥವು, ಹೇಳು. ಅವಳು ಅಪ್ಸರಸ್ತ್ರೀಯಲ್ಲದಿದ್ದರೆ ಚಿಂತೆಯಿಲ್ಲ. ಈ ಲೋಕದ ಸಮಸ್ತ ನಾರೀಮಣಿಯರಿಗೂ ಸೌಂದರ್ಯಚಕ್ರವರ್ತಿನಿಯಾಗಿದ್ದಾಳೆಂಬ ಪ್ರಾಮುಖ್ಯತೆಯು ಅವಳದಾಗಿರಲಿ.''

ಪ್ರೋಟಿಯಸ್—ನನ್ನ ಪ್ರಿಯಳ ವಿನಾ.''

ವೆಲಂಟೈನ್—"ಅವಳ ಸೌಂದರ್ಯವನ್ನು ಹೋಲಿಸಲು ಏನಾ ಎಂಬುದೇ ಇಲ್ಲ."

ಪ್ರೋಟಿಯಸ್—"ನನ್ನ ಪ್ರಿಯಳ ಪ್ರಾಶಸ್ತ್ಯವನ್ನು ಶ್ಲಾಘಿಸಲು ನನಗೆ ಕಾರಣವೇ ಇಲ್ಲವೇ ?"

ವೆಲಂಟೈನ್—"ಸಖನೇ, ಆಕೆಯ ಪ್ರಾಶಸ್ತ್ಯಸ್ಥಾಪನೆಯಲ್ಲಿ ನಾನು ನಿನಗೆ ಸಹಾಯಮಾಡುವೆನು. ಈ ಸನ್ಮಾನದ ಶ್ಲಾಘನೆಗಿಂತಲೂ ಇನ್ನೊಂದೇನಿದೆ ? ಆಕೆಗೆ ನನ್ನ ಪ್ರಿಯೆಯ ಭೂಮಿಯನ್ನು ಮುಟ್ಟುವ ಸೆರಗಿನಾಸರೆಯಿಂದ ಭೂಮಿಯು ಅವಳನ್ನು ಮುತ್ತಿಟ್ಟುಕೊಳ್ಳದಿರುವಂತೆ ಮಾಡುವುದಕ್ಕಾಗಿ ಆ ಸೆರಗನ್ನು ನಿನ್ನ ಪ್ರಿಯೆಯು ಹೊತ್ತುಕೊಂಡಿರಲಿ."

ಪ್ರೋಟಿಯಸ್– "ಸಖನೇ, ವೆಲಂಟೈನ್, ಇದಾವತರದ ಜಂಭಗಾರತನವಯ್ಯಾ ?"

ವೆಲಂಟೈನ್—"ಮಿತ್ರನೇ ! ಕ್ಷಮಿಸು. ನಾನು ಅವಳ ವಿಷಯದಲ್ಲಿ ಏನು ಹೇಳಲಿ ! ಅವಳ ಶ್ರೇಷ್ಠತೆಯ ಎದುರಿನಲ್ಲಿ ಇತರ ರೂಪವತಿಯರು ಏತಕ್ಕೂ ಬೇಡ. ಅವಳು ಅದ್ವಿತೀಯಳಯ್ಯಾ !"

ಪ್ರೋಟಿಯಸ್—"ಹಾಗಾದರೆ ಅವಳು ಅದ್ವಿತೀಯಳಾಗಿಯೇ ಇರಲಿ. (ಅವಿವಾಹಿತಳಾಗಿಯೇ ಇರಲಿ.)"

ವೆಲಂಟೈನ್—"ಗುಣರೂಪಗಳಲ್ಲಿ ಅವಳು ಅದ್ವಿತೀಯಳಾಗಿ ನನಗೆ ದ್ವಿತೀಯಳಾಗಿದ್ದಾಳೆ. ಅಮೌಲ್ಯವಾದ ನಾರೀ ರತ್ನವನ್ನು ಪಡೆದಿರುವ ನನಗೆ ನೀರು ಅಮೃತವಾಗಿಯೂ ಮರಳೆಲ್ಲಾ ಮುತ್ತುಗಳಾಗಿಯೂ ಬಂಡೆಗಳೆಲ್ಲಾ ಶುದ್ಧ ಸುವರ್ಣವಾಗಿಯೂ ಇರುವ ಇಪ್ಪತ್ತು ಸಮುದ್ರಗಳನ್ನುಂಟಾಗಿರುವಂತಾಗಿದೆ. ನಾನು ನನ್ನ ವ್ಯಾಮೋಹದಿಂದ ಅರಿವು ಮರೆವಾಗಿರುವುದರಿಂದ ನಿನ್ನನ್ನು ಕನಸಿನಲ್ಲಿಯೂ ನೋಡುವುದಿಲ್ಲ. ಸ್ಥಿತಿಗತಿಗಳುಳ್ಳ ಕಾರಣದಿಂದ ಆಕೆಯ ತಂದೆಗೆ ಪ್ರೀತಿಪಾತ್ರನಾದ ಕೆಲಸಕ್ಕೆ ಬಾರದ ನನ್ನ ಪ್ರತಿಕಕ್ಷಿ ಥ್ಯೂರೋವು ಆಕೆಯೊಡನೆ ಹೋಗಿದ್ದಾನೆ. ನಾನೂ ಹಿಂಬಾಲಿಸಬೇಕು ಏಕೆಂದರೆ ವ್ಯಾಮೋಹವು ವಿಶೇಷ ಮಾತ್ಸರ್ಯವುಳ್ಳದೆಂದು ನೀನು ಬಲ್ಲಿಯಷ್ಟೆ ?"

ಪ್ರೋಟಿಯಸ್—"ಅವಳು ನಿನ್ನನ್ನು ಪ್ರೀತಿಸುತ್ತಾಳೆಯೆ ?"

ವೆಲಂಟೈನ್—"ಸಂದೇಹವೇಕೆ ? ಇಬ್ಬರೂ ಪರಸ್ಪರಾನುರಕ್ತರಾಗಿದ್ದೇವೆ. ಅಷ್ಟೇ ಅಲ್ಲ, ನಮ್ಮ ವಿವಾಹಮುಹೂರ್ತವು ನಾವಿಲ್ಲಿಂದ

ಪಲಾಯನಮಾಡಿದೊಡನೆಯೇ ಎಂದು ನಿಷ್ಕರ್ಷಿಸಲ್ಪಟ್ಟಿದೆ. ನೂಲೇಣಿಯಿಂದ ನಾನವಳ ಅಂತಃಪುರದ ಗವಾಕ್ಷಿಯನ್ನು ಏರಬೇಕೆಂಬುದೇ ಮೊದಲಾದ ಎಲ್ಲಾ ಉಪಾಯಗಳೂ ಯೋಚಿಸಲ್ಪಟ್ಟಿವೆ ಗುಣವಂತನಾದ ಪ್ರೋಟಿಯಸನೇ, ಈ ವಿಚಾರದಲ್ಲಿ ನಿನ್ನ ಮಂತ್ರಾಲೋಚನೆಗಳನ್ನು ಹೇಳಲು ದಯಮಾಡಿ ನನ್ನೊಡನೆ ನನ್ನ ಏಕಾಂತಗೃಹಕ್ಕೆ ಬಾ ''

ಪ್ರೋಟಿಯಸ್—" ವೆಲಂಟೈನ್, ನೀನು ಮುಂದೆ ಹೊರಡು. ನಾನು ಹಿಂದಿನಿಂದ ಈ ವಿಚಾರವನ್ನು ನೋಡಿಕೊಳ್ಳುವೆನು. ಕೆಲವು ಪದಾರ್ಥಗಳನ್ನು ಹಡಗಿನಿಂದಿಳಿಸಿಕೊಳ್ಳುವುದಕ್ಕೆ ನಾನು ಅವಶ್ಯಕವಾಗಿ ಹೋಗಬೇಕಾಗಿದೆ ಆ ಮೇಲೆ ನಾನು ನಿನ್ನ ಬಳಿಗೆ ಬರುವೆನು.''

ವೆಲಂಟೈನ್—" ಜಾಗ್ರತೆ ಬರುವಿಯಾ ? " (ಹೋಗುವನು)

ಪ್ರೋಟಿಯಸ್—" ಬರುವೆನು.''

ವೆಲಂಟೈನ್ನಲ್ಲಿ ಉಂಟಾಗಿರುವ ಮನೋಭಾವದ ವ್ಯತ್ಯಾಸವನ್ನು ಕುರಿತು ಇವರು ಮಾತನಾಡುತ್ತಿರುವಾಗಲೇ ಆ ಲೋಕೈಕವೀರನಾದ ಕಾಮದೇವನು ಪ್ರೋಟಿಯಸನ ಹೃದಯದಲ್ಲಿಯೂ ಕೆಲಸ ಮಾಡುತ್ತಲಿದ್ದನು.

ಈ ವರೆಗೆ ನಿಜವಾದ ವಿಶ್ವಾಸ ಸಂಪೂರ್ಣತೆಯ ಸ್ನೇಹಗಳಲ್ಲಿ ಭಾಗಿಯಾಗಿದ್ದ ಪ್ರೋಟಿಯಸನು ಸಿಲ್ವಿಯಳ ಕ್ಷಣಕಾಲದ ದರ್ಶನದಿಂದ ಕಪಟಮಿತ್ರನಾದನು. ಸಿಲ್ವಿಯಳ ಮೊದಲಿನ ನೋಟದಲ್ಲಿಯೇ ಅವನಿಗೆ ಜೂಲಿಯಳಲ್ಲಿದ್ದ ಅನುರಾಗವೆಲ್ಲವೂ ಕನಸಿನಂತೆ ಅದೃಶ್ಯವಾಯಿತು. ವೆಲಂಟೈನ್ನಲ್ಲಿ ತನಗಿರುವ ದೀರ್ಘಕಾಲದ ಸ್ನೇಹವು ಕೂಡ ಅವನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಲು ಆತಂಕವನ್ನುಂಟುಮಾಡಲಿಲ್ಲ.

ಪ್ರೋಟಿಯಸನು ಹೇಳಿದಂತೆ ಒಂದು ಶಾಖವು ಮತ್ತೊಂದು ಶಾಖವನ್ನು ದೂರಮಾಡುವಂತೆಯೂ ಒಂದು ಮೊಳೆಯನ್ನು ಇನ್ನೊಂದು ಮೊಳೆಯು ಒಳಕ್ಕೆ ಇಳಿಸುವಂತೆಯೂ ಸಮೀಪಸ್ಥಿತವಾದ ಒಂದು ರೂಪದಿಂದ ಅವನ ಮೊದಲಿನ ಪ್ರೀತಿಪಾತ್ರಳು ಮರೆಯಲ್ಪಟ್ಟಳು. ಜೂಲಿಯಳು ಇವನ ಭಾಗಕ್ಕೆ ಅಗ್ನಿಯ ಬಳಿಯ ಅರಗುಬೊಂಬೆಯಂತಾದಳು. ಸ್ವಭಾವತಃ ಒಳ್ಳೇ ಗುಣಗಳುಳ್ಳ ಜನರ ಮನಸ್ಸೂ ಕೂಡ ವ್ಯಾಮೋಹದ ಮಾಟದಿಂದೀರೀತಿಯಾಗುವುದು ನೈಜವಾಗಿದ್ದರೂ ಪ್ರೋಟಿಯಸನು ಜೂಲಿಯಳನ್ನು ಪರಿತ್ಯಜಿಸುವುದಕ್ಕಿಂತ ಮುಂಚೆ " ಏನು ! ಜೂಲಿಯಳು

ರೂಪವತಿಯಲ್ಲವೆ? ಗುಣವತಿಯಲ್ಲವೆ? ಛಿ! ಛಿ! ಜೂಲಿಯಳಿಗಿಂತಲೂ ಸಿಲ್ವಿಯಳು ಅಧಿಕ ರೂಪಲಾವಣ್ಯವತಿಯೆಂದು ಭಾವಿಸಲು ನನ್ನ ಕಣ್ಣುಗಳೇ ಕಾರಣವೊ? ಅಥವಾ ವೆಲಂಟೈನನ ಶ್ಲಾಘನೆಯೇ ಕಾರಣವೊ? ಅವಳಿಗೆ ನಾನು ಮಾಡಿಕೊಟ್ಟ ಪ್ರಣಯ ಪ್ರತಿಜ್ಞೆಗಳನ್ನು ಈಗ ಭಂಗಗೊಳಿಸುವುದು ಧರ್ಮವೆ? ಬಾಲ್ಯಾರಭ್ಯ ಮಿತ್ರನಾದ ವೆಲಂಟೈನನ್ನು ವಂಚಿಸುವುದು ನ್ಯಾಯವೆ?'' ಎಂಬಿವೇ ಮೊದಲಾದ ಬಹು ಸಂಶಯಗಳಿಂದ ತನ್ನಲ್ಲೇ ತಾನು ಜಿಜ್ಞಾಸಿಸುತ್ತ ಕೊನೆಗೆ ಮೋಹಾಂಧತೆಯಿಂದ ತನಗೆ ಅಸೌಖ್ಯಪ್ರದವಾದ ವ್ಯಾಮೋಹ ವಿಷಯದಲ್ಲಿ ಸ್ವಲ್ಪವೂ ಪಶ್ಚಾತ್ತಾಪಗೊಳ್ಳದೆ ವೆಲಂಟೈನನಿಗೆ ಪ್ರತಿಕೂಲನಾದನು.

ಪ್ರೋಟಿಯಸನು ತನ್ನ ನಂಬುಗೆಯುಳ್ಳ ಸ್ನೇಹಿತನ ಅತಿಪ್ರಿಯವಾದ ಗುಟ್ಟುಸಂಗತಿಯನ್ನು ಕೇಳಿದನಂತರ ಡ್ಯೂಕಿನ ಬಳಿಗೆ ಹೋಗಿ ಈ ಕಥೆಯನ್ನು ಆಮೂಲಾಗ್ರವಾಗಿ ಅರುಹಬೇಕೆಂದು ನಿಷ್ಕರ್ಷಿಸಿಕೊಂಡನು. ಒಡನೆಯೇ ಆತನ ಬಳಿಗೆ ಹೋಗಿ—“ಪ್ರಭುವೇ, ನಾನು ಈಗ ಹೇಳಬೇಕೆಂದಿರುವ ಗುಟ್ಟಾದ ವಿಷಯವನ್ನು ಮಿತ್ರತ್ವದ ನ್ಯಾಯದಂತೆ ಮುಚ್ಚಿಡಬೇಕಾದಾಗ್ಯೂ ತಾವು ನನ್ನಲ್ಲಿ ಕೃಪಾಪೂರ್ವಕವಾಗಿ ತೋರಿಸಿದ ಅನುಗ್ರಹದಿಂದಲೂ ಪ್ರಭುವಾದ ತಮ್ಮ ವಿಷಯದಲ್ಲಿ ನಾನು ಹೊತ್ತಿರುವ ಕರ್ತವ್ಯ ನಿರ್ಬಂಧದಿಂದಲೂ ಇದು ವಿನಾ ನನ್ನಿಂದ ಇನ್ನಾವ ಮಹತ್ತಾದ ಲೋಕೋಪಕಾರವಾದ ಕೆಲಸವೂ ಮಾಡಲ್ಪಡತಕ್ಕುದಿಲ್ಲವಾದಕಾರಣದಿಂದಲೂ ಅರಿಕೆಮಾಡಬೇಕಾಗಿದೆ'' ಎಂದು ಹಲವು ಕುಯುಕ್ತಿಯ ವಾಗ್ಜಾಲಗಳನ್ನೂ ಆ ಕಥೆಗೆ ಪೀಠಿಕೆಮಾಡಿಕೊಂಡು, ವೆಲಂಟೈನನಿಂದ ತಾನು ಕೇಳಿದುದನ್ನೆಲ್ಲವನ್ನೂ ನಿಲುವಂಗಿಯನ್ನು ತೊಟ್ಟು ಅದರಲ್ಲಿ ನೂಲೇಣಿಯನ್ನು ಮುಚ್ಚಿಟ್ಟುಕೊಳ್ಳುವುದಾಗಿ ವೆಲಂಟೈನನು ಹೇಳಿದ ರೀತಿಯನ್ನೂ ಕೂಡ ಮರೆಯದೆ ಹೇಳಿದನು.

ಪ್ರೋಟಿಯಸನು ಅನ್ಯಾಯವಾದ ಕಾರ್ಯವಿಚಾರವನ್ನು ಮುಚ್ಚಿಡಲೊಲ್ಲದೆ ಅದು ತನ್ನ ಸ್ನೇಹಿತನ ವಿಚಾರವಾಗಿದ್ದರೂ ಕೂಡ ಹೇಳಿದನೆಂದು ಡ್ಯೂಕನು ಅವನನ್ನು ಮಹಾದ್ಭುತವಾದ ಪ್ರಾಮಾಣಿಕನೆಂದು ಭಾವಿಸಿ, ಅವನನ್ನು ವಿಶೇಷವಾಗಿ ಕೊಂಡಾಡಿ ಅವನಿಂದ ಈ ಗುಟ್ಟನ್ನು ಅರಿತಂತೆ ವೆಲಂಟೈನನ ಭಾವನೆಗೆ ಬಾರದಿರುವ ಹಾಗೆ ಮಾಡುವುದಾಗಿಯೂ ಚಮತ್ಕಾರವಾಗಿ ಅವನಾಗಿಯೇ ಗುಟ್ಟನ್ನು ಬಿಚ್ಚುವಂತೆ ಮಾಡುವುದಾಗಿಯೂ ಮಾತುಕೊಟ್ಟನು. ಇದಕ್ಕಾಗಿ ಸಂಜೆಯಲ್ಲಿ ವೆಲಂಟೈನನ ಬರು

ವಿಕೆಯನ್ನೇ ಕಾಯುತ್ತಲಿದ್ದನು. ಹೀಗಿರಲು ಸಂಜೆಯಾಯಿತು. ವೆಲಂಟೈನನು ಬೇಗಬೇಗನೆ ಅರಮನೆಯ ಕಡೆಗೆ ಹೋಗುತ್ತಿರಲು, ಅವನ ನಿಲುವಂಗಿಯಲ್ಲಿ ಏನನ್ನೋ ಸುತ್ತಿಕೊಂಡಿರುವುದನ್ನು ಡ್ಯೂಕನು ಕಂಡು, ಅದು ನೂಲೇಣಿಯಾಗಿರಬೇಕೆಂದು ನಿಶ್ಚಯಿಸಿಕೊಂಡು ವೆಲಂಟೈನನ್ನು ಕುರಿತು—"ವೆಲಂಟೈನನೇ, ಇಷ್ಟು ವೇಗವಾಗಿ ಎತ್ತ ಕಡೆಗೆ ಹೊರಟಿರುವಿ" ಎಂದನು.

ವೆಲಂಟೈನ್ "ಪ್ರಭುವೇ, ನನ್ನ ಕಾಗದಗಳನ್ನು ತೆಗೆದುಕೊಂಡು ಹೋಗಲು ಭೃತ್ಯನು ಕಾದಿರುವನು. ಅವುಗಳನ್ನು ಆವನಿಗೆ ಕೊಡುವುದಕ್ಕಾಗಿ ಹೋಗುತ್ತಲಿದ್ದೇನೆ."

ಪ್ರೋಟಿಯುಸನು ಜೂಲಿಯುಳ ಕಾಗದದ ವಿಚಾರದಲ್ಲಿ ತನ್ನ ತಂದೆಗೆ ಹೇಳಿದ ಸುಳ್ಳಿಗಾದ ಫಲವೇ ಈ ವಿಚಾರದಲ್ಲಿ ವೆಲಂಟೈನನು ಹೇಳಿದ ವಂಚನೆಗೂ ಆಯಿತು.

ಡ್ಯೂಕ್—"ಅವು ಅಷ್ಟೊಂದು ಜಾಗ್ರತೆ ಕಳುಹಿಸಲ್ಪಡಬೇಕಾದವುಗಳೇ ?"

ವೆಲಂಟೈನ್—"ಸ್ವಾಮಿಾ, ಪ್ರಭುಗಳಾದ ತಮ್ಮ ಆಸ್ಥಾನದಲ್ಲಿ ನಾನು ಆರೋಗ್ಯವಾಗಿಯೂ ಸುಖವಾಗಿಯೂ ಇದ್ದೇನೆಂದು ನಮ್ಮ ತಂದೆಗೆ ಬರೆದಿರುವೆನು. ಇನ್ನೇನೂ ವಿಶೇಷ ವಿಷಯಗಳಿಲ್ಲ."

ಡ್ಯೂಕನು—"ಹಾಗಾದರೆ ಬಿಡು. ಚಿಂತೆಯಿಲ್ಲ ನನ್ನ ಬಳಿಯಲ್ಲಿ ಸ್ವಲ್ಪಹೊತ್ತಿರು. ನನ್ನ ಆತ್ಮೀಯವಾದ ಕೆಲವು ವಿಚಾರಗಳಲ್ಲಿ ನಿನ್ನ ಮಂತ್ರಾಲೋಚನೆಯು ಬೇಕಾಗಿದೆ" ಎಂದು ಹೇಳಿ ವೆಲಂಟೈನನ ಗುಟ್ಟನ್ನು ಅವನಿಂದಲೇ ತಿಳಿಯುವುದಕ್ಕೆ ಪ್ರಸ್ತಾಪನೆಯಾಗಿ ಒಂದು ಚಮತ್ಕಾರವಾದ ಕಥೆಯನ್ನು ಹೇಳಲುಪಕ್ರಮಿಸಿದನು. "ಎಲೈ ವೆಲಂಟೈನನೇ, ನನ್ನ ಕುವರಿಯನ್ನು ಥ್ಯೂರೋವಿಗೆ ಕೊಟ್ಟು ಮದುವೆಮಾಡಬೇಕೆಂದಿರುವುದನ್ನು ನೀನು ಬಲ್ಲೆಯಷ್ಟೆ. .ಆದರೆ ಅವಳು ಗರ್ವಿಷ್ಠಳಾಗಿಯೂ ಮೂರ್ಖಳಾಗಿಯೂ ಇದ್ದಾಳೆ. ತಂದೆಯೆಂದು ಅವಳಿಗೆ ಭಯವಾಗಲಿ ತಾನು ಮಗಳಾದುದರಿಂದ ಭಕ್ತಿಗೌರವಗಳಾಗಲಿ ಇಲ್ಲ. ಅವಳ ಈ ಗರ್ವವೇ ಅವಳಲ್ಲಿ ನನಗಿದ್ದ ವಿಶ್ವಾಸವನ್ನು ದೂರಮಾಡಿಸಿದೆ. ನನ್ನ ವಾರ್ಧಿಕವು ಅವಳ ಪುತ್ರೀ ಸ್ವಭಾವಕ್ಕೆ ಸಹಜವಾದ ಕರ್ತವ್ಯಗಳಿಂದ ಸಂತಸಗೊಳ್ಳುವುದೆಂದು ಆಲೋಚಿಸಿದ್ದೆನು. ನಾನು ಈಗ ಮದುವೆ

ಯಾಗಿ ಇವಳನ್ನು ಮನೆಯಿಂದ ಹೊರಡಿಸಿಬಿಡಬೇಕೆಂದು ನಿಷ್ಕರ್ಷೆಮಾಡಿಕೊಂಡಿದ್ದೇನೆ. ಇವಳನ್ನು ಯಾರಾದರೂ ಪಾಣಿಗ್ರಹಣ ಮಾಡಿಕೊಳ್ಳಲಿ. ಇವಳು ನನ್ನನ್ನೂ ನನ್ನ ಪದವಿಯನ್ನೂ ಲೆಕ್ಕಿಸದಿರುವುದರಿಂದ ಇವಳ ಸೌಂದರ್ಯವೇ ಇವಳಿಗೆ ಬಳುವಳಿಯಾಗಿರಲಿ'' ಎಂದನು. ವೆಲಂಟೈನನು ಈ ಮಾತು ಎಲ್ಲಿಗೆ ಮುಗಿಯುವುದೋ ಎಂದು ಆಶ್ಚರ್ಯಭರಿತನಾಗಿ—''ಮಹಾಸ್ವಾಮಿಯವರು ಇವುಗಳಲ್ಲಿ ನನ್ನಿಂದೇನಾಗಬೇಕೆಂದು ಆಜ್ಞಾಪಿಸೋಣವಾಗುತ್ತದೆ ? '' ಎಂದನು.

ಡ್ಯೂಕ್—'' ನಾನು ವಿವಾಹಮಾಡಿಕೊಳ್ಳಬೇಕೆಂದಿರುವವಳು ಚಲುವೆಯಾಗಿಯೂ ಲಜ್ಜಾನ್ವಿತಳಾಗಿಯೂ ಇದ್ದಾಳೆ. ನನ್ನ ವಾರ್ಧಿಕದ ವಾಕ್ಚತುರತೆಯನ್ನು ಲೆಕ್ಕಿಸುವುದಿಲ್ಲ. ಅಲ್ಲದೆ ನನ್ನ ಬಾಲ್ಯದಲ್ಲಿದ್ದುದಕ್ಕೂ ಈಗಿನ ದಿನಕ್ಕೂ ಸ್ತ್ರೀಯನ್ನು ಮೆಚ್ಚಿಸುವ ಕೌಶಲ್ಯದ ಆಕೃತಿಯು ಬಹುಮಟ್ಟಿಗೆ ವ್ಯತ್ಯಾಸವಾಗಿರುತ್ತದೆ. ಸ್ತ್ರೀಯನ್ನು ವರಿಸುವಂತೆ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ನನಗೆ ಕಲಿಸಿಕೊಡುವುದಕ್ಕಾಗಿ ನಿನ್ನನ್ನು ಸಂತೋಷದಿಂದ ನನಗೆ ಉಪಾಧ್ಯಾಯನನ್ನಾಗಿ ಮಾಡಿಕೊಳ್ಳುವೆನು '' ಎಂದನು.

ಆ ಕಾಲದಲ್ಲಿ ಯುವಕರು ಯುವತಿಯರನ್ನು ವರಿಸುವಂತೆ ಮಾಡುವುದರಲ್ಲಿ ಏನೇನನ್ನು ಮಾಡುತ್ತಲಿದ್ದರೋ ಆ ವಿಚಾರವಾಗಿ ಸಾಮಾನ್ಯವಾದ ಕೆಲವು ಸಂಗತಿಗಳನ್ನೂ ಅವರು ಸುಂದರಿಯರ ಪ್ರೇಮಕ್ಕೆ ಪಾತ್ರರಾಗುವುದಕ್ಕೆ ಸನ್ಮಾನಗಳನ್ನೂ ಆಡಿಗಡಿಗೆ ಸಂದರ್ಶನವನ್ನು ಕೊಡುವರೆಂಬುದನ್ನೂ ಹೇಳಿದನು.

ಇದಕ್ಕೆ ಡ್ಯೂಕನು—'' ನಾನು ಅವಳಿಗೆ ಕಳುಹಿಸಿದ್ದ ಒಂದು ಸನ್ಮಾನವನ್ನು ತಿರಸ್ಕಾರಮಾಡಿದಳು. ಅವಳ ಬಳಿಗೆ ಯಾವ ಮನುಷ್ಯನೂ ಪ್ರವೇಶಿಸದಿರುವಂತೆ ಅವಳ ತಂದೆಯು ಅವಳನ್ನು ಬಲುಕಟ್ಟಿನಿಂದ ಇಟ್ಟಿರುತ್ತಾನೆ'' ಎಂದು ಹೇಳಿದನು.

ವೆಲಂಟೈನ್—'' ಹಾಗಾದರೇನು ? ರಾತ್ರಿಕಾಲಗಳಲ್ಲಿ ಅವಳನ್ನು ನೀವು ಸಂದರ್ಶಿಸಬಹುದು.''

ತನ್ನ ಪ್ರಸಂಗದ ತಾತ್ಪರ್ಯದ ಕಡೆಗೆ ಆಗಲೇ ಬರುತ್ತಿದ್ದ ಯುಕ್ತಿಗಾರನಾದ ಡ್ಯೂಕನು—'' ರಾತ್ರಿಯಲ್ಲಿ ಅವಳ ಕೊಠಡಿಯ ಬಾಗಿಲುಗಳು ಬೀಗಹಾಕಲ್ಪಟ್ಟಿರುವುವು '' ಎಂದನು.

ಡ್ಯೂಕನು ರಾತ್ರಿಯಲ್ಲಿ ಅವಳ ಅಂತಃಪುರವನ್ನು ನೂಲೇಣಿಯಿಂದ ಪ್ರವೇಶಿಸಬಹುದೆಂದೂ ಅಂತಹ ಒಂದನ್ನು ಆತನಿಗೆ ತಾನೇ ಒದಗಿಸಿ ಕೊಡುವುದಾಗಿ ಹೇಳುತ್ತಾ ಪರಿಸಮಾಪ್ತಿಯಲ್ಲಿ ತಾನು ತೊಟ್ಟಿರುವಂಥಾ ಒಂದು ನಿಲುವಂಗಿಯಲ್ಲಿ ಇತರರಾರಿಗೂ ಗೋಚರಿಸದಿರುವಂತೆ ಅದನ್ನು ಅಡಗಿಸಿಕೊಳ್ಳಬಹುದೆಂದೂ ವೆಲಂಟೈನನು ದುರದೃಷ್ಟವಶಾತ್ ಸಲಹೆಕೊಟ್ಟನು.

ಇವನ ನಿಲುವಂಗಿಯನ್ನು ತೆಗೆದುಹಾಕಬೇಕೆಂಬುದ್ದೇಶದಿಂದ ಇಷ್ಟು ದೊಡ್ಡ ಕಥೆಯನ್ನು ಕಲ್ಪನೆಮಾಡಿದ್ದ ಡ್ಯೂಕನು—"ಎಲ್ಲಿ ನಿನ್ನ ನಿಲುವಂಗಿಯನ್ನು ಕೊಡು. ಅದು ನನಗೆ ಹೇಗೆ ಒಪ್ಪುವುದೋ ನೋಡುವೆನು" ಎಂಬ ನೆಪದ ಮಾತನ್ನು ಹೇಳಿ ವೆಲಂಟೈನನ ನಿಲುವಂಗಿಯನ್ನು ಭದ್ರವಾಗಿ ಹಿಡಿದುಕೊಂಡನು. ಅನಂತರದಲ್ಲಿ ಅದನ್ನು ಕಿತ್ತುಬಿಸುಟನು. ನಿಲುವಂಗಿಯಲ್ಲಿ ನೂಲೇಣಿಯೂ ಸೆಲ್ವಿಯಳಿಗೆ ಬರೆದಿದ್ದ ಒಂದು ಕಾಗದವೂ ಇದ್ದುವು. ಅದರಲ್ಲಿ ಇವರು ಉದ್ದೇಶಪಟ್ಟಿರುವ ಪಲಾಯನವನ್ನು ಕುರಿತ ವಿಷಯವೆಲ್ಲವೂ ಲಿಖಿತವಾಗಿತ್ತು. ಡ್ಯೂಕನು ಅದನ್ನು ಆಗಲೇ ಒಡೆದು ಓದಿಕೊಂಡನು.

ತಾನು ತೋರಿಸಿದ ಕೃಪೆಗೆ ಪ್ರತಿಫಲವಾಗಿ ವೆಲಂಟೈನನು ತನ್ನ ಕುವರಿಯನ್ನು ಅಪಹರಿಸಿಕೊಂಡು ಹೋಗುವುದರಲ್ಲಿ ಯತ್ನಿಸಿದ ಕೃತಘ್ನತೆಗಾಗಿ ಅವನನ್ನು ಗದರಿಸಿ ತನ್ನ ಆಸ್ಥಾನದಿಂದಲೂ ಪುರದಿಂದಲೂ ಗಡೀಪಾರು ಮಾಡಿದನು. ವೆಲಂಟೈನನು ಸೆಲ್ವಿಯಳನ್ನು ನೋಡುವುದಕ್ಕೂ ಕೂಡ ಅವಕಾಶವಿಲ್ಲದಂತೆ ಆ ರಾತ್ರಿಯೇ ಹೊರಟುಹೋಗುವಂತೆ ನಿರ್ಬಂಧಮಾಡಲ್ಪಟ್ಟನು.

ಇತ್ತ ಮೈಲಾರ್ನಲ್ಲಿ ಪ್ರೋಟಿಯಸನು ವೆಲಂಟೈನನನ್ನು ಇಂತು ಉಪದ್ರವಪಡಿಸುತ್ತಿರಲು ವೆರೋನಾದಲ್ಲಿ ಜೂಲಿಯಳು ಇವನಗಲಿಕೆಯಿಂದ ಸಂತಾಪಪಡುತ್ತಿದ್ದಳು. ಇವನಲ್ಲಿ ಅವಳಿಗಿದ್ದ ಭಕ್ತಿವಿಶ್ವಾಸಗಳು ಅವಳ ಲಜ್ಜಾದಿ ಸ್ತ್ರೀಸಾಮಾನ್ಯಗುಣಗಳನ್ನು ಪರಾಜಯಗೊಳಿಸಿ ವೆರೋನಾವನ್ನು ಬಿಟ್ಟು ಮೈಲಾರ್ನಲ್ಲಿ ತನ್ನ ಪ್ರಿಯನನ್ನು ಕಾಣುವುದಕ್ಕೆ ಹೊರಡಬೇಕೆಂದು ಸಂಕಲ್ಪಮಾಡಿಸಿತು. ದಾರಿಯಲ್ಲಿ ಅಪಾಯದಿಂದ ರಕ್ಷಿತರಾಗುವುದಕ್ಕಾಗಿ ತಾನೂ ತನ್ನ ಭೃತ್ಯಳಾದ ಲೂಸೆಟ್ಟಳೂ ಪುರುಷರ ಉಡಿಗೆಯಿಂದ ರೂಪವನ್ನು ಮರೆಮಾಡಿಕೊಂಡು ಪ್ರಯಾಣ ಹೊರಟು,

ಮೈಲಾರ್ನಿಂದ ವೆಲಂಟೈನನು ಪ್ರೋಟಿಯಸನ ವಿಶ್ವಾಸಘಾತುಕತನದಿಂದ ಗಡೀಪಾರುಮಾಡಲ್ಪಟ್ಟ ಸ್ವಲ್ಪ ಕಾಲದಲ್ಲಿಯೇ ಆ ನಗರವನ್ನು ತಲಪಿದರು.

ಜೂಲಿಯಳು ಮೈಲಾರ್ನಗರವನ್ನು ತಲಪಿದಾಗ ಮಧ್ಯಾಹ್ನವಾಗಿತ್ತು. ಸತ್ರದಲ್ಲಿಳಿದುಕೊಂಡಳು. ಅವಳ ಮನಸ್ಸು ಅವಳ ಪ್ರಿಯನಾದ ಪ್ರೋಟಿಯಸನಲ್ಲಿದ್ದುದರಿಂದ ಅವನ ವಿಷಯವಾದ ಸಮಾಚಾರಗಳನ್ನು ಹೇಗೆ ತಿಳಿದುಕೊಳ್ಳುವುದೆಂದಾಲೋಚಿಸುತ್ತ ಆ ಸತ್ರದ ಪಾರುಪತ್ತೇಗಾರನೊಡನೆ ಮಾತನಾಡಲುಪಕ್ರಮಿಸಿದಳು.

ಪಾರುಪತ್ತೇಗಾರನು ಈ ಲಕ್ಷಣವಾದ ಯುವಕನ ವಿಷಯದಲ್ಲಿ ಅಪರಿಮಿತವಾಗಿ ಸಂತೋಷಪಟ್ಟು ನೋಡಿದಮಾತ್ರದಿಂದಲೇ ದೊಡ್ಡ ವಂಶೀಕನಾಗಿರುವುದಾಗಿ ನಿಶ್ಚಯಿಸಿಕೊಂಡು ಸಲಿಗೆಯಿಂದ ಮಾತನಾಡಿದನು.

ಅಲ್ಲದೆ ಅವನು ಒಳ್ಳೇ ಗುಣವಂತನಾದಕಾರಣ ಇವನು ಚಿಂತಾಕ್ರಾಂತನಾಗಿರುವುದಕ್ಕಾಗಿ ವ್ಯಾಕುಲಗೊಂಡು ತನ್ನ ತಿಥಿಯನ್ನು ಕುರಿತು —“ ಎಲೈ ಘನವಂತನೇ, ಈ ಸಾಯಂಕಾಲ ಒಬ್ಬ ಮಾನವನು ಒಬ್ಬ ಯುವತಿಗೋಸ್ಕರ ಪ್ರೇಮಸೂಚಿತವಾದ ಸಂಧ್ಯಾಗಾನವನ್ನು ಗಾಯನ ಮಾಡಿಸುವನು. ಆ ಮಧುರವಾದ ಸಂಗೀತವನ್ನು ನೀನು ಕೇಳುವುದಕ್ಕೆ ಬಾ. ಕರೆದುಕೊಂಡು ಹೋಗುವೆನು ” ಎಂದನು.

ಜೂಲಿಯಳು ಚಿಂತಾಕ್ರಾಂತಳಾಗಿದ್ದುದಕ್ಕೆ ಕಾರಣವೇನಂದರೆ ತಾನು ಅವಿಚಾರದಿಂದ ವಹಿಸಿದೀಕಾರ್ಯದ ವಿಚಾರವಾಗಿ ಪ್ರೋಟಿಯಸನು ಏನೆಂದು ಯೋಚಿಸುತ್ತಾನೆಂಬುದನ್ನು ಚೆನ್ನಾಗಿ ಅರಿತಿರಲಿಲ್ಲ. ಏಕೆಂದರೆ ಅವನು ಇವಳನ್ನು ಇವಳ ಕರುಣೆಗೆ ಉಚಿತವಾದ ನಡತೆ ಘನತೆಗಳಿಗಾಗಿ ಪ್ರೀತಿಸಿದನೆಂಬುದು ಇವಳಿಗೆ ಗೊತ್ತಿತ್ತು. ಆದರೂ ಪ್ರೋಟಿಯಸನ ದೃಷ್ಟಿಯಲ್ಲಿ ತಾನು ಕೀಳಾಗಿ ಭಾವಿಸಲ್ಪಟ್ಟೇನೆಂದು ಭಯಚಕಿತಳಾಗಿದ್ದಳು. ಇದೇ ಇವಳನ್ನು ವ್ಯಾಕುಲಗೊಂಡವಳಾಗಿ ಕಾಣುವಂತೆ ಮಾಡಿದುದು. ಸಂಗೀತಶ್ರವಣಕ್ಕೆ ಹೋಗುವ ದಾರಿಯಲ್ಲಿ ಪ್ರೋಟಿಯಸನನ್ನು ಕಾಣಬಹುದೆಂಬ ಅಂತರಂಗದ ಉದ್ದೇಶದಿಂದ ಪಾರುಪತ್ತೇಗಾರನ ಜೊತೆಯಲ್ಲಿ ಹೋಗಲು ಇವಳು ಸಂತೋಷದಿಂದ ಒಪ್ಪಿಕೊಂಡಳು. ಆದರೆ ಆ ಸ್ಥಳವನ್ನು ಆತನೊಡನೆ ತಲಪುತ್ತಲೆ ಆ

ದಯಾನ್ವಿತನಾದ ಪಾರುಪತ್ತೇಗಾರನು ಹಾರೈಸಿದ ಫಲಿತಾಂಶಕ್ಕೆ ಪ್ರತಿಯಾಯಿತು. ಏಕೆಂದರೆ ಆ ಸ್ಥಳದಲ್ಲಿ ಇವಳು ತನ್ನ ಪ್ರಿಯನಾದ ಚಂಚಲಚಿತ್ತದ ಪ್ರೋಟಿಯಸನು ಸಿಲ್ವಿಯಳಿಗಾಗಿ ಹೀಗೆ ಪ್ರೇಮವನ್ನು ಸೂಚಿಸುವ ಸಂಧ್ಯಾಗಾನವನ್ನು ಗಾಯನಮಾಡುತ್ತ ಆಕೆಯನ್ನು ಮೆಚ್ಚಿರುವುದಾಗಿ ಪ್ರಣಯಸೂಚಕವಾದ ಸಲ್ಲಾಪಗಳಿಂದ ಆಕೆಯನ್ನು ಸಂಬೋಧಿಸುತ್ತಿದ್ದುದನ್ನು ಕಂಡಳು. ಅವರು ಗವಾಕ್ಷಿಯಿಂದಾಡುತ್ತಿದ್ದ ಮಾತಿನಲ್ಲಿ ಇವನನ್ನು ಸಿಲ್ವಿಯಳು ತನ್ನ ನಿಜಸ್ತ್ರೀಯನ್ನು ಕೈಬಿಟ್ಟುದಕ್ಕಾಗಿಯೂ ಮಿತ್ರನಾದ ವೆಲಂಟೈನನಲ್ಲಿ ತೋರಿಸಿದ ಕೃತಘ್ನತೆಗಾಗಿಯೂ ನಿಂದಿಸುತ್ತಿದ್ದುದನ್ನು ಜೂಲಿಯಳು ಹೊಂಚಿ ಕೇಳಿದಳು. ಸಿಲ್ವಿಯಳು ಗಡೀಪಾರುಮಾಡಲ್ಪಟ್ಟ ತನ್ನ ವೆಲಂಟೈನ್ನಲ್ಲಿ ಭಕ್ತಿವಿಶ್ವಾಸವುಳ್ಳವಳಾಗಿ ವೆಲಂಟೈನನ ಕೃತ್ರಿಮಸ್ನೇಹಿತನಾದ ಪ್ರೋಟಿಯಸನ ತುಚ್ಛವಾದ ನಡತೆಗೆ ಅಸಹ್ಯಗೊಂಡಕಾರಣ ಇವನ ಸಂಗೀತವನ್ನೂ ಸಲ್ಲಾಪವನ್ನೂ ಕೇಳಲ್ಲೊಲ್ಲದೆ ಕಿಟಿಕಿಯನ್ನು ಬಿಟ್ಟು ಹೊರಟುಹೋದಳು.

ಜೂಲಿಯಳು ತಾನು ಕಂಡು ಕೇಳಿದ ಸಂಗತಿಗಳಿಂದ ನಿರಾಶೆಯುಳ್ಳವಳಾದಾಗ್ಗೂ ಆಲಸ್ಯಗಾರನಾದ ಪ್ರೋಟಿಯಸನಲ್ಲಿ ನಿರನುರಾಗಿಯಾಗಲಿಲ್ಲ.

ಕೆಲವು ದಿನಗಳ ಕೆಳಗೆ ಪ್ರೋಟಿಯಸನಲ್ಲಿದ್ದ ಸೇವಕನು ಕೆಲಸದಿಂದ ನಿವೃತ್ತನಾದನೆಂಬ ವಾರ್ತೆಯನ್ನು ಕೇಳಿ ಸ್ನೇಹಪರನಾದ ಆ ಪಾರುಪತ್ಯಗಾರನ ಸಹಾಯದಿಂದ ಜೂಲಿಯಳು ಆ ಕೆಲಸವನ್ನು ಪಡೆದುಕೊಂಡಳು.

ಈ ಪ್ರೋಟಿಯಸನಿಗೆ ಆವನು ಜೂಲಿಯಳೆಂದು ತಿಳಿಯಬರಲಿಲ್ಲವಾದುದರಿಂದ ಅವನ ಮೂಲಕವಾಗಿ ತನ್ನನ್ನು ಪ್ರೀತಿಸದಿರುವ ಸಿಲ್ವಿಯಳಿಗೆ ಕಾಗದಗಳನ್ನೂ ಬಹುಮಾನಗಳನ್ನೂ ಕಳುಹಿಸಿದುದಲ್ಲದೆ ವೆರೋನಾದಿಂದ ಪ್ರೋಟಿಯಸನು ಹೊರಟುಹೋಗುವಾಗ್ಗೆ ಜೂಲಿಯಳು ತನಗೆ ಕೊಟ್ಟ ಬಹುಮತಿಯ ಅಂಗುಳೀಯಕವನ್ನೂ ಕಳುಹಿಸಿದನು.

ಜೂಲಿಯಳು ಸಿಲ್ವಿಯಳ ಬಳಿಗೆ ಆ ಉಂಗುರವನ್ನು ತೆಗೆದುಕೊಂಡು ಹೋದಾಗ ಸಿಲ್ವಿಯಳು ಪ್ರೋಟಿಯಸನ ವಿವಾಹಾರ್ಥವಾದ ಅಪೇಕ್ಷೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದುದನ್ನು ನೋಡಿ ಬಹುಸಂತುಷ್ಟಳಾದಳು.

ಸೆಬಾಸ್ಟಿಯನ್ ಎಂಬ ಅಭಿಧಾನದಿಂದ ಭೃತ್ಯತ್ವದಲ್ಲಿರುವ ಜೂಲಿಯಳು ಸೆಲ್ವಿಯಳೊಡನೆ ಪ್ರೋಟಿಯುಸನ ಪ್ರಥಮ ಪ್ರಿಯಳೂ ಅವನಿಂದ ಪರಿತ್ಯಕ್ತಳೂ ಆದ ಜೂಲಿಯಳ ವಿಷಯವಾಗಿ ಮಾತನಾಡತೊಡಗಿದಳು. ಅವಳು ಜೂಲಿಯಳನ್ನು ಬಲ್ಲೆನೆಂದೂ, ಅವಳಲ್ಲಿ ತನ್ನನ್ನು ತಾನು ಬಲ್ಲಷ್ಟು ಪರಿಚಯವುಳ್ಳವಳೆಂದೂ, ಮರುಳುಗೊಂಡ ಜೂಲಿಯಳು ತನ್ನ ಸ್ವಾಮಿಯನ್ನು ಎಷ್ಟು ಪ್ರೀತಿಸುತ್ತಾಳೆಂದೂ, ಪ್ರೋಟಿಯುಸನ ನಿರ್ದಯವಾದ ಅಲಕ್ಷ್ಯತೆಯಿಂದ ಅವಳು ಎಷ್ಟು ಶೋಕಗೊಂಡಿರುವಳೆಂದೂ ಹೇಳುತ್ತಾ ರಮಣೀಯವಾದ ದ್ವಂದ್ವಾರ್ಥವುಳ್ಳ ಶಬ್ದಗಳಿಂದ ''ಜೂಲಿಯಳು ಸುಮಾರು ನನಷ್ಟೇ ಎತ್ತರವಾಗಿ ನನ್ನ ಶರೀರಕಾಂತಿಯಂತೆ ಲಾವಣ್ಯವುಳ್ಳವಳಾಗಿದ್ದಾಳೆ. ಅವಳ ಕಣ್ಣು ಮತ್ತು ಕೇಶರಾಶಿಯ ವರ್ಣವು ನನ್ನವುಗಳಂತೆಯೇ ಇವೆ'' ಎಂದಳು.

ದಿಟವಾಗಿಯೂ ಜೂಲಿಯಳು ಬಾಲಕನ ವೇಷದಿಂದ ರಮಣೀಯವಾದ ಯುವಕನಂತಿದ್ದಳು. ತಾನು ಪ್ರೀತಿಸಿದ್ದ ಪುರುಷನಿಂದ ಶೋಚನೀಯವಾಗಿ ಬಿಡಲ್ಪಟ್ಟವಳಾದ ಆ ಸುಂದರಿಗಾಗಿ ಸೆಲ್ವಿಯಳ ಮನಸ್ಸು ಮರುಕಗೊಂಡಿತು. ಪ್ರೋಟಿಯುಸನು ಕಳುಹಿಸಿದ ಉಂಗುರವನ್ನು ಪರಿಗ್ರಹಿಸಬೇಕೆಂದು ಜೂಲಿಯಳು ಕೊಡುವುದಕ್ಕೆ ಹೋದಾಗ ಅವಳು —''ಈ ಉಂಗುರವನ್ನು ಕಳುಹಿಸುವುದು ಅವನಿಗೆ ಲಜ್ಜಾಸ್ಪದವಾಗಿದೆ. ಇದು ಅವನಿಗೆ ಅವನ ಜೂಲಿಯಳು ಕೊಟ್ಟುದೆಂದು ಅವನು ಆಡಿಗಡಿಗೆ ಹೇಳುತ್ತಿದ್ದುದನ್ನು ನಾನು ಕೇಳಿರುವುದರಿಂದ ಇದನ್ನು ನಾನು ತೆಗೆಗುಕೊಳ್ಳೆನು. ಅಯ್ಯೋ! ನಿರ್ಭಾಗ್ಯಳಾದ ನಾರಿಯೇ! ಅವಳಲ್ಲಿ ನನಗಿರುವ ಕನಿಕರಕ್ಕಾಗಿ ಎಲೈ! ಘನವಂತನಾದ ಯುವಕನೇ, ನಿನ್ನನ್ನು ನಾನು ಪ್ರೀತಿಸುವೆನು. ಇದೊ! ಇಲ್ಲಿ ಒಂದು ದ್ರವ್ಯದ ಚೀಲವಿದೆ. ಇದನ್ನು ಅವಳಿಗಾಗಿ ನಿನಗೆ ಕೊಡುವೆನು'' ಎಂದು ಹೇಳಿ, ಆ ಉಂಗುರವನ್ನು ತಿರಸ್ಕರಿಸಿದಳು. ತನ್ನ ದಯಾಪೂರ್ಣಳಾದ ಪ್ರತಿ ಕಕ್ಷಿಯ ವದನದಿಂದ ಬಂದ ಈ ಆದರಪೂರ್ವಕವಾದ ಮಾತುಗಳು ಆ ವೇಷಾಂತರದಲ್ಲಿರುವ ನಾರಿಯ ಖಿನ್ನತೆಗೊಂಡ ಹೃದಯವನ್ನು ಸ್ವಲ್ಪ ಹರ್ಷಗೊಳಿಸಿತು.

ಇತ್ತಕಡೆಯಲ್ಲಿ ಹೀಗಿರಲು, ಅತ್ತ ವೆಲಂಟೈನನು ಗಡೀಪಾರು ಮಾಡಲ್ಪಟ್ಟು ಅವಮಾನಿತನಾಗಿ ತನ್ನ ಜನಕನ ಮನೆಗೆ ಹಿಂತಿರುಗಲಪೇಕ್ಷಿಸದೆ ಯಾವ ಹಾದಿಯನ್ನು ಹಿಡಿದು ಹೋಗಬೇಕೆಂಬ ನಿಷ್ಕರ್ಷೆಯಿಲ್ಲದೆ ತನ್ನ

ಹೃದಯದ ಅಮೌಲ್ಯ ಭಂಡಾರವಾದ ಸೆಲ್ವಿಯಳಿರುವ ಮ್ಯೆಲಾನಿಗೆ ಸ್ವಲ್ಪ ದೂರವಾಗಿರುವ ಒಂದು ನಿರ್ಜನವಾದ ಅರಣ್ಯದಲ್ಲಿ ಅಲೆದಾಡು ತ್ತಿರಲು ಕಳ್ಳರ ಕೈಗೆ ಸಿಕ್ಕಿಬಿದ್ದು, ತನ್ನಲ್ಲಿರುವ ಹಣವನ್ನು ಕೊಡೆಂದು ಅವರಿಂದ ಒತ್ತಾಯ ಮಾಡಲ್ಪಟ್ಟನು.

ವೆಲಂಟೈನನು ತಾನು ವಿಪತ್ತಿನಿಂದ ಪೆಟ್ಟುತಿಂದು ಗಡೀಪಾರಾಗಿ ಹೋಗುತ್ತಿರುವ ಧನಹೀನನೆಂದೂ ತನ್ನಲ್ಲಿರುವ ವಸ್ತ್ರವೇ ತನ್ನ ಸಕಲೈ ಶ್ವರ್ಯವೆಂದೂ ಉತ್ತರ ಕೊಟ್ಟನು. ಈ ಕಳ್ಳರು ಅವನು ಸಂಕಟದಲ್ಲಿ ರುವಂಥವನೆಂದು ಕೇಳಿ ಅವನ ಗಂಭೀರವಾದ ಮುಖಭಾವದಿಂದಲೂ ಪುರುಷನಿಗುಚಿತವಾದ ನಡತೆಗಳಿಂದಲೂ ಮೆಚ್ಚಿದವರಾಗಿ ಅವನನ್ನು ಕುರಿತು— "ಎಲೈ, ಮಹನೀಯನೇ, ನಾವೆಲ್ಲರೂ ನಿನ್ನಧೀನದಲ್ಲಿರುವೆವು, ನೀನು ನಮ್ಮೊಡೆಯನಾಗಿ ನಮ್ಮೊಡನೆ ಸುಖದಿಂದಿರು ; ಇದನ್ನು ತಿರಸ್ಕ ರಿಸಿದರೆ ಸಾಯುವುದಕ್ಕೆ ಸಿದ್ಧನಾಗು '' ಎಂದರು.

ತನ್ನ ಪರಿಣಾಮದ ವಿಚಾರದಲ್ಲಿ ತಿಲಾಂಶವೂ ವಿಚಾರವನ್ನಿಟ್ಟುಕೊ ಳ್ಳದ ವೆಲಂಟೈನನು ಅವರು ಹೆಂಗಸರನ್ನೂ ಬಡವರಾದ ದಾರಿಗರನ್ನೂ ಸೂರೆಗೊಳ್ಳದಿರುವುದಾದರೆ ತಾನು ಅವರಿಗೆ ಯಜಮಾನನಾಗಿ ಅವರೊ ಡನೆ ವಾಸವಾಗಿರುವುದಕ್ಕೆ ಒಪ್ಪಿಕೊಂಡನು.

ಇಂತು ವೆಲಂಟೈನನು (ನಾವು ಪದ್ಯಗಳಲ್ಲಿ ಓದಿರುವ ರಾಬಿನ್ ಹುಡ್‌ನಂತೆ) ಕಳ್ಳರ ಮತ್ತು ರಾಜಶಾಸನವನ್ನತಿಕ್ರಮಿಸಿದ ಪುಂಡುಜನ ರಿಗೆ ಯಜಮಾನನಾದನು. ಈ ಸ್ಥಿತಿಯಲ್ಲಿರುವ ವೆಲಂಟೈನನ್ನು ಮುಂದೆ ತಿಳಿಸಿರುವಂತೆ ಈ ವಿಪಿನ ಪ್ರಾಂತ್ಯಕ್ಕೆ ಬಂದ ಸೆಲ್ವಿಯಳು ಕಂಡಳು.

ಥ್ಯೂರೋವನ್ನು ವಿವಾಹ ಮಾಡಿಕೊಳ್ಳೆಂದು ಸೆಲ್ವಿಯಳನ್ನು ಅವಳ ತಂದೆಯು ನಿರ್ಬಂಧಪಡಿಸುತ್ತಿದ್ದನು. ಅವನಿಗೆ ಇನ್ನೂ ಹೆಚ್ಚು ಕಾಲ ಪ್ರತಿ ಹೇಳಲಾರದೆ ಆಕೆಯು ಥ್ಯೂರೋವನ್ನು ಮದುವೆ ಮಾಡಿಕೊಳ್ಳದಿ ರಬೇಕೆಂದು ತನ್ನಿನಿಯನು ವಾಸವಾಗಿರುವುದಾಗಿ ಕೇಳಿದ್ದ ಮಾಂಟು ವಾಕ್ಕೆ ಹೋಗಬೇಕೆಂದು ನಿಶ್ಚಯಿಸಿಕೊಂಡಳು. ಈ ವಿಚಾರದಲ್ಲಿ ಅವ ಳಿಗೆ ತಪ್ಪು ಸಂಗತಿ ಅರುಹಲ್ಪಟ್ಟಿತು. ಏಕೆಂದರೆ ವೆಲಂಟೈನನು ಕಳ್ಳರ ಜೊತೆಯಲ್ಲಿ ಅವರಿಗೊಡೆಯನಾಗಿ ಸೂರೆಮಾಡುವುದರಲ್ಲಿ ಅವರಿಗೆ ಜೊತೆಯಾಗದೆ ಅವರಿಂದ ಕೊಡಲ್ಪಟ್ಟಿದ್ದ ಅಧಿಕಾರವನ್ನು ಅವರು ಸುಲಿಗೆ ಮಾಡಿದ ಪ್ರಯಾಣಿಕರಲ್ಲಿ ಕನಿಕರವನ್ನು ತೋರಿಸುವಂತೆ ಅವ

ರನ್ನು ಬಲಾತ್ಕಾರ ಪಡಿಸುವುದರಲ್ಲಿ ವಿನಾ ಇನ್ನಾವುದರಲ್ಲೂ ಉಪಯೋಗಿಸದೆ ಆ ಅರಣ್ಯದಲ್ಲಿ ವಾಸಿಸುತ್ತಿದ್ದನು.

ಸೆಲ್ವಿಯಳು ತನ್ನ ತಂದೆಯರಮನೆಯಿಂದ ತಪ್ಪಿಸಿಕೊಂಡು ಹೊರಟು ಹೋಗಲು ಸಿದ್ಧಳಾದಳು. ಮಾರ್ಗದಲ್ಲಿ ತನ್ನ ಸುರಕ್ಷಿತಕ್ಕಾಗಿ ಜೊತೆಯಲ್ಲಿ ವೃದ್ಧನೂ ಗುಣವಂತನೂ ಆದ ಎಗ್ಲಮೊರ್‌ನನ್ನು ಕರೆದುಕೊಂಡು ಹೊರಟಳು. ಅವಳು ವೆಲಂಟೈನನೂ ಆ ಕಳ್ಳರ ಗುಂಪೂ ಇದ್ದ ಅರಣ್ಯವನ್ನು ಹಾದ ಹೋಗಬೇಕಾಗಿತ್ತು. ಹೀಗಿರಲು ಇವಳನ್ನು ಆ ಕಳ್ಳರಲ್ಲಿ ಒಬ್ಬನು ಹಿಡಿದುಕೊಂಡನು. ಎಗ್ಲಮೊರ್‌ನನ್ನೂ ಹಿಡಿದುಕೊಳ್ಳುವುದರಲ್ಲಿದ್ದನು. ಆದರೆ ಅವನು ತಪ್ಪಿಸಿಕೊಂಡು ಓಡಿಹೋದನು.

ಸೆಲ್ವಿಯಳನ್ನು ಹಿಡಿದುಕೊಂಡ ಕಳ್ಳನು, ಅವಳು ಭಯಭ್ರಾಂತಳಾಗಿರುವುದನ್ನು ನೋಡಿ— "ಎಲೌ ವನಿತೆಯೇ, ಹೆದರಬೇಡ. ನಿನ್ನನ್ನು ಗವಿಯಲ್ಲಿರುವ ನಮ್ಮ ಸ್ವಾಮಿಯ ಬಳಿಗೆ ಕರೆದುಕೊಂಡು ಹೋಗುವೆನು. ಭಯಪಡಬೇಡ. ನಮ್ಮೊಡೆಯನು ಬಹು ಪೂಜ್ಯವಾದ ಮನಸ್ಸುಳ್ಳವನು. ಯಾವಾಗಲೂ ಹೆಂಗಸರಲ್ಲಿ ವಿಶೇಷವಾಗಿ ಕನಿಕರವುಳ್ಳವನು" ಎಂದನು.

ರಾಜಶಾಸನವನ್ನತಿಕ್ರಮಿಸಿರುವ ಒಂದು ಪುಂಡು ಪಂಗಡದ ಯಜಮಾನನ ಬಳಿಗೆ ತನ್ನನ್ನು ಸೆರೆಯಾಳಿನಂತೆ ಹೊತ್ತುಕೊಂಡು ಹೋಗುವುದಾಗಿ ಕೇಳಿದ ಮಾತಿನಿಂದ ಸೆಲ್ವಿಯಳಿಗೆ ಚಿಂತೆಯೇನೂ ಶಮನವಾಗಲಿಲ್ಲ. ಅವಳು "ಓ! ವೆಲಂಟೈನ್! ನಿನಗಾಗಿ ನಾನಿದನ್ನು ಸಹಿಸುವೆನು!" ಎಂದು ಚೀರಿಟ್ಟು ಪ್ರಲಾಪಿಸಿದಳು.

ಆದರೆ ಆ ಚೋರನು ಅವಳನ್ನು ತನ್ನ ಯಜಮಾನನು ಇರುವ ಗವಿಗೆ ಒಯ್ಯುತ್ತಿರುವಾಗ್ಗೆ ಸೆಲ್ವಿಯಳು ಪಲಾಯನಗೈದಳೆಂದು ಪ್ರೋಟಿಯುಸನು ಕೇಳಿ ಭೃತ್ಯಸಹಿತನಾಗಿ ಅವಳ ಹೆಜ್ಜೆಯನ್ನು ಹಿಡಿದು ಆ ಅರಣ್ಯಕ್ಕೆ ಬಂದು ಅವರನ್ನು ಅಡ್ಡಿಮಾಡಿದನು. ಪ್ರೋಟಿಯುಸನು ಅವಳನ್ನು ಕಳ್ಳನ ಕೈಯಿಂದ ರಕ್ಷಿಸಿದನು. ಆದರೆ ಅವನು ಮಾಡಿದುಪಕೃತಿಗಾಗಿ ಅವನನ್ನು ವಂದಿಸಲು ಇವಳಿಗೆ ವ್ಯವಧಾನವಾಗಲಿಲ್ಲ. ಪ್ರೋಟಿಯುಸನು ಎಂದಿನಂತೆ ಅವಳನ್ನು ವಿವಾಹಕ್ಕೊಡಂಬಡೆಂದು ತಿರುತಿರುಗಿ ಕಾಡುವುದಕ್ಕೆ ತೊಡಗಿದನು. ಹೀಗೆ ಇವನು ಅವಳನ್ನು ಮದುವೆಮಾಡಿಕೊಳ್ಳಲು ಸಮ್ಮತಿಸೆಂದು ಬಲವಂತಮಾಡುತ್ತಿರಲು ಅವನು ಸ್ವಲ್ಪಹೊತ್ತಿನ ಕೆಳಗೆ ಮಾಡಿದ ಅಪಾರವಾದುಪಕೃತಿಗೆ ಸೆಲ್ವಿಯಳು ಮನಮರುಗಿದವಳಾಗಿ ಅವನಲ್ಲಿ

ಕೃಪೆಮಾಡುವಳೇನೊ ಎಂದು ವ್ಯಾಕುಲದಿಂದ ಹಲುಬುತ್ತಾ, ಅವನ ಬಳಿಯಲ್ಲಿಯೇ (ಕೈಬಿಡಲ್ಪಟ್ಟ ಜೂಲಿಯಳು) ಆ ಬಾಲ ಭೃತ್ಯನು ನಿಂತಿರಲು, ತನ್ನ ಚೋರರು ಒಬ್ಬ ಹೆಂಗಸನ್ನು ಮುತ್ತಿರುವುದಾಗಿ ಕೇಳಿ, ಅವಳನ್ನು ಆದರಿಸಿ ಬಿಡುಗಡೆಮಾಡುವುದಕ್ಕಾಗಿ ಆ ಸ್ಥಳಕ್ಕೆ ವೆಲಂಟೈನನು ಬಂದನು. ಅವನ ಆಕಸ್ಮಿಕವಾದ ಆಗಮನಕ್ಕಾಗಿ ಇವರೆಲ್ಲರೂ ಅತ್ಯಂತಾಶ್ಚರ್ಯದಿಂದ ಬೆರಗಾದರು. ಪ್ರೋಟಿಯಸನು ತನ್ನ ಸ್ನೇಹಿತನಾದ ವೆಲಂಟೈನನನ್ನು ನೋಡುತ್ತಲೆ ಲಜ್ಜೆಯಿಂದಲೂ ಅನುತಾಪದಿಂದಲೂ ಏಕಕಾಲದಲ್ಲಿಯೇ ಮುತ್ತಲ್ಪಟ್ಟವನಾಗಿ ತಾನು ವೆಲಂಟೈನನಿಗೆ ಮಾಡಿದ ಕೆಡಕುಗಳಿಗಾಗಿ ತನಗುಂಟಾದ ಮಹದ್ವ್ಯಸನವನ್ನು ಹೇಳಿಕೊಂಡನು. ಗಂಭೀರ ಸ್ವಭಾವದವನಾದ ವೆಲಂಟೈನನು ಅವನನ್ನು ಮನ್ನಿಸಿ, ಕಲಿತನದಿಂದ— ‘‘ಎಲೈ ಗೆಳೆಯನಾದ ಪ್ರೋಟಿಯನನೇ, ಸಂಪೂರ್ಣವಾಗಿ ನಿನ್ನನ್ನು ಕ್ಷಮಿಸಿದ್ದೇನೆ. ನಿನಗಾಗಿ ಸೆಲ್ವಿಯಳಲ್ಲಿ ನನಗಿದ್ದ ಅಭಿಮಾನವನ್ನು ಬಿಟ್ಟುಕೊಟ್ಟಿರುವೆನು’’ ಎಂದನು ಪ್ರೋಟಿಯಸನ ಬಳಿಯಲ್ಲಿಯೇ ನಿಂತಿದ್ದ ಆ ಬಾಲಭೃತ್ಯನು ಈ ಆಶ್ಚರ್ಯಕರವಾದ ಸಂಭಾವನೆಯ ವಾರ್ತೆಯನ್ನು ಕೇಳಿ, ಪ್ರೋಟಿಯಸನು ತಾನು ಬಯಸುತ್ತಿದ್ದ ಸೆಲ್ವಿಯಳನ್ನು ಈಗ ಒಲ್ಲೆನೆಂದು ಹೇಳಲಾರನೆಂದು ಭಯಭರಿತನಾಗಿ ಮೂರ್ಛೆಗೊಂಡನು. ಆಗ ಅವರೆಲ್ಲರೂ ಅವನಿಗೆ ಎಚ್ಚರಿಕೆಯುಂಟಾಗುವಂತೆ ಶೈತ್ಯೋಪಚಾರವನ್ನು ಮಾಡುತ್ತಲಿದ್ದರು. ಇತ್ತ ಸೆಲ್ವಿಯಳು ತಾನು ಯಾರಿಗಾಗಿ ಇಷ್ಟೊಂದು ಕಷ್ಟಗಳನ್ನು ಸಹಿಸಿದಳೋ ಆ ಮನಃಕಾಂತನಾದ ವೆಲಂಟೈನನು ಕ್ಷಣಕಾಲದಲ್ಲಿ ತನ್ನನ್ನು ಕೈಬಿಡುವನೆ! ಎಂದು ವ್ಯಾಕುಲಿತಗೊಂಡಳು. ಆ ಬಾಲ ಭೃತ್ಯನು (ಜೂಲಿಯಳು) ಸಚೈತನ್ಯನಾದ ಮೇಲೆ ಮೂರ್ಛೆಕಾರಣವನ್ನು ವಿಚಾರಿಸಲು, ಅವನು—‘‘ಸ್ವಾಮಿ, ನನ್ನ ಯಜಮಾನನು ಸೆಲ್ವಿಯಳಿಗೆ ಒಂದುಂಗುರವನ್ನು ಕೊಟ್ಟು ಬರುವಂತೆ ಆಜ್ಞಾಪಿಸಿದ್ದನು. ಮರವೆಯಿಂದ ನಾನು ಆ ಆಜ್ಞೆಯನ್ನು ಪರಿಪಾಲಿಸಲಿಲ್ಲ.’’

ಪ್ರೋಟಿಯಸ್—‘‘ಎಲೈ, ಬಾಲಕನೆ, ಆ ಉಂಗುರವೆಲ್ಲಿ?’’

ಬಾಲಕ—‘‘ಸ್ವಾಮಿ, ಇಲ್ಲಿದೆ.’’ (ಜೂಲಿಯಳಿಗೆ ಇವನು ಕೊಟ್ಟಿದ್ದ ಉಂಗುರವನ್ನು ಕೊಡುವನು.)

ಪ್ರೋಟಿಯಸ್,—‘‘ಓ! ಹೊ! ಇದು ನಾನು ಜೂಲಿಯಳಿಗೆ ಕೊಟ್ಟಿದ್ದ ಉಂಗುರ.’’

ಬಾಲಕ—“ಸ್ವಾಮಿ, ಕ್ಷಮಿಸಿರಿ. ತಪ್ಪು ಮಾಡಿದೆನು. ಇದು ತಾವು ಸೆಲ್ವಿಯಳಿಗೆ ಕಳುಹಿಸಿದ್ದ ಉಂಗುರ.” (ಇನ್ನೊಂದನ್ನು ತೋರಿಸುವನು.)

ಪ್ರೋಟಿಯಸ್—“ಆದರೆ ಈ ಉಂಗುರವು ನಿನಗೆ ಹೇಗೆ ಬಂತು? ಇದನ್ನು ನಾನು ಹೊರಟು ಬರುವಾಗ್ಗೆ ಜೂಲಿಯಳಿಗೆ ಕೊಟ್ಟಿದ್ದೆನು.”

ಬಾಲಕ—“ಜೂಲಿಯಳೇ ಇದನ್ನು ನನಗೆ ಕೊಟ್ಟಳು. ಅವಳೇ ಇದನ್ನು ಇಲ್ಲಿಗೆ ತಂದವಳು.”

ಪ್ರೋಟಿಯಸ್—“ಏನು! ಜೂಲಿಯಳೆ!”

ಬಾಲಕ—“ನಿನ್ನ ಎಲ್ಲಾ ಪ್ರಮಾಣಗಳಿಗೂ ಲಕ್ಷ್ಯವನ್ನು ಕೊಟ್ಟು ಅವುಗಳನ್ನು ತನ್ನ ಹೃದಯದಲ್ಲಿ ಆದರದಿಂದಿಟ್ಟುಕೊಂಡ ಅವಳನ್ನು ನೋಡು. ಎಷ್ಟಾವೃತ್ತಿ ನೀನು ಅನೃತ ಪ್ರಮಾಣಗಳಿಂದ ಪ್ರೇಮ ಮೂಲವನ್ನು ಛೇದಿಸಿರುವಿ. ಓ! ಪ್ರೋಟಿಯಸನೇ, ಈ ನಿನ್ನ ಸ್ವಭಾವವು ನಿನ್ನನ್ನು ನಾಚುವಂತೆ ಮಾಡಲಿ. ನನ್ನ ಈ ವೇಷವು ನಿನ್ನನ್ನು ಲಜ್ಜಿಗೊಳಿಸಲಿ. ಪುರುಷರು ತಮ್ಮ ಮನಸ್ಸನ್ನು ವ್ಯತ್ಯಾಸಮಾಡಿಕೊಳ್ಳುವುದಕ್ಕಿಂತಲೂ ಸ್ತ್ರೀಯರು ತಮ್ಮ ರೂಪವನ್ನು ವ್ಯತ್ಯಾಸ ಮಾಡಿಕೊಳ್ಳುವುದು ಮರ್ಯಾದೆಯನ್ನತಿಕ್ರಮಿಸಿದ ಹೆಚ್ಚಿನ ಕಾರ್ಯವಲ್ಲ.”

ಪ್ರೋಟಿಯಸ್—“ಪುರುಷರು ತಮ್ಮ ಮನಸ್ಸನ್ನು ವ್ಯತ್ಯಾಸ ಮಾಡಿಕೊಳ್ಳುವುದು! ಇದು ದಿಟ. ಓ! ಜಗದೀಶನೆ! ಮನುಷ್ಯನಿಗೆ ಸ್ಥಿರಚಿತ್ತವಿದ್ದರೆ ಅವನು ಪರಿಪೂರ್ಣನಾಗಿರುತ್ತಿದ್ದನು ಆ ಒಂದೇ ಒಂದು ದೋಷವು ಅವನಲ್ಲಿ ಎಲ್ಲಾ ಬಗೆಯ ಅಪರಾಧಗಳನ್ನೂ ತುಂಬುವುದು. ಅವನನ್ನು ಸಮಸ್ತ ಪಾಪಮಾರ್ಗದಲ್ಲಿ ಅಲೆದಾಡುವಂತೆ ಮಾಡುವುದು. ಸ್ಥಿರದೃಷ್ಟಿಯಿಂದ ನೋಡುವಲ್ಲಿ ಸೆಲ್ವಿಯಳ ರೂಪಲಾವಣ್ಯಕ್ಕಿಂತ ಜೂಲಿಯಳ ಸೌಂದರ್ಯವು ನೂತನವಾಗಿಯೇ ಕಾಣುತ್ತಿರುವುದು.”

ವೆಲಂಟೈನ್—“ಬನ್ನಿರಿ, ಬನ್ನಿರಿ, ನಿಮ್ಮಿರ್ವರ ಹಸ್ತಗಳನ್ನೂ ಒಂದುಗೂಡಿಸುವ ಸುಕೃತವು ನನಗೆ ಲಭ್ಯವಾದುದರಿಂದ ನಾನೇ ಧನ್ಯನು. ಇಂತಹ ಸ್ನೇಹಿತರಿಬ್ಬರು ಇನ್ನೂ ಹೆಚ್ಚುಕಾಲ ಶತ್ರುಗಳಾಗಿರುವುದು ಶೋಚನೀಯವಾದ ಸಂಗತಿಯು.”

ಪ್ರೋಟಿಯಸ್—“ದೇವರ ಸಾಕ್ಷಿಯಾಗಿಯೂ ನನಗೆ ನನ್ನಭೀಷ್ಟವು ಸಿದ್ಧಿಸಿತು.”

ಜೂಲಿಯ—“ನನಗೂ ದೇವರ ದಯೆಯಿಂದ ಇಷ್ಟಸಿದ್ಧಿಯಾಯಿತು.”

ಇಷ್ಟರಲ್ಲಿಯೇ ಡ್ಯೂಕನು ತನ್ನ ಮಗಳನ್ನು ಹುಡುಕಿಕೊಂಡು ಹೊರಟು, ಥ್ಯೂರೋವಿನೊಡನೆ ಅರಣ್ಯಕ್ಕೆ ಬಂದನು. ಅಲ್ಲಿ ಆ ಕಳ್ಳರು ಅವರನ್ನು ಮುತ್ತಿ ತಮ್ಮೊಡೆಯನಲ್ಲಿಗೆ ಕೊಂಡೊಯ್ದರು. ಇವರನ್ನು ವೆಲಂಟೈನನು ನೋಡಿ, "ಹಿಂದಿರಿ, ಹಿಂದಿರಿ. ಈತನು ನನ್ನೊಡೆಯನಾದ ಮೈಲಾನಿನ ಡ್ಯೂಕ್. ಮಹಾಸ್ವಾಮಿಯವರಿಂದ ಅವಮಾನಿತನಾಗಿ ಗಡಿಪಾರುಮಾಡಲ್ಪಟ್ಟ ವೆಲಂಟೈನನು ನಿಮ್ಮನ್ನು ವಂದಿಸುವನು."

ಡೂಕ್—"ವೆಲಂಟೈನನೇ!"

ಥ್ಯೂರೋ—"ಹಿಂದೆ ಸೆಲ್ವಿಯಳಿದ್ದಾಳೆ. ಅವಳು ನನ್ನವಳು."

ವೆಲಂಟೈನ್—"ಥ್ಯೂರೋ, ಜಾಗರೂಕನಾಗಿರು. ನನ್ನ ಕೋಪಕ್ಕೆದುರಾಗಬೇಡ; ಸೆಲ್ವಿಯಳನ್ನು ನನ್ನವಳೆಂದರೆ ಮೃತ್ಯುದೇವಿಯನ್ನಾಲಿಂಗನ ಮಾಡಿಕೊಳ್ಳುವಿ; ಇದೊ! ಅವಳಲ್ಲಿರುವಳು. ಅವಳ ಮೇಲಿನಿಂದ ಬರುವ ವಾಯುವನ್ನೂ ಸಹ ಉಚ್ಛ್ವಾಸಿಸಲು ಆಶೆಪಡಬೇಡ."

ಥ್ಯೂರೋ—"ವೆಲಂಟೈನನೇ, ಅವಳ ಮೇಲೆ ನನಗೇನೂ ಅಭಿಮಾನವಿಲ್ಲ. ತನ್ನನ್ನು ಪ್ರೀತಿಸದ ನಾರಿಯನ್ನು ಮೋಹಿಸುವವನು ಹೆಡ್ಡನೆಂದು ಭಾವಿಸುವೆನು. ಅವಳು ನಿನ್ನವಳಾಗಿರಲಿ.

ಡ್ಯೂಕ್—"ಛಿ! ಛಿ! ತುಚ್ಛನಾದ ಅಲ್ಪನೆ! ನೀನು ಅವಳಿಗಾಗಿ ಅಷ್ಟೊಂದು ಪ್ರಯತ್ನಗಳನ್ನು ಮಾಡಿ, ಈ ಅಲ್ಪ ಕಾರಣಗಳಿಗಾಗಿ ಬಿಟ್ಟು ಬಿಡುವುದೆ? ವೆಲಂಟೈನನೇ, ನನ್ನ ಸದ್ವಂಶ ಸಾಕ್ಷಿಯಾಗಿಯೂ ನಿನ್ನ ಯೋಗ್ಯತೆಯನ್ನು ಮೆಚ್ಚಿರುವೆನು. ನೀನು ಚಕ್ರೇಶ್ವರನ ಕುವರಿಯ ಪಾಣಿಗ್ರಹಣಕ್ಕೂ ಅರ್ಹನೆಂದು ನೆನಸುವೆನು. ನನ್ನ ದುಃಖವನ್ನೆಲ್ಲಾ ಮರೆತೆನು. ಮಾತ್ಸರ್ಯವನ್ನು ಳಿದೆನು. ನಿನ್ನ ಅನ್ಯಾದೃಶವಾದ ಯೋಗ್ಯತೆಯನ್ನು ಪ್ರತಿಪಾದಿಸುವೆನು. ಇದಕ್ಕಾಗಿ ನಾನಿಂತು ಹೇಳುವೆನು. ಮಹಾಶಯನಾದ ವೆಲಂಟೈನನೇ, ನೀನು ಘನವಂತನು, ಉನ್ನತ ಕುಲೋತ್ಪನ್ನನು, ಇಂಥ ನೀನು ನನ್ನ ಕುವರಿಯಾದ ಸೆಲ್ವಿಯಳಿಗೆ ಅನುರೂಪನಾದುದರಿಂದ ಅವಳನ್ನು ಪರಿಗ್ರಹಿಸು."

ವೆಲಂಟೈನ್—"ಸ್ವಾಮಿ, ತಮ್ಮ ಕೃಪೆಗೆ ಕೃತಜ್ಞನಾಗಿದ್ದೇನೆ. ಈ ಸಂಭಾವನೆಯು ನನ್ನನ್ನು ಹರ್ಷಗೊಳಿಸಿತು. ತಮ್ಮ ಕುವರಿಗೋಸ್ಕರವಾಗಿ ನಾನು ತಮ್ಮನ್ನು ಕೇಳಿಕೊಳ್ಳುವ ಒಂದು ವರವನ್ನು ಅನುಗ್ರಹಿಸಬೇಕೆಂದು ಬೇಡುವೆನು."

ಡ್ಯೂಕ್—"ನಿನಗೋಸ್ಕರವಾದರೆ ಅನುಗ್ರಹಿಸುವುದಿಲ್ಲವೆ? ಅದೇನೇ ಆಗಿರಲಿ ಕೊಡುವೆನು."

ವೆಲಂಟೈನ್—"ನನ್ನೊಡನಿರುವ ಈ ಗಡೀಪಾರು ಮಾಡಲ್ಪಟ್ಟ ಜನರೆಲ್ಲರೂ ಮಾನ್ಯವಾದ ಗುಣಗಳಿಂದ ಅನುಗ್ರಹೀತರಾದವರು. ಇವರ ಹಿಂದಿನ ಅಪರಾಧಗಳನ್ನು ಕ್ಷಮಿಸಿ, ವನವಾಸದಿಂದ ಹಿಂತಿರುಗಿ ಬರುವಂತೆ ಆಜ್ಞೆಯಾಗಲಿ. ಇವರು ಸಂಸ್ಕಾರವನ್ನು ಹೊಂದಿದವರೂ ಮರ್ಯಾದೆಯುಳ್ಳವರೂ ಗುಣವಂತರೂ ಆಗಿರುವರು. ಘನವಂತನಾದ ಒಡೆಯನೇ, ಇವರು ಮಹತ್ಕಾರ್ಯಗಳಲ್ಲಿ ನೇಮಿಸಲ್ಪಡಲು ಅರ್ಹತೆಯುಳ್ಳವರಾಗಿದ್ದಾರೆ."

ಡ್ಯೂಕ್—"ನೀನು ಜಯಶಾಲಿಯಾದೆ. ನಾನು ನಿನ್ನನ್ನೂ ಇವರನ್ನೂ ಮನ್ನಿಸಿದ್ದೇನೆ. ನೀನಿವರ ಯೋಗ್ಯತೆಯನ್ನು ಬಲ್ಲವನಾದುದರಿಂದ ನಿನ್ನ ಮನವೊಲಿದಂತೆ ಮಾಡು. ಬನ್ನಿರಿ, ಹೋಗೋಣ. ಜಯೋತ್ಸವಗಳಿಂದಲೂ ವಿನೋದಗಳಿಂದಲೂ ಅಪೂರ್ವವಾದ ಉತ್ಸವಗಳಿಂದಲೂ ಸಂತಸಪಡೋಣ."

ವೆಲಂಟೈನ್—"ದಾರಿಯಲ್ಲಿ ಹೋಗುತ್ತ ನಮ್ಮ ಸಲ್ಲಾಪಗಳಿಂದ ತಮ್ಮನ್ನು ನಗುವಂತೆ ಮಾಡುವುದರಲ್ಲಿ ಧೈರ್ಯವನ್ನು ಕೈಗೊಳ್ಳುವೆನು. ಪ್ರಭುವೇ, ಈ ಬಾಲಭೃತ್ಯನ ವಿಷಯವಾಗಿ ಏನು ಯೋಚಿಸುವಿರಿ?"

ಡ್ಯೂಕ್—"ಮಾಸಿಷ್ಠನಾಗಿಯೂ ಲಜ್ಜಾನ್ವಿತನಾಗಿಯೂ ತೋರುವನು."

ವೆಲಂಟೈನ್—"ಸ್ವಾಮೀ, ಬಾಲಕನಿಗಿಂತಲೂ ಹೆಚ್ಚು ಮಾನಾಪೇಕ್ಷಿಯೆಂದು ದೃಢವಾಗಿ ಹೇಳುವೆನು.

ಡ್ಯೂಕ್—"ಇದರಲ್ಲಿ ನಿನ್ನ ತಾತ್ಪರ್ಯವೇನೋ ತಿಳಿಯಲಿಲ್ಲ."

ವೆಲಂಟೈನ್—"ಪ್ರಭುವೇ, ದಾರಿಯಲ್ಲಿ ಹೇಳುವೆನು. ದೈವವಿಲಾಸದಿಂದೇನೇನಾಗಿರುವುದೆಂದು ಆಶ್ಚರ್ಯಪಡುವಿರಿ; ಪ್ರೋಟಿಯಸ್, ಬಾ. ನಿನ್ನ ಪ್ರೇಮವಿಚಾರವಾಗಿ ತಿಳಿಯಬಂದಿರುವ ಕಥೆಯನ್ನು ನೀನು ಕೇಳಬೇಕಾದುದು ನಿನಗೆ ಪ್ರಾಯಶ್ಚಿತ್ತವಾಯಿತು. ಒಂದೇ ಮನೆಯಲ್ಲಿ ಏಕೀಭವಿಸಿದ ಸಂತೋಷದ ಒಂದೇ ಉತ್ಸವದಲ್ಲಿ ನಮ್ಮ ವಿವಾಹದ ದಿನವೇ ನಿನಗೂ ವಿವಾಹದ ದಿನವಾಗಿರುವುದು" ಎಂದು ಎಲ್ಲರೂ ಮೈಲಾನ್ ನಗರವನ್ನು ತಲಪಿದರು. ಅರಮನೆಯಲ್ಲಿ ಈ ಉಭಯ ವಿವಾಹಗಳೂ ವಿಧಿಕ್ರಿಯೆಗಳಿಗನುಗುಣವಾಗಿ ಮಹಾ ವೈಭವಾಡಂಬರಗಳಿಂದ ನಡೆದುವು.

# IV. CYMBELINE

# ೪. ಸಿಂಬಲೀನ್

ಅಗಸ್ಟಸ್ ಸೀಸರನು ರೋಮನ್ ಚಕ್ರಾಧಿಪತ್ಯವನ್ನು ಆಳುತ್ತಿದ್ದ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಸಿಂಬಲೀನನು ನೃಪನಾಗಿದ್ದನು. ಸಿಂಬಲೀನನ ಮೊದಲಿನ ಭಾರ್ಯೆಯು ತನ್ನ ಇಬ್ಬರು ಗಂಡುಮಕ್ಕಳೂ ಒಂದು ಹೆಣ್ಣುಮಗುವೂ ಚಿಕ್ಕವಯಸ್ಸಿನಲ್ಲಿದ್ದಾಗಲೇ ಮೃತಳಾದಳು. ಈ ಮಕ್ಕಳಲ್ಲಿ ಹಿರಿಯವಳಾದ ಐಮೊಜನಳು ಪ್ರಭುವಿನ ಆಸ್ಥಾನದಲ್ಲಿ ಬೆಳಸಲ್ಪಟ್ಟಳು. ಆ ಇಬ್ಬರು ಗಂಡುಮಕ್ಕಳಲ್ಲಿ ಒಂದು ಮೂರುವರ್ಷ ವಯಸ್ಸಿನದಾಗಿಯೂ ಇನ್ನೊಂದು ತೊಟ್ಟಲಿನ ಮಗುವಾಗಿಯೂ ಇದ್ದಾಗಲೇ ಅಪಹರಿಸಲ್ಪಟ್ಟವು. ಅವು ಏನಾದುವೆಂಬುದಾಗಲಿ ಯಾರಿಂದ ಹೇಗೆ ಅಪಹೃತವಾದುವೆಂಬುದಾಗಲಿ ಸಿಂಬಲೀನನಿಂದ ಅರಿಯಲಸದಳವಾಗಿತ್ತು.

ಅರಸನು ಮತ್ತೆ ವಿವಾಹವಾದನು. ಈ ರಾಣಿಯು ನೀಚಳಾಗಿಯೂ ಕುಯುಕ್ತಿಗಾತಿಯಾಗಿಯೂ ಅರಸಿನ ಪ್ರಥಮ ಭಾರ್ಯೆಯ ಪುತ್ರಿಯಾದ ಐಮೊಜನಳಲ್ಲಿ ಕಠಿಣಳಾಗಿಯೂ ಇದ್ದಳು.

ಅರಸಿನ ಗಂಡುಮಕ್ಕಳು ಅಪಹರಿಸಲ್ಪಟ್ಟವರಾಗಿ ಪುನಃ ದೊರೆಯುವ ಸಂಭವವಿಲ್ಲದಿರುವುದರಿಂದ ಮುಂದೆ ಅರಸಿನ ಏಕ ಪುತ್ರಿಯಾದ ಐಮೊಜನಳು ರಾಜ್ಯದ ಉತ್ತರಾಧಿಕಾರಿಣಿಯಾಗುವುದರಿಂದ ಬ್ರಿಟನ್ ಅರಸುತನವು ತನ್ನ ಪೂರ್ವಪತಿಯ ಕುಮಾರನಾದ ಕ್ಲೋಟನಿಗಾಗಬೇಕೆಂದು ಈ ರಾಣಿಯು ಅವನಿಗೆ ಇವಳನ್ನು ಪಾಣಿಗ್ರಹಣ ಮಾಡಿಸಲಪೇಕ್ಷಿಸುತ್ತಿದ್ದಳು.

ರಾಜಪುತ್ರಿಯು ಅರಸಿನ ಮತ್ತು ಅರಸಿತಿಯ ತಿಳುವಳಿಕೆ ಸಮ್ಮತಿಗಳಿಲ್ಲದೆಯೇ ಇನ್ಸೊಟ್ಟನನ್ನು ಮದುವೆಯಾಗಿದ್ದುದರಿಂದ ಈ ಉದ್ದೇಶಕ್ಕೆ ಪ್ರತಿಬಂಧಕವಾಗಿತ್ತು.

ರಾಜಕುಮಾರಿಯ ಪತಿಯಾದ ಪಾಸ್ತುಮಸನು ಆ ಕಾಲದ ಕಲೆಗಳನ್ನರಿತ ವಿದ್ಯಾವಂತನಾಗಿಯೂ ಸುಗುಣಶಾಲಿಯಾದ ಘನವಂತನಾಗಿಯೂ ಇದ್ದನು. ಇವನ ತಂದೆಯು ಸಿಂಬಲೀನನಿಗಾಗಿ ರಣರಂಗ

ದಲ್ಲಿ ಮುಡಿದುಹೋದನು. ಇವನ ತಾಯಿಯು ಇವನು ಹುಟ್ಟಿದ ಸ್ವಲ್ಪ ಕಾಲದಲ್ಲಿಯೇ ಪತಿವಿಯೋಗಶೋಕದಿಂದ ಮೃತಳಾದಳು.

ಈ ಅನಾಥನಾದ ಬಾಲಕನಲ್ಲಿ ನೃಪತಿಯು ಕನಿಕರಗೊಂಡು ತನ್ನ ಅರಮನೆಗೆ ಕರೆತಂದು ತಂದೆಯ ಮರಣಾನಂತರ ಹುಟ್ಟಿದಕಾರಣ ಪಾಸ್ತುಮಸ್ ಎಂದು ನಾಮಕರಣಮಾಡಿ, ತನ್ನ ಆಸ್ಥಾನದಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿಸಿದನು.

ಐಮೊಜನಳೂ ಪಾಸ್ತುಮಸನೂ ಬಾಲ್ಯದಿಂದಲೂ ಒಡನಾಡಿಗಳಾಗಿಯೂ ಸಹಪಾಠಿಗಳಾಗಿಯೂ ಇದ್ದರು. ಇವರು ಚಿಕ್ಕಮಕ್ಕಳಾಗಿದ್ದಾಗ್ಗೆ ಒಬ್ಬರನ್ನೊಬ್ಬರು ವಿಶೇಷವಾಗಿ ಪ್ರೀತಿಸುತ್ತಿದ್ದರು. ಇವರು ಬೆಳೆಯುತ್ತಾ ಬಂದಹಾಗೆಲ್ಲಾ ಇವರ ವಿಶ್ವಾಸವು ಬೆಳೆಯುತ್ತ ವಯಸ್ಕರಾಗಲು ಏಕಾಂತದಲ್ಲಿ ವಿವಾಹಿತರಾದರು.

ಅರಸಿತಿಯು ತನ್ನ ಸವತಿಯ ಮಗಳ ಕೃತ್ಯಗಳನ್ನು ಸರ್ವದಾ ಜಾಗರೂಕತೆಯಿಂದ ಕಾಯುತ್ತಿರುವುದಕ್ಕಾಗಿ ಎಚ್ಚರಿಕೆಯಿಂದಿರುವಂತೆ ಬೇಹುಗಾರರನ್ನು ನಿಯಮಿಸಿದ್ದುದರಿಂದ ಈ ಗುಟ್ಟಾದ ವಿವಾಹದ ವಿಷಯವನ್ನರಿತು ಆಶಾಭಂಗವನ್ನು ಹೊಂದಿ ಪಾಸ್ತುಮಸ್ ಮತ್ತು ಐಮೊಜನರು ವಿವಾಹಿತರಾದರೆಂದು ಅರಸಿಗೆ ತಿಳಿಸಿದಳು.

ಅರಸನು ತನ್ನ ಮಗಳು ಪ್ರಜೆಗಳಲ್ಲಿ ಒಬ್ಬನನ್ನು ಮದುವೆಯಾಗುವಷ್ಟುಮಟ್ಟಿಗೂ ತನ್ನ ಪದವಿ ಗೌರವಗಳನ್ನು ಮರೆತುಬಿಟ್ಟಿರುವುದಾಗಿ ಕೇಳಿ ಕೋಪಾಕ್ರಾಂತನಾದನು. ಈ ರೌದ್ರಕ್ಕೆ ಸರಿಸಮವಾದುದು ಆವುದೂ ಇರಲಿಲ್ಲವಾದುದರಿಂದ ಪಾಸ್ತುಮಸನನ್ನು ಬ್ರಿಟನ್ ಬಿಟ್ಟು ಹೊರಟುಹೋಗಬೇಕೆಂದೂ ಅವನು ಹಿಂತಿರುಗಿ ತನ್ನ ಜನ್ಮಭೂಮಿಗೆ ಎಂದಿಗೂ ಬರಕೂಡದೆಂದೂ ಆಜ್ಞೆಮಾಡಿದನು. ಅರಸಿತಿಯು ಐಮೊಜನಗಳಿಗೆ ಪತಿಯನ್ನಗಲಬೇಕಾಗಿ ಬಂದ ದುಃಖಕ್ಕಾಗಿ ಸಂತಾಪಗೊಂಡಂತೆ ನಟಿಸುತ್ತ, ಗಡೀಪಾರಾದ ಪಾಸ್ತುಮಸನು ರೋಮಿಗೆ ಹೊರಟುಹೋಗುವುದಕ್ಕೆ ಮುಂಚಿತವಾಗಿ ಇವರು ಏಕಾಂತವಾಗಿ ಪರಸ್ಪರ ಸಂದರ್ಶನಗಳನ್ನು ತೆಗೆದುಕೊಳ್ಳಲು ಅನುಕೂಲಮಾಡಿಕೊಡುವುದಾಗಿ ಹೇಳಿದಳು. ಪಾಸ್ತುಮಸನು ಹೊರಟುಹೋದನಂತರದಲ್ಲಿ ಅರಸಿನ ಅಭಿಮತವಿಲ್ಲದೆ ಮಾಡಿಕೊಂಡ ಈ ವಿವಾಹವು ನ್ಯಾಯಸಮ್ಮತವಲ್ಲವೆಂದು ಐಮೊಜನಗಳಿಗೆ ಹೇಳಿ, ತನ್ನ ಅಭಿಲಾಷೆಗೆ ಒಡಂಬಡುವಂತೆ ಮಾಡಿಕೊ

ಳ್ಳಬೇಕೆಂಬ ಕೋರಿಕೆಯಿಂದ ತನ್ನ ಮಗನಾದ ಕ್ಲೋಟನ ಮೇಲಿನ ಅಭಿಮಾನದಿಂದಲೇ ಈ ಕನಿಕರವನ್ನು ತೋರಿಸಿದಳು.

ಐಮೊಜನಳು ತನ್ನ ಕೈಲಿದ್ದ ತಾಯಿಯ ರತ್ನದ ಉಂಗುರವನ್ನು ಪಾಸ್ತುಮಸನಿಗೆ ಕೊಟ್ಟಳು. ಪಾಸ್ತುಮಸನು ಆ ಅಂಗುಳೀಯಕವನ್ನು ಪರಿತ್ಯಜಿಸದೆ ಇಟ್ಟುಕೊಂಡಿರುವುದಾಗಿ ವಾಗ್ದಾನಮಾಡಿದನು. ಅನಂತರದಲ್ಲಿ ಪಾಸ್ತುಮಸನು ತನ್ನ ನಲ್ಲಳ ತೋಳಿಗೆ ಒಂದು ಬಳೆಯನ್ನು ತನಗೋಸ್ಕರ ಧರಿಸಿಕೊಳ್ಳಬೇಕೆಂದು ತೊಡಿಸಿದನು ಆಕೆಯು ಅದನ್ನು ಬಹು ವಿಶ್ವಾಸಜಾಗರೂಕತೆಗಳಿಂದ ಧರಿಸಿಕೊಂಡಿರುವುದಾಗಿ ಮಾತು ಕೊಟ್ಟಳು. ಆಮೇಲೆ ಕಡೆಗಾಣದ ವಿಯೋಗದುಃಖಕ್ಕಾಗಿ ಹಂಬಲಿಸುತ್ತ ಒಬ್ಬರನ್ನೊಬ್ಬರು ಅಗಲಿದರು.

ಹೀಗೆ ಐಮೊಜನಳು ಚಿಂತಾಕ್ರಾಂತಳಾಗಿ ಯಾರಿಂದಲೂ ಆದರ ಪಡೆಯದೆ ಏಕಾಂತವಾಸದಲ್ಲಿದ್ದಳು. ಅತ್ತಕಡೆ ಪಾಸ್ತುಮಸನು ತನ್ನ ಗಡೀಪಾರಿನ ಜೀವಿತವನ್ನು ಕಳೆಯ ಬೇಕೆಂದಿದ್ದ ರೋಮನ್ನು ಸೇರಿ ತನ್ನ ದೇಶದ ನಾರಿಯರನ್ನೂ ಅದರಲ್ಲಿಯೂ ವಿಶೇಷವಾಗಿ ಸ್ವಸ್ತ್ರೀಯನ್ನೂ ಶ್ಲಾಘಿಸುತ್ತ ತಡೆಬಡೆಯಿಲ್ಲದೆ ವನಿತೆಯರ ವಿಚಾರವಾಗಿಯೇ ಮಾತನಾಡುತ್ತಲಿದ್ದ ಉಲ್ಲಾಸಗಾರರಾದ ನಾನಾ ದೇಶೀಯರ ಜತೆಯಲ್ಲಿ ಬಿದ್ದನು. ತನ್ನ ಹೃದಯದಲ್ಲಿ ಶಾಶ್ವತವಾಗಿರುವ ತನ್ನ ಪ್ರಿಯ ಪತ್ನಿಯಾದ ಐಮೊಜನಳು ಈ ಭೂಮಂಡಲದಲ್ಲೆಲ್ಲಾ ಅನ್ಯಾದೃಶವಾದ ಪ್ರಾಜ್ಞಳೆಂದೂ ಸ್ಥಿರಚಿತ್ತವುಳ್ಳವಳೆಂದೂ ಪಾಸ್ತುಮಸನು ಶ್ಲಾಘಿಸಿದನು.

ಆ ಸಮಾಜದಲ್ಲಿದ್ದವರಲ್ಲಿ ಐಯಾಚಿಮೊ ಎಂಬೊಬ್ಬನು ತನ್ನ ದೇಶೀಯರಾದ ರೋಮನ್ ವನಿತೆಯರಿಗಿಂತಲೂ ಬ್ರಿಟನ್ ನಾರಿಯು ವಿಶೇಷ ಸ್ತುತ್ಯಳಾದುದರಿಂದ ವಿವಾದಗೊಂಡು, ಅಷ್ಟೊಂದು ಸ್ತುತ್ಯಳಾದ ಅವನ ಭಾರ್ಯೆಯ ಸ್ಥೈರ್ಯದ ವಿಷಯದಲ್ಲಿ ಸಂಶಯಗೊಂಡವನಾಗಿ ಪಾಸ್ತುಮಸನನ್ನು ಕೆರಳಿಸಿದನು. ಹೀಗೆ ಬಹು ವಾಗ್ವಾದ ನಡೆದ ಮೇಲೆ ಕಟ್ಟಕಡೆಗೆ ಐಯಾಚಿಮೋವಿನ ಅಭಿಪ್ರಾಯದಂತೆ ಅವನು ಬ್ರಿಟನ್‌ಗೆ ಹೋಗಿ ತನ್ನ ಪತ್ನಿಯಾದ ಐಮೊಜನಳ ಪ್ರೀತಿಯನ್ನು ಸಂಪಾದಿಸಲು ಪ್ರಯತ್ನಪಡಬಹುದೆಂದು ಅಂಗೀಕರಿಸಿದನು. ಐಯಾಚಿಮೊವು ತನ್ನ ದುರುದ್ದೇಶದಲ್ಲಿ ಜಯಶಾಲಿಯಾಗದಿದ್ದಲ್ಲಿ ಪಾಸ್ತುಮಸನಿಗೆ ವಿಶೇಷ ದ್ರವ್ಯವನ್ನು ಕೊಡಬೇಕೆಂದೂ, ಆಕೆಯ ಪ್ರೇಮವನ್ನು ಸಂಪಾದಿಸಿಕೊಂಡು ತನ್ನ ಪ್ರೀತಿಯ

ಸಂಭಾವನೆಯಾಗಿ ಸರ್ವದಾ ಧರಿಸಿಕೊಂಡಿರಬೇಕೆಂದು ಪಾಸ್ತುಮಸನು ಆಕೆಯ ತೋಳಿಗೆ ತೊಡಿಸಿದ ತೋಳ್ಬಂದಿಯನ್ನು ಪಡೆದಲ್ಲಿ ಐಯಾಚಿಮೊ ಏಗೆ ಪಾಸ್ತುಮಸನು ತನ್ನ ಭಾರ್ಯೆಯನ್ನು ಅಗಲಿ ಬರುವ ಕಾಲದಲ್ಲಿ ಆಕೆಯು ಕೊಟ್ಟ ಪ್ರೇಮಸಂಭಾವನೆಯಾದ ರತ್ನದುಂಗರವನ್ನು ಕೊಡ ಬೇಕೆಂದೂ ಪಂಥವನ್ನು ಮಾಡಿಕೊಂಡರು. ಆಕೆಯು ವಿಶೇಷವಾದ ನಂಬುಗೆಗೆ ಪಾತ್ರಳಾದ ಕಾರಣದಿಂದ ಪಾಸ್ತುಮಸನು ತನ್ನ ಸತಿಯ ಮಾನ ವನ್ನು ಪರೀಕ್ಷಿಸುವ ಈ ಕಾರ್ಯದಲ್ಲಿ ಅಪಾಯಕ್ಕೆ ಗುರಿಯಾಗುವುದಾಗಿ ಯೋಚಿಸಲಿಲ್ಲ.

ಐಯಾಚಿಮೊವು ಹೊರಟು ಬ್ರಿಟನ್ ತಲಪುತ್ತಲೇ ಅರಮನೆಗೆ ಪ್ರವೇ ಶಾಸ್ಪದವನ್ನೂ ನಿನ್ನ ಪತಿಯ ಸ್ನೇಹಿತನೆಂದು ಹೇಳಿದ ಕಾರಣ ಐಮೊ ಜನಳಿಂದ ಪ್ರೀತಿಪೂರ್ವಕವಾದ ಸ್ವಾಗತವನ್ನು ಹೊಂದಿದನು. ಆದರೆ ಇವನು ಆಕೆಯೊಡನೆ ತನ್ನ ಪ್ರೇಮಾತಿಶಯವನ್ನು ಹೇಳಿಕೊಳ್ಳುವುದಕ್ಕೆ ಉಪಕ್ರಮಿಸಲು ಆಕೆಯು ಇವನನ್ನು ತಿರಸ್ಕಾರಮಾಡಿ, ತಲೆ ಬೊಗ್ಗಿಸಿ ಕೊಳ್ಳುವಂತೆ ಮಾಡಿದುದರಿಂದ ತನ್ನ ಅಯೋಗ್ಯವಾದ ಉದ್ದೇಶದಲ್ಲಿ ಗೆಲ್ಲುವ ಸಂಭವವಿಲ್ಲವೆಂದು ಭಗ್ನಮನೋರಥನಾದನು

ಶಪಥದಲ್ಲಿ ಜಯಶೀಲನಾಗುವುದುಕ್ಕಾಗಿ ಐಯಾಚಿಮೊವು ಪಾಸ್ತು ಮಸನನ್ನು ಮೋಸಗೊಳಿಸುವ ಇನ್ನೊಂದು ಯುಕ್ತಿಯನ್ನು ಆಶ್ರಯಿಸಿ ದನು. ಈ ಉದ್ದೇಶದಿಂದ ಇವನು ಐಮೊಜನಳ ದಾಸಿಯರಲ್ಲಿ ಕೆಲವರಿಗೆ ಲಂಚಕೊಟ್ಟು ತಾನು ಒಂದು ದೊಡ್ಡ ಪೆಟ್ಟಿಗೆಯಲ್ಲಿ ಅಡಗಿಕೊಂಡಿದ್ದು ಆಕೆಯ ಶಯನಗೃಹಕ್ಕೊಯ್ಯಲ್ಪಟ್ಟು ಆಕೆಯು ಮಲಗಿ ನಿದ್ರೆಗೈಯುವ ವರೆಗೂ ಆ ಪೆಟ್ಟಿಗೆಯಲ್ಲಿಯೇ ಇದ್ದನು. ಅನಂತರದಲ್ಲಿ ಪೆಟ್ಟಿಗೆಯಿಂದ ಹೊರಕ್ಕೆ ಎದ್ದುಬಂದು ಆ ಕೊಠಡಿಯನ್ನೆಲ್ಲಾ ಬಲು ಚೆನ್ನಾಗಿ ಪರೀಕ್ಷಿಸಿ ತಾನು ಕಂಡವುಗಳನ್ನೆಲ್ಲಾ ಗುರುತುಮಾಡಿಕೊಂಡು ಮುಖ್ಯವಾಗಿ ತಾನು ಕಂಡ ಐಮೊಜನಳ ಕುತ್ತಿಗೆಯ ಮೇಲಣ ಮಚ್ಚೆಯನ್ನು ಜ್ಞಾಪಕವಿಟ್ಟುಕೊಂಡು ಪಾಸ್ತುಮಸನು ಅವಳಿಗೆ ಕೊಟ್ಟಿದ್ದ ಕೈಗಡಗ ವನ್ನು ಅವಳ ತೋಳಿನಿಂದ ಮತ್ತಗೆ ಕಳಚಿಕೊಂಡು ಪುನಃ ತನ್ನ ಪೆಟ್ಟಿಗೆ ಯೊಳಗೆ ಅಡಗಿಕೊಂಡನು

ಮರುದಿನ ಅತಿತ್ವರೆಯಾಗಿ ರೋಮಿಗೆ ಪ್ರಯಾಣ ಹೊರಟು ಹೋಗಿ ಪಾಸ್ತುಮಸನಲ್ಲಿ ಆಕೆಯು ತನ್ನ ತೋಳ್ಬಂದಿಯನ್ನು ಕೊಟ್ಟಳೆಂದೂ ಒಂದು

ರಾತ್ರಿ ಅವಳ ಅಂತಃಪುರದಲ್ಲಿರಲನುಮತಿ ಕೊಟ್ಟಳೆಂದೂ ಐಯಾಚಿಮೊವು ತನ್ನ ಕಟ್ಟುಕಥೆಯನ್ನುಪಕ್ರಮಿಸಿದನು.

"ಆಕೆಯಂತಃಪುರವು ರೇಷ್ಮೆ, ಚಿನ್ನ ಬೆಳ್ಳಿಗಳಿಂದ ಮಾಡಿದ ತೆರೆಗಳಿಂದಲಂಕರಿಸಲ್ಪಟ್ಟಿದೆ. ಆಕೆಯು ದಿಟ್ಟತನವುಳ್ಳ ಕ್ಲಿಯೋಪ್ಯಾಟ್ರಾಳು ತನ್ನ ಆಂಟೋನಿಯನ್ನು ಕಂಡ ಸಂದರ್ಭವನ್ನೋದುತ್ತಲಿದ್ದಳು'' ಎಂದನು.

ಪಾಸ್ತುಮಸ್—"ಇದು ದಿಟ ಇದನ್ನು ನೋಡದಿದ್ದಾಗ್ಯೂ ಕೇಳಿ ಅರಿತಿರಬಹುದು.''

ಐಯಾಚಿಮೊ —"ಕೊಠಡಿಯಲ್ಲಿ ಅಗ್ಗಿಷ್ಟಿಗೆಯು ದಕ್ಷಿಣದ ಕಡೆಯಲ್ಲಿದೆ. ಅಗ್ಗಿಷ್ಟಿಗೆಯ ಕೊಳವೆಯು ಡಿಯಾನಳು ಸ್ನಾನ ಮಾಡುತ್ತಲಿರುವ ಪ್ರತಿಮೆಯಾಗಿ ಮಾಡಲ್ಪಟ್ಟಿದೆ. ಆ ಪ್ರತಿಮೆಯಂತೆ ಸಜೀವವಾಗಿ ತೋರುವ ಇನ್ನೊಂದನ್ನು ನಾನೀವರಿಗೆಲ್ಲಿಯೂ ಕಾಣೆನು.''

ಪಾಸ್ತುಮಸ್—"ಈ ವಿಚಾರವು ಜನಜನಿತವಾಗಿದೆ. ಇದನ್ನೂ ನೀನು ಕೇಳಿರಬಹುದು''

ಐಯಾಚಿಮೊವು ಅಲ್ಲಿ ತಾನು ಕಂಡ ಎಲ್ಲಾ ವಿಧವಾದ ಸಂಗತಿಯನ್ನೂ ವಿವರಿಸಿ, ತಾನು ತಂದಿದ್ದ ಆಕೆಯ ತೋಳ್ಬಂದಿಯನ್ನು ತೋರಿಸಿ, "ಸ್ವಾಮಿ, ಈ ಆಭರಣವನ್ನು ನೀವು ಬಲ್ಲಿರಾ? ಇದನ್ನು ಆಕೆಯು ತನ್ನ ತೋಳಿನಿಂದ ತೆಗೆದು ನನಗೆ ಕೊಟ್ಟಳು. ಆಕೆಯ ರೂಪವು ಇನ್ನೂ ನನ್ನ ಕಣ್ಣೆದುರಿಗೇ ಇದೆ. ಆಕೆಯ ಮನೋಹರವಾದ ವಿಲಾಸಾಭಿನಯವು ಆಕೆಯು ಕೊಟ್ಟ ಸಂಭಾವನೆಗಿಂತಲೂ ಹೆಚ್ಚು ಮೌಲ್ಯವುಳ್ಳುದಾಗಿದ್ದರೂ ಅದನ್ನು ಅಲಂಕಾರಗೊಳಿಸಿತು. ಆಕೆಯು ನನಗಿದನ್ನು ಕೊಡುವಾಗ್ಗ ಇದನ್ನು ಒಂದು ಕಾಲದಲ್ಲಿ ತಾನು ಪ್ರೀತಿಸುತ್ತಿದ್ದೆನೆಂದು ಹೇಳಿದಳು'' ಎಂದು ಹೇಳಿ, ಕೊನೆಗೆ ಅವಳ ಕುತ್ತಿಗೆಯ ಮೇಲೆ ತಾನು ನೋಡಿದ್ದ ಮಚ್ಚೆಯನ್ನು ವಿವರಿಸಿದನು.

ಪಾಸ್ತುಮಸನು ಈ ಕಲ್ಪಿತಕಥನವನ್ನು ಕೇಳಿ ಸಂಶಯದಿಂದ ಬಹು ವೇದನೆಯನ್ನು ಹೊಂದಿ, ಕೊನೆಗೆ ಐಮೊಜನಳ ಮೇಲೆ ಅತ್ಯಂತ ಕೋಪಾಕ್ರಾಂತನಾಗಿ ಐಯಾಚಿಮೊವು ಅವಳ ತೋಳ್ಬಳೆಯನ್ನು ತಂದು ತೋರಿಸಿದರೆ ಉಂಗುರವನ್ನು ಕೊಡಲೊಪ್ಪಿಕೊಂಡಿದ್ದ ಶಪಥದಂತೆ ಆ ರತ್ನದುಂಗುರವನ್ನು ಕೊಟ್ಟುಬಿಟ್ಟನು.

ಅನಂತರದಲ್ಲಿ ಪಾಸ್ತುಮಸನು ಸಂಶಯದ ಕೋಪದಿಂದ ತನ್ನ ನಂಬುಕೆಯ ಸ್ನೇಹಿತನೂ ಐಮೊಜನಳ ಅನುಚರನೂ ಆದ ಪೈಸಾನಿಯೊ

ಎಂಬ ಬ್ರಿಟನಿನ ದೊಡ್ಡ ಮನುಷ್ಯನಿಗೆ ಕಾಗದವನ್ನು ಬರೆದನು. ಅದರಲ್ಲಿ ತನ್ನ ಭಾರ್ಯೆಯು ನಂಬುಕೆಗೆ ಅನರ್ಹಳಾಗಿರುವಳೆಂಬುದಕ್ಕೆ ತನಗೆ ಯಾವ ದೃಷ್ಟಾಂತರಗಳು ಬಂದಿವೆಯೆಂಬುದನ್ನು ತಿಳಿಸಿ, ಐಮೊಜನಳನ್ನು ವೇಲ್ಸ್ ತೀರಪಟ್ಟಣವಾದ ಮಿಲ್ಫರ್ಡ್ ಹೇವನ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಸಂಹರಿಸಿಬಿಡೆಂದು ಬರೆದಿದ್ದನು. ಆಗಲೇ ಅವಳಿಗೂ ಒಂದು ಮೋಸಪತ್ರದಲ್ಲಿ ತಾನು ಅವಳನ್ನು ನೋಡದೆ ಇನ್ನು ಸ್ವಲ್ಪ ಕಾಲವು ಬದುಕಿರಲಾರದ ಕಾರಣ ಪೈಸಾನಿಯೊವಿನೊಡನೆ ಮಿಲ್ಫರ್ಡ್ ಹೇವನ್‌ಗೆ ಒರಬೇಕೆಂದೂ ತಾನು ಬ್ರಿಟನ್ನು ಪ್ರವೇಶಿಸಿದರೆ ಮರಣದಂಡನೆಗೆ ಗುರಿಮಾಡಲ್ಪಡುವುದಾಗಿ ರಾಜಾಜ್ಞೆಯಿದ್ದರೂ ಮಿಲ್ಫರ್ಡ್ ಹೇವನ್‌ಗೆ ಬರುವುದಾಗಿಯೂ ಅಲ್ಲಿಗೆ ಅವಳು ಬಂದು ತನ್ನನ್ನು ಕಾಣಬೇಕೆಂದು ಪ್ರಾರ್ಥಿಸುವುದಾಗಿಯೂ ಬರೆದನು. ನಿಸ್ಸಂಶಯ ಪ್ರಕೃತಿಯುಳ್ಳ ಆ ನಿರಪರಾಧಿನಿಯಾದ ನಾರಿಯು ತನ್ನ ಪ್ರಿಯನು ಎಲ್ಲಾ ವಸ್ತುಗಳಿಗಿಂತಲೂ ಶ್ರೇಷ್ಠನಾಗಿರುವನೆಂದೂ ಆತನನ್ನು ನೋಡಲು ಹೆಚ್ಚು ಕುತೂಹಲವುಳ್ಳವಳಾಗಿರುವುದಾಗಿಯೂ ಹೇಳಿಕೊಳ್ಳುತ್ತ, ಆ ಕಾಗದವು ಬಂದ ರಾತ್ರಿಯೇ ಪ್ರಯಾಣ ಹೊರಟಳು.

ಇವರ ಪ್ರಯಾಣವು ಹತ್ತಿರ ಹತ್ತಿರವಾಗಿ ಮುಗಿಯುತ್ತಾ ಬಂದಾಗ ಪೈಸಾನಿಯೊವು ಪಾಸ್ತುಮಸನ ನಂಬಿಕೆಗೆ ಪಾತ್ರನಾದಾಗ್ಯೂ ಅವನ ನೀಚಕಾರ್ಯದಲ್ಲಿ ಅವನಿಗೆ ನಂಬಿಕೆಯಿಂದ ಸೇವೆ ಮಾಡಲೊಲ್ಲದೆ ತಾನು ಪಡೆದಿರುವ ಕ್ರೂರಾಜ್ಞೆಯ ವಿಚಾರವನ್ನು ಐಮೊಜನಳಿಗೆ ತಿಳಿಸಿದನು.

ಐಮೊಜನಳು ಪ್ರೀತಿಪಾತ್ರನಾದ ಪತಿಯನ್ನು ಎದುರುಗೊಳ್ಳುವುದಕ್ಕೆ ಬದಲಾಗಿ ತನ್ನ ಪತಿಯಿಂದ ಮರಣದಂಡನೆಯು ವಿಧಿಸಲ್ಪಟ್ಟುದುದಕ್ಕಾಗಿ ಮಿತಿಮೀರಿದ ದುಃಖವನ್ನು ಹೊಂದಿದಳು.

ಪೈಸಾನಿಯೊವು ಅವಳನನ್ನು ಸಮಾಧಾನ ಹೊಂದುವಂತೆ ಉಪಚರಿಸುತ್ತ, ಪಾಸ್ತುಮಸನು ತನ್ನ ಅಕೃತ್ಯಕ್ಕಾಗಿ ಅನುತಾಪಗೊಳ್ಳುವವರೆಗೆ ಸಹನೆಯನ್ನು ತಾಳಿ ಧೈರ್ಯವನ್ನು ಕೈಗೊಂಡು ಕೆಲವು ಕಾಲ ನಿರೀಕ್ಷಿಸಿಕೊಂಡಿರೆಂದು ಹೇಳಿದನು. ಆಕೆಯು ದುರವಸ್ಥೆಯನ್ನು ಹೊಂದಿ ತನ್ನ ತಂದೆಯ ಅರಮನೆಗೆ ಹೋಗಲು ಒಡಂಬಡಲಿಲ್ಲ. ಆದುದರಿಂದ ಮಾರ್ಗದಲ್ಲಿ ಸುರಕ್ಷಿತವಾಗಿರಲು ಬಾಲಕನುಡಿಗೆಯನ್ನು ಧರಿಸೆಂದು ಆತನು

ಆಕೆಗೆ ಹೇಳಿದ ಹಿತಚಿಂತನೆಯ ಮಾತನ್ನು ಅಂಗೀಕರಿಸಿದಳು. ಈ ರೀತಿ ಯಲ್ಲಿ ವೇಷವನ್ನು ಬದಲಾಯಿಸಿಕೊಂಡು ತನ್ನ ಪತಿಯು ತನ್ನನ್ನು ಅಷ್ಟೊಂದು ಕ್ರೌರ್ಯದಿಂದ ಕಂಡಿದ್ದರೂ ಅವನಲ್ಲಿ ಅನುರಾಗವಿಲ್ಲದವ ಳಾಗದೆ ರೋಮಿಗೆ ಹೋಗಿ ಆತನನ್ನು ನೋಡಲವಕಾಶವನ್ನು ಪಡೆಯ ಬೇಕೆಂದು ಯೋಚಿಸಿದಳು.

ಪೈಸಾನಿಯೊವು ಆಕೆಗೆ ಆ ಹೊಸದಾದ ಉಡಿಗೆಯನ್ನು ಒದಗಿಸಿ ಕೊಟ್ಟು, ತಾನು ಆಸ್ಥಾನಕ್ಕೆ ಹಿಂತಿರುಗಬೇಕಾದ ಅವಶ್ಯಕತೆಯಿಂದ ಗೊತ್ತು ಗುರಿ ಇಲ್ಲದ ಅದೃಷ್ಟದಲ್ಲಿಯೇ ಆಕೆಯನ್ನು ಬಿಟ್ಟು ಹೊರಟನು. ಹೊರಡುವುದಕ್ಕೆ ಮುಂಚಿತವಾಗಿ ಆಕೆಯ ಕೈಗೆ ಒಂದು ಶೀಸೆಯ ಔಷಧವನ್ನು ಕೊಟ್ಟು, ಅದು ಸಮಸ್ತ ರೋಗಗಳಿಗೂ ಸಂಜೀವನದಂಥಾ ಔಷಧಿಯೆಂದು ರಾಣಿಯು ತನಗೆ ಕೊಟ್ಟಳೆಂದು ತಿಳಿಸಿದನು.

ಪೈಸಾನಿಯೊವನ್ನು ಕಂಡರೆ ರಾಣಿಗೆ ಆಗುತ್ತಿರಲಿಲ್ಲ. ಅವನು ಐಮೊಜನಳಿಗೂ ಪಾಸ್ತುಮಸನಿಗೂ ಬೇಕಾದವನಾಗಿದ್ದನು. ಆದುದರಿಂದ ಪ್ರಾಣಿಗಳ ಮೇಲೆ ಪ್ರಯೋಗಿಸಿ, ಅವುಗಳ ಶಕ್ತಿಯನ್ನರಿಯುವುದಕ್ಕಾಗಿ ಕೆಲವು ಪಾಷಾಣಗಳನ್ನು ತಂದುಕೊಡೆಂದು ತನ್ನ ವೈದ್ಯನಿಂದ ತರಿಸಿದ್ದ ಆ ಪದಾರ್ಥಗಳು ವಿಷವಾಗಿರಬಹುದೆಂದು ನಂಬಿಕೊಂಡು, ಪೈಸಾನಿಯೊವಿಗೆ ಕೊಟ್ಟಳು. ಆದರೆ ಆ ವೈದ್ಯನು ಅವಳ ಮತ್ಸರ ಸ್ವಭಾವವನ್ನರಿತಿದ್ದವನಾದುದರಿಂದ ಅವಳಿಗೆ ನಿಜವಾದ ಪಾಷಾಣವನ್ನು ಕೊಡಲಿಲ್ಲ. ಆದರೆ ಅದನ್ನು ತೆಗೆದುಕೊಂಡವರು ಕೆಲವು ಗಂಟೆಗಳ ಕಾಲ ಮೃತಿಯೊಂದಿದ್ದವರಂತೆಯೇ ಮಲಗುವ ಹಾಗೆ ಮಾಡುತ್ತಲಿತ್ತು. ಇದನ್ನು ಪೈಸಾನಿಯೊವು ಉತ್ತಮವಾದ ಔಷಧಿಯೆಂದು ನೆನೆದು ಮಾರ್ಗದಲ್ಲಿ ಏನಾದರೂ ದೇಹಾಲಸ್ಯವಾದರೆ ತೆಗೆದುಕೊಳ್ಳೆಂದು ಹೇಳಿ, ಐಮೊಜನಳಿಗೆ ಕೊಟ್ಟನು. ಅನಂತರದಲ್ಲಿ ಆಕೆಗೊದಗಿದ ಅಪಾರವಾದ ಕಷ್ಟಕ್ಕಾಗಿ ಸಂತಪಿಸುತ್ತ ಆಕೆಯನ್ನು ಹರಸಿ ಭಗವಂತನನ್ನು ಪ್ರಾರ್ಥಿಸುತ್ತಾ ಹೊರಟುಹೋದನು.

ಹಸುಮಕ್ಕಳಾಗಿದ್ದಾಗಲೇ ಅಪಹೃತರಾದ ಈಕೆಯ ಸೋದರರು ವಾಸವಾಗಿದ್ದ ಸ್ಥಳವನ್ನು ಈಕೆಯು ಹೇಗೋ ಭಗವಂತನ ದಯೆಯಿಂದ ತಲಪಿದಳು. ಸಿಂಬಲೀನನ ಮಕ್ಕಳನ್ನು ಅಪಹರಿಸಿ ತಂದವನು

ಅವನ ಆಸ್ಥಾನದಲ್ಲಿದ್ದ ಬೆಲಾರಿಯಸ್ ಎಂಬ ಶ್ರೀಮಂತನು. ಸಿಂಬಲೀನನು ಅವನನ್ನು ನಿಷ್ಕಾರಣವಾಗಿ ರಾಜದ್ರೋಹಿಯೆಂದು ತಪ್ಪು ಹೊರಿಸಿ ಗಡೀಪಾರುಮಾಡಿದ ಕಾರಣ ಆತನು ತನ್ನ ಹಗೆ ತೀರಿ ಸಿಕೊಳ್ಳುವುದಕ್ಕಾಗಿ ಅವನ ಇಬ್ಬರು ಗಂಡುಮಕ್ಕಳನ್ನು ಕದ್ದು ತಂದು ಆ ಅರಣ್ಯದಲ್ಲಿ ಅವರನ್ನು ಸಲಹುತ್ತ ಪರರಿಗೆ ಗೋಚರವಾಗದಿ ರುವಂತೆ ಒಂದು ಗವಿಯಲ್ಲಿ ವಾಸಮಾಡಿಕೊಂಡಿದ್ದನು. ಇವನು ಅವ ರನ್ನು ಮಾತ್ಸರ್ಯದಿಂದ ಅಪಹರಿಸಿ ತಂದಿದ್ದರೂ ಅವರಲ್ಲಿ ಜಾಗ್ರತೆ ಯಾಗಿ ಪ್ರಸನ್ನತೆಯನ್ನು ಹೊಂದಿ ಅವರು ತನ್ನ ಮಕ್ಕಳಾಗಿದ್ದರೆ ಹೇಗೋ ಹಾಗೆ ಮಮತೆಯಿಂದಲೂ ಜಾಗರೂಕತೆಯಿಂದಲೂ ಅವ ರಿಗೆ ವಿದ್ಯಾಭ್ಯಾಸವನ್ನು ಮಾಡಿಸಿದನು. ಅನಂತರದಲ್ಲಿ ಅವರು ಮನೋ ಹರವಾದ ಯುವಕರಾಗಲು ಕ್ಷತ್ರಿಯಸಂಬಂಧವಾದ ಶೌರ್ಯಾದಿಗುಣ ಗಳು ಅವರನ್ನು ದಿಟ್ಟತನದ ಸಾಹಸಕಾರ್ಯಗಲ್ಲಿ ಮುಂದುವರಿಯು ವಂತೆ ಮಾಡುತ್ತ ಬಂದುವು. ಅವರು ಬೇಟೆಯಿಂದಲೇ ಜೀವಿಸುತ್ತಲಿದ್ದು ದರಿಂದ ಚಟುವಟಿಕೆಯುಳ್ಳವರೂ ಶ್ರಮಸಹಿಷ್ಣುಗಳೂ ಆದರು. ಅಲ್ಲದೆ ರಣರಂಗಗಳಿಗೆ ಹೋಗಿ ತಮ್ಮ ಅದೃಷ್ಟಗಳನ್ನು ಪರೀಕ್ಷಿಸಲನು ಮತಿಕೊಡೆಂದು ಅವರು (ತಂದೆಯೆಂದು ಭಾವಿಸಲ್ಪಟ್ಟಿದ್ದ) ಬೆಲಾರಿಯು ಸನನ್ನು ಪದೇ ಪದೇ ಒತ್ತಾಯಮಾಡುತ್ತಲಿದ್ದರು.

ಈ ಯುವಕರು ವಾಸವಾಗಿದ್ದ ಗವಿಯನ್ನು ಈಕೆಯು ದೈವವ ಶಾತ್ತು ತಲಪಿದಳು. ಮಿಲ್ಫರ್ಡ್‌ಹೇವನ್ ರೇವನ್ನು ತಲಪಿ ಅಲ್ಲಿಂದ ರೋಮಿಗೆ ಹೊರಡಬೇಕೆಂದು ಈಕೆಯು ಹೊರಟ ಪ್ರಯಾಣದ ಹಾದಿಯು ಒಂದು ಕಾಡಿನಲ್ಲಿತ್ತು. ಆ ಕಾಡಿನಲ್ಲಿ ಈಕೆಗೆ ಹಾದಿಯು ತಪ್ಪಿಹೋಯಿತು. ತಾನು ಆಹಾರವನ್ನು ಬೆಲೆಗೆ ಎಲ್ಲಿ ಪಡೆಯಬಹುದೆಂ ಬುದು ಗೊತ್ತಾಗದ ಕಾರಣದಿಂದ ಹಸಿವು ದಣಿವುಗಳಿಂದ ಸಾಯುವಂ ತಾದಳು. ಗಂಡುಡಿಗೆಯನ್ನು ಧರಿಸಿದ ಮಾತ್ರಕ್ಕೆ ಜನಶೂನ್ಯವಾದ ಕಾಡುಗಳಲ್ಲಿ ನಡೆಯುವುದರಿಂದುಂಟಾದ ಆಯಾಸವನ್ನು ಪುರುಷರು ಸಹಿಸುವಂತೆ ಸುಖವಾಗಿ ಪೋಷಿತಳಾದ ಸುಕುಮಾರಾಂಗಿಯು ಸಹಿಸ ಲಾಗುವುದೇ ? ಗವಿಯನ್ನು ನೋಡಿ ಅದರಲ್ಲಿ ಯಾರಾದರೊಬ್ಬರಿರಬಹು ದೆಂದೂ ಅವರಿಂದ ತಾನು ಆಹಾರವನ್ನು ಪಡೆಯಬಹುದೆಂದೂ ಭಾವಿಸಿ ಕೊಂಡು ಅದರೊಳಕ್ಕೆ ಪ್ರವೇಶಿಸಿದಳು. ಗವಿಯಲ್ಲಿ ಯಾರೂ ಇರಲಿಲ್ಲ;

ಸುತ್ತಲೂ ನೋಡಲಾಗಿ ಅಲ್ಲೊಂದೆಡೆಯಲ್ಲಿ ಅಪಕ್ವವಾದ ಮಾಂಸವಿತ್ತು. ಆಕೆಯ ಹಸಿವು ಬಲು ಹೆಚ್ಚಾಗಿದ್ದುದರಿಂದ ಉಪಚಾರವನ್ನು ಬಯಸದೆ ಕುಳಿತುಕೊಂಡು ಅದನ್ನು ತಿನ್ನುತ್ತ ತನ್ನಷ್ಟಕ್ಕೆ ತಾನೇ "ಆಹಾ! ಪುರುಷರ ಜೀವಿತವು ಎಷ್ಟು ಕಷ್ಟತರವಾದುದು! ಈಗ ನಾನು ಎಷ್ಟು ಆಯಾಸಗೊಂಡಿದ್ದೇನೆ; ಎರಡು ರಾತ್ರಿಗಳಿಂದಲೂ ನನಗೆ ಭೂಮಿಯೇ ಹಾಸಿಗೆಯಾಯಿತು. ನನ್ನ ಉದ್ದೇಶವು ನನಗೆ ಸಹಾಯವನ್ನು ನೀಡುತ್ತಲಿದೆ. ಹಾಗಿಲ್ಲದಿದ್ದರೆ ನಾನು ರೋಗಪೀಡಿತಳಾಗಿರಬೇಕಾಗಿತ್ತು. ಪೈಸಾನಿಯೊವು ಆ ಪರ್ವತಾಗ್ರದಿಂದ ಮಿಲ್ಫರ್ಡ್‌ಹೇವನನ್ನು ತೋರಿಸಿದಾಗ ಅದೆಷ್ಟು ಸಮೀಪವಾಗಿರುವಂತೆ ಕಂಡಿತು!" ಎಂದು ಮೊದಲಾಗಿ ಅಂದುಕೊಳ್ಳುತ್ತ ಪತಿಯ ವಿಚಾರವಾದ ಆಲೋಚನೆಯೂ ಅವನ ಕ್ರೂರಾಜ್ಞೆಯೂ ಮನಸ್ಸಿಗೆ ಬರಲು —"ನನ್ನ ಪ್ರಿಯನಾದ ಪಾಸ್ತುಮಸನೇ ನೀನು ಸುಳ್ಳುಗಾರನಾಗಿರುವಿ" ಎಂದು ನಿಟ್ಟುಸಿರನ್ನು ಬಿಟ್ಟಳು.

ಈ ವೇಳೆಗೆ ಸರಿಯಾಗಿ ಬೇಟೆಗೆ ಹೋಗಿದ್ದ ಆಕೆಯ ಸಹೋದರರೂ ಅವರಿಂದ ತಂದೆಯೆಂದು ಕರೆಯಲ್ಪಡುತ್ತಿದ್ದ ಬೆಲಾರಿಯುಸನೂ ಹಿಂತಿರುಗಿ ಬಂದರು. ಬೆಲಾರಿಯುಸನು ಈ ಬಾಲಕರಿಗೆ ಪೊಲಿಡೋರ್., ಕಾಡ್ವಾಲ್ ಎಂದು ಹೆಸರಿಟ್ಟುಕೊಂಡಿದ್ದನು. ಈ ರಾಜಕುಮಾರರು ಬೆಲಾರಿಯುಸನನ್ನು ತಮ್ಮ ತಂದೆಯೆಂದೇ ತಿಳಿದರು. ಇವರ ನಿಜವಾದ ನಾಮಧೇಯಗಳು ಗೈಡೇರಿಯುಸ್, ಆರ್ವಿರಗಸ್ ಎಂಬಿವು.

ಬೆಲಾರಿಯುಸನು ಮೊದಲು ಆ ಗವಿಯನ್ನು ಪ್ರವೇಶಿಸಿ ಐಮೊಜನಳನ್ನು ನೋಡಿ—"ಒಳಕ್ಕೆ ಬರಬೇಡಿರಿ. ಅದು ನಮ್ಮ ಆಹಾರವನ್ನು ತಿನ್ನುತ್ತಲಿದೆ. ಬಹುಶಃ ಅದು ಗಂಧರ್ವನಾಗಿರಬಹುದು" ಎಂದು ಹೇಳುತ್ತ ಬಾಲಕರ ಬರುವಿಕೆಯನ್ನು ತಡೆದನು.

ರಾಜಕುಮಾರರು—"ಸ್ವಾಮಿ, ಏನು ಸಮಾಚಾರ?"

ಬೆಲಾರಿಯುಸ್ —"ಮಹಾದೇವನ ಸಾಕ್ಷಿಯಾಗಿಯೂ ಗವಿಯೊಳಗೆ ಒಬ್ಬ ಗಂಧರ್ವನಿದ್ದಾನೆ ಹಾಗಲ್ಲದಿದ್ದರೆ ಅವನು ಮನುಜಕುಲಕ್ಕೆ ಶಿರೋರತ್ನಪ್ರಾಯನಾಗಿರಬಹುದು" ಎಂದನು.

ಆಕೆಯು ಈ ಧ್ವನಿಯನ್ನು ಕೇಳಿ, ಈಚೆಗೆ ಬಂದು—"ಎಲೈ ಗುಣವಂತರಾದ ಮಹನೀಯರೇ, ನನ್ನನ್ನು ತೊಂದರೆಗೊಳಿಸಬೇಡಿರಿ. ನಾನು

ನಿಮ್ಮ ಗವಿಯೊಳಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ನಿಮ್ಮನ್ನು ಪ್ರಾರ್ಥಿಸಿಯೋ, ಅಥವಾ ಬೆಲೆಕೊಟ್ಟೋ ನಾನೀಗ ತಿಂದ ಆಹಾರವನ್ನು ಪಡೆದುಕೊಳ್ಳಬೇಕೆಂದು ಯೋಚಿಸಿದ್ದೆನು. ನಾನು ನಿಮ್ಮಲ್ಲಿ ಯಾವುದನ್ನೂ ಕದಿಯಲಿಲ್ಲ. ನೆಲಕ್ಕೆಲ್ಲಾ ಚಿನ್ನವೇ ಹರವಲ್ಪಟ್ಟಿರುವುದನ್ನು ಕಂಡರೂ ನಾನದನ್ನು ಅಪಹರಿಸೆನು. ನಾನು ತಿಂದ ಆಹಾರದ ಬೆಲೆಗಾಗಿ ಇದೋ, ಇಲ್ಲಿ ದ್ರವ್ಯವಿದೆ. ನಾನು ಊಟಮಾಡಿದ ಮೇಲೆ ಇದನ್ನು ಆ ಸ್ಥಳದಲ್ಲಿಯೇ ಇಟ್ಟು ಅನ್ನವಿಟ್ಟಾತನಿಗೆ ಭಗವತ್ಕೃಪೆಯಾಗಲೆಂದು (ಅನ್ನದಾತಾಸುಖೀಭವ) ಪ್ರಾರ್ಥಿಸಿ ಏಳುತ್ತಿದ್ದೆನು'' ಎಂದಳು.

ಅವರು ಈಕೆಯು ಕೊಡುವುದಕ್ಕೆ ಹೋದ ಹಣವನ್ನು ಮನಃಪೂರ್ವಕವಾಗಿ ಬೇಡವೆಂದು ತಿರಸ್ಕರಿಸಿದರು. ಇದರಿಂದ ಭಯಗ್ರಸ್ಥಳಾದ ಐಮೊಜನಳು—'' ನೀವು ನನ್ನ ಮೇಲೆ ಕೋಪಮಾಡಿಕೊಂಡಿರುವಂತೆ ಕಾಣುತ್ತಿದೆ. ನೀವು ನನ್ನ ಅಪರಾಧಕ್ಕಾಗಿ ನನ್ನನ್ನು ಕೊಲ್ಲುವಿರಾದರೆ ನಾನು ಈ ವರೆಗೂ ಆಹಾರವನ್ನು ತಿನ್ನದೆಯೇ ಇದ್ದರೆ ಸಾಯುತ್ತಲಿದ್ದೆನೆಂದರಿಯಿರಿ'' ಎಂದಳು.

ಬೆಲಾರಿಯಸ್—'' ಎಲೈ, ನೀನೆಲ್ಲಿಗೆ ಹೊರಟಿರುವಿ? ನಿನ್ನ ಹೆಸರೇನು ?''

ಐಮೊಜನ್—'' ನನ್ನ ಹೆಸರು ಫೈಡಿಲಿ (ಸ್ವಾಮಿಭಕ್ತ). ನನಗೊಬ್ಬ ರಾಜಬಂಧುವುಂಟು. ಆತನು ಇಟಲಿಗೆ ಪ್ರಯಾಣ ಹೊರಡಲು ಮಿಲ್‌ಫರ್ಡ್‌ಹೇವನ್ನಿನಲ್ಲಿ ಹಡಗೇರಿದನು. ಆತನು ಹೊರಟು ಹೋದುದರಿಂದ ವಿಶೇಷವಾದ ಹಸಿವಿನಿಂದ ಕೂಡಿದ ನಾನು ಈ ಅಪರಾಧಕೃತ್ಯವನ್ನು ಮಾಡಿದೆನು.''

ಬೆಲಾರಿಯಸ್—''ಎಲೈ ಮನೋಹರನಾದ ಯುವಕನೇ, ನಮ್ಮನ್ನು ಲೋಭಿಗಳೆಂದು ಭಾವಿಸಬೇಡ. ಅಲ್ಲದೆ ನಾವು ವಾಸವಾಗಿರುವ ಈ ಒರಟಾದ ಸ್ಥಳದಿಂದ ನಮ್ಮ ಹೃದಯವನ್ನು ಅಳತೆ ಮಾಡಬೇಡ. (ಒರಟಾದ ಸ್ಥಳದಲ್ಲಿ ವಾಸವಾಗಿರುವುದರಿಂದ ನಮ್ಮನ್ನು ದಯಾದಿಗುಣಶೂನ್ಯರೆಂದು ಭಾವಿಸಬೇಡ) ನೀನು ನಮ್ಮ ಅತಿಥಿ. ನಿನ್ನನ್ನು ಸಾದರದಿಂದ ಉಪಚರಿಸುವೆವು. ಈಗಾಗಲೇ ರಾತ್ರಿಯಾಗಿದೆ. ನೀನು ಹೊರಡುವುದಕ್ಕೆ ಮುಂಚೆ ವಿಶ್ರಮಿಸಿಕೊ. ನೀನು ನಮ್ಮ ಕ್ಷಮೆಯನ್ನು ಪ್ರಾರ್ಥಿಸುವುದಕ್ಕೆ ಬದಲು ನೀನಿಲ್ಲಿ ನಮ್ಮೊಡನೆ ನಿಂತುದಕ್ಕಾಗಿಯೂ

ಊಟಮಾಡುವದಕ್ಕಾಗಿಯೂ ನಾವು ನಿನ್ನನ್ನು ವಂದಿಸುತ್ತೇವೆ; ಬಾಲಕರಿರಾ, ಉಪಚರಿಸಿರಿ'' ಎಂದನು.

ಅನಂತರದಲ್ಲಿ ಆ ಗಂಭೀರಭಾವ ಯುವಕರು ಅವನನ್ನು ಆದರಿಸಿ ವಿಶೇಷವಾದ ದಯೆಯನ್ನು ಸೂಚಿಸುವ ಮಾತುಗಳನ್ನು ಆಡುತ್ತ ಅವನನ್ನು ತಮ್ಮ ಸಹೋದರನಂತೆ ಪ್ರೀತಿಸುವುದಾಗಿ ತಿಳಿಸಿ ಗವಿಯೊಳಕ್ಕೆ ಕರೆದುಕೊಂಡು ಹೋದರು

ಬೇಟೆಯಲ್ಲಿ ಸಂಹರಿಸಿ ತಂದಿದ್ದ ಮೃಗಮಾಂಸವನ್ನು ಪಕ್ವಮಾಡಿ ರಾತ್ರಿಯ ಭೋಜನಕ್ಕೆ ಸಿದ್ಧಮಾಡುವುದರಲ್ಲಿ ಅವರಿಗೆ ಈಕೆಯು ಸಹಾಯಮಾಡುತ್ತ, ಶುಚಿರುಚಿಯಾದ ಅಡಿಗೆಯೇ ಮೊದಲಾದ ಮನೆಗೆಲಸದ ನಿರ್ವಾಹದಿಂದ ಅವರನ್ನು ಸಂತಸಗೊಳಿಸಿದಳು. ಈಗಿನ ದಿನಗಳಲ್ಲಿ ದೊಡ್ಡ ಮನೆತನದ ಹೆಂಗಸರು ಅಡಿಗೆ ಮಾಡುವುದನ್ನು ಅರಿತಿರುವುದು ವಾಡಿಕೆಯಲ್ಲಿಲ್ಲದಿದ್ದರೂ ಆಗ ಐಮೊಜನಳು ಈ ಉಪಯುಕ್ತವಾದ ಕಲೆಯಲ್ಲಿ ಉತ್ತಮವಾದ ಪರಿಶ್ರಮವುಳ್ಳವಳಾಗಿದ್ದಳು. ಇವಳ ಸಹೋದರರು ಈ ವಿಷಯವಾಗಿ—''ಅವನು ಕಂದಮೂಲಗಳನ್ನು ಅಕ್ಷರಗಳಂತೆ ಕತ್ತರಿಸುವನು. ಜೂನೊ (ಬೃಹಸ್ಪತಿಯ ಪತ್ನಿ) ಮಹಾದೇವಿಯೇ ವ್ಯಾಧಿಪೀಡಿತಳಾಗಿದ್ದು ಆಕೆಗೆ ಇವನು ಪಥ್ಯಕ್ಕೆ ಅಡಿಗೆಮಾಡುವವನಂತೆ ಸಾರನ್ನು ರುಚಿಕರವಾಗಿ ಮಾಡುವನು (ರೋಗಿಗಳಿಗೂ ಆಹಾರಾಪೇಕ್ಷೆಯಾಗುವಂತೆ ಅಡಿಗೆ ಮಾಡುವನು) ಎಂದೂ, ಇವನ ಗಾನವು ಗಂಧರ್ವಗಾನದಂತಿರುವುದು, ನಗೆಯು ಬಹು ಮಧುರವಾಗಿದ್ದರೂ ಮುದ್ದು ಮೊಗವು ಖಿನ್ನತೆಯಿಂದ ಮೋಡ ಕವಿದಂತಾಗಿ ದುಃಖವೂ ಸಹನೆಯೂ ಏಕೀಭವಿಸಿ ಇವನಲ್ಲಿ ಸ್ಥಾನಮಾಡಿಕೊಂಡಂತಿವೆ'' ಎಂದೂ ಅಂದುಕೊಳ್ಳುತ್ತಿದ್ದರು.

ಆಕೆಯ ಈ ಒಳ್ಳೇ ಗುಣಗಳಿಗಾಗಿಯೋ ಅಥವಾ ತಮಗೂ ಅವಳಿಗೂ ಇರುವ ಅತಿಸಮೀಪವಾದ ಬಾಂಧವ್ಯದಿಂದಲೋ (ಬಂಧುತ್ವ ವಿಚಾರವು ಅವರಿಗೆ ತಿಳಿಯದಿದ್ದಾಗ್ಯೂ ಆ ಬಾಲಕರಿಂದ ಫೈಡಿಲಿ ಎಂಬದಾಗಿ ಕರೆಯಲ್ಪಡುವ) ಐಮೊಜನಳು ತನ್ನ ಸಹೋದರರಿಗೆ ವಿಶೇಷವಾಗಿ ಪ್ರೀತಿಪಾತ್ರಳಾದಳು. ಇವಳೂ ಸಹ ಅವರನ್ನು ಬಹಳವಾಗಿ ಪ್ರೀತಿಸುತ್ತ— ''ನನ್ನಲ್ಲಿ ಅನೃತವಾದಿಯಾಗಿ ನಡೆದ ಪಾಸ್ತುಮಸನ ವಿಷಯವಾದ ಚಿಂತೆಯು ನನ್ನನ್ನು ಬಾಧಿಸದಿದ್ದರೆ ಈ ಗವಿಯಲ್ಲಿ ಭೀಕರವಾದ ಅರಣ್ಯ

ದಲ್ಲಿರುವ ಈ ಯುವಕರೊಡನೆ ವಾಸವಾಗಿದ್ದು ಸಾಯಬಹುದಲ್ಲ'' ಎಂದು ತನ್ನಲ್ಲಿ ತಾನೇ ಹೇಳಿಕೊಳ್ಳುತ್ತಲಿದ್ದಳು. ಪ್ರಯಾಣದ ದಣಿವನ್ನು ಪರಿಹರಿಸಿಕೊಳ್ಳುವಷ್ಟು ವಿಶ್ರಾಂತಿಯನ್ನು ಪಡೆದು ಮಿಲ್ಫರ್ಡ್‌ಹೇವನ್ ಹಾದಿ ನಡೆಯಲು ತನಗೆ ಸಾಮರ್ಥ್ಯವು ಬರುವ ವರೆಗೂ ಅವರೊಡನೆ ವಾಸವಾಗಿರಲು ಆಕೆಯೊಪ್ಪಿಕೊಂಡಳು.

ಬೇಟೆಯಲ್ಲಿ ಸಂಪಾದನೆಮಾಡಿಕೊಂಡು ಬಂದಿದ್ದ ಮಾಂಸವು ಮುಗಿದು ಹೋದ ಮೇಲೆ ಅವರು ಮತ್ತಷ್ಟನ್ನು ತೆಗೆದುಕೊಂಡು ಬರಲು ಹೊರಟುಹೋದರು. ಐಮೊಜನಳು (ಬಾಲಕನ ವೇಷದ ಫೈಡಿಲಿ) ಅಸ್ವಸ್ಥಳಾಗಿದ್ದುದರಿಂದ ಅವರೊಡನೆ ಹೋಗಲು ಆಗಲಿಲ್ಲ. ಅರಣ್ಯದಲ್ಲಿ ಅಲೆದಾಡಿದುದರಿಂದುಂಟಾದ ದೇಹಾಯಾಸವು ಮಾತ್ರವೇ ಅಲ್ಲದೆ ತನ್ನ ಕಾಂತನ ಒರಟು ನಡತೆಯ ದೆಸೆಯಿಂದುಂಟಾದ ಶೋಕವೂ ನಿಸ್ಸಂದೇಹವಾಗಿ ಆಕೆಯ ಅಸ್ವಸ್ಥತೆಗೆ ಕಾರಣವಾಯಿತು.

ಅನಂತರದಲ್ಲಿ ಅವರು ಇವನಿಗೆ ಶ್ರೇಯಃಪ್ರಾರ್ಥನೆಯನ್ನು ಬಯಸಿದಾರಿಯುದ್ದಕ್ಕೂ ಆ ಬಾಲಕನ ಪೂನವಾದ ಯೋಗ್ಯತೆಯನ್ನೂ ಗಂಭೀರವಾದ ನಡತೆಯನ್ನೂ ಶ್ಲಾಘಿಸುತ್ತ ಬೇಟೆಗೆ ಹೊರಟರು. ಐಮೊಜನಳು ಒಂಟಿಯಾಗುತ್ತಲೇ ತನಗೆ ಪೈಸಾನಿಯೊವು ಕೊಟ್ಟಿದ್ದ ಔಷಧಿಯ ವಿಚಾರವು ಜ್ಞಾಪಕಕ್ಕೆ ಬಂತು. ಒಡನೆಯೇ ಅದನ್ನು ತೆಗೆದುಕೊಳ್ಳಲು ಕೂಡಲೆ ಮೃತಿಯನ್ನು ಹೋಲುವ ಗಾಢನಿದ್ರೆಯನ್ನು ಹೊಂದಿದಳು.

ಬೆಲಾರಿಯಸನೂ ಇವಳ ಸಹೋದರರೂ ಬೇಟೆಯಿಂದ ಹಿಂದಿರುಗಿದರು. ಮೊದಲು ಗೈಡೇರಿಯಸನು ಗವಿಯೊಳಕ್ಕೆ ಪ್ರವೇಶಮಾಡಿ ಆಕೆಯು ನಿದ್ದೆಮಾಡುತ್ತಿರುವಳೆಂದು ಭಾವಿಸಿಕೊಂಡು, ನಿದ್ರಾಭಂಗವಾಗದಿರಲೆಂದು ಮೆಲ್ಲಗೆ ನಡೆದುಕೊಂಡು ಹೋಗುವುದಕ್ಕಾಗಿ ತನ್ನ ಕಾಲಿಗೆ ತೊಟ್ಟಿದ್ದ ಪಾದರಕ್ಷೆಯನ್ನು ಮೃದುವಾಗಿ ಕಳಚಿಹಾಕಿದನು. ಹೀಗೆ ಈ ವನವಾಸಿಯಾದ ರಾಯಗುವರನ ಹೃದಯದಲ್ಲಿ ನೈಜವಾದ ದಯಾದಿಗುಣಗಳು ಉದಯಗೊಂಡಿದ್ದುವು. ಆದರೆ ಯಾವ ಶಬ್ದವೂ ಅವಳನ್ನು ಎಚ್ಚರಗೊಳಿಸಲಾರದೆಂದು ಜಾಗ್ರತೆಯಾಗಿಯೇ ಅರಿತು ಅವಳು ಮೃತಳಾಗಿರುವಳೆಂದು ನಿಷ್ಕರ್ಷೆಮಾಡಿಕೊಂಡು, ಬಾಲ್ಯಾರಭ್ಯ ಇವರು ಒಬ್ಬರನ್ನೊಬ್ಬರು ಅಗಲದಿದ್ದವರಂತೆ ಅಪರಿಮಿತವಾದ ಮತ್ತು ಸಹೋದರನಿಗೆ ನೈಜವಾದ ಸಂತಾಪದಿಂದ ಅವಳಿಗಾಗಿ ಅವನು ಗೋಳಿಟ್ಟನು.

ಆ ಕೂಡಲೇ ಬೆಲಾರಿಯುಸನೂ ಆರ್ವಿರಗಸನೂ ಸಹ ಬಂದು ನೋಡಿ ಸಂತಾಪಗೊಂಡು ಅವಳನ್ನು ಅರಣ್ಯಕ್ಕೆ ಹೊತ್ತುಕೊಂಡು ಹೋಗಿ ಆಗಿನ ಪದ್ಧತಿಯಂತೆ ದುಃಖಗೀತಗಳನ್ನು ಹೇಳಿ ಅವಳಿಗೆ ಪ್ರೇತ ಕರ್ಮಗಳನ್ನು ಮಾಡಬೇಕೆಂದು ಹೇಳಿದರು.

ಐಮೊಜನಳ ಸಹೋದರರು ಅವಳನ್ನು ತಂಪಾದ ಮರದ ನೆರಳಿಗೆ ಹೊತ್ತುಕೊಂಡು ಹೋಗಿ ಹುಲ್ಲಿನ ಮೇಲೆ ಮೆತ್ತಗೆ ಮಲಗಿಸಿ ಪರಂಧಾಮ ವನ್ನೈದಿದ ಆಕೆಯ ಆತ್ಮಕ್ಕೆ ವಿಶ್ರಾಂತಿಯನ್ನು ಕೊಡೆಂದು ಭಗವಂತನಿ ಗಾಗಿ ಪ್ರಾರ್ಥನಾ ಗೀತಗಳನ್ನುಹಾಡಿ ಅವಳನ್ನು ಸೊಪ್ಪುಹೂಗಳಿಂದ ಮುಚ್ಚಿದರು. ಗೈಡೇರಿಯುಸನು—“ಬೇಸಿಗೆಯು ಕಳೆದುಹೋಗಿ ನಾನೀ ಸ್ಥಳದಲ್ಲಿರುವಾಗ್ಗೆ ನಿನ್ನ ಸಂತಾಪಕರವಾದ ಸಮಾಧಿಯನ್ನು ದಿನ ದಿನವೂ ಪುಷ್ಪಗಳಿಂದಲಂಕರಿಸುವೆನು ನಿನ್ನ ಮುಖವನ್ನು ಬಲುಮಟ್ಟಿಗೆ ಹೋಲು ವ ಬೆಳ್ಳಗಿರುವ ವಸಂತಕುಸುಮವನ್ನೂ ನಿನ್ನ ಸ್ವಚ್ಛವಾದ ಕಣ್ಣುಗಳಂ ತಿರುವ ಕನ್ನೈದಿಲೆಯ ಹೂವನ್ನೂ ನಿನ್ನ ನಿಶ್ವಾಸಕ್ಕಿಂತಲೂ ವಿಶೇಷ ಮಧು ರವಾದ ಪರಿಮಳವಿಲ್ಲದ ಸಂಪಿಗೆಯ ಪುಷ್ಪವನ್ನೂ ನಿನ್ನ ಸಮಾಧಿಯ ಮೇಲೆ ಹರಡುವೆನು. ಹಿಮಂತ ಋತುವಿನಲ್ಲಿ ಕುಸುಮಗಳಿಲ್ಲದಿರುವಾಗ್ಗೆ ಪಾಚಿಯನ್ನು ಮುಚ್ಚುವೆನು” ಎಂದನು.

ಹೀಗೆ ಇವರು ಅವಳ ಪ್ರೇತಕರ್ಮಗಳನ್ನು ನೆರವೇರಿಸಿದ ಮೇಲೆ ಚಿಂತಾಕ್ರಾಂತರಾಗಿ ಹೊರಟು ಹೋದರು ಐಮೊಜನಳು ಬಲು ಹೊತ್ತು ಒಬ್ಬೊಂಟಿಗಳಾಗಿ ಬಿಡಲ್ಪಡಲಿಲ್ಲ. ಅವಳು ತೆಗೆದುಕೊಂಡಿದ್ದ ನಿದ್ರೆಯ ನ್ನುಂಟುಮಾಡುವ ಸ್ವಭಾವವುಳ್ಳ ಔಷಧಿಯ ವ್ಯಾಪನೆಯು ಕಡಮೆಯಾ ಗುತ್ತಲೇ ಎಚ್ಚರಗೊಂಡು ತನ್ನ ಮೇಲೆ ಅವರು ತೆಳ್ಳಗೆ ಹೊದಿಸಿದ್ದ ಹೂ ಸೊಪ್ಪುಗಳನ್ನು ಸುಲಭವಾಗಿ ಜರುಗಿಸಿ ಎದ್ದಳು ಕನಸು ಕಂಡವಳಂತೆ ಊಹಿಸುತ್ತ—“ನಾನು ಒಂದು ಗವಿಯಲ್ಲಿದ್ದಂತೆಯೂ ಅಲ್ಲಿದ್ದ ಸಾಧು ಗಳಾದ ಜೀವಿಗಳಿಗೆ ಅಡಿಗೆಯವಳಾಗಿದ್ದಂತೆಯೂ ತೋರುತ್ತದೆ. ನಾನಿ ಲ್ಲಿಗೆಹೇಗೆ ಬಂದೆನು ? ನನ್ನ ಮೇಲೆ ಈ ಹೂವುಗಳು ಹೇಗೆ ಮುಚ್ಚಲ್ಪ ಟ್ಟುವು ? ” ಎಂದುಕೊಂಡಳು. ಅನಂತರದಲ್ಲಿ ಆ ಗವಿಗೆ ಹೋಗುವ ಮಾರ್ಗವು ತಿಳಿಯದೆಯೂ ತನ್ನ ಜೊತೆಯಲ್ಲಿದ್ದ ಅವರ ವಿಚಾರ ವಾಗಿ ಯಾವ ಸಂಗತಿಯೂ ಗೊತ್ತಿಲ್ಲದೆಯೂ ಹೋದುದರಿಂದ ಇದೆ ಲ್ಲಾ ಕನಸಾಗಿಯೇ ಇರುವುದೆಂದು ನಿಷ್ಕರ್ಷಿಸಿಕೊಂಡು ತನ್ನ ಯೋಚ

ನೆಯೆಲ್ಲಾ ತನ್ನ ಪತಿಯಾದ ಪಾಸ್ತುಮಸನಲ್ಲಿ ನೆಲೆಗೊಂಡಿರುವುದರಿಂದ ಬಾಲಭೃತ್ಯನ ವೇಷದಿಂದ ಆತನನ್ನು ಕಾಣಲೆಳಸಿ ಮಿಲ್ಫರ್ಡ್ ಹೇವರ್ನ್‌ಗೆ ದಾರಿಯನ್ನು ಕಂಡು ಇಟಲಿಗೆ ಹೊರಡುವ ಯಾವದಾದರೊಂದು ಹಡಗಿನಲ್ಲಿ ಯಾನಕ್ಕವಕಾಶವನ್ನು ಪಡೆಯುವೆನೆಂಬ ಕೋರಿಕೆಯಿಂದ ಆಯಾಸಕರವಾದ ಯಾತ್ರೆಯನ್ನು ಇನ್ನೊಮ್ಮೆ ಕೈಗೊಂಡಳು. ಈ ಕಾಲದಲ್ಲಿ ಮಹಾಕಾರ್ಯಗಳು ಸಂಭವಿಸುತ್ತಿದ್ದುವು. ಐಮೊಜನಗಳಿಗೆ ಅವುಗಳ ವಿಚಾರವೇ ತಿಳಿಯದು ರೋಮನ್ ಚಕ್ರವರ್ತಿಯಾದ ಆಗಸ್ಟಸ್ ಸೀಸರಿಗೂ ಬ್ರಿಟನ್ ದೊರೆಯಾದ ಸಿಂಬಲೀನಿಗೂ ಯುದ್ಧವು ಒದಗಿತ್ತು. ಇದರಿಂದ ಬ್ರಿಟನ್ ದೇಶವನ್ನು ಮುತ್ತುವುದಕ್ಕಾಗಿ ರೋಮನರ ಒಂದು ದಳವು ಆಗತಾನೆ ಹಡಗಿಳಿದು ಐಮೊಜನಳು ಸಂಚರಿಸುತ್ತಲಿದ್ದ ಆ ಕಾಡಿನಲ್ಲಿಯೇ ಮುಂದೆ ಬರುತ್ತಿತ್ತು. ಈ ದಳದೊಡನೆ ಪಾಸ್ತುಮಸನೂ ಬರುತ್ತಿದ್ದನು.

ಪಾಸ್ತುಮಸನು ರೋಮನರ ಜೊತೆಯಲ್ಲಿ ಬಂದಿದ್ದಾಗ್ಯೂ ತನ್ನನ್ನು ಗಡೀಪಾರು ಮಾಡಿದ್ದ ಅರಸಿನ ಪಕ್ಷವಾಗಿ ಯುದ್ಧಮಾಡಬೇಕೆಂದುದ್ದೇಶಿಸಿದ್ದನಲ್ಲದೆ ರೋಮನರ ಪಕ್ಷವನ್ನು ವಹಿಸಿ, ತನ್ನ ದೇಶೀಯರಿಗೆ ಪ್ರತಿಪಕ್ಷಿಯಾಗಲಪೇಕ್ಷಿಸಿರಲಿಲ್ಲ. ಐಮೊಜನಳು ಅಯೋಗ್ಯಳೆಂದು ಪಾಸ್ತುಮಸನು ಇನ್ನೂ ನಂಬಿದ್ದನು ಆದಾಗ್ಯೂ ತನ್ನ ಅಪ್ಪಣೆಯಂತೆಯೇ ತಾನು ಯಾರ ಮರಣವನ್ನು ಅಷ್ಟೊಂದು ಅಕ್ಕರೆಯಿಂದ ಬಯಸಿದನೋ ಆ ಐಮೊಜನಳ ಮರಣವು ಅವನ ಹೃದಯಕ್ಕೆ ಬಹು ಭಾರವಾಯಿತು. (ಪೈಸಾನಿಯೊವು ''ನಿನ್ನ ಅಪ್ಪಣೆಯಂತೆ ಐಮೊಜನಳನ್ನು ಸಂಹರಿಸಿದ್ದೇನೆ'' ಎಂದು ಅವನಿಗೆ ಕಾಗದವನ್ನು ಬರೆದಿದ್ದನು) ಈ ಕಾರಣದಿಂದ ಸಮರದಲ್ಲಿ ಸಂಹೃತನಾಗಬೇಕೆಂದು ಅಥವಾ ಗಡೀಪಾರಿನಿಂದ ಸ್ವದೇಶಕ್ಕೆ ಹಿಂತಿರುಗಿ ಬಂದುದಕ್ಕಾಗಿ ಸಿಂಬಲೀನಿಂದ ಮರಣದಂಡನೆಗೆ ಗುರಿಮಾಡಲ್ಪಡಬೇಕೆಂದು ಆತನು ಬ್ರಿಟನ್‌ಗೆ ಬಂದನು. ಐಮೊಜನಳು ಮಿಲ್ಫರ್ಡ್ ಹೇವನನ್ನು ತಲಪುವುದಕ್ಕೆ ಮುಂಚಿತವಾಗಿ ರೋಮನರ ಸೈನ್ಯದ ಕೈಗೆ ಸಿಕ್ಕಿದಳು. ಅವಳ ಆಕಾರ ನಡತೆಗಳಿಂದ ರೋಮನ್ ಸೈನ್ಯಾಧಿಪತಿಯಾದ ಲ್ಯೂಕಸನು ಪ್ರೀತಿಯುಳ್ಳವನಾಗಿ ಅವಳನ್ನು ತನ್ನಲ್ಲಿ ಬಾಲಭೃತ್ಯನನ್ನಾಗಿ ನಿಯಮಿಸಿಕೊಂಡನು. ಸಿಂಬಲೀನನ ಸೈನ್ಯವು ಶತ್ರುಸೈನ್ಯಕ್ಕಭಿಮುಖವಾಗಿ ಹೊರಟು, ಆ ಅರಣ್ಯಕ್ಕೆ ಬಂದಿತು. ರಾಜ

ಕುಮಾರರು ಅರಸಿನ ಸೈನ್ಯವನ್ನು ಸೇರಿಕೊಂಡರು. ಅರಸಾದ ತಮ್ಮ ತಂದೆ ಗೋಸ್ಕರ ಯುದ್ಧಮಾಡುವುದಕ್ಕೆ ಹೋಗುವುದಾಗಿ ಈ ಬಾಲಕರಿಗೆ ತಿಳಿಯದಿದ್ದಾಗ್ಯೂ ಧೈರ್ಯದಿಂದ ಮಾಡಬೇಕಾದ ಕಾರ್ಯಗಳಲ್ಲಿ ಉದ್ಯುಕ್ತರಾಗಲು ಆತುರಗೊಂಡವರಾಗಿದ್ದರು. ವೃದ್ಧನಾದ ಬೆಲಾರಿಯಸನೂ ಇವರ ಜೊತೆಯಲ್ಲಿಯೇ ಯುದ್ಧಕ್ಕೆ ಹೊರಟನು. ಈತನು ಸಿಂಬಲೀನನ ಇಬ್ಬರು ಮಕ್ಕಳನ್ನು ಕದ್ದು ತಂದಿದ್ದುದರಿಂದ ಅವನಿಗೆ ಮಾಡಿದ ಬಾಧೆಗಾಗಿ ಬಹು ದಿವಸಗಳಿಂದಲೂ ಅನುತಾಪಪಡುತ್ತಿದ್ದನು. ಯೌವನದಲ್ಲಿ ಈತನು ಒಬ್ಬ ಯೋಧನಾಗಿದ್ದ ಕಾರಣ ತನ್ನಿಂದ ಬಾಧೆಗೊಂಡ ಆ ನೃಪತಿಗಾಗಿ ಯುದ್ಧಮಾಡಲು ಸಂತೋಷದಿಂದ ಆ ಸೈನ್ಯವನ್ನು ಸೇರಿಕೊಂಡನು

ಉಭಯ ಸೈನ್ಯಗಳಿಗೂ ಮಹಾಭೀಕರವಾದ ಯುದ್ಧವು ಪ್ರಾರಂಭವಾಯಿತು. ಪಾಸ್ತುಮಸ್, ಬೆಲಾರಿಯಸ್, ಮತ್ತು ಸಿಂಬಲೀನನ ಇಬ್ಬರು ಮಕ್ಕಳ ಅನನ್ಯಾದೃಶವಾದ ಶೌರ್ಯವಿಲ್ಲದಿದ್ದರೆ ಬ್ರಿಟನ್ನವರು ಪರಾಜಿತರಾಗುತ್ತಿದ್ದರು. ಸಿಂಬಲೀನನೂ ಸಂಹೃತನಾಗುತ್ತಿದ್ದನು. ಇವರು ಸಿಂಬಲೀನನ್ನು ರಕ್ಷಿಸಿ ಆತನ ಪ್ರಾಣವನ್ನು ಕಾಪಾಡಿದರು.

ತಾನು ಬಯಸುತ್ತಿದ್ದ ಮರಣವು ಯುದ್ಧದಲ್ಲಿ ತನಗೆ ದೊರೆಯದ ಕಾರಣ ಸಮರವು ಮುಗಿದನಂತರದಲ್ಲಿ ಪಾಸ್ತುಮಸನು ಹಿಂದಿನ ರಾಜಶಾಸನದಂತೆಯಾದರೂ ಮರಣವು ಲಭ್ಯವಾಗಲೆಂಬ ಹಾರೈಕೆಯಿಂದ ಸಿಂಬಲೀನನ ಅಧಿಕಾರಿಗಳ ಕೈಗೆ ಅವಶ್ಯಕವಾಗಿ ಸೆರೆಸಿಕ್ಕಿದನು.

ಐಮೊಜನಳೂ ಅವಳು ಸೇವೆಮಾಡುತ್ತಲಿದ್ದ ರೋಮನ್ ಸೇನಾಪತಿಯೂ ಅವಳ ಹಿಂದಿನ ಹಗೆಯಾದ ರೋಮನ್ ದಳದ ಒಬ್ಬ ಅಧಿಕಾರಿಯಾದ ಐಯಾಚಿಮೊವೂ ಸೆರೆಯಾಗಿ ಹಿಡಿಯಲ್ಪಟ್ಟರು. ಇವರು ಅರಸಿನೆದುರಿನಲ್ಲಿರುವಾಗ್ಗೆ ಮರಣದಂಡನೆಯ ಆಜ್ಞೆಯನ್ನು ಪಡೆಯುವುದಕ್ಕಾಗಿ ಪಾಸ್ತುಮಸನು ನೃಪನ ಬಳಿಗೆ ತರಲ್ಪಟ್ಟನು. ಇಂಥಾ ಅದ್ಭುತವಾದ ಗಂಡಾಂತರದ ಸಮಯದಲ್ಲಿ ತಮ್ಮ ಶೌರ್ಯದಿಂದ ಅರಸಿಗೆ ಮಾಡಿದ ಅಪಾರವಾದ ಉಪಕಾರಗಳಿಗಾಗಿ ಸನ್ಮಾನಾರ್ಹರಾದ ಬೆಲಾರಿಯಸನೂ ಆ ರಾಜಕುಮಾರರೂ ಸಿಂಬಲೀನನ ಬಳಿಗೆ ಕರೆತರಲ್ಪಟ್ಟರು. ರಾಜಭೃತ್ಯರಲ್ಲಿ ಒಬ್ಬನಾದ ಪೈಸಾನಿಯೊವು ಅಲ್ಲಿಯೇ ಇದ್ದನು.

ಆದುದರಿಂದ ಈಗ ನೃಪನೆದುರಿನಲ್ಲಿ (ನಾನಾ ಬಗೆಯ ಬೆರವಸೆ ಭೀತಿಗಳಿಂದ ಕೂಡಿದ) ಪಾಸ್ತುಮಸನು, ತನ್ನ ಹೊಸ ಸ್ವಾಮಿಯಾದ

ರೋಮನ್ ಸೇನಾಧಿಪತಿಯ ಸಮೀಪದಲ್ಲಿ ಐಮೊಜನಳೂ ಸ್ವಾಮಿ ಭಕ್ತನಾದ ಪೈಸಾನಿಯೊವೂ ಶತ್ರುತ್ವದಿಂದ ಕೂಡಿದ ಹೃದಯವುಳ್ಳ ಐಯಾಚಿಮೊವೂ ಬೆಲಾರಿಯುಸನೂ ಅವನಿಂದ ಅಪಹೃತರಾಗಿದ್ದ ಸಿಂಬಲೀನನ ಇಬ್ಬರು ಗಂಡು ಮಕ್ಕಳೂ ಇದ್ದರು.

ಪಾಸ್ತುಮುಸನು ಒಬ್ಬ ರೈತನಂತೆ ಉಡಿಗೆಯನ್ನು ಧರಿಸಿಕೊಂಡಿದ್ದಾಗ್ಯೂ ಅವನನ್ನು ಐಮೊಜನಳು ಗುರುತು ಹಿಡಿದಳು. ಆದರೆ ಅವನು ಅವಳನ್ನು ಗಂಡುಡಿಗೆಯಲ್ಲಿದ್ದ ಕಾರಣ ಗುರುತಿಸಲಾರದೆ ಹೋದನು. ಐಮೊಜನಳು ಐಯಾಚಿಮೊವನ್ನೂ ಗುರುತು ಹಿಡಿದಳು. ಅವನ ಕೈಯಲ್ಲಿ ತನ್ನ ರತ್ನದುಂಗುರವಿರುವುದನ್ನೂ ಸಹ ನೋಡಿದಳು. ಆದರೆ ತನ್ನ ದುರ್ದೆಶೆಗಳಿಗೆಲ್ಲಾ ಅವನು ಕಾರಣನೆಂದು ಇನ್ನೂ ಅವಳು ಅರಿತಿರಲಿಲ್ಲ.

ಪೈಸಾನಿಯೊವೇ ಐಮೊಜನಳಿಗೆ ಗಂಡುಡಿಗೆಯನ್ನು ಹಾಕಿದವನಾದ ಕಾರಣ ಅವನು ಅವಳನ್ನು ಗುರುತು ಹಿಡಿದನು. “ಅದು ನಮ್ಮೊಡತಿ! ಆಕೆಯು ಜೀವವಂತಳಾಗಿರುವಳು. ಇನ್ನು ಮೇಲೆ ಕಾಲವು ಶುಭವಾಗಿಯೋ ಅಶುಭವಾಗಿಯೋ ಹೇಗಾದರೂ ಪರಿಣಮಿಸಲಿ” ಎಂದು ಯೋಚಿಸಿದನು. ಬೆಲಾರಿಯುಸನೂ ಅವಳನ್ನು ಗುರುತಿಸಿ ಆರ್ವಿರಗಸನನ್ನು ಕುರಿತು—“ಅಂದು ಮೃತನಾದ ಬಾಲಕನೇ ಅಲ್ಲವೇ ಇವನು?” ಎಂದನು.

ಆರ್ವಿರಗಸ್—“ಆ ಕೆಂಪಾದ ಕಪೋಲಗಳುಳ್ಳ ಮೃತನಾದ ಫೈಡಿಲಿ ಎಂಬ ಬಾಲಕನಂತೆ ಇವನಿರುವ ಹಾಗೆ ಒಂದು ಮರಳು ಕಣವೂ ಸಹ ಇನ್ನೊಂದು ಮರಳು ಕಣದಂತಿರದು.”

ಗೈಡೇರಿಯುಸ್—“ಅವನೇ ಇವನು.”

ಬೆಲಾರಿಯುಸ್—“ಗದ್ದಲ ಮಾಡಬೇಡಿ, ಆ ಬಾಲಕನೇ ಇವನಾಗಿದ್ದರೆ ಇವನು ನಮ್ಮನ್ನು ದಿಟವಾಗಿಯೂ ಮಾತನಾಡಿಸುತ್ತಿದ್ದನು”

ಗೈಡೇರಿಯುಸ್—“ಆದರೆ ಅವನು ಮೃತನಾಗಿದುದನ್ನು ನಾವು ನೋಡಿದೆವು.”

ಬೆಲಾರಿಯುಸ್—“ನಿಶ್ಶಬ್ದವಾಗಿರಿ” ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಲಿದ್ದರು.

ಪಾಸ್ತುಮುಸನು ನಿಶ್ಶಬ್ದವಾಗಿ ನಿಂತಿದ್ದು, ತನ್ನ ಮರಣದಂಡನೆಯ ಆಜ್ಞೆಯನ್ನು ಸ್ವಾಗತಪೂರ್ವಕವಾಗಿ ಎದುರು ನೋಡುತ್ತಲಿದ್ದನು.

ತಾನು ಅರಸಿಗೆ ಯುದ್ಧದಲ್ಲಿ ಸಹಾಯಮಾಡಿ ಆತನ ಪ್ರಾಣವನ್ನು ಕಾಪಾಡಿದೆನೆಂಬ ವಾರ್ತೆಯನ್ನು ಹೇಳಿದರೆ ಆತನಿಗೆ ತನ್ನಲ್ಲಿ ಕನಿಕರವುಂಟಾಗಿ ಕ್ಷಮಿಸಿಬಿಡುವನೆಂಬ ಯೋಚನೆಯಿಂದ ಆ ಸಂಗತಿಯನ್ನೂ ತಿಳಿಸಲಿಲ್ಲ.

ಹೀಗಿರಲು ಐಮೊಜನಳನ್ನು ಭೃತ್ಯತ್ವಕ್ಕೆ ಇಟ್ಟುಕೊಂಡ ರೋಮನ್ ಸೇನಾಧಿಪತಿಯಾದ ಲ್ಯೂಕಸನೇ ಅರಸಿನೊಡನೆ ಮೊದಲು ಮಾತನಾಡಿದವನಾದನು. ಉಳಿದವರಲ್ಲಿ ಹಲವರು ಹೃದಯದಲ್ಲಿ ತಲ್ಲಣಗೊಂಡವರಾಗಿದ್ದರೂ ಅರಸಿನೆದುರಿಗೆ ನಿಶ್ಶಬ್ದವಾಗಿದ್ದರು. ಈ ಸೇನಾಧಿಪತಿಯು ಮಹಾ ಧೈರ್ಯಶಾಲಿಯಾಗಿಯೂ ಗಂಭೀರವಾದ ಯೋಗ್ಯತೆಯುಳ್ಳವನಾಗಿಯೂ ಇದ್ದನು.

ಲ್ಯೂಕಸ್—“ ಎಲೈ ಅರಸನೇ, ನಿನಗೆ ಸೆರೆಯಾಗಿ ಸಿಕ್ಕಿರುವವರಲ್ಲಿ ಯಾರನ್ನೂ ನೀನು ಬಿಡುವುದಿಲ್ಲವೆಂದೂ ಎಲ್ಲರಿಗೂ ಮರಣದಂಡನೆಯನ್ನು ವಿಧಿಸುವಿಯೆಂದೂ ಕೇಳಿರುತ್ತೇನೆ. ನಾನು ರೋಮ್ ದೇಶದವನು, ರೋಮ್ ದೇಶದವನ ಹೃದಯದಿಂದ ಸಾಯುವೆನು ; ಆದರೆ ಒಂದು ಸಂಗತಿಯನ್ನು ಕುರಿತು ವಿಜ್ಞಾಪಿಸುವೆನು ” ಎಂದು ಐಮೊಜನಳನ್ನು ಮುಂದಕ್ಕೆ ತಂದು ನಿಲ್ಲಿಸಿ, “ ಈ ಬಾಲಕನು ಬ್ರಿಟನ್ ದೇಶದಲ್ಲಿ ಹುಟ್ಟಿದವನು. ಇವನೊಬ್ಬನು ಬಿಡುಗಡೆ ಮಾಡಲ್ಪಡಲಿ. ಇವನು ನನ್ನ ಬಾಲ ಭೃತ್ಯನು. ಇಷ್ಟು ದಯಾಶಾಲಿಯಾಗಿಯೂ ಕರ್ತವ್ಯಜ್ಞನಾಗಿಯೂ ಎಲ್ಲಾ ಸಂದರ್ಭಗಳಲ್ಲೂ ಬುದ್ಧಿಚಾತುರ್ಯಗಳುಳ್ಳವನಾಗಿಯೂ ಸತ್ಯವಂತನಾಗಿಯೂ ತಾಯಿಯಂತೆ ಆದರಿಸತಕ್ಕವನಾಗಿಯೂ ಇರುವ ಭೃತ್ಯನನ್ನು ಈ ವರೆಗೆ ಯಾವ ಸ್ವಾಮಿಯೂ ಪಡೆದಿರಲಿಲ್ಲ. ಇವನು ರೋಮಿನವನನ್ನು ಸೇವಿಸಿದ್ದಾಗ್ಯೂ ಬ್ರಿಟನ್‌ನವರಿಗೆ ಲೇಶವೂ ಅಪಕಾರಮಾಡಿಲ್ಲ. ನೀನು ಯಾರನ್ನೂ ಬಿಡುಗಡೆ ಮಾಡದಿದ್ದರೂ ಇವನೊಬ್ಬನನ್ನಾದರೂ ಕಾಪಾಡು ” ಎಂದನು.

ಸಿಂಬಲೀನನು ಅಂತಃಕರಣಪೂರ್ವಕವಾಗಿ ಐಮೊಜನಳನ್ನು ನೋಡಿದನು. ವೇಷಾಂತರದಲ್ಲಿದ್ದ ಅವನನ್ನು ಅರಸನು ಸರಿಯಾಗಿ ಅರಿಯಲಾರದೆ ಹೋದನು. ಆದಾಗ್ಯೂ ಸರ್ವಶಕ್ತನಾದ ಭಗವಂತನು ಅವನ ಹೃದಯವನ್ನು ಪ್ರೇರಿಸಿದನು. ಆದುದರಿಂದ ಅವನು—“ ನಾನಿವನನ್ನು ನೋಡಿದ್ದೇನೆ. ಇವನ ಪರಿಚಯವು ನನಗಿರುವಂತೆ ಇವನ ಮುಖಭಾವದಿಂದರಿಯುತ್ತೇನೆ. ಆದರೆ ಎಂದು, ಹೇಗೆ, ಪರಿಚಿತನಾದನೋ ನನಗೆ

ತಿಳಿಯದು. ಎಲೈ ಬಾಲಕನೇ, ಬದುಕು. ನಿನ್ನ ಜೀವವನ್ನು ರಕ್ಷಿಸಿದ್ದೇನೆ. ನಿನಗಿನ್ನೇನು ವರವು ಬೇಕು ಕೇಳು. ಅದನ್ನನುಗ್ರಹಿಸುವೆನು. ನನಗೆ ಸೆರೆಸಿಕ್ಕಿರುವವರಲ್ಲಿ ಬಹು ಮುಖ್ಯನಾದವನನ್ನೇ ಉಳಿಸಬೇಕೆಂದು ಕೇಳಿದರೂ ಅನುಗ್ರಹಿಸುವೆನು'' ಎಂದನು.

ಐಮೊಜನ್—''ಮಹಾಸ್ವಾಮಿಯವರ ಕೃಪೆಗೆ ಬಹಳ ಕೃತಜ್ಞನಾಗಿದ್ದೇನೆ.'' ಅನುಗ್ರಹಿಸಲ್ಪಡುವುದಾಗಿ ಹೇಳಿದ ವರವು ಯಾವುದನ್ನಾಗಲಿ ಅದು ಏನೇ ಆಗಿರಲಿ ಅನುಗ್ರಹೀತನಾದವನ ಪ್ರಾರ್ಥನೆಯನ್ನು ನೆರವೇರಿಸಿ ಕೊಡುವುದಾಗಿ ಮಾಡಿದ ವಾಗ್ದಾನವಾಗಿತ್ತು. ಈ ಬಾಲಕನು ಏನನ್ನು ಪ್ರಾರ್ಥಿಸುವನೆಂಬುದನ್ನು ಕೇಳಲು, ಎಲ್ಲರೂ ಬಹು ಕುತೂಹಲ ಭರಿತರಾಗಿದ್ದರು. ಅವಳ ಸ್ವಾಮಿಯಾದ ಲ್ಯೂಕಸನು ಅವಳನ್ನು ಕುರಿತು —''ಎಲೈ ಗುಣವಂತನಾದ ಬಾಲಕನೇ, ನನ್ನ ಪ್ರಾಣವನ್ನುಳಿಸೆಂದು ನಾನು ಪ್ರಾರ್ಥಿಸುವುದಿಲ್ಲ. ಆದರೂ ನೀನು ಅದನ್ನೇ ಪ್ರಾರ್ಥಿಸುವಿಯೆಂದು ಬಲ್ಲೆನು'' ಎಂದನು.

ಐಮೊಜನ್—''ಆಹಾ! ಇಲ್ಲ! ಇಲ್ಲ! ನನಗೆ ಬೇರೆ ಉದ್ದೇಶವಿದೆ. ಮಹನೀಯನಾದ ಸ್ವಾಮಿಯೇ, ನಿನ್ನ ಜೀವಿತವನ್ನು ನಾನು ಪ್ರಾರ್ಥಿಸಲಾರೆನು.''

ಈ ಬಾಲಕನಲ್ಲಿ ತೋರಿಬರುವ ಈ ತೆರದ ಕೃತಘ್ನತೆಗಾಗಿ ರೋಮನ್ ಸೇನಾಧಿಪತಿಯು ಅಚ್ಚರಿವಡೆದನು.

ಅನಂತರದಲ್ಲಿ ಐಮೊಜನಳು ಐಯಾಚಿಮೊವಿನ ಮೇಲೆ ದೃಷ್ಟಿಯನ್ನಿಟ್ಟು, ಅವನ ಕೈಯಲ್ಲಿ ಅವನು ಧರಿಸಿರುವ ಉಂಗುರವು ಅವನಿಗೆ ಹೇಗೆ ಬಂತೆಂಬುದನ್ನು ಅವನು ಹೇಳುವಂತೆ ಮಾಡಬೇಕೆಂಬ ವರವನ್ನು ಹೊರತು ಇನ್ನಾವುದನ್ನೂ ಯಾಚಿಸಲಿಲ್ಲ.

ಸಿಂಬಲೀನನು ಈ ವರವನ್ನು ಕೃಪೆಮಾಡಿ, ಅವನ ಕೈಗೆ ಆ ರತ್ನದುಂಗುರವು ಹೇಗೆ ಬಂತೆಂಬುದನ್ನು ಐಯಾಚಿಮೊವು ತಿಳಿಸದಿದ್ದಲ್ಲಿ ಅಪರಿಮಿತವಾದ ಬಾಧೆಗೆ ಗುರಿಯಾಗುವುದಾಗಿ ಭೀತಿಗೊಳಿಸಿದನು.

ಐಯಾಚಿಮೊವು ತನ್ನ ಸಾಹಸಕಾರ್ಯವನ್ನೂ ಹಿಂದೆಯೇ ಹೇಳಿರುವಂತೆ ಪಾಸ್ತುಮಸನೊಡನೆ ತಾನು ಮಾಡಿಕೊಂಡ ಶಪಥದ ವಿಚಾರವನ್ನೂ ಅವಿಚಾರಿಯಾಗಿ ನಂಬತಕ್ಕ ಪಾಸ್ತುಮಸನನ್ನು ತಾನು ಹೇಗೆ ಗೆದ್ದೆನೆಂಬುದನ್ನೂ ಹೇಳಿದನು.

ಪಾಸ್ತುಮಸನು ತನ್ನ ಭಾರ್ಯೆಯ ಪಾತಿವ್ರತ್ಯವನ್ನೂ ನಿರ್ದೋಷತೆಯನ್ನೂ ಕೇಳಿದುದರಿಂದ ಎಷ್ಟು ಸಂಕಟಪಟ್ಟನೆಂಬುದನ್ನು ವಿವರಿಸಲಸದಳವಾಗಿದೆ ಪಾಸ್ತುಮಸನು ಒಡನೆಯೇ ಸಿಂಬಲೀನನ ಎದುರಿಗೆ ಬಂದು ರಾಯಗುವಂಯನ್ನು ಸಂಹರಿಸೆಂದು ತಾನು ಪೈಸಾನಿಯೊವಿಗೆ ಮಾಡಿದ ಕ್ರೂರವಾದ ಆಜ್ಞೆಯನ್ನೊಪ್ಪಿಕೊಂಡು—"ಓ! ಐಮೊಜನಳೇ, ನನ್ನ ರಾಣಿಯೇ: ನನ್ನ ಜೀವವೇ! ನನ್ನ ಭಾರ್ಯೆಯೇ!" ಎಂದು ಗದ್ಗದಸ್ವರದಿಂದ ಪ್ರಲಾಪಿಸಿದನು.

ಐಮೊಜನಳು ತನ್ನ ಪತಿಯು ಈ ತೆರದ ಸಂತಾಪಕರವಾದ ಸ್ಥಿತಿಯಲ್ಲಿರುವುದನ್ನು ನೋಡಿ ಸಹಿಸಲಾರದೆ ತನ್ನನ್ನು ತಾನೇ ತೋರ್ಪಡಿಸಿಕೊಂಡಳು. ತನ್ನ ಅಪರಾಧ ಮತ್ತು ದುಃಖಭಾರಗಳಿಂದ ಬಿಡುಗಡೆಯನ್ನು ಹೊಂದಿ, ತನ್ನಿಂದ ಅತ್ಯಂತಕ್ರೂರವಾಗಿ ಕಾಣಲ್ಪಟ್ಟಿದ್ದ ತನ್ನ ಪ್ರಿಯಭಾರ್ಯೆಯ ಮನೋಜ್ಞವಾದ ದಯೆಗೆ ಪಾತ್ರನಾದ ಪಾಸ್ತುಮಸನ ಹೇಳಲಸಾಧ್ಯವಾದ ಹರ್ಷಕ್ಕೆಣೆಯೇನಿರುವುದು! ತನ್ನ ಕಣ್ಮರೆಯಾಗಿದ್ದ ಸುತೆಯನ್ನು ಕಂಡುದರಿಂದ ಸಿಂಬಲೀನನು ಸಂತೋಷಾಂಬುಧಿಯಲ್ಲಿ ಮುಳುಗಿ ತೇಲುತ್ತ ಅವಳನ್ನು ಎಂದಿನಂತೆ ತನ್ನ ಪುತ್ರಿಕಾಭಿಮಾನದಿಂದ ಅಂಗೀಕರಿಸಿದುದು ಮಾತ್ರವೇ ಅಲ್ಲದೆ ಅವಳ ಪತಿಯಾದ ಪಾಸ್ಮುಮಸನಿಗೆ ಪ್ರಾಣದಾನ ಮಾಡಿ ಅವನನ್ನು ತನ್ನ ಅಳಿಯನನ್ನಾಗಿ ಅಂಗೀಕರಿಸಲೊಪ್ಪಿಕೊಂಡನು

ಬೆಲಾರಿಯಸನು ಈ ಸಂತೋಷದ ಸಂಧಿಯಲ್ಲಿ ತನ್ನ ವಿಚಾರವನ್ನೂ ತಿಳಿಸಲು ಅನುಕೂಲವಾದ ಸಮಯವೆಂದು ಭಾವಿಸಿಕೊಂಡು—"ಇವರು ನಿನ್ನ ಮಕ್ಕಳಾದ ಗೈಡೇರಿಯಸ್, ಆರ್ವಿರಗಸರು" ಎಂದು ಹೇಳಿ ಆ ರಾಜಕುಮಾರರನ್ನು ಅರಸನಿಗೊಪ್ಪಿಸಿದನು.

ಸಿಂಬಲೀನನು ವೃದ್ಧನಾದ ಬೆಲಾರಿಯಸನನ್ನು ಕ್ಷಮಿಸಿದನು. ಇಂತಹ ಸಂತೋಷದ ವೇಳೆಯಲ್ಲಿ ಶಿಕ್ಷೆಮಾಡುವುದನ್ನು ಯಾರು ತಾನೆ ಯೋಚಿಸುವರು! ಸುತೆಯು ಜೀವವಂತಳಾಗಿರುವುದೂ ತನ್ನ ಕುವರರು ಅತುಳಪರಾಕ್ರಮದಿಂದ ಕಾದಿ ತನ್ನ ಕಷ್ಟವನ್ನು ಬಿಡುಗಡೆ ಮಾಡಿದುದೂ ಅರಸನಿಗೆ ನಿಜವಾಗಿಯೂ ಅಪಾರವಾದ ಆನಂದದಾಯಕವಾಯಿತು.

ಈಗ ಐಮೊಜನಳು ತನ್ನ ಹಿಂದಿನ ಒಡೆಯನೂ ರೋಮಕ ಸೇನಾಧಿಪತಿಯೂ ಆದ ಲೂಕಸನಿಗೆ ಅಪಾರವಾದ ಉಪಕಾರವನ್ನು

ಮಾಡಲವಕಾಶವುಳ್ಳವಳಾಗಿದ್ದಳು. ಇವಳ ಪ್ರಾರ್ಥನೆಯ ಮೇರೆಗೆ ಅರಸನಾದ ಇವಳ ತಂದೆಯು ಅವನಿಗೆ ಒಡನೆಯೇ ಪ್ರಾಣದಾನವನ್ನು ಮಾಡಿದನು. ಈ ಸೇನಾಧಿಪತಿಯ ಮಧ್ಯಸ್ಥಿಕೆಯ ಮೇರೆಗೆ ಬ್ರಿಟನ್ನಿನವರಿಗೂ ರೋಮನ್ನವರಿಗೂ ಸಂಧಿಯು ನಡೆಯಿತು. ಈ ಒಪ್ಪಂದವು ಅನೇಕ ಸಂವತ್ಸರಗಳು ಸಂಪೂರ್ಣತೆಯಿಂದ ನಡೆದುಬಂತು.

ಸಿಂಬಲೀನನ ನೀಚಳಾದ ಸತಿಯು ತನ್ನ ಉದ್ದೇಶಗಳು ಸಾಂಗವಾಗಿ ನಡೆಯದುದರಿಂದ ಭಗ್ನಮನೋರಥಳಾಗಿ ಮನಸ್ಸಾಕ್ಷಿಯಿಂದುಂಟಾದ ಅನುತಾಪದಿಂದ ವ್ಯಾಧಿಗ್ರಸ್ಥಳಾಗಿ ಹೇಗೆ ಮೃತಿಯೊಂದಿದಳೆಂಬುದನ್ನು ಇವಳು ಜೀವವಂತಳಾಗಿದ್ದಾಗಲೇ ಇವಳ ಮಗ ಬುದ್ಧಿಹೀನನಾದ ಕ್ಲೋಟನನು ತನ್ನಿಂದ ಕೆರಳಿಸಲ್ಪಟ್ಟವರೊಡನೆ ಹೋರಾಡಿದುದರಲ್ಲಿ ಹೇಗೆ ಸಂಹೃತನಾದನೆಂಬುದನ್ನೂ ಸಾಧಾರಣವಾಗಿ ಸ್ವಲ್ಪ ಮಟ್ಟಿಗೆ ಸೂಚಿಸುವುದಕ್ಕಿಂತಲೂ ವಿವರಿಸುವುದು ಇಂಥಾ ಆನಂದಕರವಾದ ಪರಿಸಮಾಪ್ತಿಯನ್ನು ವಿಘ್ನಗೊಳಿಸುವಂತಾಗುವುದು. ಅರ್ಹತೆಯುಳ್ಳವರೆಲ್ಲರೂ ಸುಖಿಗಳಾಗಿ ಮಾಡಲ್ಪಟ್ಟರು. ಕೇಡಿಗನಾದ ಐಯಾಚಿಮೊವೂ ಸಹ ಅವನ ಸಾಹಸ ಕಾರ್ಯವು ಅದರ ಕಟ್ಟಕಡೆಯ ಗುರಿಯನ್ನು ತಪ್ಪಿದ ಕಾರಣದಿಂದ ದಂಡಿಸಲ್ಪಡಲಿಲ್ಲ.

## V. TWELFTH NIGHT

## ೫. ಹನ್ನೆರಡನೆಯ ರಾತ್ರಿ

ಇಟಲಿ ದೇಶದ ಮೆಸ್ಸಲೈನ್ ನಗರದಲ್ಲಿ ಸಿಬಾಸ್ಟಿಯನ್, ವಿಯೊಲಳು ಎಂಬ ಅವಳಿಮಕ್ಕಳಾದ ಅಣ್ಣತಂಗಿಯರಿದ್ದರು. (ಅವಳಿ ಮಕ್ಕಳಲ್ಲಿ ಒಂದು ಗಂಡು, ಒಂದು ಹೆಣ್ಣು ಮಗುವಾಗಿರುವುದು ಪರಮಾಶ್ಚರ್ಯ.) ಜನನಾರಭ್ಯ ಎಲ್ಲ ವಿಧದಲ್ಲೂ ಇವರು ಒಬ್ಬರನ್ನೊಬ್ಬರು ಸಂಪೂರ್ಣವಾಗಿ ಹೋಲುತ್ತಲಿದ್ದರು. ಇವರ ಉಡುಗೆಯಲ್ಲಿ ಭೇದಗಳಿರದಿದ್ದರೆ ಇವರಿಂಥವರೇ ಎಂದು ಗುರುತು ಹಿಡಿಯುವುದೇ ಪ್ರಯಾಸವಾಗುತ್ತಿತ್ತು. ಒಂದು ಗಳಿಗೆಯಲ್ಲಿ ಜನನವಾದ ಇವರಿಬ್ಬರೂ ಪ್ರಯಾಣ ಮಾಡುತ್ತಲಿದ್ದ ಹಡಗು ಇಲ್ಲೀರಿಯದ ದಡದಲ್ಲಿ ಒಡೆದು ಹೋದುದರಿಂದ ವಿಪತ್ತಿಗೆ ಗುರಿಯಾದರು ಇವರು ಯಾನ ಮಾಡುತ್ತಲಿದ್ದ ಹಡಗು ಬಿರುಗಾಳಿಯ ದೆಸೆಯಿಂದ ಬಂಡೆಗೆ ಬಡಿದು ಒಡೆದು ಹೋಗಲು ಅದರಲ್ಲಿದ್ದ ಪ್ರಯಾಣಿಕರಲ್ಲಿ ಕೆಲವರು ಮಾತ್ರವೇ ಪ್ರಾಣವನ್ನುಳಿಸಿಕೊಂಡರು. ಹೀಗೆ ಬದುಕಿಕೊಂಡವರಲ್ಲಿ ಹಡಗಿನ ಅಧಿಕಾರಿಯೂ ಕೆಲ ನಾವಿಕರೂ ವಿಯೊಲಳ ಸಹಿತವಾಗಿ ಒಂದು ಸಣ್ಣ ದೋಣಿಯ ಆಸರೆಯಿಂದ ದಡವನ್ನು ತಲಪಿದರು. ಆದಾಗ್ಯೂ ನಿರ್ಭಾಗ್ಯಳಾದ ಈ ವನಿತೆಯು ತಾನು ರಕ್ಷಿತವಾದುದಕ್ಕಾಗಿ ಸಂತೋಷಪಡುವುದಕ್ಕೆ ಬದಲಾಗಿ ತನ್ನ ಅಣ್ಣನ ಅಗಲಿಕೆಯಿಂದ ಶೋಕಪಡುತ್ತಲಿದ್ದಳು. ಆದರೆ ಹಡಗಿನ ಅಧಿಕಾರಿಯು—“ಎಲೌ, ತಾಯಿಯೇ, ಹಡಗು ಒಡೆದು ಹೋದಾಗ, ನಿನ್ನ ಅಣ್ಣನು ಬಲವಾದ ಒಂದು ಪತಸ್ತಂಭಕ್ಕೆ ತನ್ನನ್ನು ಕಟ್ಟಿಕೊಂಡನು. ನನ್ನ ದೃಷ್ಟಿಯೋಡುವ ವರೆಗೂ ಅವನು ಸಮುದ್ರದ ತರಂಗಗಳ ಮೇಲೆಯೇ ಇದ್ದುದನ್ನು ನೋಡಿದೆನು” ಎಂದು ಅವಳಿಗೆ ಭರವಸೆಯನ್ನು ಹೇಳಿದನು. ಈ ಭರವಸೆಯ ಸುದ್ದಿಯಿಂದ ವಿಯೊಲಳಿಗೆ ಬಹಳ ಸಮಾಧಾನವುಂಟಾಗಿ, ತನ್ನ ದೇಶಕ್ಕೆ ಬಹು ದೂರವಾಗಿಯೂ ಅಪರಿಚಿತವಾಗಿಯೂ ಇರುವ ಈ ದೇಶದಲ್ಲಿ ತಾನು ಹೇಗೆ ನಿರ್ವಾಹಮಾಡಬೇಕೆಂಬ ಯೋಚನೆಯುಂಟಾಯಿತು. ಅನಂತರದಲ್ಲಿ ಅವಳು ಇಲ್ಲೀರಿಯಾ ನಾಡಿನ ವಿಷಯವಾಗಿ ಆ ನೌಕಾಧಿ

ಕಾರಿಯು ಏನಾದರೂ ಬಲ್ಲನೇ ಎಂಬುದನ್ನು ವಿಚಾರಿಸಿದಳು. ಆಗ ನೌಕಾಧಿಕಾರಿಯು– “ಅಮ್ಮಾ, ಚೆನ್ನಾಗಿ ಬಲ್ಲೆನು. ನಾನು ಹುಟ್ಟಿ ಬೆಳದುದೇ ಆ ದೇಶ. ಇಲ್ಲಿಂದ ಅದು ಮೂರು ಗಂಟೆಯ ಕಾಲ ಹಿಡಿಯುವಷ್ಟು ಹಾದಿಯೂ ಇಲ್ಲ.”

ವಿಯೊಲ— “ಅಲ್ಲಿ ಆಳುವವರಾರು?”

ಅಧಿಕಾರಿ— “ಅಪಾರವಾದ ಪದವಿಯಿಂದಲೂ ಸ್ವಭಾವಸಿದ್ಧವಾದ ಗಾಂಭೀರ್ಯದಿಂದಲೂ ಘನತೆಪಡೆದ ಆರ್‌ಸಿನೊ ಎಂಬ ಡ್ಯೂಕ್.”

ವಿಯೊಲ— “ನಮ್ಮ ತಂದೆಯು ಆತನ ಹೆಸರನ್ನು ಅಡಿಗಡಿಗೆ ಹೇಳುತ್ತಿದ್ದುದನ್ನು ನಾನು ಕೇಳಿಯುಂಟು. ಆಗ ಆತನು ಇನ್ನೂ ಬ್ರಹ್ಮಚಾರಿಯಾಗಿದ್ದನು.”

ಅಧಿಕಾರಿ— “ಅವನು ಈಗಲೂ ಹಾಗೆಯೇ ಇದ್ದಾನೆ. ಆದರೆ ಇದೇತಾನೆ ಒಂದು ತಿಂಗಳ ಹಿಂದೆ ನಾನು ಇಲ್ಲಿಂದ ಹೊರಟಾಗ ಗುಣರೂಪಯುತಳಾದ ಒಲಿವಿಯಳೆಂಬ ಒಬ್ಬ ಕೌಂಟಿನ ಪುತ್ರಿಯಲ್ಲಿ ಆತನು ಮೋಹಿತನಾಗಿದ್ದಾನೆಂದು ಜನಜನಿತವಾದ ವರ್ತಮಾನವಿತ್ತು. ಅವಳ ತಂದೆಯು ಈಗ ಒಂದು ವರ್ಷದ ಹಿಂದೆ ಕಾಲವಾಗಿ ಹೋಗುವಾಗ ಅವಳನ್ನು ಅವಳ ಅಣ್ಣನ ಸಂರಕ್ಷಣೆಗೆ ಬಿಟ್ಟನು. ಅವನೂ ಕೂಡ ಸ್ವಲ್ಪ ಕಾಲದಲ್ಲಿಯೇ ಮೃತನಾದನು. ಜನರು ಹೇಳುವಂತೆ ಅವಳು ತನ್ನ ಭ್ರಾತೃವಿಯೋಗ ಶೋಕದಿಂದ ವಿರಕ್ತಳಾಗಿರುವಳಂತೆ.

ವಿಯೊಲಳು ಅವಳಂತೆಯೇ ಭ್ರಾತೃವಿಯೋಗದಿಂದ ಪೀಡಿತಳಾಗಿದ್ದ ಕಾರಣ ಮೃತನಾದ ಅಣ್ಣನಿಗಾಗಿ ಎಷ್ಟೊಂದು ಮಮತೆಯಿಂದ ದುಃಖಿಸುವ ಆ ವನಿತೆಯೊಡನೆ ವಾಸಮಾಡಲಪೇಕ್ಷಿಸಿ— “ಎಲೈ ನೌಕಾಧಿಕಾರಿಯೇ, 'ನನಗೆ ಆ ವನಿತೆಯ ಪರಿಚಯವು ದೊರೆಯುವಂತೆ ಮಾಡಿಕೊಡುವಿಯಾ? ನಾನು ಆಕೆಯನ್ನು ಮನಸಾ ಸೇವೆಮಾಡಿಕೊಂಡಿರಲಪೇಕ್ಷಿಸುವೆನು.”

ನೌಕಾಧಿಕಾರಿ— “ಒಲಿವಿಯಳು ತನ್ನ ಸಹೋದರನು ಮೃತನಾದಂದಿನಿಂದ ಯಾವ ಗಂಡಸಿಗೂ ತನ್ನ ಮನೆಯ ಪ್ರವೇಶಕ್ಕೆ ಆಸ್ಪದ ಕೊಡುವದಿಲ್ಲ. ಡ್ಯೂಕಿಗೂ ಸಹ. ಆದುದರಿಂದ ಇದು ನನ್ನಿಂದಸಾಧ್ಯ.”

ಅನಂತರದಲ್ಲಿ ವಿಯೊಲಳು ಪುರುಷನ ಸ್ವಭಾವಕುಚಿತವಾದ ಭೃತ್ಯತ್ವವನ್ನು ವಹಿಸಿ, ಡ್ಯೂಕನನ್ನು ಸೇವೆ ಮಾಡಲು ಉಪಾಯವನ್ನು

ಯೋಚಿಸಿದಳು. ಯುವತಿಯು ಗಂಡುಡಿಗೆಯನ್ನು ಧರಿಸಿ ಬಾಲಕನಂತೆ ಆಗುವ ಅಪೇಕ್ಷೆಯು ಅಪೂರ್ವವಾದ ಕುತೂಹಲವಾಗಿರವುದು. ಆದರೆ ದಿಕ್ಕು ಕಾಣದ ಅನಾಥಳಾದ ಅಸಮಾನರೂಪವತಿಯಾದ ಯುವತಿಯಾದ ವಿಯೊಲಳು ಅಪರಿಚಿತವಾದ ದೇಶದಲ್ಲಿ ಈ ರೀತಿಯಾಗಿ ವೇಷಾಂತರ ವನ್ನು ಧರಿಸುವುದಕ್ಕೆ ಕಾರಣವನ್ನು ಅವಳೇ ತಿಳಿಸಬೇಕು.

ನೌಕಾಧಿಕಾರಿಯಲ್ಲಿ ಲಕ್ಷಣವಾದ ನಡವಳಿಕೆಯಿರುವುದನ್ನೂ ಅವ ನು ತನ್ನ ಕ್ಷೇಮವನ್ನು ಬಯಸುವವನಾಗಿ ಮಿತ್ರನಂತೆ ಸಂಬಂಧವುಳ್ಳ ವನಾಗಿರುವುದನ್ನೂ ಇವಳು ನೋಡಿ, ತನ್ನ ಉದ್ದೇಶಗಳನ್ನು ಅವನಿಗೆ ತಿಳಿಸಿದಳು. ಅವನು ಅವಳಿಗೆ ಸಹಾಯಮಾಡಲು ಒಡನೆಯೇ ಸಿದ್ಧನಾ ದನು. ವಿಯೊಲಳು ಅವನಿಗೆ ಹಣವನ್ನು ಕೊಟ್ಟು, ತನ್ನ ಅಣ್ಣನು ಧರಿ ಸುತ್ತಲಿದ್ದ ಬಣ್ಣದ ಮತ್ತು ಮಾದರಿಯುಡಿಗೆಯನ್ನು ಮಾಡಿಕೊಡೆಂದು ಹೇಳಿದಳು. ಅನಂತರದಲ್ಲಿ ಇವಳು ಆವುಡಿಗೆಯನ್ನು ಧರಿಸಿಕೊಂಡು ಸಂ ಪೂರ್ಣವಾಗಿ ತನ್ನ ಅಣ್ಣನಂತೆಯೇ ಕಾಣಬಂದಳು. ಇದರಿಂದ ಮುಂದೆ ಕೆಲವು ಅಪೂರ್ವವಾದ ಅನರ್ಥಗಳುಂಟಾಗಿ ಸಿಬಾಸ್ಟಿಯನೂ ಜೀವವಂ ತನಾಗಿರುವುದು ಗೊತ್ತಾಯಿತು.

ಅನಂತರ ಆ ನೌಕಾಧಿಕಾರಿಯು ಆ ಸುಂದರಿಯಾದ ನಾರಿ ಯನ್ನು ಗಂಡುಡಿಗೆಯಿಂದಲಂಕರಿಸಿ ಡ್ಯೂಕಿನಾಸ್ಥಾನದಲ್ಲಿ ಕೆಲಸವಿದ್ದು ದರಿಂದ ಅವಳನ್ನು ಕರೆದುಕೊಂಡು ಹೋಗಿ ಆರ್‌ಸಿನೊವಿಗೆ (ವಿಯೊಲಳಿ ಗೆ ಸಿಜೇರಿಯೊ ಎಂಬ ಹೆಸರಿಟ್ಟು) ಒಪ್ಪಿಸಿದನು. ಡ್ಯೂಕನು ಆ ರೂಪ ವಂತನಾದ ಯುವಕನನ್ನು ಅವನ ನಡೆನುಡಿಗಳಿಗಾಗಿ ಮೆಚ್ಚಿ ಅವನನ್ನು ತನ್ನ ಬಾಲಭೃತ್ಯರಲ್ಲಿ ಒಬ್ಬನನ್ನಾಗಿ ಮಾಡಿಕೊಂಡನು. ವಿಯೊಲಳ ಬಯಕೆಯೂ ಅದೇ ಆಗಿತ್ತು. ಇವಳು ತನ್ನ ಕರ್ತವ್ಯಗಳನ್ನು ಸಂಪೂ ರ್ಣವಾಗಿ ಸಾಂಗಗೊಳಿಸುತ್ತ ಆಲಸ್ಯಗೊಳ್ಳದ ಉಪಚಾರದಿಂದಲೂ ಸ್ವಾಮಿ ಭಕ್ತಿಯ ಹೊಂದಿಕೆಯಿಂದಲೂ ಜಾಗ್ರತೆಯಲ್ಲಿಯೇ ಅವನಿಗೆ ಪ್ರೀತಿಪಾತ್ರನಾದ ಪರಿವಾರದವನಾದನು.

ಡ್ಯೂಕ್ ಆರ್‌ಸಿನೊವು ಸಿಜೇರಿಯೊವಿಗೆ ತಾನು ಒಲಿವಿಯಳಲ್ಲಿ ಮೋಹಗೊಂಡಿರುವ ವಾರ್ತೆಯನ್ನೆಲ್ಲಾ ತಿಳಿಸಿದನು. ಯಾರು ತನ್ನ ಬಹುಕಾಲದ ಪ್ರಾರ್ಥನೆಯನ್ನಂಗೀಕರಿಸದೆ ತನ್ನ ಆಕಾರವನ್ನು ಜರಿ ಯುತ್ತ ತನ್ನನ್ನೂ ತಾನು ಅವಳ ಬಳಿಗೆ ಹೋಗುವುದನ್ನೂ ಅಡ್ಡಿಗೊಳಿ

ಸಿದಳೋ ಅವಳ ಒಲಿಮೆಗಾಗಿ ತಾನು ಬಹುಕಾಲದಿಂದ ಮಾಡಿದ ನಿಷ್ಫಲವಾದ ಸಾಧನೆಯ ವಿಚಾರವನ್ನೂ ಹೇಳಿದನು. ತನ್ನನ್ನು ಅಷ್ಟು ನಿರ್ದಯೆಯಿಂದ ಕಂಡ ಆ ವನಿತೆಯ ಮೇಲಣ ಪ್ರೇಮದಿಂದ ಡ್ಯೂಕನು ಹಿಂದೆ ಪುರುಷೋಚಿತವಾದ ಯಾವ ಸಾಧನೆಗಳನ್ನೂ ಮೃಗಯಾದಿವಿಹಾರವನ್ನೂ ತನಗೆ ಸಂತೋಷ ಪ್ರದವಾಗಿದ್ದ ಇತರವಾದವುಗಳನ್ನೂ ಈಗ ಪರಿತ್ಯಜಿಸಿ ಸ್ತ್ರೀಕಂಠದ ಮಾಧುರ್ಯವಾದ ಗಾಂಭೀರ್ಯವಾದ ರಾಗಗೀತಗಳನ್ನೂ ಶೃಂಗಾರ ಪದಗಳನ್ನೂ ಕೇಳುತ್ತ ಅವಿವೇಕದ ಮೈಗಳ್ಳತನದಿಂದ ಕಾಲಕ್ಷೇಪ ಮಾಡುತ್ತ ಬಂದನು. ತಾನು ಯಾರ ಜೊತೆಯಲ್ಲಿರುತ್ತಿದ್ದನೋ ಆ ಪ್ರಾಜ್ಞರ ವಿದ್ಯಾವಂತರ ಶ್ರೀಮಂತರ ಸಹವಾಸದಲ್ಲಿ ತಾತ್ಸಾರಗೊಂಡು ದಿನವೆಲ್ಲಾ ಸಿಜೇರಿಯೊವಿನೊಡನೆ ಮಾತನಾಡುತ್ತಲಿದ್ದನು. ಈ ಡ್ಯೂಕಿನ ಘನವಂತರಾದ ಸಭಿಕರು ತಮ್ಮ ಘನತೆಯುಳ್ಳ ಮಹಾಪದವಿಯುಳ್ಳ ಡ್ಯೂಕ್ ಆರ್‌ಸಿನೊವಿಗೆ ಸಿಜೇರಿಯೊವಿನ ಸಹವಾಸವು ಯೋಗ್ಯವಾದುದಲ್ಲವೆಂದು ನಿಸ್ಸಂದೇಹವಾಗಿ ಯೋಚಿಸಿದರು.

ಯುವತಿಯರಾದ ಕನ್ಯೆಯರು ರೂಪವಂತರೂ ಯೌವನಸ್ಥರೂ ಆದ ಡ್ಯೂಕುಗಳಿಗೆ ಸಖಿಗಳಾಗಿರುವುದು ಅಪಾಯಕರ. ವಿಯೊಲಳು ಇದು ತನಗೆ ದುಃಖದಾಯಕವೆಂದು ಜಾಗ್ರತೆಯಲ್ಲಿ ಅರಿತಳು. ಡ್ಯೂಕನು ಇವಳಿಗೆ ಹೇಳಿದ ಸಮಾಚಾರವೆಲ್ಲವೂ ಒಲಿವಿಯಳಿಗಾಗಿ ಸಹಿಸಿದವುಗಳಾಗಿರುವುವು. ಇದರಿಂದ ವಿಯೊಲಳಿಗೆ (ಸಿಜೇರಿಯೊವಿಗೆ) ಡ್ಯೂಕಿನಲ್ಲಿ ವ್ಯಾಮೋಹವುಂಟಾಗಿ ಅದರಿಂದ ಸಂತಪ್ತಳಾಗಿ, ಸರ್ವೋತ್ಕೃಷ್ಟನಾದ ಶ್ರೀಮಂತನಾದ ತನ್ನ ಸ್ವಾಮಿಯ ವಿಷಯದಲ್ಲಿ ಒಲಿವಿಯಳು ಅಷ್ಟೊಂದು ಅಲಕ್ಷ್ಯವುಳ್ಳವಳಾಗಿರುವುದಕ್ಕಾಗಿ ಆಶ್ಚರ್ಯ ಭರಿತಳಾದಳು. ಇದನ್ನು ಡ್ಯೂಕಿಗೆ ಸೂಚಿಸುವುದರಲ್ಲಿ ಧೈರ್ಯಗೊಂಡು—“ಸ್ವಾಮಿಾ, ತಮ್ಮ ಘನವಾದ ಗುಣಗಳನ್ನು ಅಂಧಳಂತೆ ನೋಡದಿರುವವಳಲ್ಲಿ ತಾವು ಇಷ್ಟು ಅಪಾರವಾಗಿ ಅನುರಾಗವಿಟ್ಟು ಹಂಬಲಿಸುತ್ತಿರುವುದು ಬಹು ಸಂತಾಪಕರವಾಗಿದೆ. ತಾವು ಒಲಿವಿಯಳನ್ನು ಪ್ರೀತಿಸುವಂತೆ ತಮ್ಮನ್ನು ಒಬ್ಬ ನಾರಿಯು ಪ್ರೀತಿಸಿದರೆ (ಬಹುಶಃ ಹಾಗೆ ಪ್ರೀತಿಸತಕ್ಕವಳು ಒಬ್ಬಳಿರಬಹುದು) ನೀವವಳನ್ನು ಪ್ರೀತಿಸಿದರೆ ಅವಳನ್ನು ಪ್ರೀತಿಸಲಾರೆನೆಂದು ನೀವು ಹೇಳುವುದಿಲ್ಲವೆ ? ಈ ಉತ್ತರದಿಂದ ಅವಳು ಸುಮ್ಮನಾಗಬೇಡವೆ ? ” ಎಂದಳು.

ಆದರೆ ಡ್ಯೂಕನಿಗೆ ಈ ತರ್ಕವು ಸರಿಬೀಳಲಿಲ್ಲ. ಏಕೆಂದರೆ ತಾನು ಪ್ರೀತಿಸುವಂತೆ ಪ್ರೀತಿಸುವುದು ಯಾವ ಹೆಂಗಸಿಗೂ ಅಸಾಧ್ಯವೆಂದೂ ತಾನು ಹೊತ್ತಿರುವಷ್ಟು ಪ್ರೀತಿಯ ಭಾರವನ್ನು ಧರಿಸುವಂಥ ಹೃದಯವಿಶಾಲತೆಯು ಯಾವ ಹೆಂಗಸಿಗೂ ಇಲ್ಲವೆಂದೂ ಅದರಿಂದ ಒಲಿವಿಯಳಲ್ಲಿ ತನಗಿರುವ ಅನುರಾಗವನ್ನು ತನ್ನಲ್ಲಿ ಅನುರಾಗವುಳ್ಳ ಯಾವ ನಾರಿಯ ವಿಶ್ವಾಸದೊಡನೆಯೂ ಹೋಲಿಸುವುದು . ಲಕ್ಷಣವಾಗಿರುವುದಿಲ್ಲವೆಂದೂ ಹೇಳಿದನು. ಈ ವಿಷಯದಲ್ಲಿ ಡ್ಯೂಕಿನ ಅಭಿಮತವು ಇವಳ ಅಭಿಪ್ರಾಯಕ್ಕಿಂತಲೂ ಗಣ್ಯವಾದುದಾದರೂ ಡ್ಯೂಕಿನ ಹೃದಯದಲ್ಲಿ ನೆಲಸಿರುವ ಅನುರಾಗದಂತೆಯೇ ಅವಳ ಹೃದಯವೂ ಸಂಪೂರ್ಣವಾದ ಅನುರಾಗವುಳ್ಳುದಾಗಿರುವುದರಿಂದ ಅವಳು ಆ ಅಭಿಪ್ರಾಯವನ್ನು ದಿಟವೆಂದು ಭಾವಿಸಲಿಲ್ಲ.

ವಿಯೊಲಳು—"ಪ್ರಭುವೆ, ನಾನು ಬಲ್ಲೆನು."

ಡ್ಯೂಕ್—"ಸಿಜೇರಿಯೊ, ನೀನೇನು ಬಲ್ಲೆ ?"

ವಿಯೊಲ—"ಸ್ತ್ರೀಯರು ಪುರುಷರಲ್ಲಿ ಎಷ್ಟು ಪ್ರೀತಿಯುಳ್ಳವರಾಗಿರಬಹುದೆಂಬುದನ್ನು ಚೆನ್ನಾಗಿ ಬಲ್ಲೆನು. ನಮ್ಮಂತೆಯೇ ಅವರೂ ನಿಜಹೃದಯವುಳ್ಳವರಾಗಿರುವರು. ನಮ್ಮ ತಂದೆಗೆ ಪುರುಷನಲ್ಲಿ ಅನುರಾಗಗೊಂಡ ಒಬ್ಬಳು ಮಗಳಿದ್ದಳು. ಬಹುಶಃ ನಾನೇ ಒಬ್ಬ ಹೆಂಗಸಾಗಿದ್ದು ತಮ್ಮನ್ನು ಪ್ರೀತಿಸುವಂತೆ."

ಡ್ಯೂಕ್—"ಅವಳ ವಿಚಾರವೇನು ?"

ವಿಯೊಲ—"ಪ್ರಭುವೇ, ಅವಳ ವಿಚಾರವು ಅಷ್ಟು ಪ್ರಾಮುಖ್ಯವಾದುದೇನೂ ಅಲ್ಲ. ಅವಳು ತನ್ನ ಅನುರಾಗದ ವಿಷಯವಾಗಿ ಏನೂ ಹೇಳುತ್ತಿರಲಿಲ್ಲ. ಆದರೆ ಗುಲಾಬಿಯ ಗಿಡದ ಬುಡವನ್ನು ಸೇರಿದ ಕ್ರಿಮಿಯಂತೆ, ಆ ಗುಟ್ಟು ಅವಳಲ್ಲಿಯೇ ಅಡಗಿಸಲ್ಪಟ್ಟಿದ್ದು, ಅವಳ ತಳಿರನ್ನು ಪೋಲುವ ಕಪೋಲವನ್ನು ಆಹಾರಗೊಂಡಿತು. ಅವಳು ಯೋಚನೆಯಿಂದಲೂ ಚಿಂತೆಯಿಂದಲೂ ಕಂದಿ ಕುಂದಿ, ಉನ್ನತಾಸನದಲ್ಲಿ ಕುಳಿತು ಚಿಂತೆಯನ್ನು ಅವಮಾನಪಡಿಸುವ ಸಹನೆಯ ಮೂರ್ತಿಯಂತೆ ಇರುತ್ತಿದ್ದಳು" ಎಂದಳು.

ಇದಕ್ಕೆ ಡ್ಯೂಕನು—"ಅವಳು ವ್ಯಾಮೋಹಪೀಡಿತಳಾಗಿಯೇ ಕಾಲವಾದಳೇ ?" ಎಂದು ಕೇಳಲು, ವಿಯೊಲಳು ಈ ಕಲ್ಪಿತವಾದ ಕಥೆ

ಯಂತೆಯೇ, ತಾನು ಆರ್‌ಸಿನೊವಿಗಾಗಿ ತನ್ನ ಗುಟ್ಟಾದ ಅನುರಾಗವನ್ನೂ ನಿಶ್ಶಬ್ದವಾದ ದುಃಖವನ್ನೂ ಸ್ಪಷ್ಟವಾದ ಮಾತುಗಳಿಂದ ಮರೆಮಾಡಬಲ್ಲ ಉತ್ತರವನ್ನೂ ಕೊಟ್ಟಳು. ಇವರು ಮಾತನಾಡುತ್ತಲಿರಲು ಇವನಿಂದ ಒಲಿವಿಯುಳ ಬಳಿಗೆ ಕಳುಹಿಸಲ್ಪಟ್ಟಿದ್ದ ಒಬ್ಬ ದೊಡ್ಡ ಮನುಷ್ಯನು ಬಂದು—"ಪ್ರಭುವೇ, ನನಗೆ ಆಕೆಯ ಬಳಿಗೆ ಹೋಗುವುದಕ್ಕೆ ಆಸ್ಪದ ದೊರೆಯಲಿಲ್ಲ. ಆದರೆ ಆಕೆಯು ತನ್ನ ಭೃತ್ಯಳ ಮೂಲಕವಾಗಿ ಇನ್ನು ಏಳು ವರ್ಷಗಳ ಪರ್ಯಂತರವೂ ಪ್ರಕೃತಿಗಳೂ ಕೂಡ ಅವಳನ್ನು ನೋಡಲಾರವು (ಮನೆಯಿಂದ ಹೊರಕ್ಕೆ ಹೊರಟಳು). ಆದರೆ ಒಬ್ಬ ಸನ್ಯಾಸಿನಿಯಂತೆ ಮುಖಕ್ಕೆ ಮುಸುಕು ಹಾಕಿಕೊಂಡು ಓಡಿಯಾಡುತ್ತಾ ತನ್ನ ಮೃತನಾದ ಸಹೋದರನ ದುಃಖಕರವಾದ ಸ್ಮೃತಿಯಿಂದ ಕೂಡಿ ತನ್ನ ಭವನವನ್ನು ಕಣ್ಣೀರಿನಿಂದ ತೊಳೆಯುವಳು ಎಂದು ತಿಳಿಸಿದಳು" ಎಂದನು.

ಡ್ಯೂಕನು ಇದನ್ನಾಲಿಸಿ—"ಓ! ಹೊ! ಮೃತನಾದ ಸಹೋದರನಿಗಾಗಿ ಅಷ್ಟೊಂದು ಶೋಕಾಕ್ರಾಂತಳಾಗಿರುವ ಆ ಮೃದುಹೃದಯಳಾದ ನಾರಿಯು ಕಾಮನ ಬಾಣದಿಂದ ಹೊಡೆಯಲ್ಪಟ್ಟ ಹೃದಯವುಳ್ಳವಳಾದರೆ ಎಷ್ಟು ಚೆನ್ನಾಗಿ ಪ್ರೀತಿಸುವಳು!" ಎಂದು ಗಟ್ಟಿಯಾಗಿ ಹೇಳಿ ವಿಯೊಲಳನ್ನು ಕುರಿತು—"ಸಿಜೇರಿಯೊ, ನೀನೆಲ್ಲವನ್ನೂ ಅರಿತಿರುವಿಯಷ್ಟೆ. ನನ್ನ ಅಂತರಂಗವನ್ನೆಲ್ಲಾ ಹೇಳಿರುವೆನು. ಆದುದರಿಂದ ಗುಣವಂತನಾದ ಯುವಕನೇ, ಒಲಿವಿಯುಳ ಮನೆಗೆ ಹೋಗು, ನಿನ್ನ ಪ್ರವೇಶಕ್ಕೆ ಯಾರೂ ಅಡ್ಡಿ ಮಾಡದಿರುವಂತೆ ನೋಡಿಕೋ; ಅವಳ ಮನೆ ಬಾಗಿಲಲ್ಲಿ ನಿಂತುಕೊಂಡು, ನನಗೆ ಪ್ರವೇಶಕ್ಕೆ ಅವಕಾಶವನ್ನು ಕೊಡುವವರೆಗೂ ನನ್ನ ಭದ್ರವಾದ ಕಾಲುಗಳು ವೃಕ್ಷದಂತಿರುವುವು ಎಂದು ಹೇಳು" ಎಂದನು.

ವಿಯೊಲ—"ಸ್ವಾಮಿಯೇ, ಅವಳು ನನ್ನೊಡನೆ ಮಾತನಾಡಿದರೆ, ಮುಂದೇನು ಮಾಡಬೇಕು?"

ಡ್ಯೂಕ್—"ಓ! ಹಾಗಾದರೆ, ಅವಳಲ್ಲಿ ನನಗಿರುವ ವ್ಯಾಮೋಹವನ್ನು ವಿವರಿಸು. ನನ್ನ ಪ್ರಿಯವಾದ ಮತ್ತು ದೃಢವಾದ ಭಕ್ತಿ ವಿಶ್ವಾಸಗಳನ್ನು ಕುರಿತು ವಿಶೇಷವಾಗಿ ಮಾತನಾಡು. ಅವಳಿಗೆ ನನ್ನ ಹೃದಯದ ಶೋಕವನ್ನು ಬಹು ಸ್ಪಷ್ಟವಾಗಿ ತಿಳಿಸು. (ನೀನೇ ನಾನಾಗಿ

ರುವಂತೆ ಎಲ್ಲವನ್ನೂ ತಿಳಿಸು.) ಅವಳು ಮಂದವಾದ ಮುಖಭಾವವುಳ್ಳವರಿಗೆ ಕಿವಿಗೊಡುವುದಕ್ಕಿಂತಲೂ ಚತುರನಾದ ನಿನ್ನ ಮಾತಗಳನ್ನು ಚೆನ್ನಾಗಿ ಕೇಳುವಳು ''

ವಿಯೊಲಳು ಒಡನೆಯೇ ಹೊರಟಳು. ತಾನು ಮದುವೆಯಾಗಬೇಕೆಂದು ಬಯಸುತ್ತಿದ್ದವನನ್ನು ಇನ್ನೊಬ್ಬ ನಾರಿಯು ಮದುವೆಯಾಗುವಂತೆ ಮಾಡಬೇಕಾದ ಇಂಥ ಕೆಲಸವನ್ನು ಮನಸ್ಸಾರ ನಿರ್ವಹಿಸುವುದಕ್ಕೊಡಂಬಡದಿದ್ದರೂ ಆ ಕಾರ್ಯವನ್ನು ಸ್ವಾಮಿ ಭಕ್ತಿಗಾಗಿ ಕೈಗೊಂಡಳು.

ಒಲಿವಿಯಳು ಒಬ್ಬ ಬಾಲಕನು ತ್ವರೆಯಾಗಿ ಬಂದು ತನ್ನ ಮನೆ ಬಾಗಿಲಿನಲ್ಲಿ ನಿಂತಿರುವುದಾಗಿಯೂ ಅವನು ಅವಳ ಬಳಿಗೆ ಹೋಗುವುದಕ್ಕೆ ಅವಕಾಶವಾಗಬೇಕೆಂದು ಒತ್ತಾಯ ಮಾಡುತ್ತಿರುವುದಾಗಿಯೂ ಕೇಳಿದಳು. ಈ ವಾರ್ತೆಯನ್ನು ತಂದ ಆಳು— '' ತಾಯೇ, ತಾವು ಅಸ್ವಸ್ಥತೆಯಿಂದರುವುದಾಗಿ ಹೇಳಿದೆನು. ಆದಕ್ಕವನು ಅದನ್ನರಿತೇ ಅವನು ತಮ್ಮಲ್ಲಿ ಮಾತನಾಡುವುದಕ್ಕಾಗಿ ಬಂದಿರುವಂತೆ ಹೇಳಿದನು. ಅನಂತರದಲ್ಲಿ ನಾನು, ತಾವು ನಿದ್ರೆಮಾಡುತ್ತಿರುವುದಾಗಿ ತಿಳಿಸಿದೆನು. ಬಹುಶಃ ಅವನಿಗೆ ಭವಿಷ್ಯದ್ ಜ್ಞಾನವಿರುವಂತಿದೆ. ಆದುದರಿಂದಲೇ ಅವನು ನಿಮ್ಮಲ್ಲಿ ಖಂಡಿತವಾಗಿಯೂ ಮಾತನಾಡಬೇಕೆಂದು ಹೇಳಿದನು. ಅವನಿಗೆ ಇನ್ನೇನು ಹೇಳಲಿ. ಅವನು ಎಲ್ಲಾ ತಿರಸ್ಕಾರಗಳನ್ನೂ ನಿಷೇಧಿಸತಕ್ಕವನಂತೆ ಇರುವನು '' ಎಂದು ಹೇಳಲು, ಒಲಿವಿಯಳು ಇಂಥಾ ಖಂಡಿತಗಾರನಾದ ದೂತನಾರಾಗಿರಬಹುದೆಂದು ನೋಡಲಪೇಕ್ಷೆಯುಳ್ಳವಳಾಗಿ ಅವನನ್ನು ಒಳಕ್ಕೆ ಬಿಡಬಹುದೆಂದಳು. ಅನಂತರದಲ್ಲಿ ತನ್ನ ಮುಖದ ಮೇಲಣ ಮುಸುಕನ್ನು ತೆಗೆದುಹಾಕಿ, ಈಗ ಬಂದವನು ಡ್ಯೂಕಿನಿಂದ ಕಳುಹಿಸಲ್ಪಟ್ಟವನೆಂದು ನಿಸ್ಸಂಶಯವಾಗಿ ಭಾವಿಸಿಕೊಂಡಕಾರಣ, ಡ್ಯೂಕಿನ (ದೂತನ) ಹೇಳಿಕೆಯನ್ನು ಇನ್ನೊಮ್ಮೆ ಕೇಳುವುದಾಗಿ ಹೇಳಿದಳು. ವಿಯೊಲಳು ತಾನು ಹೊಂದಬಹುದಾದಷ್ಟು ಪುರುಷ ಮುಖಭಾವವನ್ನು ಕೈಗೊಂಡು, ಸ್ತ್ರೀಯನ್ನು ವರಿಸುವಂತೆ ಮಾಡಬಲ್ಲ ರಮ್ಯವಾದ ಭಾಷೆಯನ್ನನುಕರಿಸುತ್ತ, ಮುಖಕ್ಕೆ ಮುಸುಕಿಟ್ಟ ಆ ನಾರಿಯನ್ನು ಕುರಿತು— '' ಬಹು ಪ್ರಕಾಶಮಾನವಾದ ಉತ್ಕೃಷ್ಟವಾದ ಅಸಮಾನಸುಂದರಿಯೆ, ನೀನು ಈ ಮನೆಯೊಡತಿಯೇ ದಯಮಾಡಿ ಹೇಳು. ಏಕೆಂದರೆ ನನ್ನ

ಮಾತುಗಳನ್ನು ಬೇರೊಬ್ಬಳಿಗೆ ಹೇಳಿ ವ್ಯರ್ಥಮಾಡಿಕೊಳ್ಳಲು ನನಗೆ ಇಷ್ಟ ವಿಲ್ಲ. ಏಕೆಂದರೆ ಆ ಮಾತುಗಳು ಬಹು ಲಕ್ಷಣವಾಗಿ ಬರೆಯಲ್ಪಟ್ಟು ಬಹು ಶ್ರಮದಿಂದ ಕಲಿಯಲ್ಪಟ್ಟಿವೆ '' ಎಂದಳು.

ಒಲಿವಿಯ—'' ಎಲೈ ಪೂಜ್ಯನೇ, ನೀನೆಲ್ಲಿಂದ ಬಂದೆ ? ''

ವಿಯೊಲ—'' ನಾನು ಕಲಿತಿರುವುದಕ್ಕಿಂತಲೂ ಅಧಿಕವಾಗಿ ಹೇಳ ಲಾರೆನು. ಅಲ್ಲದೆ ಈ ಪ್ರಶ್ನೆಯು ನನ್ನ ಪಾತ್ರಕ್ಕೆ ಸಂಬಂಧಪಟ್ಟುದಲ್ಲ.''

ಒಲಿವಿಯ—'' ನೀನೇನು, ನಾಟಕಗಾರನೆ ?''

ವಿಯೊಲ—'' ಅಲ್ಲ. ಆದರೂ ನಾನು ಇದಕ್ಕೆ ಬೇರೆಯಾಗಿ ದ್ದೇನೆ. (ಅಂದರೆ, ತಾನು ಪುರುಷವೇಷವನ್ನು ಧರಿಸಿದ ಹೆಂಗಸು). ನೀನು ಈ ಮನೆ ಯೊಡತಿಯೆ ? ಅಲ್ಲವೆ ?

ಒಲಿವಿಯ—'' ಅಹುದು '' ಎನ್ನಲು, ವಿಯೊಲಳು ತನ್ನ ಸ್ವಾಮಿ ಯು ಕಳುಹಿಸಿದ್ದ ವಾರ್ತೆಯನ್ನರುಹಲು ಆತುರಗೊಳ್ಳುವುದಕ್ಕಿಂತಲೂ ತನ್ನ ಸ್ಪರ್ಧೆಗಾತಿಯ ಮುಖಭಾವವನ್ನು ನೋಡಲು ಅಧಿಕವಾಗಿ ಕೌತು ಕಕೊಂಡಳು.

ವಿಯೊಲ—'' ಎಲೌ ಸುಂದರಿಯೇ, ದಯಮಾಡಿ ನಿನ್ನ ಮುಖ ವನ್ನು ತೋರಿಸು.''

ಬಹು ಕಾಲದಿಂದಲೂ ಡ್ಯೂಕಿನ ಪ್ರಾರ್ಥನೆಯನ್ನು ನಿರರ್ಥಕಗೊ ಳಿಸಿದ್ದ ಸೊಕ್ಕುಗಾತಿಯಾದ ಈ ಸುಂದರಿಯು ಈ ದೀನನಾದ ಸಜೇರಿ ಯೊವಿನ ಪ್ರಥಮ ಸಂದರ್ಶನದಲ್ಲಿಯೇ ಆವನಲ್ಲಿ ಮೋಹಿತಳಾದುದರಿಂದ ಈ ಧೈರ್ಯವಾದ ಪ್ರಾರ್ಥನೆಯನ್ನು ನೆರವೇರಿಸಲು ಪ್ರತಿಕೂಲಳಾಗದೆ, '' ನಿನ್ನ ಸ್ವಾಮಿಯು ಕಳುಹಿಸಿರುವ ಸಮಾಚಾರವನ್ನು ನನಗೆ ಹೇಳು ವಾಗ್ಗೆ ನನ್ನ ಮುಖವನ್ನು ನೋಡುವಂತೆ ಅವನು ಆಜ್ಞಾಪಿಸಿದ್ದಾ ನೆಯೆ ?'' ಎಂದು, ಏಳು ವರ್ಷಗಳ ಕಾಲ ಮುಖವನ್ನು ಮುಸುಕಿಟ್ಟು ಕೊಂಡು ಓಡಾಡಬೇಕೆಂಬ ತನ್ನ ಪ್ರತಿಜ್ಞೆಯನ್ನು ಮರೆತು, ಮುಸುಕನ್ನು ಓರೆಮಾಡಿ—'' ಮುಖದ ಮೇಲಣ ಬಟ್ಟೆಯನ್ನು ತೆಗೆದು ನಿನಗೆ ಮುಖ ವನ್ನು ತೋರಿಸುವೆನು ; ಇದು ಮುದ್ದಾಗಿಲ್ಲವೆ ?'' ಎಂದಳು.

ವಿಯೊಲ—'' ಸೌಂದರ್ಯವು ಸಂಪೂರ್ಣತೆಯನ್ನುಂಟಾಗಿದೆ. ಪ್ರಕೃತಿಯ ಸ್ವಹಸ್ತದಿಂದಲೇ ಕಪೋಲಗಳು ಕೆಂಪು, ಬಿಳುಪು ಬಣ್ಣಗ ಳಿಂದ ಶೃಂಗರಿಸಲ್ಪಟ್ಟಿವೆ. ನೀನು ಪ್ರಪಂಚಕ್ಕೆ ನಿನ್ನ ಪ್ರತಿಯನ್ನು ಕೊಡ

ದೆ, ಈ ರೂಪಲಾವಣ್ಯಗಳನ್ನು ಸಮಾಧಿಯಲ್ಲಿ ಹುದುಗಿಸುವುದಾದರೆ ಜೀವವತಿಯರಾಗಿರುವ ವನಿತೆಯರಲ್ಲೆಲ್ಲಾ ನೀನೇ ಮಹಾಕ್ರೂರಳು.''

ಒಲಿವಿಯ—''ಓ! ನಾನು ಅಷ್ಟು ಕ್ರೂರಳಾಗಿರೆನು. ಪ್ರಪಂಚವು ನನ್ನ ರೂಪಲಾವಣ್ಯಾದಿಗಳನ್ನು ಬರೆದಿಟ್ಟುಕೊಳ್ಳಲಿ. ತಳಿರುಗೆಂಪುಳ್ಳ ಎರಡು ತುಟಿಗಳು, ಬೂದು ಬಣ್ಣದ ಎರಡು ಕಣ್ಣುಗಳು, ಒಂದು ಕಂಠ, ಒಂದು ಗಲ್ಲ, ಹೀಗೆಂದು ಬರೆದುಕೊಳ್ಳಲಿ. ನೀನು ನನ್ನನ್ನು ಸ್ತುತಿಗೈಯ್ಯುವುದಕ್ಕಾಗಿ ಇಲ್ಲಿಗೆ ಕಳುಹಿಸಲ್ಪಟ್ಟಿರುವಿಯಾ?''

ವಿಯೊಲ—''ನೀನು ಹೇಗಿರುವಿಯೆಂಬುದನ್ನು ನಾನು ನೋಡುವೆನು. ನೀನು ಬಲು ಸೊಕ್ಕುಗಾತಿ. ಆದರೂ ಸುಂದರಿ. ಆರ್‌ಸಿನೊವು ನಿನ್ನನ್ನು ಭಜನೆಯಿಂದಲೂ ಚಿಂತಾಗ್ನಿಯ ನಿಟ್ಟುಸಿರ್ಪೊಗೆಯಿಂದಲೂ ಕಣ್ಣೀರನ್ನು ಸುರಿಸುತ್ತ ಪ್ರೀತಿಸುವುದರಿಂದ ನೀನು ಸಮಸ್ತ ಸೌಂದರ್ಯವತಿಯರಿಗೂ ರಾಜ್ಞಿಯಾಗಿ ಕಿರೀಟವಿಡಲ್ಪಟ್ಟಾಗ್ಯೂ ಆತನಿಗೆ ತಕ್ಕ ಸಂಭಾವನೆಯಾಗುವುದಕ್ಕಿಂತಲೂ ಅಧಿಕಳಾಗಲಾರೆ.''

ಒಲಿವಿಯ—ನಿನ್ನ ಸ್ವಾಮಿಯು ನನ್ನ ಮನಸ್ಸನ್ನು ಚೆನ್ನಾಗಿ ಬಲ್ಲನು. ನಾನವನನ್ನು ಪ್ರೀತಿಸಲಾರೆನು. ಆದಾಗ್ಯೂ ಅವನು ಗುಣಸಂಪನ್ನನೆಂಬುದರಲ್ಲಿ ಸಂಶಯವಿಲ್ಲ. ಆತನು ಘನವಾದ ಅಸದೃಶವಾದ ಆಸ್ತಿವಂತನೆಂದೂ ನಿಷ್ಕಳಂಕವಾದ ನವ ಯೌವನವುಳ್ಳವನೆಂದೂ ನಾನು ಬಲ್ಲೆನು. ಅವನು ವಿದ್ಯಾವಂತನೆಂದೂ ದಯಾದಿ ಗುಣಗಳುಳ್ಳವನೆಂದೂ ಧೈರ್ಯಶಾಲಿಯೆಂದೂ ಸರ್ವರಿಂದಲೂ ಸ್ತುತ್ಯನಾಗಿರುವನು. ಆದಾಗ್ಯೂ ನಾನವನನ್ನು ಪ್ರೀತಿಸಲಾರೆನು. ಈ ಉತ್ತರವನ್ನು ಅವನು ಹಿಂದೆಯೇ ಹೊಂದಬಹುದಾಗಿತ್ತು.''

ವಿಯೊಲ—''ನನ್ನ ಸ್ವಾಮಿಯು ನಿನ್ನನ್ನು ಪ್ರೀತಿಸುವಂತೆ ನಾನು ಪ್ರೀತಿಸಿದ್ದರೆ, ನಿನ್ನ ಮನೆಯ ಬಾಗಿಲಿನಲ್ಲಿ ವಾಸಮಾಡುತ್ತಾ ನಿನ್ನ ಹೆಸರು ಹಿಡಿದು ಕೂಗುತ್ತಾ ಒಲಿವಿಯಳನ್ನು ಕುರಿತು ದೂರುವ ಗೀತಗಳನ್ನು ಬರೆಯುತ್ತಾ ಅವುಗಳನ್ನು ನಿಶಿಯಲ್ಲಿ ಹಾಡುತ್ತಾ ಪರ್ವತಗಳ ಮಧ್ಯದಲ್ಲಿ ಪ್ರತಿಧ್ವನಿಯೇ ವಾಯುವಿನೊಡನೆ ಗದ್ದಲವಾಗಿ ಮಾತನಾಡುತ್ತಾ, ಒಲಿವಿಯಾ ಎಂದು ಕೂಗುವುದೇನೋ ಎನ್ನುವಂತೆ ಮಾಡುತ್ತಿದ್ದೆನು. ನೀನು ನನ್ನಲ್ಲಿ ಕನಿಕರಗೊಳ್ಳುವವರೆಗೂ ಭೂಮಿ ಆಕಾಶ ಮೊದಲಾದ ಪ್ರಕೃತಿಗಳೂ ನಿನ್ನ ಹೆಸರನ್ನು ಹಿಡಿದು ಕೂಗುವುದರಿಂದ ನಿನಗೆ ವಿಶ್ರಾಂತಿಯಿಲ್ಲದಂತೆ ಮಾಡುತ್ತಿದ್ದೆನು.''

ಒಲಿವಿಯ—"ನೀನು ಅಷ್ಟನ್ನೂ ಮಾಡಬಲ್ಲೆ. ನಿನ್ನ ತಂದೆ ತಾಯಿಗಳಾರು ?"

ವಿಯೊಲ—"ನಾನೊಬ್ಬ ದೊಡ್ಡ ಮನುಷ್ಯ, ನಾನು ಡ್ಯೂಕಿನ ಬಳಿಯಲ್ಲಿ ಒಳ್ಳೆಯ ಸ್ಥಾನದಲ್ಲಿರುವೆನು. ನನ್ನ ಪಿತೃಗಳು ನನಗಿಂತಲೂ ಉನ್ನತವಾದ ಪದವಿಯಲ್ಲಿದ್ದರು."

ಒಲಿವಿಯಳು ಅವನನ್ನು ಕಳುಹಿಸಲು ಮನಸ್ಸಿಲ್ಲದೆ—"ನೀನು ನಿನ್ನ ಸ್ವಾಮಿಯ ಬಳಿಗೆ ಹೊರಡು. ಅವನನ್ನು ನಾನು ಪ್ರೀತಿಸಲಾರೆನೆಂದು ಹೇಳು, ಇನ್ನೊಮ್ಮೆ ಅವನು ಇಲ್ಲಿಗೆ ಯಾರನ್ನೂ ಕಳುಹಿಸದಿರಲಿ ; ಅಥವಾ ಈ ಮಾತುಗಳನ್ನು ಅವನು ಹೇಗೆ ಪರಿಗ್ರಹಿಸುವನೆಂಬುದನ್ನು ತಿಳಿಸಲು ಬಂದರೆ, ನೀನು ಇನ್ನೊಮ್ಮೆ ಬರಬಹುದು."

ವಿಯೊಲಳು ಆವಳನ್ನು ಸೌಂದರ್ಯವತಿಯಾದ ಕಠಿಣ ಹೃದಯದವಳೆಂದು ಸಂಬೋಧಿಸಿ, ಅಪ್ಪಣೆಯನ್ನು ಪಡೆದು ಹೊರಟಳು. ವಿಯೊಲಳು ಹೊರಟುಹೋದ ಮೇಲೆ ಒಲಿವಿಯಳು—"ನನಗಿಂತಲೂ ಉನ್ನತ ಪದವಿಯಲ್ಲಿದ್ದರೂ ನಾನೊಬ್ಬ ದೊಡ್ಡಮನುಷ್ಯ" ಎಂಬ ಮಾತುಗಳನ್ನು ಹೇಳುತ್ತಾ "ಅವನ ಮುಖ ಅವನ ಬಾಹುಗಳು ನಡತೆ ಧೈರ್ಯಗಳೇ ಅವನು ದೊಡ್ಡಮನುಷ್ಯನೆಂಬುದನ್ನು ಸ್ಪಷ್ಟವಾಗಿ ತೋರ್ಪಡಿಸುತ್ತವೆ" ಎಂದು ಗಟ್ಟಿಯಾಗಿ ಹೇಳಿದಳು. ಅನಂತರದಲ್ಲಿ ಸಿಜೇರಿಯೊವು ಡ್ಯೂಕಾಗಿರಬಹುದೆಂದು ಯೋಚಿಸಿ, ಕ್ಷಣಕಾಲದೊಳಗಾಗಿ ತಾನು ಹೊಂದಿದ ಮನೋವಿಕಾರಕ್ಕಾಗಿ ತನ್ನನ್ನೇ ತಾನು ನಿಂದಿಸಿಕೊಂಡಳು. ಆದರೆ ಜನರು ತಮ್ಮ ತಪ್ಪುಗಳಿಗಾಗಿ ತಾವೇ ಅವುಗಳನ್ನು ಮೃದುವಾಗಿ ನಿಂದಿಸಿಕೊಳ್ಳುವುದು ರೂಢಮೂಲವುಳ್ಳದಲ್ಲ. ಗುಣವಂತಳಾದ ನಾರೀಮಣಿಯಾದ ಈ ಒಲಿವಿಯಳು ತನ್ನ ಪದವಿಗೂ ಬಾಲ ಭೃತ್ಯನಂತಿರುವ ಸಿಜೇರಿಯೊವಿನ ಪದವಿಗೂ ಅಸಮಾನತ್ವವಿರುವುದನ್ನೂ ನಾರಿಯರಿಗೆ ಭೂಷಣವಾದ ಪುರುಷನಲ್ಲಿ ತನಗುಂಟಾದ ವ್ಯಾಮೋಹವನ್ನು ಬಚ್ಚಿಟ್ಟುಕೊಂಡಿರಬೇಕಾದ ಮುಖ್ಯ ಗುಣವನ್ನೂ ಮರೆತು ಸಿಜೇರಿಯೊವನ್ನು ವರಿಸಲಪೇಕ್ಷಿಸಿ ಡ್ಯೂಕನು ಕಳುಹಿಸಿ ಕೊಟ್ಟಿದ್ದ ಸಂಭಾವನೆ ಎಂಬ ನೆಪವನ್ನೆತ್ತಿ ಆಳಿನ ಮೂಲಕವಾಗಿ ಒಂದು ರತ್ನದುಂಗುರವನ್ನು ಕಳುಹಿಸಿದಳು. ಸಿಜೇರಿಯೊವಿಗೆ ಇಂತು ಚಮತ್ಕಾರವಾಗಿ ಸಂಭಾವನೆ ಕೊಡುವುದರ ಮೂಲಕವಾಗಿ ತನ್ನ ಉದ್ದೇಶವನ್ನು ಸ್ವಲ್ಪಮಟ್ಟಿಗೆ ಅವನಿಗೆ ತಿಳಿಸಿದಂತಾಗು

ವ್ವುದೆಂದು ಭಾವಿಸಿದ್ದಳು. ಆರ್‌ಸಿನೊವು ತನ್ನ ಮೂಲಕ ಯಾವುದೊಂದು ಗುರವನ್ನೂ ಅವಳಿಗೆ ಕಳುಹಿಸಲಿಲ್ಲವಾದುದರಿಂದ ನಿಜವಾಗಿಯೂ ಇದರಿಂದ ವಿಯೊಲಳು ಸಂದೇಹಗೊಂಡಳು. ಅನಂತರದಲ್ಲಿ ಒಲಿವಿಯಳ ನೋಟವೂ ನಡೆನುಡಿಗಳೂ ಸ್ಪಷ್ಟವಾದ ಮೆಚ್ಚಿಕೆಯನ್ನು ತೋರಿಸುತ್ತಲಿದ್ದುದನ್ನು ಜ್ಞಾಪಕಮಾಡಿಕೊಂಡು, ಆಕೆಯು ತನ್ನಲ್ಲಿ ಮೋಹಗೊಂಡಳೆಂದೂಹಿಸಿ—"ಅಯ್ಯೋ! ಆ ನಿರ್ಭಾಗ್ಯಳಾದ ನಾರಿಯು ಕನಸನ್ನು ಪ್ರೀತಿಸಿದಂತಾಯಿತು. ನಾನು ಆರ್‌ಸಿನೊವನ್ನು ಪ್ರೀತಿಸುತ್ತ ನಿಷ್ಫಲವಾದ ನಿಟ್ಟುಸಿರನ್ನು ಬಿಡುತ್ತಲಿರುವಂತೆಯೇ ಒಲಿವಿಯಳು ನನಗಾಗಿ ಸಂಕಟಪಡುವುದರಿಂದ ವೇಷಾಂತರವನ್ನು ಅವಲಂಬಿಸುವುದನುಚಿತವು ಎಂದು ತೋರುತ್ತದೆ" ಎಂದಳು.

ವಿಯೊಲಳು ಆರ್‌ಸಿನೊವಿನ ಅರಮನೆಯನ್ನು ತಲಪಿ, ಆತನ ಆಜ್ಞೆಯಂತೆ ತಾನು ಮಾಡಿದ ಕೆಲಸವು ಫಲದಾಯಕವಾಗಲಿಲ್ಲವೆಂಬುದನ್ನೂ ಆಕೆಯನ್ನು ತಾವು ಇನ್ನು ಮುಂದೇನೂ ಬಾಧಿಸಕೂಡದೆಂದು ಒಲಿವಿಯಳು ಹೇಳಿದಳೆಂಬುದನ್ನೂ ಡ್ಯೂಕಿಗೆ ಹೇಳಿದಳು. ಆದರೂ ಗಂಭೀರಭಾವದ ಸಿಜೇರಿಯೊವು ಅವಳ ಮನಸ್ಸನ್ನು ಎಂದಾದರೂ ಮರುಗಿಸಿ ದಯವನ್ನು ತೋರಿಸುವಂತೆ ಮಾಡಬಲ್ಲನೆಂದು ಭಾವಿಸಿ, ಮರುದಿನ ಪುನಃ ಅವಳಲ್ಲಿಗೆ ಹೋಗಬೇಕೆಂದಾಜ್ಞಾಪಿಸಿದನು. ಈ ಮಧ್ಯೆ ಬೇಸರಿಕೆಯುಳ್ಳ ಆ ಕಾಲವನ್ನು ಕಳೆಯಲು ತಾನು ವಿಶೇಷವಾಗಿ ಪ್ರೀತಿಸುತ್ತಲಿದ್ದ ಒಂದು ಗೀತವನ್ನು ಹಾಡೆಂದು ಡ್ಯೂಕನು ಆಜ್ಞಾಪಿಸಿ—"ನನ್ನ ಗುಣವಂತನಾದ ಸಿಜೇರಿಯೊ, ಕಳೆದ ರಾತ್ರಿ ನಾನು ಕೇಳಿದ ಆ ಗೀತದಿಂದ ನನ್ನ ಮೋಹದ ಬೇನೆಯು ಸ್ವಲ್ಪ ಶಮನವಾದಂತೆ ಕಾಣುತ್ತದೆ. ಸಿಜೇರಿಯೊ, ಅದನ್ನು ಗುರ್ತುಮಾಡಿಕೊ, ಅದು ಪುರಾತನವಾದುದು, ಮತ್ತು ಲಲಿತವಾದುದು. ನೂಲುವ ಮತ್ತು ನೇಯುವ ಹುಡುಗಿಯರು ಅವರ ಕೆಲಸಗಳನ್ನು ಮಾಡುತ್ತ ಆ ಗೀತವನ್ನು ಉಚ್ಚಸ್ವರದಿಂದ ಹಾಡುವರು. ಅಲ್ಪವಾದುದಾದಾಗ್ಯೂ ಆ ಗೀತವು ಪುರಾತನ ಕಾಲದ ಪ್ರೀತಿಯ ನಿರ್ಮಲತೆಯನ್ನು ಸ್ಪಷ್ಟಪಡಿಸುತ್ತದೆ. ಎಲ್ಲಿ ಅದನ್ನು ಹಾಡು" ಎಂದನು.

||ಪದ್ಯ|| ವನಿತೆ! ಪ್ರೀತಿಸದಿರ್ದೊಡೆನ್ನಿರವು ತಾರಾಮಂಡಲಂ ಪೋದಲೋ|
ಚನಮಿರ್ಪಂತೆ ಸುಗಂಧಪೋದ ಕಳಿವೂ ವಿರ್ಪಂತೆ ತೀವಿರ್ದ ಜೇ||
ವನಮೆಲ್ಲಂ ನೆರೆ ಪೋದ ಬಟ್ಟಗೆರೆ ತಾನಿರ್ಪಂತೆ ದೈನ್ಯಕ್ಕೆ ಭಾ|
ಜನಮಿನ್ನೇನಸುಪೋದ ಬಾಳ್ವೆಗೆಣೆಯಾಗಿ ನಿರ್ದೊಡೇಂಪೋದೊಡೇಂ||

ವಿಯೊಲಳು ನಿಶ್ಚಯವಾದ ಸರಳತೆಯಿಂದ ವಿವರಿತವಾದ ಪ್ರತೀಕಾರವನ್ನು ಹೊಂದದ, ವ್ಯಾಮೋಹದ ಬೇನೆಯ ವಿಷಯವಾದ ಈ ಪುರಾತನ ಗೀತವನ್ನು ಗುರುತುಮಾಡಿಕೊಳ್ಳದಿರಲಿಲ್ಲ. ಈ ಗೀತದಿಂದ ಹೊರಹೊಮ್ಮಿದ ಭಾವವು ಇವಳ ಮುಖದಲ್ಲಿ ಉದಯವಾದುದನ್ನು ಡ್ಯೂಕನು ನೋಡಿ—"ಸಿಜೇರಿಯೊ, ನೀನು ಇಷ್ಟು ಚಿಕ್ಕವನಾಗಿದ್ದಾಗ್ಯೂ ನಿನ್ನ ಕಣ್ಣುಗಳು ಯಾವಳೋ ನಾರಿಯಲ್ಲಿ ಮೋಹಗೊಂಡಿರುವಂತೆ ತೋರುತ್ತವೆ. ಎಲೈ ಬಾಲನೇ, ಅಲ್ಲವೇ ?"

ವಿಯೊಲ—"ಸ್ವಾಮಿ, ತಮ್ಮ ದಯೆಯಿಂದ ಸ್ವಲ್ಪ ಮಟ್ಟಿಗೆ."

ಡ್ಯೂಕ್—"ಅವಳ ರೂಪವು ಹೇಗಿದೆ ? ಅವಳ ವಯಸ್ಸೆಷ್ಟು ?"

ವಿಯೊಲ—"ಪ್ರಭುವೇ, ತಮ್ಮ ಲಾವಣ್ಯ ಮತ್ತು ತಮ್ಮ ವಯಸ್ಸು."

ಈ ರೂಪವಂತನಾದ ಬಾಲಕನು ತನಗಿಂತಲೂ ಅಧಿಕ ವಯಸ್ಸಿನ ಪುರುಷನಂದದ ಮುಂಕಾದ ಲಾವಣ್ಯವುಳ್ಳ ಹೆಂಗಸನ್ನು ಪ್ರೀತಿಸುವುದಾಗಿ ಹೇಳಿದ ಈ ಮಾತು ಡ್ಯೂಕನ್ನು ನಗುವಂತೆ ಮಾಡಿತು. ಆದರೆ ವಿಯೊಲಳ ಅಭಿಪ್ರಾಯವು ಡ್ಯೂಕನ್ನು ಪ್ರೀತಿಸಿರುವುದಾಗಿಯೇ ವಿನಾ ಅವನಂತಿರುವ ಹೆಂಗಸನ್ನು ಪ್ರೀತಿಸಿರುವುದಾಗಲ್ಲ.

ವಿಯೊಲಳು ಒಲಿವಿಯಳಲ್ಲಿಗೆ ಎರಡನೆಯ ತಡವೆ ಹೊರಟಾಗ ಅವಳ ಬಳಿಗೆ ಹೋಗಲು ಪ್ರಯಾಸವಾಗಲಿಲ್ಲ. ತಮ್ಮ ಒಡತಿಯು ಯುವಕರಾದ ಚಾರರಲ್ಲಿ ಮಾತನಾಡಲು ಸಂತೋಷವುಳ್ಳವಳಾಗಿರುವಳೆಂದು ಭೃತ್ಯರರಿತೊಡನೆಯೇ, ವಿಯೊಲಳಿಗಾಗಿ ಬಾಗಿಲುಗಳು ದೊಡ್ಡದಾಗಿ ತೆರೆಯಲ್ಪಟ್ಟವು. ಬಹು ಮರ್ಯಾದೆಯೊಡನೆ ವಿಯೊಲಳನ್ನು ಒಲಿವಿಯಳ ಅಂತಃಪುರಕ್ಕೆ ಕರೆದುಕೊಂಡು ಹೋದರು. ಅನಂತರದಲ್ಲಿ ವಿಯೊಲಳು ಆ ನಾರಿಯನ್ನು ಕುರಿತು—"ಇನ್ನೊಮ್ಮೆ ನಮ್ಮ ಒಡೆಯನ ವಿಷಯದಲ್ಲಿ ಮಾತನಾಡುವುದಕ್ಕಾಗಿ ಬಂದಿದ್ದೇನೆ" ಎಂದಳು.

ಒಲಿವಿಯು—"ಆ ವಿಷಯವನ್ನು ಪುನಃ ಪ್ರಸಂಗಿಸಬೇಡವೆಂದು ಹೇಳಿದ್ದೆನು. ನೀನು ಇನ್ನೊಂದು ವಿವಾಹಾರ್ಥವಾಗಿ ಮಾತನಾಡಿದರೆ ಅದನ್ನು ಸ್ವರ್ಗಲೋಕದ ಸಂಗೀತಕ್ಕಿಂತಲೂ ಹೆಚ್ಚಾದ ಆದರದಿಂದ ಕೇಳುವೆನು" ಎಂದಳು. ಈ ಮಾತು ಬಹು ಲಕ್ಷಣವಾಗಿ ವಿವರವಾಗಿತ್ತು. ಆದಾಗ್ಯೂ ಒಲಿವಿಯಳು ಮತ್ತಷ್ಟು ವಿವರವಾಗಿ ಹೇಳಿ, ತಾ

ನು ಅವನಲ್ಲಿ (ಸಿಜೇರಿಯೊವಿನಲ್ಲಿ) ಮೋಹಗೊಂಡಿರುವುದಾಗಿ ತಿಳಿಸಿದಳು. ಇದರಿಂದ ಸಿಜೇರಿಯೊವಿನ ಮುಖವು ಕಳವಳದಿಂದಲೂ ಅಸಮಾಧಾನದಿಂದಲೂ ಕೂಡಿದಂತಾದುದನ್ನು ಒಲಿವಿಯಳು ನೋಡಿ—“ಆಹಾ! ತಿರಸ್ಕಾರವನ್ನೂ ಕೋಪವನ್ನೂ ಇವನ ತುಟಿಗಳೇ ಎಷ್ಟು ಹೆಚ್ಚಾಗಿ ತೋರಿಸುತ್ತಲಿವೆ! ಸಿಜೇರಿಯೊ, ವಸಂತ ಕಾಲದ ಗುಲಾಬಿಯ ಹೂವಿನಾಣೆಯೂ ಕನ್ಯೆಯ ನಡವಳಿಯಾಣೆಯೂ ಘನತೆ ಗಾಂಭೀರ್ಯಗಳಾಣೆಯೂ ನಾನು ನಿಜವಾಗಿ ನಿನ್ನಲ್ಲಿ ಮೋಹಗೊಂಡಿದ್ದೇನೆ. ಇದನ್ನು ನಿನ್ನೆದುರಿನಲ್ಲಿ ಮುಚ್ಚಿಡಲು ನನಗೆ ಚಮತ್ಕಾರವಾಗಲಿ ಕಾರಣವಾಗಲಿ ಇಲ್ಲ” ಎಂದಳು.

ಈ ನಾರಿಯ ಪ್ರೀತಿ ಸೂಚನೆಯು ನಿಷ್ಫಲವಾಯಿತು. ಆರ್ಸಿನೊವಿನ ವ್ಯಾಮೋಹವನ್ನು ಕುರಿತು ಮಾತನಾಡಲು ಇನ್ನೊಮ್ಮೆ ಬರುವುದಿಲ್ಲವೆಂದು ಅವಳನ್ನು ಭಯಪಡಿಸುತ್ತಾ ವಿಯೊಲಳು ಹೊರಡಲು ತವಕಗೊಂಡಳು. ಒಲಿವಿಯಳ ಭ್ರಮೆಯ ಪ್ರಾರ್ಥನೆಗಳಿಗೆ ವಿಯೊಲಳು ಹೇಳಿದುದೆಲ್ಲಾ “ಎಂದಿಗೂ ಹೆಂಗಸರನ್ನು ಪ್ರೀತಿಸಬಾರದು” ಎಂಬ ನಿಷ್ಕರ್ಷೆಯ ಮಾತಾಗಿತ್ತು.

ವಿಯೊಲಳು ಒಲಿವಿಯಳನ್ನು ಬಿಟ್ಟು ಹೊರಟುಹೋಗುತ್ತಲೇ ಒಲಿವಿಯಳ ಪಾಣಿಗ್ರಹಣವನ್ನು ಕೋರಿ ತಿರಸ್ಕೃತನಾಗಿದ್ದ ಒಬ್ಬ ದೊಡ್ಡ ಮನುಷ್ಯನು ಒಲಿವಿಯಳು ಡ್ಯೂಕಿನ ಭೃತ್ಯನಲ್ಲಿ ಅನುರಕ್ತಳಾಗಿರುವಳೆಂಬುದನ್ನು ಕೇಳಿ (ಸಿಜೇರಿಯೊ) ವಿಯೊಲಳನ್ನು ದ್ವಂದ್ವಯುದ್ಧಕ್ಕೆ ಕರೆದನು. ಅಸಹಾಯಳಾದ ವಿಯೊಲಳು ಈಗ ಏನುಮಾಡಬಲ್ಲಳು! ಅವಳು ಗಂಡುಡಿಗೆಯನ್ನು ಧರಿಸಿಕೊಂಡಿದ್ದಾಗ್ಗೂ ನಿಜವಾಗಿಯೂ ತನ್ನ ಕತ್ತಿಯನ್ನೇ ತಾನು ನೋಡುವುದಕ್ಕೂ ಭಯಪಡುತ್ತಲಿದ್ದಳು!

ತನ್ನ ಭಯಂಕರನಾದ ಸ್ಪರ್ಧೆಗಾರನು ಕತ್ತಿಯನ್ನು ಹಿಡಿದುಕೊಂಡು ತನ್ನ ಕಡೆಗೆ ಬರುತ್ತಿರುವುದನ್ನು ವಿಯೊಲಳು ನೋಡಿ, ತಾನು ಒಬ್ಬ ಹೆಂಗಸೆಂದು ಒಪ್ಪಿಕೊಳ್ಳಬೇಕೆಂದಾಲೋಚಿಸ ತೊಡಗಿದಳು. ಆದರೆ ಅಷ್ಟರಲ್ಲಿಯೇ ಇವಳು ಭಯದಿಂದ ಬಿಡುಗಡೆಯನ್ನು ಹೊಂದಿದಳು. ಆ ಹಾದಿಯಲ್ಲಿ ಹೋಗುತ್ತಿದ್ದ ಒಬ್ಬ ಅಪರಿಚಿತನು ಬಹು ದಿನಗಳಿಂದ ವಿಯೊಲಳನ್ನು ತಿಳಿದಿದ್ದವನಂತೆಯೂ ಅವಳಿಗೆ ಪರಮಾಪ್ತ ಮಿತ್ರನಾಗಿದ್ದಂತೆಯೂ ಅವಳ ಪ್ರತಿಕಕ್ಷಿಯನ್ನು ಕುರಿತು—“ಈ ಯುವಕನಾದ ದೊಡ್ಡ

ಮನುಷ್ಯನೇನಾದರೂ ಅಪರಾಧ ಮಾಡಿದ್ದರೆ ಆ ತಪ್ಪನ್ನು ನಾನು ಹೊರು ತ್ತೇನೆ. ಇವನನ್ನು ಆತಂಕಗೊಳಿಸುವುದಾದರೆ ಇವನಿಗಾಗಿ ನಾನು ನಿ ನ್ನೊಡನೆ ಯುದ್ಧಮಾಡುವೆನು '' ಎಂದನು. ವಿಯೊಲಳು ಆತನನ್ನು ಅವನ ಕೃಪೆಗಾಗಿ ವಂದಿಸುವುದಕ್ಕೂ ಅಥವಾ ತನಗಾಗಿ ತೋರಿಸಿದ ದಯಾಪೂರ್ವಕವಾದ ಉಪಕಾರಕ್ಕೆ ಕಾರಣವೇನೆಂದು ಕೇಳುವುದಕ್ಕೂ ಮುಂಚಿತವಾಗಿ, ಅವಳ ಹೊಸ ಸ್ನೇಹಿತನು ಶತ್ರುವಿನ ಕೈಗೆ ಬಿದ್ದನು. ಅವನೊಡನೆ ಇವನ ಪರಾಕ್ರಮವೇನೂ ಪ್ರಯೋಜನಕ್ಕೆ ಬರಲಿಲ್ಲ. ದೇಶದ ನ್ಯಾಯಸಮಾಧಾನಗಳನ್ನು ರಕ್ಷಿಸುವ ಅಧಿಕಾರಿಗಳು ಈ ಅಪರಿಚಿತನನ್ನು ಅವನು ಕೆಲವು ವರ್ಷಗಳ ಹಿಂದೆ ಮಾಡಿದ್ದ ಒಂದು ಅಪರಾಧದ ವಿಷಯದಲ್ಲಿ ಏನು ಹೇಳುವನೆಂಬುದನ್ನರಿಯುವುದಕ್ಕಾಗಿ ಹಿಡಿದುಕೊಂಡರು. ಆಗ ಅವನು ವಿಯೊಲಳನ್ನು ಕುರಿತು—‹‹ ನಿನ್ನ ನ್ನು ಹುಡುಕಿಕೊಂಡು ಬಂದುದರಿಂದ ನನಗಿದು ಪ್ರಾಪ್ತವಾಯಿತು. ನನ್ನ ಅವಶ್ಯಕತೆಯು ನನ್ನ ಹಣದ ಚೀಲವನ್ನು ನನಗೆ ಕೊಡೆಂದು ಕೇಳು ವಂತೆ ಮಾಡುತ್ತಲಿದೆ. ನನಗೆ ಪ್ರಾಪ್ತವಾಗಿರುವ ಕಷ್ಟದೆಸೆಯಿಂದ ನಿನಗೆ ಪ್ರಯೋಜನಕ್ಕೆ ಬಾರದೆಹೋದೆನಲ್ಲಾ ಎಂಬದು ನನಗೆ ವ್ಯಸನವಾಗಿದೆ. ಆಶ್ಚರ್ಯಭರಿತನಾಗಬೇಡ. ಸಮಾಧಾನವನ್ನು ವಹಿಸು '' ಎಂದನು.

ಇವನ ಮಾತುಗಳು ವಿಯೊಲಳಿಗೆ ಆಶ್ಚರ್ಯವನ್ನುಂಟುಮಾಡಿ ದುವು. ಆದುದರಿಂದ ಅವನನ್ನು ತಾನು ಕಾಣೆನೆಂದೂ ಅವನಿಂದ ಎಂದೂ ಒಂದು ಹಣದ ಚೀಲವನ್ನು ಪಡೆದುದಿಲ್ಲವೆಂದೂ ಖಂಡಿತವಾಗಿ ಹೇಳಿ, ಅವನು ತನಗೋಸ್ಕರ ತೋರಿದ ಕೃಪೆಗಾಗಿ ತನ್ನಲ್ಲಿರುವ ವಿಶಿಷ್ಟ ದ್ರವ್ಯ ವನ್ನೂ ಅವನಿಗೆ ಕೊಡುವುದಾಗಿ ತಿಳಿಸಿದಳು. ಅನಂತರದಲ್ಲಿ ಅಪರಿಚಿ ತನು ಕಠಿಣವಾದ ಹಲವು ಮಾತುಗಳನ್ನಾಡಿ ಅವನನ್ನು ಕೃತಘ್ನ ನೆಂದೂ ನಿರ್ದಯೆಯುಳ್ಳವನೆಂದೂ ತಪ್ಪು ಹೊರಿಸಿ—‹‹ ನೀವು ಇಲ್ಲಿ ನೋಡುತ್ತಲಿರುವ ಈ ಯುವಕನನ್ನು ಮೃತ್ಯುವಿನ ಘೋರವಾದ ದಾಡೆ ಗಳಿಂದ ಬಿಡಿಸಿದೆನು. ಇವನಿಗಾಗಿಯೇ ಇಲ್ಲೀರಿಯಕ್ಕೆ ಬಂದುದರಿಂದ ಈ ಅಪಾಯಕ್ಕೆ ಗುರಿಯಾದೆನು '' ಎಂದನು. ಆದರೆ ಆ ಅಧಿಕಾರಿಗಳು ತಮ್ಮ ಸೆರೆಯಾಳಿನ ದೂರುಗಳಿಗೆ ಸ್ವಲ್ಪವೂ ಗಮನಕೊಡದೆ, ‹‹ ಇದರಿಂ ದ ನಮಗೇನು ? '' ಎಂದು ಹೇಳುತ್ತ ಜಾಗ್ರತೆಯಲ್ಲಿ ಅವನನ್ನು ಹೊರ ಡಿಸಿಕೊಂಡು ಹೋದರು. ಅವನು ವಿಯೊಲಳನ್ನು ಸಿಬಾಸ್ಟಿಯನನೆಂದು

ಕರೆಯುತ್ತ, ತನ್ನಿಂದ ಸಿಬಾಸ್ಟಿಯನನೆಂದು ಭಾಪಿಸಲ್ಪಟ್ಟವನು ತನ್ನ ಸ್ನೇಹಿತನನ್ನು ತನ್ನವನಲ್ಲವೆಂದು ಹೇಳಿದುದಕ್ಕಾಗಿ ಅವನು ತನ್ನ ಕೂಗಿನ ಧ್ವನಿಗೆ ಅತಿಕ್ರಮವಾಗುವ ವರೆಗೂ ನಿಂದಿಸುತ್ತ ಹೊರಟನು. ವಿಯೊಲಳು ತಾನು ಸಿಬಾಸ್ಟಿಯನನೆಂದು ಕರೆಯಲ್ಪಟ್ಟುದನ್ನು ಕೇಳಿದುದರಿಂದ ಅವನ ವಿಚಾರವಾಗಿ ಅವನನ್ನು ಕೇಳಿ ತಿಳಿದುಕೊಳ್ಳೋಣವೆಂದರೆ ಅವನು ಬಹು ತ್ವರೆಯಿಂದೊಯಲ್ಪಟ್ಟವನಾದರೂ ಈ ಅನರ್ಥಕ್ಕೆ ಕಾರಣವು ತಾನು ಸಿಬಾಸ್ಟಿಯನನಂತೆ ಕಾಣುವುದರಿಂದೆಂದೂಹಿಸಿಕೊಂಡು ತನ್ನ ಅಣ್ಣನು ಜೀವಂತನಾಗಿರುವನೆಂಬ ಭರವಸೆಯಿಂದ ಸಂತೋಷವನ್ನು ಹೊಂದಿದಳು ನಿಜವಾಗಿಯೂ ಇದು ಹಾಗೆಯೇ ಸಂಭವಿಸಿತ್ತು. ಈ ಅಪರಿಚಿತನಾದ ಆಂಟೊನಿಯೊವು ನೌಕಾಧ್ಯಕ್ಷನಾಗಿದ್ದನು

ಸಿಬಾಸ್ಟಿಯನನು ದುರ್ಬಲನಾಗಿ ತಾನು ಆಧಾರ ಮಾಡಿಕೊಂಡಿದ್ದ ಧ್ವಜಸ್ತಂಭದ ಮೇಲೆ ತೇಲುತ್ತಲಿದ್ದಾಗ್ಗೆ ಆಂಟೊನಿಯೊವು ಅವನನ್ನು ತನ್ನ ಹಡಗಿನೊಳಕ್ಕೆ ಎತ್ತಿಕೊಂಡನು. ಸಿಬಾಸ್ಟಿಯನು ಎಲ್ಲಿ ಹೋದರೂ ಅವನೊಡನೆ ತಾನು ಹೋಗುವಷ್ಟು ಮಟ್ಟಿಗೆ ಆಂಟೊನಿಯೊವು ಸಿಬಾಸ್ಟಿಯನನಲ್ಲಿ ವಿಶೇಷವಾದ ಸ್ನೇಹವುಳ್ಳವನಾದನು. ಸಿಬಾಸ್ಟಿಯನನು ಆರ್‌ಸಿನೊವಿನ ಆಸ್ಥಾನದ ಭೇಟಿಯನ್ನು ಮಾಡಿಕೊಳ್ಳಬೇಕೆಂಬ ಕುತೂಹಲವುಳ್ಳವನಾಗಿರುವುದಾಗಿ ಆಂಟೊನಿಯೊವಿಗೆ ತಿಳಿಸಿದನು. ಆ ಸಮಯದಲ್ಲಿ ಈ ನೌಕಾಧ್ಯಕ್ಷನು ಅಗಲಿರಲೊಲ್ಲದೆ ಅವನೊಡನೆ ಇಲ್ಲೀರಿಯಕ್ಕೆ ಹೊರಟನು. ಹಿಂದೆ ನಡೆದ ಒಂದು ಸಮುದ್ರದ ಮೇಲಣ ಯುದ್ಧದಲ್ಲಿ ಈ ನೌಕಾಧ್ಯಕ್ಷನು ಇಲ್ಲೀರಿಯ ಡ್ಯೂಕಿನ ಸೋದರಳಿಯನನ್ನು ಪ್ರಮಾದಕರವಾಗಿ ಗಾಯಗೊಳಿಸಿದನು ಆದುದರಿಂದ ತಾನು ಇಲ್ಲೀರಿಯದಲ್ಲಿ ಗೋಚರನಾದರೆ ತನ್ನ ಪ್ರಾಣಕ್ಕೆ ಹಾನಿ ಬರುವುದೆಂದು ಇವನಿಗೆ ಚೆನ್ನಾಗಿ ಗೊತ್ತಿದ್ದಾಗ್ಯೂ ಸ್ನೇಹಿತನಿಗಾಗಿ ಇಲ್ಲೀರಿಯಕ್ಕೆ ಬಂದನು ಈ ಅಪರಾಧಕ್ಕಾಗಿಯೇ ಈಗ ಇವನು ಸೆರೆ ಹಿಡಿಯಲ್ಪಟ್ಟನು.

ಆಂಟೊನಿಯೊವು ವಿಯೊಲಳನ್ನು ಕಾಣುವುದಕ್ಕೆ ಕೆಲವು ಗಳಿಗೆಗಳ ಹಿಂದೆ ಅವನೂ ಸಿಬಾಸ್ಟಿಯನೂ ಹಡಗಿಳಿದಿದ್ದರು. ಇವನು ಸಿಬಾಸ್ಟಿಯನನಿಗೆ ತನ್ನ ಹಣದ ಚೀಲವನ್ನು ಕೊಟ್ಟು—"ಏನನ್ನಾದರೂ ಕೊಳ್ಳಬೇಕೆಂದಪೇಕ್ಷೆಯುಂಟಾದಾಗ ಇದನ್ನು ಧಾರಾಳವಾಗಿ ಉಪಯೋಗಿಸು" ಎಂದು

ಹೇಳಿದನು. ಅಲ್ಲದೆ ಅವನು ಪಟ್ಟಣವನ್ನು ನೋಡುವುದಕ್ಕೆ ಹೋಗಿರುವ ವೇಳೆಯಲ್ಲಿ ಅವನಿಗಾಗಿ ತಾನು ಛತ್ರದಲ್ಲಿ ಕಾದಿರುವುದಾಗಿ ತಿಳಿಸಿದನು. ಆದರೆ ಕ್ಲಿಪ್ತಕಾಲದೊಳಗಾಗಿ ಸಿಬಾಸ್ಟಿಯನನು ಬಾರದಕಾರಣ ಅವನನ್ನು ಹುಡುಕುವುದಕ್ಕಾಗಿ ಹೊರಟನು. ವಿಯೊಲಳು ಸಿಬಾಸ್ಟಿಯನನಂತೆಯೇ ಉಡಿಗೆಗಳನ್ನು ಧರಿಸಿಕೊಂಡಿದ್ದುದರಿಂದಲೂ ಇವರೀರ್ವರ ಮುಖಭಾವಾದಿಗಳು ಪರಸ್ಪರ ಸದೃಶವಾಗಿದ್ದುದರಿಂದಲೂ ಆಂಟೊನಿಯೊ ವಿಯೊಲಳನ್ನು ತನ್ನಿಂದ ರಕ್ಷಿತನಾದ ಯುವಕನೆಂದು ಭಾವಿಸಿಕೊಂಡು ಅವನ (ಅವನು ಸಿಬಾಸ್ಟಿಯನನೆಂದು ಇವನು ತಿಳಿದಿದ್ದ ವಿಯೊಲಳ) ಸಂರಕ್ಷಣೆಗಾಗಿ ಕತ್ತಿಯನ್ನು ಹಿಡಿದನು. ಆದರೆ ಸಿಬಾಸ್ಟಿಯನನು (ಇವನಿಂದ ಭಾವಿಸಲ್ಪಟ್ಟ) ಇವನನ್ನು ತನ್ನ ಸ್ನೇಹಿತನಲ್ಲವೆಂದೂ ಇವನು ಹಣದ ಚೀಲವನ್ನು ಕೊಟ್ಟಿದ್ದುದಿಲ್ಲವೆಂದೂ ಹೇಳಿದುದರಿಂದ ಇವನು (ಇವನಿಂದ ಸಿಬಾಸ್ಟಿಯನನೆಂದು ಭಾವಿಸಲ್ಪಟ್ಟ) ವಿಯೊಲಳನ್ನು ಕೃತಘ್ನನೆಂದು ತಪ್ಪುಹೊರಿಸಿದನು. ವಿಯೊಲಳು ಆಂಟೊನಿಯೊವು ಹೊರಟು ಹೋದ ಮೇಲೆ ಕಲಹಕ್ಕೆ ಇನ್ನೊಮ್ಮೆ ಕರೆಯಲ್ಪಡುವೆನೇನೋ ಎಂಬ ಭಯದಿಂದ ಕೈಲಾದಷ್ಟು ಜಾಗ್ರತೆಯಾಗಿ ಮನೆಗೆ ಹೋದಳು. ಇವಳು ಬಹು ದೂರ ಹೋಗಿರಲಿಲ್ಲ. ಆಗ ಇವಳ ಪ್ರತಿಕಕ್ಷಿಯು ಪುನಃ ಇವಳು ಹಿಂದಿರುಗಿ ಬರುವುದನ್ನು ಕಂಡನು. ಆದರೆ ಹೀಗೆ ಈ ಸ್ಥಳಕ್ಕೆ ಬಂದವನು ಇವಳ ಅಣ್ಣನಾದ ಸಿಬಾಸ್ಟಿಯನನು. ಆಗ ಅವನು ಇವನನ್ನು ಕುರಿತು—"ನೀನು ಇನ್ನೊಮ್ಮೆ ನನ್ನ ಕೈಗೆ ಸಿಕ್ಕಿರುವಿ. ಇದೋ, ಇದು ನಿನಗೆ" ಎಂದು ಸಿಬಾಸ್ಟಿಯನನಿಗೆ ಒಂದು ಏಟನ್ನು ಕೊಟ್ಟನು. ಸಿಬಾಸ್ಟಿಯನನು ಹೇಡಿಯಲ್ಲ. ಇವನು ಆ ಗುದ್ದನ್ನು ಅದರ ಒಡ್ಡಿ ಸಹಿತವಾಗಿ ಹಿಂದಕ್ಕೆ ಕೊಟ್ಟು ತನ್ನ ಕತ್ತಿಯನ್ನು ಹಿರಿದನು

ಈ ವೇಳೆಗೆ ಸರಿಯಾಗಿ ಒಲಿವಿಯಳು ತನ್ನ ಮನೆಯಿಂದ ಹೊರಕ್ಕೆ ಬಂದು ಈ ದ್ವಂದ್ವಯುದ್ಧವನ್ನು ನಿಲ್ಲಿಸಿದಳು. ಇವಳೂ ಕೂಡ ಸಿಬಾಸ್ಟಿಯನನ್ನು ಸಿಜೇರಿಯೊ ಎಂದು ತಿಳಿದುಕೊಂಡು, ಈ ಕಲಹಕ್ಕಾಗಿ ವ್ಯಾಕುಲಗೊಂಡು ಅವನನ್ನು ಮನೆಗೆ ಬರಬೇಕೆಂದು ಪ್ರಾರ್ಥಿಸಿದಳು. ಸಿಬಾಸ್ಟಿಯನನು ತನಗೆ ಗೊತ್ತುಗುರಿಯಿಲ್ಲದ ಹಗೆಯ ಒರಟುತನದಿಂದ ಎಷ್ಟು ಆಶ್ಚರ್ಯಪಟ್ಟನೋ ಅಷ್ಟು ಈ ವನಿತೆಯ ಕರುಣಾದರಣೆಯಿಂದ ಅಚ್ಚರಿವಡೆದಾಗ್ಯೂ ಸಂತೋಷಚಿತ್ತದಿಂದ ಆ ಮನೆಯೊಳಕ್ಕೆ ಹೋದನು. ಇವರ

ಮುಖಭಾವಾದಿಗಳೆರಡೂ ಸದೃಶ್ಯವಾಗಿದುದರಿಂದ ತಾನು ತನ್ನ ಪ್ರೇಮಾತಿಶಯವನ್ನು ಸಿಜೇರಿಯೊವಿಗೆ ಹೇಳುತ್ತಿದ್ದಾಗ್ಗೆ ಅವನ ಮುಖದಲ್ಲಿ ಕಂಡ ಉಪೇಕ್ಷೆಯಾಗಲಿ ಕೋಪವಾಗಲಿ ಇವನ ಮುಖದಲ್ಲಿ ಗೋಚರಿಸಲಿಲ್ಲವಾಗಿ ಇವಳಿಂದ ಭಾವಿಸಲ್ಪಟ್ಟ ಸಿಜೇರಿಯೊವು ಈಗ ಬಹು ವಿವೇಕಿಯಾಗಿರುವುದಾಗಿ ಒಲಿವಿಯುಳು ಸಂತುಷ್ಟಳಾದಳು.

ಸಿಬಾಸ್ಟಿಯನನು ತನ್ನಲ್ಲಿ ವಿಶೇಷವಾಗಿ ಮಮತೆಗೊಂಡ ಈ ವನಿತೆಯ ವ್ಯಾಮೋಹ ವಿಚಾರವಾಗಿ ಸ್ವಲ್ಪವೂ ಆಕ್ಷೇಪಣೆಯನ್ನು ಮಾಡಲಿಲ್ಲ. ಇವನು ಅವುಗಳನ್ನು ಸಂತೋಷದಿಂದಂಗೀಕರಿಸಿದಂತೆ ಕಾಣಬಂದನು. ಆದಾಗ್ಯೂ ಇದಕ್ಕೇನು ಕಾರಣವೆಂದು ಬೆಕ್ಕಸಗೊಂಡು, ಒಲಿವಿಯುಳು ಬುದ್ಧಿ ಸ್ವಾಧೀನವಿಲ್ಲದವಳಾಗಿರಬೇಕೆಂದು ಯೋಚಿಸುವಂತಾದನು" ಆದರೆ ಅವಳು ರಮಣೀಯವಾದ ಒಂದು ಮನೆಗೊಡತಿಯಾಗಿ, ತನ್ನ ಗೃಹಕೃತ್ಯಗಳೆಲ್ಲಾ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತ ವಿವೇಕವಾಗಿರುವುದನ್ನು ನೋಡಿ, ಅವಳ ವಿವಾಹ ಪ್ರಾರ್ಥನೆಯನ್ನಂಗೀಕರಿಸಿದನು. ಒಲಿವಿಯುಳು, ಸಿಜೇರಿಯೊವು ಸರಿಯಾದ ಸ್ವಭಾವ ಗುಣದಿಂದಿರುವುದನ್ನು ಕಂಡು ಸಂತಸವಾಂತು, ಅವನು ತನ್ನ ಮನಸ್ಸನ್ನು ಬದಲಾಯಿಸಿ ಬಿಡುವನೆಂದು ಹೆದರಿ ತನ್ನ ಮನೆಯಲ್ಲಿಯೇ ಒಬ್ಬ ಪುರೋಹಿತನಿರುವುದರಿಂದ ಒಡನೆಯೇ ವಿವಾಹವಾಗಬಹುದೆಂದು ತಿಳಿಸಿದಳು. ಸಿಬಾಸ್ಟಿಯನು ಇದನ್ನು ಅಂಗೀಕರಿಸಿದನು. ಒಡನೆಯೇ ವಿವಾಹವಾಯಿತು. ಅನಂತರದಲ್ಲಿ ಇವನು ತನಗೊದಗಿದ ಸುದೈವವನ್ನು ಆಂಟೊನಿಯೊವಿಗೆ ತಿಳಿಸುವುದಕ್ಕೆ ಹೋಗಬೇಕೆಂಬುದ್ದೇಶದಿಂದ ತನ್ನ ಭಾರ್ಯೆಯನ್ನು ಕೆಲವು ಹೊತ್ತು ಮನೆಯಲ್ಲಿಯೇ ಬಿಟ್ಟು ಹೊರಟನು. ಇಷ್ಟರಲ್ಲಿ ಡ್ಯೂಕ್ ಆರ್ಸಿನೊವು ಒಲಿವಿಯುಳ ಭೇಟಿಗಾಗಿ ಹೊರಟನು. ಇವನು ಒಲಿವಿಯುಳ ಮನೆಯ ಬಳಿಗೆ ಬರುವಷ್ಟು ಹೊತ್ತಿಗೆ ಸರಿಯಾಗಿ ನ್ಯಾಯಶಾಖೆಯ ಅಧಿಕಾರಿಗಳು ತಮ್ಮ ಸೆರೆಯಾಳಾದ ಆಂಟೊನಿಯೊವನ್ನು ಡ್ಯೂಕಿನೆದುರಿಗೆ ಕರೆದು ತಂದರು. ವಿಯೊಲಳು ತನ್ನೊಡೆಯನಾದ ಡ್ಯೂಕಿನ ಬಳಿಯಲ್ಲಿದ್ದಳು. ಆಂಟೊನಿಯೊವು ವಿಯೊಲಳನ್ನು ಕಾಣುತ್ತಲೇ ಎಂದಿನಂತೆ ಅವಳನ್ನು ಸಿಬಾಸ್ಟಿಯನನೆಂದು ಭಾವಿಸಿಕೊಂಡು ಆ ಯುವಕನನ್ನು ತಾನು ಸಾಗರದ ಗಂಡಾಂತರದಿಂದ ಹೇಗೆ ರಕ್ಷಿಸಿದೆನೆಂಬುದನ್ನೂ ತಾನು ದಿಟವಾಗಿಯೂ ಸಿಬಾಸ್ಟಿಯನನಿಗೆ ತೋರಿ

ಗಂಟೆಗಳು ಸಹ ಆಗಿಲ್ಲವೆಂದು ಹೇಳಿದನು. ವಿಯೊಲಳು ಒಲಿವಿಯ ಸಿದ ಎಲ್ಲಾ ಕೃಪಾಪೂರ್ವಕವಾದ ಆದರಣೆಗಳನ್ನು ವಿವರಿಸಿ ಈ ಕೃತಘ್ನನಾದ ಯುವಕನು ಮೂರು ತಿಂಗಳಿಂದ ಹಗಲೂ ಇರುಳೂ ತನ್ನಲ್ಲಿರುವುದಾಗಿ ಹೇಳಿ ತನ್ನ ದೂರನ್ನು ಸಮಾಪ್ತಿ ಗೊಳಿಸಿದನು. ಆದರೆ ಈ ವೇಳೆಗೆ ಒಲಿವಿಯಳು ತನ್ನ ಮನೆಯಿಂದ ಹೊರಟು ಮುಂದಕ್ಕೆ ಬರುತ್ತಿರುವುದನ್ನು ಡ್ಯೂಕನು ಕಂಡನು. ಆದುದರಿಂದ ಆಂಟೊನಿಯೊವಿನ ಕಥೆಗೆ ಕಿವಿಕೊಡಲಾರದೆ—“ ಕೌಂಟೆಸಳು ಇತ್ತ ಬರುತ್ತಿದ್ದಾಳೆ. ಸ್ವರ್ಗವೇ ಭೂಮಿಯಮೇಲೆ ನಡೆಯುತ್ತಲಿದೆ ! ” ಎಂದು ಆಂಟೊನಿಯೊವನ್ನು ಕುರಿತು—“ ಎಲೈ ಪುರುಷನೇ, ನಿನ್ನ ಮಾತುಗಳು ಹುಚ್ಚುಮಾತುಗಳಾಗಿವೆ. ಮೂರು ತಿಂಗಳಿಂದಲೂ ಈ ಯುವಕನು ನನ್ನಲ್ಲಿದ್ದಾನೆ ” ಎಂದು ಹೇಳಿ ಆಂಟೊನಿಯೊವನ್ನು ಒಂದು ಕಡೆಗೆ ಕರೆದುಕೊಂಡು ಹೋಗುವಂತಾಜ್ಞಾಪಿಸಿದನು. ಒಲಿವಿಯಳು ಆಡಿದ ಎಲ್ಲಾ ಮಾತುಗಳೂ ಸಿಜೇರಿಯೊವಿನಲ್ಲಿ ದಯೆಯನ್ನು ತೋರಿಸತಕ್ಕವುಗಳಾಗಿದ್ದುವು. ತನ್ನ ಬಾಲ ಭೃತ್ಯನು ಒಲಿವಿಯಳ ಕೃಪೆಗೆ ಪಾತ್ರನಾಗಿ ಔನ್ನತ್ಯವನ್ನು ಪಡೆದಿರುವುದನ್ನು ಡ್ಯೂಕನು ಕಂಡೊಡನೆಯೇ, ತನಗುಂಟಾದ ಮಹದಾಗ್ರಹದಿಂದ ಅವನನ್ನು ಸರ್ವ ಪ್ರಕಾರಗಳಿಂದಲೂ ಭಯಗೊಳಿಸಿದನು. ತಾನು ಹೊರಡಲುದ್ಯುಕ್ತನಾಗುತ್ತಲೇ—“ ಎಲೈ ಬಾಲಕನೇ, ನಡೆ, ಹೊರಡುವಣ, ನನ್ನ ಬುದ್ಧಿಯು ನಿನಗೆ ಹಾನಿಯನ್ನು ಮಾಡಲು ಸಿದ್ಧವಾಗಿದೆ ” ಎಂದನು. ಆಗ್ರಹಗೊಂಡ ಡ್ಯೂಕನು ವಿಯೊಲಳನ್ನು ಒಡನೆಯೇ ಮರಣ ದಂಡನೆಗೆ ಗುರಿಮಾಡಿ ನಾಶಗೊಳಿಸುವಂತೆ ಕಾಣಬಂದಾಗ್ಯೂ, ಅವಳಿಗೆ ಡ್ಯೂಕನಲ್ಲಿದ್ದ ವಿಶ್ವಾಸವು ಅವಳನ್ನು ಹೆಚ್ಚು ಕಾಲ ಹೇಡಿಯನ್ನಾಗಿಡಲಿಲ್ಲ. ಆದುದರಿಂದ ಅವಳು—“ ಸ್ವಾಮಿ, ತಮಗೆ ಸುಖವುಂಟಾಗುವುದಕ್ಕಾಗಿ ನಾನು ಸಂತೋಷದಿಂದ ಮರಣಕ್ಕೆ ಸಿದ್ಧಳಾಗುವೆನು ” ಎಂದಳು. ಆದರೆ ಒಲಿವಿಯಳು ತನ್ನ ಪತಿಯನ್ನು ಕಳೆದುಕೊಳ್ಳಲು ಸಂಕಟವುಳ್ಳವಳಾಗಿ—“ ನನ್ನ ಸಿಜೇರಿಯೊವು ಎಲ್ಲಿಗೆ ಹೋಗುವನು ? ” ಎಂದು ಕೂಗಿಕೊಂಡಳು. “ ತನ್ನ ಪ್ರಾಣಾಧಿಕ ಪ್ರಿಯನನ್ನು ಅನುಸರಿಸಿ ” ಎಂದು ಉತ್ತರಬಂತು. ಒಲಿವಿಯಳು ಸಿಜೇರಿಯೊವು ತನ್ನ ಪತಿಯೆಂದು ಪ್ರಸಿದ್ಧಗೊಳಿಸುವುದರ ಮೂಲಕವಾಗಿ ಇವರ ಗಮನವನ್ನು ತಡೆದು, ಪುರೋಹಿತನನ್ನು ಬರುವಂತೆ ಹೇಳಿಕಳುಹಿಸಿದಳು. ಅವನು ಬಂದು ಈ ವನಿತೆಯನ್ನು ಸಿಜೇರಿಯೊವಿಗೆ ಮದುವೆ ಮಾಡಿಸಿ . ಇನ್ನೂ ಎರಡು

ಳನ್ನು ಮದುವೆಯಾದುದಿಲ್ಲವೆಂದು ನಿಷ್ಫಲವಾಗಿ ಪ್ರಮಾಣವಾಗಿ ಹೇಳಿದನು. ಒಲಿವಿಯಳು ಮತ್ತು ಪುರೋಹಿತನು ಹೇಳಿದ ಮಾತುಗಳಿಂದ ತನ್ನ ಜೀವಕ್ಕಿಂತಲೂ ಅಧಿಕವಾಗಿ ಭಾವಿಸಲ್ಪಟ್ಟಿದ್ದ ಅಮೌಲ್ಯವಾದ ಭಂಡಾರವಾದ ಒಲಿವಿಯಳನ್ನು ತನ್ನಿಂದ ತನ್ನ ಭೃತ್ಯನಾದ ಸಿಜೇರಿಯೊವು ಅಪಹರಿಸಿರುವುದಾಗಿ ಡ್ಯೂಕನು ನಂಬಿದನು. ಕಳೆದು ಹೋದುದಕ್ಕಾಗಿ ಅನುತಾಪ ಪಡುವುದು ಅನುಚಿತವೆಂದು ಯೋಚಿಸಿ, ಆಕೆಗೆ ಶುಭವಾಗಲೆಂದು ಹಾರೈಸಿ ಹೊರಡುವಷ್ಟರಲ್ಲಿಯೇ ಇವರ ದೃಷ್ಟಿಗೆ ಒಂದು ಅದ್ಭುತವು ಗೋಚರವಾಯಿತು. ಇನ್ನೊಬ್ಬ ಸಿಜೇರಿಯೊವು ಬಂದು ಒಲಿವಿಯಳನ್ನು ತನ್ನ ಭಾರ್ಯೆಯೆಂದು ಸಂಬೋಧಿಸ ತೊಡಗಿದನು. ಈ ಹೊಸ ಸಿಜೇರಿಯೊವು ಸಿಬಾಸ್ಟಿಯನನಾಗಿದ್ದು ಒಲಿವಿಯಳ ಪತಿಯಾಗಿದ್ದನು. ಸದೃಶವಾದ ಮುಖಭಾವ, ಧ್ವನಿ, ನಡತೆಗಳುಳ್ಳ ಈ ಇಬ್ಬರನ್ನು ನೋಡಿದುದರಿಂದ ಇವರೆಲ್ಲರಿಗೂ ಉಂಟಾದ ಆಶ್ಚರ್ಯವು ಸ್ವಲ್ಪ ಕಡಮೆಯಾದ ಮೇಲೆ, ಅಣ್ಣ ತಂಗಿಯರು ಒಬ್ಬರನ್ನೊಬ್ಬರು ಪ್ರಶ್ನಿಸತೊಡಗಿದರು. ವಿಯೊಲಳು ತನ್ನ ಅಣ್ಣನು ಜೀವವಂತನಾಗಿರುವುದನ್ನು ಜಾಗ್ರತೆಯಲ್ಲಿಯೇ ಅರಿತಳು. ಆದರೆ ಸಮುದ್ರದಲ್ಲಿ ಮುಳುಗಿಹೋದಂತೆ ತಾನು ನೆನೆದಿದ್ದ ತನ್ನ ತಂಗಿಯು ಪುರುಷನಂತಿರುವುದನ್ನು ಸಿಬಾಸ್ಟಿಯನನು ಅರಿಯಲಾರದೆ ಹೋದನು. ಆದರೆ ವಿಯೊಲಳು ವೇಷವನ್ನು ಧರಿಸಿರುವ ತಾನು ನಿಜವಾಗಿಯೂ ಅವನ ತಂಗಿಯಾದ ವಿಯೊಲಳೆಂದೊಪ್ಪಿಕೊಂಡಳು.

ಈ ಅವಳಿ ಮಕ್ಕಳಾದ ಅಣ್ಣ ತಂಗಿಯರ ಸದೃಶವಾದ ರೂಪದಿಂದುಂಟಾದ ತಪ್ಪು ಭಾವನೆಗಳೆಲ್ಲಾ ಪರಿಹಾರವಾದ ಮೇಲೆ ಒಲಿವಿಯಳು ಒಬ್ಬ ನಾರಿಯಲ್ಲಿ ಮೋಹಗೊಂಡ ಭ್ರಮೆಯಿಂದ ತಪ್ಪಿಗಾಗಿ ಎಲ್ಲರೂ ಅವಳನ್ನು ನಗೆಗೀಡು ಮಾಡಿಕೊಂಡರು. ಒಲಿವಿಯಳು ತಂಗಿಯನ್ನು ಬಿಟ್ಟು ಅವಳಣ್ಣನನ್ನು ಮದುವೆ ಮಾಡಿಕೊಂಡ ಮಾರ್ಪಾಟಿಗಾಗಿ ಅಸಂತುಷ್ಟಳಾಗಲಿಲ್ಲ.

ಒಲಿವಿಯಳ ಈ ವಿವಾಹದಿಂದ ಡ್ಯೂಕಿನ ಕೋರಿಕೆಗಳು ಕೊನೆಗಂಡುವು. ಈ ಕೋರಿಕೆಗಳೊಡನೆಯೇ ಅವನ ನಿಷ್ಫಲವಾದ ಒಲಿವಿಯಳ ಮೇಲಣ ವ್ಯಾಮೋಹವೂ ಮಾಯವಾಯಿತು. ಅದೇ ಕಾಲದಲ್ಲಿಯೇ ಆತನ ಲಕ್ಷ್ಯವು ತನ್ನ ಪ್ರಿಯಭೃತ್ಯನಾಗಿದ್ದ ಸಿಜೇರಿಯೊವು ಮನೋಹರವಾದ ರಮಣೀಯಾದುದರ ಕಡೆಗೆ ತಿರುಗಿ ಅಲ್ಲೇ ಸ್ಥಾನಗೊಂಡಿತು.

ಡ್ಯೂಕನು ವಿಯೊಲಳನ್ನು ಲಕ್ಷ್ಯವಿಟ್ಟು ನೋಡಿ, ಅವಳು ಸೌಂದರ್ಯವುಳ್ಳವಳಾಗಿರುವಂತೆ ತಾನು ಎಷ್ಟೋಸಲ ಯೋಚಿಸಿದ್ದೆನೆಂಬುದನ್ನು ಜ್ಞಾಪಕಮಾಡಿಕೊಂಡು ಅವಳು ಗಂಡುಡಿಗೆಯಲ್ಲಿರುವುದಕ್ಕಿಂತಲೂ ಹೆಣ್ಣುಡಿಗೆಯಲ್ಲಿ ಬಹು ಲಕ್ಷಣವಾಗಿ ಕಾಣುವಳೆಂದು ನಿಷ್ಕರ್ಷಿಸಿದನು. ಅವಳು ಅನೇಕ ತಡವೆ ತನ್ನನ್ನು ಪ್ರೀತಿಸುವುದಾಗಿ ಹೇಳಿದ್ದಳೆಂಬುದು ಜ್ಞಾಪಕಕ್ಕೆ ಬಂತು. ಆದರೆ ಆಗ ಆ ಮಾತು ಕಾರ್ಯತತ್ಪರನಾದ ಒಬ್ಬ ಸ್ವಾಮಿಭಕ್ತಿಯುಳ್ಳ ಬಾಲಭೃತ್ಯನ ಮಾತಾಗಿ ಭಾವಿಸಲ್ಪಟ್ಟಿತು. ಈಗ ಆ ಮಾತಿಗೆ ಇನ್ನೂ ಸ್ವಲ್ಪ ಹೆಚ್ಚು ಅರ್ಥವಿರುತ್ತದೆಂದರಿತನು. ಆಡಿಗಡಿಗೆ ಅವಳು ಹೇಳುತ್ತಿದ್ದ ಇಂತಹ ಮನೋಹರವಾದ ಹಲವು ಮಾತುಗಳು ಇವನಿಗೆ ಸಮಸ್ಯೆಗಳಿಂತಿದ್ದುದು, ಈಗ ಜ್ಞಾಪಕಕ್ಕೆ ಬರಲಾಗಿ ವಿಯೊಲಳನ್ನು ಮದುವೆಮಾಡಿಕೊಳ್ಳಬೇಕೆಂದು ಸಂಕಲ್ಪಿತನಾಗಿ – "ಎಲೈ ಬಾಲಕನೇ, (ಅವಳನ್ನು ಸಿಜೇರಿಯೊ ಅಥವಾ ಎಲೈ ಬಾಲಕನೇ, ಎಂದು ಕರೆಯುತ್ತಿದ್ದುದು ಅಭ್ಯಾಸ) ನನ್ನಂತೆ ನೀನು ನಾರಿಯನ್ನು ಪ್ರೀತಿಸುವುದಿಲ್ಲವೆಂದು ಸಾವಿರಸಲ ಹೇಳುತ್ತಲಿದ್ದೆ. ನಿನ್ನ ಕೋಮಲವಾದ ಮಮತೆಯಿಂದ ಪೋಷಿತವಾದ ಪ್ರಕೃತಿಗೆ ಮೀರಿ ನೀನು ನನ್ನನ್ನು ಒಡೆಯನೆಂದು ಸೇವಿಸುತ್ತಿದ್ದುದರಿಂದ ಈಗ ನೀನು ನಿನ್ನೊಡೆಯನ ಒಡತಿಯಾಗಿ ಆರ್ಸಿನೊವಿಗೆ (ಡಚಸ್) ರಾಣಿಯಾಗಿರು" ಎಂದನು.

ಡ್ಯೂಕನು ತನ್ನಿಂದ ತಿರಸ್ಕರಿಸಲ್ಪಟ್ಟ ಮನಸ್ಸನ್ನು ವಿಯೊಲಳಲ್ಲಿಟ್ಟುದನ್ನು ಒಲಿವಿಯಳು ನೋಡಿ ಅವರನ್ನು ತನ್ನ ಮನೆಗೆ ಬರಬೇಕೆಂದು ಪ್ರಾರ್ಥಿಸಿದಳು. ತನ್ನನ್ನು ಸಿಬಾಸ್ಟಿಯನನಿಗೆ ಬೆಳಿಗ್ಗೆ ವಿವಾಹಮಾಡಿಸಿದ್ದ ಆ ಗುಣವಂತನಾದ ಪುರೋಹಿತನ ಸಹಾಯದಿಂದ ಅಲ್ಲಿಯೇ ಆಗಲೇ ಆರ್ಸಿನೊವು ವಿಯೊಲಳನ್ನು ಮದುವೆಮಾಡಿಕೊಳ್ಳಬೇಕೆಂದು ಕೇಳಿಕೊಂಡಳು. ಹೀಗೆ ಈ ಯಮಳರಾದ ಅಣ್ಣ ತಂಗಿಯರು ಒಂದೇ ದಿನದಲ್ಲಿ ವಿವಾಹಿತರಾದರು. ಇವರನ್ನು ಪರಸ್ಪರ ಅಗಲಿಸಿದ ಬಿರುಗಾಳಿಯೂ ಹಡಗು ಒಡೆದುದೂ ಇವರನ್ನು ಉನ್ನತ ಪದವಿಗೆ ತಂದು ಮಹತ್ತಾದ ಭಾಗ್ಯವಂತರನ್ನಾಗಿ ಮಾಡಲು ಕಾರಣವಾದುವು.

ವಿಯೊಲಳು ಇಲ್ಲೀರಿಯ ಡ್ಯೂಕಾದ ಆರ್ಸಿನೊವಿನ ಧರ್ಮ ಪತ್ನಿಯಾಗಿಯೂ ಸೆಬಾಸ್ಟಿಯನನು ಸಕಲ ಸಂಪನ್ನೆಯಾದ ಒಲಿವಿಯ ಕೌಂಟೆಸ್‌ನ ಪತಿಯಾಗಿಯೂ ಚಿರಕಾಲ ನೆಮ್ಮದಿಯಾಗಿದ್ದರು.

## VI. THE WINTER'S TALE

# ೬. ಹಿಮಕಾಲದಲ್ಲಿ ಹೇಳುವ ಕಥೆಯು

ಒಂದಾನೊಂದು ಕಾಲದಲ್ಲಿ ಸಿಸಿಲಿಯ ದೇಶದ ದೊರೆಯಾದ ಲೆಯಾಂಟಿಸನೂ ಗುಣರೂಪ ಭೂಷಿತೆಯಾದ ಹೆರ್ಮೈಯೊನಿ ಎಂಬ ಆತನ ರಾಣಿಯೂ ಪರಸ್ಪರ ಪ್ರೇಮದಿಂದಿದ್ದರು. ಈತನು ತನ್ನ ಪೂರ್ವ ಸ್ನೇಹಿತನಾದ ಸಹಪಾಠಿಯಾದ ಪೊಲಿಕ್ಸನೆಸ್ ಎಂಬ ಬೊಹಿಮಿಯದ ದೊರೆಯನ್ನು ನೋಡಬೇಕೆಂದೂ ಅವನನ್ನು ತನ್ನ ರಾಣಿಗೆ ಭೇಟಿಮಾಡಿ ಸಬೇಕೆಂದೂ ಅತ್ಯಧಿಕವಾದ ಬಯಕೆಯುಳ್ಳವನಾಗಿದ್ದನು. ಲೆಯಾಂಟಿಸನೂ ಪೊಲಿಕ್ಸನೆಸನೂ ಬಾಲ್ಯದಿಂದಲೂ ಒಂದೇ ಕಡೆ ಪೋಷಿತರಾದವರು. ಆದರೆ ಇವರ ತಂದೆಗಳ ಮರಣಾಂತರದಲ್ಲಿ ಇವರೇ ತಮ್ಮ ತಮ್ಮ ರಾಜ್ಯಗಳನ್ನು ಆಳಿಕೊಳ್ಳಬೇಕಾಗಿ ಬಂದುದರಿಂದ ಪದೇ ಪದೇ ರಾಯಭಾರಿಗಳನ್ನೂ ಕಾಗದ ಪತ್ರಗಳನ್ನೂ ಅನೇಕ ಉಚಿತ ವಸ್ತುಗಳನ್ನೂ ಒಬ್ಬರ ಸಭೆಗೊಬ್ಬರು ಕಳುಹಿಸುತ್ತಿದ್ದಾಗ್ಯೂ ಅನೇಕ ವರ್ಷಗಳವರೆಗೂ ಒಬ್ಬರನ್ನೊಬ್ಬರು ನೋಡಲಾಗಲೇ ಇಲ್ಲ.

ಇದಕ್ಕಾಗಿ ದೊರೆಯಾದ ಲೆಯಾಂಟಿಸನು ಆತನನ್ನು ಪದೇ ಪದೇ ಕರೆಯುತ್ತಿದ್ದನು. ಆದುದರಿಂದ ಪೊಲಿಕ್ಸನೆಸನು ತನ್ನ ಮಿತ್ರನಾದ ಲೆಯಾಂಟಿಸನ್ನು ನೋಡಿಕೊಂಡು ಬರುವುದಕ್ಕಾಗಿ ಸಿಸಿಲಿಯಾಸ್ಥಾನಕ್ಕೆ ಬಂದನು.

ಈತನು ಬಂದುದು ಲೆಯಾಂಟಿಸನಿಗೆ ಬಹಳ ಸಂತೋಷವನ್ನುಂಟು ಮಾಡಿತು. ಆತನು ಈ ಸ್ನೇಹಿತನನ್ನು ತನ್ನ ರಾಣಿಗೆ ತೋರಿಸಿ, ತನ್ನ ಪ್ರಿಯ ಮಿತ್ರನಾದ ಪೊಲಿಕ್ಸನೆಸನ ಆಗಮನದಿಂದ ತನಗೆ ಅಪರಿಮಿತವಾದ ಸಂತೋಷವಾಯಿತೆಂಬುದನ್ನು ತೋರ್ಪಡಿಸಿದನು. ಅವರು ಹಿಂದಿನ ಕಾಲಗಳನ್ನು ಕುರಿತು ಮಾತನಾಡಿದರು. ತಾವು ಪಾಠಶಾಲೆಗೆ ಹೋಗುತ್ತಿದ್ದ ಕಾಲಗಳನ್ನೂ ತಾವು ಮಾಡುತ್ತಲಿದ್ದ ಬಾಲ್ಯ ಚೇಷ್ಟೆಗಳನ್ನೂ ಜ್ಞಾಪಿಸಿಕೊಂಡರು. ಇವರ ಸಂಭಾಷಣೆಯನ್ನು ಕೇಳುವುದರಲ್ಲಿ ಬಹಳ ಆಸಕ್ತಿಯುಳ್ಳ ಹೆರ್ಮೈಯೊನಿಗೆ ಇವೆಲ್ಲವನ್ನೂ ವಿವರಿಸಿ ಹೇಳಿದರು.

ಹೀಗೆ ಬಹಳಕಾಲ ಕಳೆದ ಮೇಲೆ ಪೊಲಿಕ್ಸನೆಸನು ಹೊರಡಲುದ್ಯುಕ್ತನಾಗಲು ಹೆರ್ಮ್ಯಿಯೊನಿಯು ತನ್ನ ಇನಿಯನ ಇಚ್ಛೆಯ ಮೇರೆಗೆ ಪೊಲಿಕ್ಸನೆಸನು ಇನ್ನೂ ಕೆಲವು ಕಾಲ ಇಲ್ಲಿಯೇ ಇರಬೇಕೆಂದು ತನ್ನ ಗಂಡನು ಹೇಳುತ್ತಿದ್ದ ಉಪಚಾರದ ಮಾತಿನ ಜೊತೆಗೆ ಆತನನ್ನು ತಾನೂ ಪ್ರಾರ್ಥನೆಮಾಡ ತೊಡಗಿದಳು.

ಈಗ ಯೋಗ್ಯಳಾದ ಆ ರಾಣಿಗೆ ದುಃಖವು ಪ್ರಾರಂಭವಾಯಿತು. ಲೆಯೊಂಟಿಸನು ಕೇಳಿಕೊಂಡ ಮಾತಿಗೆ ತಾನು ನಿಲ್ಲುವುದಕ್ಕೆ ಆಗುವುದಿಲ್ಲವೆಂದು ಹೇಳಿದ ಪೊಲಿಕ್ಸನೆಸನು ಹೆರ್ಮ್ಯಿಯೊನಿಯ ಮೃದುವಾದ ಮಾತುಗಳಿಂದ ಅವಳ ಪ್ರಾರ್ಥನೆಯನ್ನಂಗೀಕರಿಸಿ ತನ್ನ ಪ್ರಯಾಣವನ್ನು ಕೆಲವು ವಾರಗಳ ವರೆಗೆ ನಿಲ್ಲಿಸಬಿಟ್ಟನು. ಇದನ್ನು ನೋಡಿ ಲೆಯೊಂಟಿಸನು ಮೊದಲಿನಿಂದಲೂ ತನ್ನ ಸ್ನೇಹಿತನಾದ ಪೊಲಿಕ್ಸನೆಸನ ನಿಷ್ಕಪಟತೆಯೇ ಮೊದಲಾದ ಸುಗುಣಗಳನ್ನೂ ತನ್ನ ಗುಣವಂತಳಾದ ರಾಣಿಯ ಸತ್ಸ್ವಭಾವವನ್ನೂ ಅರಿತಿದಾಗ್ಯೂ ಅಂಕೆಯಿಲ್ಲದಷ್ಟು ಸಂಶಯಭರಿತನಾದನು. ಹೆರ್ಮ್ಯಿಯೊನಿಯು ಪೊಲಿಕ್ಸನೆಸಿಗೆ ಮಾಡಿದುಪಚಾರವು ಈ ದುರದೃಷ್ಟವಂತನಾದ ರಾಜನ ಸಂಶಯವನ್ನು ಮತ್ತೂ ಹೆಚ್ಚಿಸಿತು. ವಿಶ್ವಾಸಿಯಾದ, ಸ್ನೇಹಿತನಾದ ಪ್ರೇಮಪೂರ್ಣನಾಗಿದ್ದ ಪತಿಯು ಇದ್ದುದಕ್ಕಿದ್ದಹಾಗೇ ಕ್ರೂರಾತ್ಮನಾಗಿಯೂ ನಿರ್ದಯೆಯುಳ್ಳವನಾಗಿಯೂ ರಾಕ್ಷಸನಂತಾದನು. ಆದುದರಿಂದ ಆತನು ತನ್ನ ಆಸ್ಥಾನದ ಶ್ರೀಮಂತರಲ್ಲಿ ಒಬ್ಬನಾದ ಕೆಮಿಲ್ಲೊ ಎಂಬುವನನ್ನು ಕರಿಸಿ, ಆತನಿಗೆ ತನಗಿರುವ ಸಂಶಯವನ್ನು ತಿಳಿಸಿ, ಪೊಲಿಕ್ಸನೆಸಗೆ ವಿಷವನ್ನು ಹಾಕಿಕೊಲ್ಲೆಂದಾಜ್ಞಾಪಿಸಿದನು.

ಕೆಮಿಲ್ಲೊವು ಯೋಗ್ಯನು. ಆತನು ಲೆಯೊಂಟಿಸನ ಸಂಶಯವು ನಿಜವಾಗಿಯೂ ನಿರಾಧಾರವಾದುದೆಂದು ಚೆನ್ನಾಗಿ ತಿಳಿದು, ಪೊಲಿಕ್ಸನೆಸಿಗೆ ವಿಷವನ್ನು ಹಾಕುವುದಕ್ಕೆ ಬದುಲಾಗಿ ಆತನಿಗೆ ತನ್ನ ಪ್ರಭುವಿನಾಜ್ಞೆಯನ್ನು ತಿಳಿಸಿ ಆತನೊಡನೆ ತಾನೂ ಸಿಸಿಲಿಯ ರಾಜ್ಯದಿಂದ ಹೊರಕ್ಕೆ ತಪ್ಪಿಸಿಕೊಂಡು ಹೋಗುವುಧಾಗಿ ಒಪ್ಪಿಕೊಂಡನು. ಆ ಮೇಲೆ ಪೊಲಿಕ್ಸನೆಸನು ಕೆಮಿಲ್ಲೊವಿನ ಸಹಾಯದಿಂದ ಸ್ವರಾಜ್ಯವಾದ ಬೊಹಿಮಿಯ ದೇಶವನ್ನು ಸುರಕ್ಷಿತವಾಗಿ ತಲಪಿದನು. ಅಂದಿನಿಂದಲೂ ಕೆಮಿಲ್ಲೊವು ಬೊಹಿಮಿಯದ ಆಸ್ಥಾನದಲ್ಲಿಯೇ ಅರಸಿನ ಪರಮಾಪ್ತ ಸ್ನೇಹಿತನಾಗಿದ್ದನು.

ಈ ರೀತಿಯಾಗಿ ಪೊಲಿಕ್ಸನೆಸನು ಓಡಿಹೋದುದು ಮೊದಲೇ ಸಂಶಯದಿಂದ ಕೂಡಿದ್ದ ದೊರೆಯನ್ನು ಮತ್ತಷ್ಟು ಕೆರಳಿಸಿತು. ಆತನು ರಾಣಿಯ ಅಂತಃಪುರದ ಬಳಿಗೆ ಹೋದನು. ಅಲ್ಲಿ ಯೋಗ್ಯಳಾದ ರಾಣಿಯು ಆಗ ತಾನೇ ಒಂದು ಸಣ್ಣ ಕಥೆಯನ್ನು ಹೇಳಿ, ತನ್ನನ್ನು ಸಂತೋಷಪಡಿಸುತ್ತಲಿದ್ದ ತನ್ನ ಚಿಕ್ಕ ಮಗನಾದ ಮಾಮಿಲ್ಲಸ್‌ನೊಂದಿಗೆ ಕುಳಿತಿದ್ದಳು. ಆಗ ದೊರೆಯು ಅಂತಃಪುರವನ್ನು ಪ್ರವೇಶಿಸಿ ಮಗುವನ್ನು ದೂರವಾಗಿ ಎಳೆದುಕೊಂಡು ಹೆರ್ಮೈಯೊನಿಯನ್ನು ಸೆರೆಮನೆಗೆ ಕಳುಹಿಸಿಬಿಟ್ಟನು.

ಮಾಮಿಲ್ಲಸನು ಬಹಳ ಚಿಕ್ಕ ಮಗುವಾಗಿದ್ದಾಗ್ಯೂ ತನ್ನ ತಾಯಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಅವನು ತನ್ನ ತಾಯಿಗೆ ಅಷ್ಟು ಅವಮಾನವಾದುದನ್ನೂ ಆಕೆಯು ತನ್ನನ್ನು ಬಿಟ್ಟು ಸೆರೆಯಲ್ಲಿಡಲ್ಪಡುವುದಕ್ಕೆ ಎಳೆದುಕೊಂಡು ಹೋಗಲ್ಪಟ್ಟುದನ್ನೂ ನೋಡಿ ಮನೋವ್ಯಥೆಯಿಂದ ನಿದ್ರಾಹಾರಗಳನ್ನು ತೊರೆದು ದಿನೇ ದಿನೇ ಕೃಶನಾಗುತ್ತ ಬಂದನು.

ದೊರೆಯು ತನ್ನ ರಾಣಿಯನ್ನು ಕಾರಾಗೃಹಕ್ಕೆ ಕಳುಹಿಸಿದನಂತರ ತನ್ನ ಆಸ್ಥಾನದ ಶ್ರೀಮಂತರಲ್ಲಿ ಕ್ಲಿಯಾಮಿನಿಸ್, ಡಿಯಾನ್ ಎಂಬ ಇಬ್ಬರನ್ನು ಕರಿಸಿ, ಅವರಿಗೆ– ‟ನೀವು ಡೆಲ್‌ಫೊಸಿಗೆ ಹೋಗಿ ಅಲ್ಲಿ ಅಪೊಲ್ಲೊ ದೇವಸ್ಥಾನದಲ್ಲಿ ನನ್ನ ರಾಣಿಯು ನನಗೆ ಅಪನಂಬಿಗಸ್ಥಳಾಗಿದ್ದಾಳೆಯೋ ಇಲ್ಲವೇ? ಎಂಬುದರ ವಿಷಯವಾಗಿ ದೇವರ ವರವನ್ನು ಕೇಳಿಕೊಂಡು ಬನ್ನಿರಿ'' ಎಂದಾಜ್ಞಾಪಿಸಿದನು.

ಹೆರ್ಮೈಯೊನಿ ಸೆರೆಮನೆಗೆ ಹೋದ ಸ್ವಲ್ಪ ದಿನಗಳಲ್ಲಿಯೇ ಒಂದು ಹೆಣ್ಣು ಕೂಸನ್ನು ಹೆತ್ತಳು. ಆಗ ರಾಣಿಯು ತನ್ನ ಸುಂದರವಾದ ಕೂಸನ್ನು ನೋಡಿ—‟ಓ! ನಿರ್ಭಾಗ್ಯವಾದ ಕೂಸೇ, ನಾನು ನಿನ್ನಹಾಗೆಯೇ ಸಾತ್ವಿಕಳು'' ಎಂದು ಹೇಳುತ್ತಾ ತಾನೇ ಸಮಾಧಾನಪಟ್ಟುಕೊಂಡಳು.

ಹೆರ್ಮೈಯೊನಿಗೆ ಸಿಸಿಲಿಯ ಒಬ್ಬ ಶ್ರೀಮಂತನಾದ ಆಂಟಿಗೋನಸ್‌ನ ಹೆಂಡತಿಯಾದ ಪಾಲೀನಾ ಎಂಬುವಳಲ್ಲಿ ವಿಶ್ವಾಸವಿತ್ತು. ಆಕೆಯು ತನ್ನ ರಾಣಿಯು ಪ್ರಸವಿಸಿದಳೆಂಬ ವರ್ತಮಾನವನ್ನು ಕೇಳಿ, ಹೆರ್ಮೈಯೊನಿಯನ್ನು ಇಟ್ಟಿದ್ದ ಸೆರೆಮನೆಯ ಬಳಿಗೆ ಬಂದು ಅಲ್ಲಿ ಕಾವಲಿದ್ದ ಎಮಿಲಿಯಳನ್ನು ಕುರಿತು—‟ಓ! ಎಮಿಲಿಯಾ, ರಾಣಿಯು ತನ್ನ ಕೂಸನ್ನು ನನ್ನ ಕೈಲಿ ಕೊಡಲು ಧೈರ್ಯವುಳ್ಳವಳೇ ಆಗಿದ್ದ ಪಕ್ಷದಲ್ಲಿ, ಅದನ್ನು ಅದರ ತಂದೆಯಾದ ದೊರೆಯ ಬಳಿಗೆ ಎತ್ತಿಕೊಂಡು

ಹೋಗುವೆನು. ತನ್ನ ನಿರಪರಾಧಿಯಾದ ಈ ಮಗುವನ್ನು ನೋಡುವು ದರಿಂದ ಆತನ ಹೃದಯವು ಹೇಗೆ ಕರಗುವುದೋ ನಮಗೆ ತಿಳಿಯದು ಎಂದು ರಾಣಿಯವರಿಗೆ ಹೇಳು '' ಎಂದಳು.

ಎಮಿಲಿಯ—'' ಸಾಧ್ವಿಯೇ, ನೀನು ಹೇಳಿದ ಈ ಘನವಾದ ಮಾತನ್ನು ರಾಣಿಗೆ ತಿಳಿಸುವೆನು. ಆಕೆಯು ಈ ದಿವಸ ಮಗುವನ್ನು ಧೈರ್ಯದಿಂದ ದೊರೆಗೆ ತೋರಿಸಬಲ್ಲ ಯಾರಾದರೂ ಇದ್ದರೆ ಚೆನ್ನಾಗಿತ್ತು ಎಂದು ಆಲೋಚಿಸುತ್ತಿದ್ದಳು.''

ಪಾಲೀನ—'' ಆಕೆಯ ರಕ್ಷಣಾರ್ಥವಾಗಿ ಲೆಯಾಂಟಿಸನ ಕೂಡೆ ನಾನು ಧೈರ್ಯವಾಗಿ ಮಾತನಾಡುವೆನು ಎಂದು ಆಕೆಗೆ ಹೇಳು.''

ಎಮಿಲಿಯ—'' ದಯಾವತಿಯಾದ ನೀನು ನಮ್ಮ ರಾಣಿಯಲ್ಲಿ ತೋರಿಸಿದ ಕನಿಕರಕ್ಕಾಗಿ ನಿನಗೆ ಶುಭವಾಗಲಿ.''

ಅನಂತರದಲ್ಲಿ ಎಮಿಲಿಯಳು ಹೆರ್ಮೈಯೊನಿಯ ಬಳಿಗೈದಿ ಈ ವರ್ತಮಾನವನ್ನು ಆಕೆಗೆ ತಿಳಿಸಲು, ರಾಣಿಯು ಈ ಮಗುವನ್ನು ದೊರೆಗೆ ತೋರಿಸಲು ಇವಳಿಗೆ ವಿನಾ ಮತ್ಯಾರಿಗೂ ಧೈರ್ಯ ಸಾಲದೆಂದು ತಿಳಿದಿದ್ದರಿಂದ ಮಗುವನ್ನು ಪಾಲೀನಳ ವಶಕ್ಕೆ ಸಂತೋಷದಿಂದೊಪ್ಪಿಸಿದಳು.

ಪಾಲೀನಳು ಈ ಮಗುವನ್ನು ಎತ್ತಿಕೊಂಡು ದೊರೆಯ ಕೋಪಕ್ಕೆ ಹೆದರಿದ್ದ ತನ್ನ ಗಂಡನು ತನ್ನನ್ನು ಹಿಂದಕ್ಕೆ ಹೋಗೆಂದು ಎಷ್ಟು ತಡೆದರೂ ನಿಲ್ಲದೆ, ದೊರೆಯ ಎದುರಿಗೆ ನುಗ್ಗಿಕೊಂಡು ಹೋಗಿ ಆ ಕೂಸನ್ನು ಅದರ ತಂದೆಯ ಪಾದಗಳ ಮೇಲಿಟ್ಟು, ಹೆರ್ಮೈಯೊನಿಯ ರಕ್ಷಣಾರ್ಥವಾಗಿ ದೊರೆಯ ಕೂಡೆ ಧೈರ್ಯವಾಗಿ ಮಾತನಾಡಿದಳು. ಅವನ ಕ್ರೂರತ್ವಕ್ಕೋಸ್ಕರ ಅವನನ್ನು ಬಹಳವಾಗಿ ನಿಂದಿಸಿ ಅವನ ನಿರಪರಾಧಿಯಾದ ಹೆಂಡತಿಯ ಮೇಲೂ ಮಗುವಿನಮೇಲೂ ದಯೆಯನ್ನು ತಾಳೆಂದು ಅವನನ್ನು ಪ್ರಾರ್ಥಿಸಿದಳು.

ಆದರೆ ಪಾಲೀನಳು ಧೈರ್ಯದಿಂದ ಹೇಳಿದ ಬುದ್ಧಿವಾದಗಳು ಲೆಯಾಂಟಿಸನ ಸಿಟ್ಟನ್ನು ಹೆಚ್ಚು ಮಾಡಿದವು. ಆದುದರಿಂದ ಅವನು ಅವಳ ಗಂಡನಾದ ಆಂಟಿಗೋನಸನಿಗೆ ಅವಳನ್ನು ತನ್ನೆದುರಿಗೆ ನಿಲ್ಲದಂತೆ ಓಡಿಸೆಂದಾಜ್ಞಾಪಿಸಿದನು.

ಪಾಲೀನಳು ಹೊರಟು ಹೋಗುವಾಗ್ಗೆ ಮಗುವಿನ ಹತ್ತಿರದಲ್ಲಿ ದೊರೆಯೊಬ್ಬನೇ ಇರುವಾಗ ಅದನ್ನು ನೋಡಿ ಕನಿಕರಗೊಳ್ಳುವನೆಂದು

ಯೋಚಿಸಿಕೊಂಡು ಆ ಕೂಸನ್ನು ಅದರ ತಂದೆಯ ಪಾದಗಳ ಬಳಿಯಲ್ಲಿಯೇ ಬಿಟ್ಟು ಹೋದಳು.

ಆದರೆ ಪಾಲೀನಳು ಯೋಚಿಸಿದುದು ಸರಿಯಾಗಿರಲಿಲ್ಲ. ಅವಳು ಹೋದಕೂಡಲೇ ಆ ದಯಾಹೀನನಾದ ತಂದೆಯು ಆ ಕೂಸನ್ನು ಸಮುದ್ರದ ಬಳಿಗೆ ಎತ್ತಿಕೊಂಡು ಹೋಗಿ ಯಾವುದಾದರೊಂದು ನಿರ್ಜನ ಪ್ರದೇಶದಲ್ಲಿ ಬಿಟ್ಟು ಬಾರೆಂದು ಪಾಲೀನಳ ಗಂಡನಾದ ಆಂಟಿಗೋನಸನಿಗೆ ಆಜ್ಞಾಪಿಸಿದನು. ಆಂಟಿಗೋನಸನು ಕೆಮಿಲ್ಲೊನಂತಲ್ಲದೆ ಲೆಯಾಂಟಿನನು ಹೇಳಿದಂತೆಯೇ ಮಾಡಿದನು. ಅವನು ಈ ಕೂಸನ್ನು ತನಗೆ ಸಿಕ್ಕಿದ ಮೊದಲನೇ ನಿರ್ಜನ ಪ್ರದೇಶದಲ್ಲಿ ಬಿಟ್ಟು ಬಿಡಬೇಕೆಂದು ಆಲೋಚಿಸಿ, ಅದರೊಂದಿಗೆ ತಾನೂ ಹಡಗೇರಿದನು.

ದೊರೆಯು ಹೆರ್ಮೈಯೊನಿ ತಪ್ಪಿತಸ್ಥಳೆಂದು ದೃಢವಾಗಿ ನಂಬಿದುದರಿಂದ ಡೆಲ್‌ಫೊಸಿಗೆ ಹೋಗಿ ಅಲ್ಲಿ ದೇವರ ವರವನ್ನು ಕೇಳಿಕೊಂಡು ಬರುವುದಕ್ಕಾಗಿ ಕಳುಹಿಸಲ್ಪಟ್ಟಿದ್ದ ಕ್ಲಿಯಾಮಿನಸ್, ಡಿಯಾನ್ ಇವರುಗಳ ಬರುವಿಕೆಯನ್ನು ನಿರೀಕ್ಷಿಸದೆ ಹೋದನು. ಆದರೆ ರಾಣಿಯು ತನ್ನ ಬಾಣತಿತನದಿಂದಲೂ ಶ್ರೇಷ್ಠವಾದ ಕೂಸನ್ನು ಕಳೆದುಕೊಂಡುದರಿಂದುಂಟಾದ ವ್ಯಸನದಿಂದಲೂ ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ರಾಜನು ತನ್ನ ಆಸ್ಥಾನದ ಶ್ರೀಮಂತರ ಮುಂದೆ ವಿಚಾರಣೆ ಮಾಡುವುದಕ್ಕಾಗಿ ಆಕೆಯನ್ನು ಕರೆತರಿಸಿದನು. ನ್ಯಾಯಾಧಿಕಾರಿಗಳೂ ದೊಡ್ಡ ದೊಡ್ಡ ಭೂಸ್ವಾಮಿಗಳೂ ಹೆರ್ಮೈಯೊನಿಯನ್ನು ವಿಚಾರಣೆ ಮಾಡುವುದಕ್ಕೆ ಸಭೆಸೇರಿದ್ದ ಸಮಯದಲ್ಲಿ ಕ್ಲಿಯಾಮಿನಸ್, ಡಿಯಾನ್ ಇವರಿಬ್ಬರೂ ಸಭೆಯನ್ನು ಪ್ರವೇಶಿಸಿ, ಮುದ್ರೆಯಿಂದ ಭದ್ರಮಾಡಲ್ಪಟ್ಟಿದ್ದ ದೈವೋತ್ತರದ ಕಾಗದವನ್ನು ಲೆಯಾಂಟಿಸನಿಗೆ ಒಪ್ಪಿಸಿದರು. ಆಗ ದೊರೆಯು ಆ ಮುದ್ರೆಯನ್ನು ಒಡೆದು ಆ ದೈವೋತ್ತರವನ್ನು ಗಟ್ಟಿಯಾಗಿ ಓದಬೇಕೆಂದಾಜ್ಞಾಪಿಸಿದನು. ಅದರಲ್ಲಿದ್ದ ವಿಷಯಗಳಾವುವೆಂದರೆ— "ಹೆರ್ಮೈಯೊನಿಯು ಸಾತ್ವಿಕಳು. ಪೊಲಿಕ್ಸನೆಸನು ನಿರಪರಾಧಿಯು. ಕೆಮಿಲ್ಲೊ ನಂಬಿಗಸ್ಥನು. ಲೆಯಾಂಟಿಸನು ಸಂಶಯ ಭರಿತನಾದ ಕ್ರೂರನು. ಈಗ ದೊರೆಯು ಕಳೆದುಕೊಂಡಿರುವುದು ಸಿಕ್ಕದೆಹೋದರೆ ಈತನಿಗೆ ಬಾಧ್ಯಸ್ಥರಿಲ್ಲದೆ ಹೋಗುವುದು."

ದೊರೆಯು ಈ ದೈವೋತ್ತರವನ್ನು ನಂಬಲಾರದೆ—“ ಇದು ರಾಣಿಯ ಸ್ನೇಹಿತರಿಂದ ಕಲ್ಪಿತವಾದ ಸುಳ್ಳು ಸುದ್ದಿಯು ” ಎಂದು ಹೇಳಿ, ರಾಣಿಯನ್ನು ವಿಚಾರಣೆ ಮಾಡಬಹುದೆಂದು ನ್ಯಾಯಾಧಿಯಾರಿಗಳಿಗೆ ಆಜ್ಞೆಮಾಡಿದನು. ಲೆಯಾಂಟಿಸನು ಮಾತನಾಡುತ್ತಲಿದ್ದಾಗ ಒಬ್ಬ ಸೇವಕನು ಬಂದು—“ ತಾಯಿಯು ಮರಣ ದಂಡನೆಗೋಸ್ಕರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವುದಾಗಿ ಕೇಳಿ ನಾಚಿಕೆಯಿಂದಲೂ ದುಃಖಾತಿಶಯದಿಂದಲೂ ರಾಜಕುಮಾರನಾದ ಮಾಮಿಲ್ಲಸನು ಅಕಸ್ಮಾತ್ತಾಗಿ ಸತ್ತನು ” ಎಂದು ದೊರೆಗೆ ಹೇಳಿದನು.

ಹೆರ್ಮೆಯೊನಿಯು ತನ್ನ ಪ್ರಿಯ ಕುಮಾರನಾದ ಮಾಮಿಲ್ಲಸನು ತನ್ನ ದುರದೃಷ್ಟಕ್ಕಾಗಿ ವ್ಯಥೆಪಟ್ಟು ಸತ್ತನೆಂಬ ವಾರ್ತೆಯನ್ನು ಕೇಳಿದ ಕೂಡಲೇ ಮೂರ್ಛಿತಳಾದಳು. ಲೆಯಾಂಟಿಸನು ಈ ಸುದ್ದಿಯಿಂದ ಮನಃಕ್ಲೇಶವನ್ನು ಹೊಂದಿ, ಭಾಗ್ಯಹೀನೆಯಾದ ತನ್ನ ರಾಣಿಯನ್ನು ನೋಡಿ, ಕನಿಕರಗೊಂಡು ಆಕೆಯನ್ನು ಎತ್ತಿಕೊಂಡು ಹೋಗಿ ಚೇತರಿಸಿಕೊಳ್ಳುವುದಕ್ಕೆ ಬೇಕಾದ ಉಪಚಾರಗಳನ್ನು ಮಾಡಿರೆಂದು ಪಾಲೀನ ಮತ್ತು ಆಕೆಯ ಪರಿವಾರದ ಹೆಂಗಸರಿಗೂ ಆಜ್ಞೆಮಾಡಿದನು. ಪಾಲೀನಳು ಜಾಗ್ರತೆಯಾಗಿ ಹಿಂತಿರುಗಿ ಬಂದು—“ ಹರ್ಮ್ಯೊಯೊನಿಯು ಸತ್ತು ಹೋದಳು ” ಎಂದು ದೊರೆಗೆ ತಿಳಿಸಿದಳು.

ಲೆಯಾಂಟಸನು ಈ ವಾರ್ತೆಯನ್ನು ಕೇಳಿ, ಆಕೆಗೆ ತಾನು ತೋರಿಸಿದ ಕ್ರೂರತ್ವಕ್ಕಾಗಿ ಪಶ್ಚಾತ್ತಾಪಪಟ್ಟನು. ತಾನು ಹರ್ಮ್ಯೊಯೊನಿಯ ವಿಷಯದಲ್ಲಿ ತೋರಿಸಿದ ಕ್ರೂರ ಸ್ವಭಾವವು ಆಕೆಯನ್ನು ಎದೆಗುಂದುವ ಹಾಗೆ ಮಾಡಿತೆಂತಲೂ ಆಕೆಯು ನಿರಪರಾಧಿಯೆಂತಲೂ ಯೋಚಿಸಿದನು. ‘ ಕಳೆದುಕೊಂಡುದು ಸಿಕ್ಕದೆ ಹೋದರೆ ’ ಎಂಬದನ್ನು ಜ್ಞಾಪಿಸಿಕೊಂಡು ತನ್ನ ಚಿಕ್ಕ ಮಗಳನ್ನು ಕಳೆದುಕೊಂಡುದರಿಂದಲೂ ತನ್ನ ಕುಮಾರನಾದ ಮಾಮಿಲ್ಲಸನು ಸತ್ತುಹೋದುದರಿಂದಲೂ ತನಗೆ ಮತ್ತಾರೂ ಬಾಧ್ಯಸ್ಥರೇ ಇಲ್ಲದೆ ಹೋಗುವರೆಂದು ಬೆದರಿ ದೇವರ ವರವು ನಿಶ್ಚಯವೆಂದು ಆಗ ಭಾವಿಸಿದನು. ಈಗ ತಾನು ಕಳೆದುಕೊಂಡಿರುವ ಮಗಳನ್ನು ಪುನಃ ಹೊಂದುವುದಕ್ಕಾಗಿ ತನ್ನ ರಾಜ್ಯವನ್ನೇ ಕೊಟ್ಟು ಬಿಡುವುದಾಗಿ ಯೋಚಿಸುತ್ತಾ ಅನೇಕ ವರ್ಷಗಳನ್ನು ಮಹಾ ವ್ಯಸನದಿಂದಲೂ ಸಂಕಟದಿಂದಲೂ ಕಳೆದನು.

ಆಂಟಿಗೋನಸನು ರಾಜಪುತ್ರಿಯನ್ನು ಎತ್ತಿಕೊಂಡು ಪ್ರಯಾಣ ಮಾಡುತ್ತಲಿದ್ದ ಹಡಗನ್ನು ಒಂದು ಬಲವಾದ ಬಿರುಗಾಳಿಯು ಪೊಲಿಕ್ಸ ನೆಸನ ರಾಜ್ಯವಾದ ಬೊಹಿಮಿಯದ ತೀರಪ್ರದೇಶಕ್ಕೆ ಹೊಡೆದುಕೊಂಡು ಹೋಯಿತು. ಇಲ್ಲಿ ಆಂಟಿಗೋನಸನು ಇಳಿದು ಆ ಕೂಸನ್ನು ಇಲ್ಲಿಯೇ ಬಿಟ್ಟನು.

ಕೂಸನ್ನು ಎಲ್ಲಿ ಬಿಟ್ಟೆನೆಂಬ ವಾರ್ತೆಯನ್ನು ದೊರೆಗೆ ತಿಳಿಸುವುದಕ್ಕಾಗಿ ಅವನು ಪುನಃ ಸಿಸಿಲಿಗೆ ಬರಲೇ ಇಲ್ಲ. ಹಡಗೇರುವುದಕ್ಕೆ ಹಿಂದಕ್ಕೆ ಬರುತ್ತಿರುವಾಗ ಒಂದು ಕರಡಿಯು ಪೊದರಿನಿಂದೀಚೆಗೆ ಬಂದು ಅವನನ್ನು ಸೀಳಿಬಿಟ್ಟಿತು. ಅತಿನೀಚವಾದ ಆಜ್ಞೆಯಂತೆ ನಡೆದುದಕ್ಕಾಗಿ ಅವನಿಗೆ ತಕ್ಕ ಶಿಕ್ಷೆಯಾಯಿತು.

ಈ ಮಗುವಿಗೆ ಉತ್ಕೃಷ್ಟವಾದ ಉಡಿಗೆಗಳನ್ನೂ ಆಭರಣಗಳನ್ನೂ ತೊಡಿಸಿದ್ದರು. ಹರ್ಮೈಯೊನಿಯು ಈ ಮಗುವನ್ನು ಲೆಯಾಂಟಿಸನ ಬಳಿಗೆ ಕಳುಹಿಸುವಾಗ ಅದನ್ನು ಬಹಳ ಅಲಂಕರಿಸಿದ್ದಳು. ಆಂಟಿಗೋನಸನು ಒಂದು ಕಾಗದದಲ್ಲಿ ಅವಳ ನಾಮಧೇಯವು ಪೆರ್ಡಿಟ ಎಂದೂ ಅವಳ ಪ್ರಖ್ಯಾತವಾದ ವಂಶವನ್ನೂ ದುರದೃಷ್ಟವನ್ನೂ ಕುರಿತು ಸೂಚಿಸುವ ಕೆಲವು ಮಾತುಗಳನ್ನೂ ಅಸ್ಪಷ್ಟವಾಗಿ ಬರೆದು ಅದನ್ನು ಆ ಮಗುವಿನ ಅಂಗಿಗೆ ತಗುಲಿಸಿದ್ದನು.

ಈ ಅನಾಥಳಾದ ಹುಡುಗಿಯನ್ನು ಒಬ್ಬ ಕುರುಬನು ನೋಡಿದನು. ಅವನು ಬಹಳ ದಯಾಪರನಾಗಿದ್ದುದರಿಂದ ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ಹೆಂಡತಿಯ ವಶಕ್ಕೊಪ್ಪಿಸಿದನು. ಆಕೆಯು ಈ ಹುಡುಗಿಯನ್ನು ಬಹು ಅಕ್ಕರೆಯಿಂದ ಪೋಷಿಸುತ್ತಿದ್ದಳು. ಬಡವರಾದ ಇವರಿಗೆ ಈ ಐಶ್ವರ್ಯವು ಎಲ್ಲಿ ದೊರಕಿತೆಂಬುದನ್ನು ಯಾರೂ ತಿಳಿಯದಿರಲೆಂದು ಆ ಕುರುಬನು ತಾನಿದ್ದ ಪ್ರದೇಶವನ್ನು ಬಿಟ್ಟು ಪೆರ್ಡಿಟಳ ಆಭರಣಗಳಲ್ಲಿ ಸ್ವಲ್ಪ ಭಾಗದ ವಿನಿಯೋಗದಿಂದ ಕುರಿಯ ಮಂದೆಗಳನ್ನು ಕೊಂಡು ಐಶ್ವರ್ಯವಂತನಾದನು. ಇವನು ಈ ಬಾಲೆಯನ್ನು ಸ್ವಪುತ್ರಿಗಿಂತ ಅತಿಶಯವಾಗಿ ಪೋಷಿಸುತ್ತಿದ್ದನು.

ಪೆರ್ಡಿಟಳ ರೂಪವು ದಿನ ದಿನಕ್ಕೂ ಶುಕ್ಲಪಕ್ಷದ ಚಂದ್ರನಂತೆ ಬೆಳೆಯಿತು. ಕುರುಬನ ಮಗಳಿಗಿಂತಲೂ ಈಕೆಯು ಉತ್ತಮವಾದ ವಿದ್ಯಾಭ್ಯಾಸವನ್ನು ಪಡೆಯದೆ ಇದ್ದಾಗ್ಯೂ ಸ್ವಭಾವಸಿದ್ಧವಾದ ಸದ್ಗುಣಗಳು

ಆಕೆಯ ಬುದ್ಧಿಯಲ್ಲಿ ಪ್ರಕಾಶಿಸುತ್ತಿದ್ದುವು. ಆದುದರಿಂದ ಅವಳು ತನ್ನ ತಂದೆಯ ಆಸ್ಥಾನದಲ್ಲಿ ಬೆಳೆಯಲಿಲ್ಲವೆಂದು ಯಾರೂ ಹೇಳಲಾಗುತ್ತಿರಲಿಲ್ಲ.

ಬೊಹಿಮಿಯಾ ದೊರೆಯಾದ ಪೊಲಿಕ್ಸನೆಸಿಗೆ ಫ್ಲೊರೈಜಲ್ ಎಂಬ ಒಬ್ಬನೇ ಕುಮಾರನಿದ್ದನು. ಈ ಯುವರಾಜನು ಆ ಕುರುಬನ ವಾಸಸ್ಥಾನದ ಬಳಿಯಲ್ಲಿ ಬೇಟೆಯಾಡುತ್ತಿರುವಾಗ ಮುದುಕನ ಮಗಳೆಂದು ಕರೆಯಲ್ಪಡುತ್ತಿದ್ದ ಪೆರ್ಡಿಟಳನ್ನು ನೋಡಿದನು. ಆಕೆಯ ಸೌಂದರ್ಯ, ವಿನಯ, ರಾಣಿಯಾಗಿರಲುಚಿತವಾದ ಸದ್ಗುಣಗಳಿಂದ ಇವನು ಅವಳಲ್ಲಿ ಮೋಹಗೊಂಡನು. ಆದುದರಿಂದ ಇವನು ಡಾರಿಕ್ಲೀಸ್ ಎಂಬ ಹೆಸರಿಟ್ಟುಕೊಂಡು, ಒಬ್ಬ ಗೃಹಸ್ಥನ ವೇಷದಿಂದ ಆ ವೃದ್ಧಕುರುಬನ ಮನೆಗೆ ಆಗಾಗ್ಗೆ ಹೋಗಿ ಬರುತ್ತಿದ್ದನು.

ಫ್ಲೊರೈಜಲ್‌ನು ಆಗಾಗ್ಗೆ ಗೋಪ್ಯವಾಗಿ ಆಸ್ಥಾನದಿಂದ ಹೊರಟು ಬರುತ್ತಿದ್ದುದರಿಂದ ಇವನ ಪಿತೃವಾದ ಪೊಲಿಕ್ಸನೆಸೆಗೆ ಗಾಬರಿಯಾಯಿತು. ಆದುದರಿಂದ ತನ್ನ ಮಗನನ್ನು ಹುಡುಕುವುದಕ್ಕೆ ಕೆಲವು ಜನರನ್ನು ನೇಮಿಸಿ, ಅವನು ಕುರುಬನ ಸೌಂದರ್ಯವತಿಯಾದ ಮಗಳನ್ನು ಮೋಹಿಸಿದ್ದಾನೆಂದು ತಿಳಿದನು.

ಆದುದರಿಂದ ಪೊಲಿಕ್ಸನೆಸನು ಲಿಯಾಂಟಿಸನ ಘಾತುಕತನದಿಂದ ತನ್ನನ್ನು ಕಾಪಾಡಿದ ನಂಬಿಗಸ್ಥನಾದ ಕೆಮಿಲ್ಲೊವನ್ನು ಕರಿಸಿ (ಪೆರ್ಡಿಟಳ ತಂದೆಯೆಂದೂಹಿಸಲ್ಪಟ್ಟಿದ್ದ) ಕುರುಬನ ಮನೆಗೆ ತನ್ನೊಂದಿಗೆ ಬರಬೇಕೆಂದಾತನಿಗೆ ತಿಳಿಸಿದನು.

ಅದೇ ರೀತಿಯಲ್ಲಿ ಪೊಲಿಕ್ಸನೆಸನೂ ಕೆಮಿಲ್ಲೊವೂ ವೇಷಾಂತರದಲ್ಲಿ ಕುರುಬನ ಮನೆಯನ್ನು ತಲಪಿದಾಗ, ಅವರು ಅಜಯಜ್ಞವನ್ನು ಮಾಡುತ್ತಲಿದ್ದರು. ಇವರು ಕುರುಬರಿಗೆ ಪರಿಚಯಸ್ಥರಲ್ಲದಿದ್ದರೂ ಅಜಯಜ್ಞದಲ್ಲಿ ಪ್ರತಿಯೊಬ್ಬ ಅತಿಥಿಯೂ ಆದರಪೂರ್ವಕವಾಗಿ ಕರೆಯಲ್ಪಡುತ್ತಿದ್ದುದರಿಂದ ಒಳಕ್ಕೆ ಬರಬೇಕೆಂದೂ ಸರ್ವಸಾಮಾನ್ಯವಾದ ಈ ಯಜ್ಞದಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸಲ್ಪಟ್ಟರು.

ಅಲ್ಲಿ ವಿನೋದಗಳೂ ಆಟಪಾಟಗಳೂ ವಿಶೇಷವಾಗಿ ನಡೆಯುತ್ತಿದ್ದುವು. ಆ ದಿನವು ಅವರಿಗ ಹಬ್ಬವಾದುದರಿಂದ ಎತ್ತರವಾದ ಕಾಲ್ಮಣೆಗಳನ್ನು ಹಾಕಿ ಅನೇಕ ವಿಧವಾದ ಆಹಾರ ಪದಾರ್ಥಗಳನ್ನು ಹವಣಿಸುತ್ತಿ

ದ್ದರು. ಕೆಲ ಹುಡುಗರು ಹುಡುಗಿಯರು ಮನೆಯ ಮುಂದೆ ಹುಲ್ಲಿನ ಪ್ರದೇಶದಲ್ಲಿ ಕುಣಿಯುತ್ತಿದ್ದರು. ಇನ್ನೂ ಕೆಲವರು ಬಾಗಿಲಲ್ಲಿದ್ದ ಒಬ್ಬ ವ್ಯಾಪಾರಿಯ ಬಳಿಯಲ್ಲಿ ರೇಷ್ಮೆಯ ವಸ್ತ್ರ, ಕೈಚೀಲವೇ. ಮೊದಲಾದ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿದ್ದರು.

ಹೀಗೆಲ್ಲಾ ನಡೆಯುತ್ತಿರುವಲ್ಲಿ ಫ್ಲೊರೈಜಲ್‌ನೂ ಪೆರ್ಡಿಟಳೂ ತಮ್ಮ ಸುತ್ತುಮುತ್ತಲೂ ಇದ್ದವರು ಮಾಡುತ್ತಿದ್ದ ವಿನೋದಗಳಲ್ಲಿಯೂ ಆಟಪಾಟಗಳಲ್ಲಿಯೂ ಸೇರುವುದಕ್ಕಿಂತಲೂ ತಮ್ಮಿಬ್ಬರಿಗೂ ನಡೆಯುತ್ತಿದ್ದ ಸಂಭಾಷಣೆಯಲ್ಲಿ ಹೆಚ್ಚು ಆದರವುಳ್ಳವರಾಗಿ, ಒಂದು ಏಕಾಂತವಾದ ಮೂಲೆಯಲ್ಲಿ ಸುಮ್ಮನೆ ಕುಳಿತುಕೊಂಡರು. ದೊರೆಯು ವೇಷಾಂತರದಲ್ಲಿದ್ದುದರಿಂದ ಮಗನು ತಂದೆಯನ್ನು ಗುರುತುಹಿಡಿಯಲಾಗಲಿಲ್ಲ. ಆದುದರಿಂದ ಆತನು ಅವರ ಸಂಭಾಷಣೆಯನ್ನು ಕೇಳಲನುಕೂಲಿಸುವಷ್ಟು ಸಮೀಪಕ್ಕೆ ಬಂದನು. ತನ್ನ ಮಗನೊಡನೆ ಸಂಭಾಷಿಸುತ್ತಿದ್ದ ಪೆರ್ಡಿಟಳ ಮಾತುಗಳ ರೀತಿಯು ಪೊಲಿಕ್ಸನೆಸನನ್ನು ಬಹಳವಾಗಿ ಸಂತೋಷಪಡಿಸಿತು. ಆಗ ಆತನು ಕೆಮಿಲ್ಲೊವನ್ನು ಕುರಿತು—“ ಇವಳು ದೊಡ್ಡ ವಂಶದಲ್ಲಿ ಹುಟ್ಟದಿದ್ದಾಗ್ಯೂ ನಾನು ಇದುವರೆಗೆ ನೋಡಿದ ಕನ್ಯೆಯರಲ್ಲಿ ಅತ್ಯಂತ ರೂಪವತಿಯಾಗಿದ್ದಾಳೆ. ಇವಳ ನಡೆನುಡಿಗಳನ್ನು ವಿಚಾರಿಸದಿದ್ದಾಗ್ಯೂ ಇವಳು ತಾನು ಯಾವ ರೀತಿಯಲ್ಲಿರುತ್ತಾಳೆಯೋ ಅದಕ್ಕಿಂತಲೂ ಹೆಚ್ಚಿನವಳಾಗಿರುವ ಹಾಗೆ ಕಾಣುತ್ತಾಳೆ. ಇಂತಹ ಘನವಂತಳಿಗೆ ಈ ಸ್ಥಳದಲ್ಲಿರುವುದು ತರವಲ್ಲ ” ಎಂದನು.

ಕೆಮಿಲ್ಲೊ—“ ದಿಟ, ಪ್ರಕಾಶಮಾನವಾಗಿದ್ದಾಳೆ.”

ಪೊಲಿಕ್ಸನೆಸ್—(ಕುರುಬನನ್ನು ಕುರಿತು) “ ಎಲೈ, ಸ್ನೇಹಿತನೆ, ನಿನ್ನ ಮಗಳ ಕೂಡೆ ಮಾತನಾಡುತ್ತಿರುವ ಸುಂದರನಾದ ಆ ಯುವಕನು ಯಾರು ? ”

ಕುರುಬ—“ ಸ್ವಾಮಿ, ಆತನ ಹೆಸರು ಡಾರಿಕ್ಲೀಸ್‌ನಂತೆ ನನ್ನ ಕುವರಿಯನ್ನು ಆತನು ಮೋಹಿಸಿರುವನಂತೆ. ಇವರಲ್ಲಿರುವ ಅನುರಾಗವು ಅಷ್ಟಿಷ್ಟೆಂದು ಹೇಳಲಸಾಧ್ಯ. ಈ ಯುವಕನಾದ ಡಾರಿಕ್ಲೀಸ್‌ನು ಅವಳನ್ನು ವಿವಾಹವಾದಲ್ಲಿ ಅವನಿಂದ ಕನಸಿನಲ್ಲಿಯೂ ಭಾವಿಸಲ್ಪಡದ ಕೆಲವನ್ನು ನನ್ನ ಕುವರಿಯು ಅವನಿಗೆ ತೆಗೆದುಕೊಂಡು ಬರುವಳು ” (ಎಂದರೆ, ತಾನು ಕುರಿಮಂದೆಯನ್ನು ಕೊಳ್ಳುವುದಕ್ಕಾಗಿ ಅವಳ ಆಭರಣಗ

ಳಲ್ಲಿ ಕೆಲವನ್ನು ಬಳಸಿಕೊಂಡ ಮೇಲೆ ಉಳಿದವುಗಳನ್ನು ಅವಳ ವಿವಾಹದ ಒಳುವಳಿಗಾಗಿ ಜಾಗರೂಕತೆಯಿಂದ ಜೋಪಾನಗೊಳಿಸಿದ್ದನು.)

ಪೊಲಿಕ್ಸನೆಸನು ಅನಂತರದಲ್ಲಿ ತನ್ನ ಮಗನನ್ನು ಕುರಿತು—"ಎಲೈ ಯೌವನಸ್ಥನೇ! ಈ ಹಬ್ಬದ ಮೇಲೆ ನಿನಗೆ ಮನಸ್ಸಿಲ್ಲ. ಹಾಗೆ ಮಾಡಿರುವ ಯಾವುದೋ ಒಂದು ಆಲೋಚನೆಯಿಂದ ನಿನ್ನ ಹೃದಯವು ಪೂರಿತವಾದಂತಿದೆ! ನಾನು ಯೌವನಸ್ಥನಾಗಿರುವಾಗ ನನ್ನ ಪ್ರಿಯೆಗೆ ಬಹುಮಾನಗಳನ್ನು ಯಥೇಚ್ಛವಾಗಿ ಕೊಡುತ್ತಿದ್ದೆನು. ಆದರೆ ನೀನು ನಿನ್ನ ಪ್ರಿಯೆಗೆ ಏನನ್ನೂ ಕೊಂಡುಕೊಡದೆ ವ್ಯಾಪಾರಿಯನ್ನು ಸುಮ್ಮನೆ ಹೋಗಗೊಳಿಸಿರುವಿ" ಎಂದನು.

ಆ ಯುವರಾಜನು ತಾನು ತನ್ನ ಜನಕನೊಡನೆ ಮಾತಾಡುತ್ತಿದ್ದೇನೆಂದು ಸ್ವಲ್ಪವೂ ಯೋಚಿಸದೆ—"ಓ! ವೃದ್ಧನೇ, ಕೇಳು. ಈಕೆಯು ಅಂಥವುಗಳನ್ನು ಹೊಗಳುವುದಿಲ್ಲ. ಈಕೆಯು ನನ್ನಿಂದ ಹೊಂದಲು ನಿರೀಕ್ಷಿಸಿರುವುವುಗಳೆಲ್ಲಾ ನನ್ನ ಹೃದಯದಲ್ಲಿ ಗುಪ್ತವಾಗಿರುವುವು." ಅನಂತರದಲ್ಲಿ ಪೆರ್ಡಿಟಳ ಕಡೆಗೆ ತಿರುಗಿ—"ಓ! ಪೆರ್ಡಿಟಾ! ಈ ಪೂರ್ವಿಕನಾದ ದೊಡ್ಡಮನುಷ್ಯನ ಮುಂದೆ ನಾನು ಹೇಳುವುದನ್ನು ಕೇಳು. ಈತನೂ ಪೂರ್ವದಲ್ಲಿ ನನ್ನಂತೆ ವ್ಯಾಮೋಹದಲ್ಲಿದ್ದಂತೆ ಕಾಣುತ್ತದೆ. ನನ್ನ ಅರಿಕೆಯನ್ನು ಈತನು ಕೇಳುವನು" ಎಂದು, ವೃದ್ಧನಾದ ಅಪರಿಚಯಸ್ಥನನ್ನು ಕುರಿತು—"ನಾನು ಪೆರ್ಡಿಟಳಿಗೆ ಕೊಟ್ಟ ದೃಢವಾದ ಮದುವೆಯ ವಾಗ್ದಾನಕ್ಕೆ ನೀನೊಬ್ಬ ಸಾಕ್ಷಿಯಾಗಿ, ನಮ್ಮ ಅಭಿಮತವನ್ನು ಗುರುತುಮಾಡು" ಎಂದನು.

ಆಗ ದೊರೆಯು ತನ್ನ ವೇಷವನ್ನು ತೆಗೆದುಹಾಕಿ—"ಎಲೈ ಯುವಕನೇ, ಈ ಸ್ತ್ರೀಪರಿತ್ಯಾಗಮಾಡಿದೆನೆಂಬುದನ್ನು ಗುರುತು ಹಾಕು" ಎಂದು ಕೇಳಿ, ಈ ಅಲ್ಪವಂಶದ ಕನ್ಯೆಯನ್ನು ಮದುವೆಮಾಡಿಕೊಳ್ಳಬೇಕೆಂಬುದ್ದೇಶಕ್ಕಾಗಿ ತನ್ನ ಮಗನನ್ನು ಬಹಳವಾಗಿ ನಿಂದಿಸಿ, ಪೆರ್ಡಿಟಳನ್ನು ಅವಮರ್ಯಾದೆಯ ಮಾತುಗಳಿಂದ ಬೈದು, ಅವಳು ತನ್ನ ಮಗನನ್ನು ಪುನಃ ಇಲ್ಲಿಗೆ ಬರಮಾಡಿಕೊಂಡರೆ ಅವಳನ್ನೂ ಅವಳ ತಂದೆಯನ್ನೂ ಕ್ರೂರವಾದ ಮರಣದಂಡನೆಗೆ ಗುರಿಮಾಡುವೆನೆಂದು ಹೆದರಿಸಿ, ಮಹಾ ರೌದ್ರದಿಂದ ಅವರನ್ನು ಬಿಟ್ಟು ಹೊರಟು, ಫ್ಲೊರೈಜಲ್‌ನನ್ನು ಕರೆದುಕೊಂಡು ತನ್ನ ಹಿಂದೆ ಬಾರೆಂದು ಕೆಮಿಲ್ಲೊವಿಗೆ ಆಜ್ಞಾಪಿಸಿದನು.

ದೊರೆಯು ಹೊರಟು ಹೋದಮೇಲೆ ಪೆರ್ಡಿಟಳು—" ನಮ್ಮ ಕೋರಿಕೆಗಳು ನಿಷ್ಫಲವಾದರೂ ನಾನು ಹೆದರಲಿಲ್ಲ. ಆತನ ಅರಮನೆಯ ಮೇಲೆ ಪ್ರಕಾಶಿಸುವ ಅದೇ ಸೂರ್ಯನು ನಮ್ಮ ಗುಡಿಸಲಿನಲ್ಲಿ ತನ್ನ ಮುಖವನ್ನು ತೋರಿಸದಿರನು. ಆದರೆ ಇಬ್ಬರನ್ನೂ ಏಕರೀತಿಯಾಗಿ ನೋಡುವನು ಎಂಬದಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೆನು " ಎಂದು ಮೊದಲಾಗಿ ಯೋಚಿಸುತ್ತ ಚಿಂತಾಕ್ರಾಂತಳಾಗಿ—" ಈಗ ನಾನು ಈ ಸ್ವಪ್ನದಿಂದ ಎಚ್ಚರಗೊಂಡಿದ್ದೇನೆ ; ನಾನದನ್ನು ಇನ್ನು ನೆನಸಿಕೊಳ್ಳುವುದಿಲ್ಲ. ಸ್ವಾಮಿಾ, ನನ್ನನ್ನು ಬಿಡಿ, ನಾನು ಹೋಗಿ ಅಳುತ್ತ ಹಾಲು ಕರೆಯುವೆನು " ಎಂದಳು.

ದಯಾರ್ದ್ರ ಹೃದಯನಾದ ಕೆಮಿಲ್ಲೊವು ಪೆರ್ಡಿಟಳ ಸ್ವಭಾವವನ್ನೂ ವಿನಯವನ್ನೂ ನೋಡಿ ಆಶ್ಚರ್ಯಭರಿತನಾದನು. ಫ್ಲೊರೈಜಲನು ತನ್ನ ತಂದೆಯಾದ ರಾಜನ ಆಜ್ಞೆಯಂತೆ ತನ್ನ ಪ್ರಿಯಳನ್ನು ಬಿಟ್ಟಿರಲಾರದಷ್ಟು ಆಕೆಯಲ್ಲಿ ಅನುರಕ್ತನಾಗಿರುವನೆಂದು ತಿಳಿದು, ಇವರಿಗೆ ಸಹಾಯಮಾಡುವುದಕ್ಕೆ ಒಂದು ಮಾರ್ಗವನ್ನು ಯೋಚಿಸಿದನು.

ಸಿಸಿಲಿಯ ದೊರೆಯಾದ ಲೆಯಾಂಟಿಸನು ನಿಜವಾಗಿಯೂ ಪಶ್ಚಾತ್ತಾಪಪಡುವನೆಂಬುದನ್ನು ಕೆಮಿಲ್ಲೊವು ಬಹಳ ಕಾಲದಿಂದಲೂ ಅರಿತಿದ್ದನು. ಈತನು ಈಗ ಪೊಲಿಕ್ಸನೆಸನ ದಯಾಪಾತ್ರನಾದ ಸ್ನೇಹಿತನಾದಾಗ್ಯೂ ತನ್ನ ಪೂರ್ವದ ಪ್ರಭುವನ್ನೂ ಸ್ವದೇಶವನ್ನೂ ಮತ್ತೊಂದಾವೃತ್ತಿ ನೋಡಬೇಕೆಂದು ಆಶಿಸುತ್ತಿದ್ದನು. ಇದಕ್ಕಾಗಿ ಫ್ಲೊರೈಜಲ್ ಪೆರ್ಡಿಟಳನ್ನು ಕುರಿತು —" ನೀವು ನನ್ನೊಡನೆ ಸಿಸಿಲಿಯಾಸ್ಥಾನಕ್ಕೆ ಬನ್ನಿರಿ ; ನನ್ನ ಮಧ್ಯಸ್ಥಿಕೆಯಿಂದ ನೀವು ಪೊಲಿಕ್ಸನೆಸ್‌ನಿಂದ ಕ್ಷಮೆಯನ್ನೂ ಮದುವೆಗೆ ಅನುಮತಿಯನ್ನೂ ಪಡೆಯುವವರೆಗೂ ಲೆಯಾಂಟಿಸನು ತನ್ನ ಆಸ್ಥಾನದಲ್ಲಿ ನಿಮ್ಮನ್ನು ಕಾಪಾಡುವ ಹಾಗೆ ನಾನು ಮಾಡುವೆನು " ಎಂದನು.

ಅವರು ಈ ಆಲೋಚನೆಯನ್ನು ಸಂತೋಷದಿಂದ ಸಮ್ಮತಿಸಿದರು. ಕೆಮಿಲ್ಲೊವು ತಮ್ಮ ಪ್ರಯಾಣಕ್ಕೆ ಬೇಕಾದ ಸಲಕರಣೆಗಳನ್ನೆಲ್ಲಾ ತೆಗೆದುಕೊಂಡು ವೃದ್ಧ ಕುರುಬನನ್ನೂ ತನ್ನೊಡನೆಯೇ ಬರಬೇಕೆಂದು ಹೇಳಿದನು.

ಆಗ ಕುರುಬನು ಪೆರ್ಡಿಟಳ ಉಳಿದ ಆಭರಣಗಳನ್ನೂ ಅವಳ ಬಟ್ಟೆಗಳನ್ನೂ ಅವಳ ಅಂಗಿಗೆ ತಗುಲಿಸಿದ್ದ ಕಾಗದವನ್ನೂ ತನ್ನೊಡನೆಯೇ ತೆಗೆದುಕೊಂಡು ಹೊರಟನು.

ಫ್ಲೊರೈಜಲ್ ಪೆರ್ಡಿಟ ಕೆಮಿಲ್ಲೊ ಮತ್ತು ವೃದ್ಧಕುರುಬ ಇವರೆಲ್ಲರೂ ಸುರಕ್ಷಿತರಾಗಿ ಲಿಯಾಂಟಿಸನ ಆಸ್ಥಾನವನ್ನು ತಲಪಿದರು.

ತನ್ನ ಕಾಲಾಧೀನಳಾದ ರಾಣಿಯನ್ನೂ ತಾನು ಕಳೆದುಕೊಂಡ ಮಗುವನ್ನೂ ನೆನೆಸಿಕೊಂಡು ವ್ಯಥೆಪಡುತ್ತಿದ್ದ ಲಿಯಾಂಟಿಸನು ಕೆಮಿಲ್ಲೊವನ್ನು ದಯಾಪೂರ್ವಕವಾಗಿ ಸ್ವೀಕರಿಸಿ ರಾಜಕುಮಾರನಾದ ಫ್ಲೊರೈಜಲ್‌ನಿಗೆ ಮನಃಪೂರ್ವಕವಾದ ಸ್ವಾಗತವನ್ನಿತ್ತನು. ಲಿಯಾಂಟಿಸನ ಲಕ್ಷ್ಯವೆಲ್ಲಾ ಫ್ಲೊರೈಜಲ್‌ನು ತನ್ನ ರಾಣಿಯೆಂದು ಕರೆದುಕೊಂಡು ಬಂದಿರುವ ಪೆರ್ಡಿಟಳಿನ ಮೇಲೆಯೇ ಇತ್ತು. ಇವಳಲ್ಲಿ ದೈವಾಧೀನಳಾದ ತನ್ನ ರಾಣಿಯ ಹೋಲಿಕೆ ಇರುವುದನ್ನು ನೋಡಿ ಆತನ ವ್ಯಸನವು ಇಮ್ಮಡಿಯಾಯಿತು. ಆಗ ಅವನು “ನಾನು ನನ್ನ ಕುವರಿಯನ್ನು ನಾಶಮಾಡದೆ ಇದ್ದಿದ್ದರೆ, ಅವಳೂ ಹೀಗೆಯೇ ರಮಣೀಯಳಾಗಿರುತ್ತಿದ್ದಳು” ಎಂದು ಹೇಳಿ, ಫ್ಲೊರೈಜಲ್‌ನ ಕಡೆಗೆ ತಿರುಗಿ—“ಧೈರ್ಯಶಾಲಿಯಾದ ನಿನ್ನ ಜನಕನ ಸ್ನೇಹವನ್ನು ಕಳೆದುಕೊಂಡೆನು. ಈಗ ಆತನನ್ನು ಇನ್ನೊಂದುಸಾರಿ ನೋಡಬೇಕೆಂದು ನನ್ನ ಪ್ರಾಣಸಾಕ್ಷಿಯಾಗಿಯೂ ಬಯಸುತ್ತೇನೆ” ಎಂದನು. ದೊರೆಯು ಪೆರ್ಡಿಟಳ ವಿಷಯದಲ್ಲಿ ಅಷ್ಟೊಂದು ಲಕ್ಷ್ಯವಿಟ್ಟು ಮಾತನಾಡುತ್ತಿದ್ದುದನ್ನೂ ಬಾಲ್ಯದಲ್ಲಿಯೇ ಗಂಡಾಂತರಕ್ಕೆ ಗುರಿಮಾಡಲ್ಪಟ್ಟ ಒಬ್ಬ ಮಗಳನ್ನು ಅವನು ಕಳೆದುಕೊಂಡೆನೆಂಬುದನ್ನೂ ಕೇಳಿ, ವೃದ್ಧನಾದ ಕುರುಬನು ಕೂಸಾದ ಪೆರ್ಡಿಟಳು ತನಗೆ ಸಿಕ್ಕಿದ ಕಾಲ ಅದನ್ನು ಕೈಬಿಟ್ಟಿದ್ದ ರೀತಿ, ಆಭರಣಗಳು, ಅದರ ಉತ್ತಮವಾದ ವಂಶವನ್ನು ಸೂಚಿಸುವ ಇತರ ಚಿಹ್ನೆಗಳು ಇವುಗಳೊಂದಿಗೆ ಹೋಲಿಸ ತೊಡಗಿದನು. ಇವುಗಳಿಂದ ಆ ಪೆರ್ಡಿಟಳೂ ದೊರೆಯು ಕಳೆದುಕೊಂಡ ಮಗಳೂ ಇಬ್ಬರೂ ಒಂದೇ ಎಂಬದಾಗಿ ಹೇಳದಿರುವುದು ಅವನಿಗೆ ಅಸಾಧ್ಯವಾಯಿತು. ಆದುದರಿಂದ ಇವನು ಫ್ಲೊರೈಜಲ್, ಪೆರ್ಡಿಟ, ಕೆಮಿಲ್ಲೊ ನಂಬಿಗಸ್ಥಳಾದ ಪಾಲೀನ ಇವರೆದುರಿಗೆ ತನಗೆ ಆ ಮಗುವು ಸಿಕ್ಕಿದ ರೀತಿಯನ್ನೂ (ಆಂಟಿಗೋನಸನ ಮೇಲೆ ಕರಡಿಯು ಬಿದ್ದುದನ್ನು ತಾನು ನೋಡಿದ್ದುದರಿಂದ) ಆಂಟಿಗೋನಸನ ಮರಣದ ವಿಚಾರವಾದ ಸಂಗತಿಗಳನ್ನೂ ದೊರೆಗೆ ತಿಳಿಸಿ ಹೆರ್ಮೈಯೊನಿಯ ಮಗುವಿಗೆ

ಹೊದಿಸಿದ್ದ ಶ್ರೇಷ್ಠವಾದ ವಸ್ತ್ರವನ್ನೂ ಪೆರ್ಡಿಟಳಿನ ಕುತ್ತಿಗೆಗೆ ರಾಣಿಯು ಕಟ್ಟಿದ್ದ ಆಭರಣಗಳನ್ನೂ ಆತನಿಗೆ ತೋರಿಸಿ ತನ್ನಲ್ಲಿದ್ದ ಕಾಗದವನ್ನು ಕೊಟ್ಟನು. ಇದರಲ್ಲಿನ ಅಕ್ಷರಗಳನ್ನು ನೋಡಿ ಪಾಲೀನಳು ಅದನ್ನು ತನ್ನ ಗಂಡನ ಬರಹವೆಂದು ತಿಳಿದುಕೊಂಡಳು. ಪೆರ್ಡಿಟಳು ಲೆಯಾಂಟಿಸನ ಮಗಳೆಂಬುದು ನಿಸ್ಸಂಶಯವಾಯಿತು. ಆದರೆ ಪಾಲೀನಳ ಹೃದಯದಲ್ಲಿ ತನ್ನ ಇನಿಯನ ವಿಯೋಗವ್ಯಸನವೂ ಲೆಯಾಂಟಿಸನ ಮಗಳು ಪುನಃ ಸಿಕ್ಕಿ ಈತನಿಗೆ ಬಾಧ್ಯಸ್ಥಳುಂಟಾಗಿ ದೈವೋತ್ತರವು ನಿಜವಾದುದರ ಸಂತೋಷವೂ ಏಕಕಾಲದಲ್ಲಿ ವಿಜೃಂಭಿಸತೊಡಗಿದುವು. ಲೆಯಾಂಟಿಸನು ಪೆರ್ಡಿಟಳು ತನ್ನ ಮಗಳೆಂದರಿತಕೂಡಲೆ ಆನಂದಪರವಶನಾದರೂ ತನ್ನ ಮಗುವನ್ನು ನೋಡುವುದಕ್ಕಿಲ್ಲದೆ ರಾಣಿಯಾದ ಹೆರ್ಮ್ಯೊಯೊನಿ ಕಾಲಾಧೀನಳಾದಳೆಂಬ ವ್ಯಸನದಿಂದ—"ಓ! ನಿನ್ನ ತಾಯಿ! ನಿನ್ನ ತಾಯಿ!" ಎಂಬದಾಗಿ ರೋದಿಸಿ ರುದ್ಧಕಂಠನಾದನು. ಅರಸಿನ ಈ ಆನಂದ ಶೋಕ ದ್ವಂದ್ವಸಮಯದಲ್ಲಿಯೇ ಪಾಲೀನಳು ಲೆಯಾಂಟಿಸನನ್ನು ಕುರಿತು— "ಜೂಲಿಯೊ ರೋಮಾನೊ ಎಂಬ ಇಟಲಿಯ ಸಮರ್ಥನಾದ ಶಿಲ್ಪಿಯಿಂದ ಈಗ ತಾನೇ ಪೂರ್ತಿಗೊಂಡ ಬಹು ರಮ್ಯವಾದ ಒಂದು ಪ್ರತಿಮೆಯು ಇದೆ. ಅದು ರಾಣಿಯ ಸಂಪೂರ್ಣವಾದ ಹೋಲಿಕೆಯುಳ್ಳದಾಗಿದೆ. ನೀವು ನನ್ನ ಮನೆಗೆ ಬಂದು ಅದನ್ನು ನೋಡಿದರೆ ಅದು ಹೆರ್ಮ್ಯೊಯೊನಿಯೇ ಎಂದು ಖಂಡಿತವಾಗಿ ಭಾವಿಸುವಿರಿ" ಎಂದು ಹೇಳಿದಳು.

ದೊರೆಯು ತನ್ನ ಗತಿಸಿದ ರಾಣಿಯ ಹೋಲಿಕೆಯನ್ನು ನೋಡಬೇಕೆಂಬ ಕುತೂಹಲದಿಂದಲೂ ಪೆರ್ಡಿಟಳು ತಾನು ಎಂದಿಗೂ ನೋಡದ ತನ್ನ ತಾಯಿಯು ಹೇಗೆ ಇದ್ದಳೆಂಬುದನ್ನು ನೋಡಬೇಕೆಂಬ ಬಯಕೆಯಿಂದಲೂ ಪಾಲೀನಳ ಮನೆಗೆ ಹೊರಟರು.

ಪಾಲೀನಳು ಈ ಪ್ರಸಿದ್ಧವಾದ ಪ್ರತಿಮೆಯನ್ನು ಮರೆಮಾಡಿದ್ದ ಪರದೆಯನ್ನು ತೆಗೆಯುತ್ತಲೇ (ಅದು ಹೆರ್ಮ್ಯೊಯೊನಿಯನ್ನು ಸಂಪೂರ್ಣವಾಗಿ ಹೋಲುತ್ತಿದ್ದುದರಿಂದ) ಅದನ್ನು ನೋಡಿದ ಅರಸಿನ ದುಃಖವು ಪುನರಾರಂಭಿಸಿತು. ಅದುಕಾರಣ ಬಹಳ ಹೊತ್ತಿನವರೆಗೂ ಮಾತನಾಡುವುದಕ್ಕಾಗಲಿ ಚಲಿಸುವುದಕ್ಕಾಗಲಿ ಆತನಿಗೆ ಬಲವಿರಲಿಲ್ಲ.

ಪಾಲೀನ—"ಓ! ಪ್ರಭುವೇ, ಶಬ್ದಮಾಡಬೇಡಿರಿ. ಅದು ನಿಮಗೆ ಇನ್ನೂ ಅಧಿಕವಾದ ಆಶ್ಚರ್ಯವನ್ನು ತೋರಿಸುತ್ತದೆ. ಈ ಪ್ರತಿಮೆಯು ನಿಮ್ಮ ರಾಣಿಯಂತೆಯೇ ಇಲ್ಲವೇ?"

ದೊರೆ—“ಆಹಾ! ನಾನು ಮೊದಲು ಅವಳನ್ನು ವರಿಸಿದಾಗ ಆಕೆಯು ಇದೇ ಗಾಂಭೀರ್ಯದಿಂದ ಹೀಗೆಯೇ ನಿಂತುಕೊಳ್ಳುತ್ತಿದ್ದಳು ಆದರೂ ಓ! ಪಾಲೀನ, ರಾಣಿಯು ಈಗ ಈ ಪ್ರತಿಮೆಯು ಕಾಣುವಷ್ಟು ವಯಸ್ಕಳಾಗಿರಲಿಲ್ಲ.”

ಪಾಲೀನ—“ಈಗ ಆಕೆಯು ಜೀವವಂತಳಾಗಿದ್ದರೆ ಹೇಗೆ ಕಾಣುತ್ತಿದ್ದಳೋ ಹಾಗೆಯೇ ಇದನ್ನು ಸಜೀವವಾಗಿರುವಂತೆ ನಿರ್ಮಿಸಿದ ಶಿಲ್ಪಿಯ ಕೌಶಲವು ಎಷ್ಟು ಮಹತ್ತಾದುದು! ಆದರೆ ಪರದೆಯನ್ನು ತೆಗೆಯುವುದಕ್ಕೆ ಅನುಮತಿಯನ್ನು ಕೊಡಿ. ಈಗಲೇ ನೀವು ಅದು ಸಜೀವವಾಗಿರುವಂತೆ ಭಾವಿಸುವಿರಿ.”

ದೊರೆ “ಪರದೆಯನ್ನು ತೆಗೆಯಬೇಡ! ಅಯ್ಯೋ! ಹಾಳು ನನ್ನ ಜೀವಿತವೇ! ಓ! ಕೆಮಿಲ್ಲೊ, ಅದು ಶ್ವಾಸೋಚ್ಛ್ವಾಸಗಳನ್ನುಂಟಾಗಿರುವ ಹಾಗೆ ನಿನಗೆ ಕಾಣುವುದಿಲ್ಲವೆ? ಅದರ ಕಣ್ಣುಗಳು ದೃಷ್ಟಿಯನ್ನುಂಟಾಗಿರುವ ಹಾಗೆ ಕಾಣುತ್ತವೆ, ನೋಡು!

ಪಾಲೀನ—“ಅರಸನೇ, ನಾನು ಪರದೆಯನ್ನು ತೆಗೆಯಬೇಕು ಪ್ರತಿಮೆಯು ಸಜೀವವಾಗಿರುತ್ತದೆಂದು ನೀವೇ ಒಪ್ಪಿಕೊಳ್ಳುವಷ್ಟು ಮೈಮರೆತಿರುವಿರಿ.”

ಲೆಯೊಂಟೆಸ್—“ಓ ಪಾಲೀನ, ಅವಿಚ್ಛಿನ್ನವಾಗಿ ನಾನು ಹಾಗೆ ಯೋಚಿಸುವ ಹಾಗೆ ಮಾಡು! ಆದಾಗ್ಯೂ ಅದರಲ್ಲಿ ಅವಳ ಮುಖಭಾವವು ಕಂಡು ಬರುತ್ತದೆ. ಎಂಥಾ ಹರಿತವಾದ ಆಯುಧವು ತಾನೇ ಪ್ರಾಣವನ್ನು ಸೀಳೀತು! ಯಾರೂ ನನ್ನನ್ನು ಹಾಸ್ಯಮಾಡಬೇಡಿರಿ. ನಾನವಳನ್ನು ಮುತ್ತಿಡುವೆನು.”

ಪಾಲೀನ—“ಒಳ್ಳೆಯದು, ಪ್ರಭುವೇ! ಸೈರಿಸಿ. ಆಕೆಯ ಅಧರಗಳ ಮೇಲಿನ ಕೆಂಪುಬಣ್ಣವು ಒದ್ದೆಯಾಗಿದೆ. ನಿಮ್ಮ ತುಟಿಗಳಿಗೆ ಆ ಬಣ್ಣವು ಅಂಟಿಕೊಳ್ಳುವುದು. ನಾನು ಪರದೆಯನ್ನು ತೆಗೆಯಲೆ?” ಇಷ್ಟು ಹೊತ್ತೆಲ್ಲಾ ಮೊಣಕಾಲೂರಿ ಕುಳಿತುಕೊಂಡು ತನ್ನ ಅಸಮಾನಳಾದ ತಾಯಿಯ ಪ್ರತಿಮೆಯನ್ನು ಮೌನದಿಂದಲೂ ಆಶ್ಚರ್ಯದಿಂದಲೂ ನೋಡುತ್ತಿದ್ದ ಪೆರ್ಡಿಟಳು—“ನನ್ನ ಪ್ರಿಯಳಾದ ತಾಯಿಯನ್ನು ನೋಡುತ್ತಾ ಎಷ್ಟು ಹೊತ್ತಾದರೂ ಇಲ್ಲಿಯೇ ಇರುವೆನು” ಅಂದಳು.

ಪಾಲೀನ—“ಓ! ಲೆಯೊಂಟೆಸ್, ಈ ಅಪಾರವಾದ ಆನಂದವನ್ನು ಸೈರಿಸಿ ಪರದೆಯನ್ನು ತೆಗೆಯುವುದಕ್ಕೆ ಅನುಮತಿಕೊಡು; ಇಲ್ಲ

ವಾದರೆ ಇನ್ನೂ ಅಧಿಕವಾಗಿ ವಿಸ್ಮಯ ಪಡುವುದಕ್ಕೆ ಸಿದ್ಧನಾಗು. ಪ್ರತಿಮೆಯು ಚಲಿಸುವಂತೆಯೂ ಪೀಠದಿಂದಿಳಿದು ಬಂದು ನಿಮ್ಮ ಕೈಯನ್ನು ಹಿಡಿದುಕೊಳ್ಳುವಂತೆಯೂ ಮಾಡುವೆನು. ಆಗ ನಾನು ಮಾಂತ್ರಿಕಳೆಂದು ನೀವು ಯೋಚಿಸುವಿರಿ. ಆದರೆ ನಾನು ಅಂತವಳಲ್ಲ'' ಅಂದಳು.

ಆಶ್ಚರ್ಯಭರಿತನಾದ ದೊರೆಯು—'' ಓ ಪಾಲೀನ, ನೀನು ಅವಳು ಏನನ್ನು ಮಾಡುವಂತೆ ಅಪೇಕ್ಷಿಸುತ್ತಿಯೋ ಅದನ್ನೆಲ್ಲಾ ನೋಡಲು ನಾನು ಇಚ್ಛೆಯುಳ್ಳವನಾಗಿದ್ದೇನೆ. ಅವಳು ಮಾತಾಡುವಂತೆ ಮಾಡಿದರೆ ಅದನ್ನೆಲ್ಲಾ ಕೇಳಲು ಕುತೂಹಲ ಭರಿತನಾಗಿದ್ದೇನೆ. ಅವಳು ಮಾತಾಡುವಂತೆ ಮಾಡುವುದು, ಅವಳನ್ನು ಚಲಿಸುವಹಾಗೆ ಮಾಡುವಷ್ಟೇ ಸುಲಭವಾಗಿದೆ'' ಪಾಲೀನಳು ಇದಕ್ಕಾಗಿಯೇ ಸಿದ್ಧಮಾಡಿಕೊಂಡಿದ್ದ ಕೆಲವು ಗೀತಗಳನ್ನು ನಿಧಾನವಾಗಿಯೂ ಭಯಭಕ್ತಿಯಿಂದಲೂ ಹಾಡುವಂತಾಜ್ಞಾಪಿಸಿದಳು. ಆಗ ಪ್ರತಿಮೆಯು ತನ್ನ ಪೀಠದಿಂದಿಳಿದು ಬಂದು, ತನ್ನ ತೋಳುಗಳನ್ನು ಲೆಯಾಂಟಿಸನ ಕತ್ತಿನಮೇಲೆ ಹಾಕಿ ಮಾತನಾಡತೊಡಗಿ. ತನ್ನ ಗಂಡನ ಮೇಲೂ ಹೊಸದಾಗಿ ಸಿಕ್ಕಿದ ತನ್ನ ಮಗಳಾದ ಪೆರ್ಡಿಟಳಿನ ಮೇಲೂ ಅನುಗ್ರಹಗೊಳ್ಳುವಂತೆ ದೇವರನ್ನು ಪ್ರಾರ್ಥಿಸ ತೊಡಗಿದಳು. ಆ ಪ್ರತಿಮೆಯೇ ನಿಜವಾಗಿಯೂ ಹೆರ್ಮೈಯೊನಿಯಾಗಿದ್ದುದರಿಂದ ಲೆಯಾಂಟಿಸನ್ನು ತಬ್ಬಿಕೊಂಡುದೂ ಆತನನ್ನೂ ತನ್ನ ಮಗಳನ್ನೂ ಹರಿಸಿದುದೂ ಏನೂ ಆಶ್ಚರ್ಯವಲ್ಲ.

ಹೆರ್ಮೈಯೊನಿ ದೈವಾಧೀನಳಾದಳೆಂಬ ಸುಳ್ಳು ಸುದ್ದಿಯೊಂದೇ ರಾಣಿಯ ಪ್ರಾಣವನ್ನು ಉಳಿಸುವುದಕ್ಕೆ ತಕ್ಕುದಾದ ಉಪಾಯವಾಗಿತ್ತೆಂದು ತಾನು ಯೋಚಿಸಿ ಅದರಂತೆ ಮಾಡಿದನೆಂದು ಪಾಲೀನಳು ದೊರೆಗೆ ತಿಳಿಸಿದಳು. ಹೆರ್ಮೈಯೊನಿ ತನ್ನ ಮಗಳು ಸಿಕ್ಕುವ ವರೆಗೂ ತಾನು ಜೀವವಂತಳಾಗಿರುವೆನೆಂದು ದೊರೆಗೆ ತಿಳಿಸುವುದಕ್ಕೆ ಮನಸ್ಸಿಲ್ಲದೆ ಗುಟ್ಟಾಗಿ ವಾಸಿಸುತ್ತಿದ್ದಳು. ತನಗೆ ದೊರೆಯು ಮಾಡಿದ ಕೇಡುಕುಗಳನ್ನೆಲ್ಲಾ ಆಕೆಯು ಕ್ಷಮಿಸಿದ್ದರೂ ತನ್ನ ಮಗಳಿಗೆ ಅವನು ತೋರಿಸಿದ ಕ್ರೌರ್ಯವನ್ನು ಕ್ಷಮಿಸಲಾರದೆ ಹೋದಳು. ತನ್ನ ರಾಜ್ಞಿಯು ಜೀವವಂತಳಾಗಿರುವುದೂ ಕಳೆದುಕೊಂಡ ಮಗುವು ಸಿಕ್ಕಿದುದೂ ಬಹಳ ಕಾಲದಿಂದಲೂ ವ್ಯಸನಪಡುತ್ತಿದ್ದ ಲೆಯಾಂಟಿಸನಿಗೆ ಅಪರಿಮಿತವಾದ ಸಂತೋಷವನ್ನುಂಟುಮಾಡಿದುವು. ಆಗ ಎಲ್ಲೆಲ್ಲಿಯೂ ಶುಭೋಕ್ತಿಗಳು ಸಂತೋಷ

ಕರವಾದ ಮಾತುಗಳೇ ವಿನಾ ಮತ್ತೇನೂ ಕೇಳಬರುತ್ತಿರಲಿಲ್ಲ. ಈಗ ಹರ್ಷಿತರಾದ ತಂದೆತಾಯಿಗಳು ಫ್ಲೂರೈಜಲ್‌ನು ತಮ್ಮ ಮಗಳನ್ನು ಪ್ರೀತಿಸಿದುದಕ್ಕಾಗಿ ಆತನನ್ನು ವಂದಿಸಿ, ತಮ್ಮ ಮಗುವನ್ನು ಕಾಪಾಡಿದುದಕ್ಕಾಗಿ ವೃದ್ಧ ಕುರುಬನನ್ನು ಅನುಗ್ರಹಿಸಿದರು. ತಾವು ಭರವಸೆಯಿಟ್ಟು ಮಾಡಿದ ಕಾರ್ಯಗಳು ಕೊನೆಗೆ ಫಲದಾಯಕವಾಗಿ ಪರಿಣಮಿಸಿದುವೆಂದು ಕೆಮಿಲ್ಲೊ ಪಾಲೀನ ಇವರು ಬಹಳ ಹರ್ಷಿತರಾದರು.

ಈ ಆಶ್ಚರ್ಯಕರವಾದ ಅನಿರೀಕ್ಷ್ಯವಾದ ಸಂತೋಷವನ್ನು ಸಂಪೂರ್ತಿಗೊಳಿಸಲು ಲಿಯಾಂಟಿಸನು ಅರಮನೆಯನ್ನು ಪ್ರವೇಶಿಸಿದನು. ಕೆಮಿಲ್ಲೊವು ಸಿಸಿಲಿಗೆ ಹಿಂದಿರುಗಬೇಕೆಂದಪೇಕ್ಷಿಸುತ್ತಿದುದನ್ನು ಪೊಲಿಕ್ಸನೆಸನು ತಿಳಿದಿದ್ದನು. ತನ್ನ ಮಗನೂ ಕೆಮಿಲ್ಲೊವೂ ಕಾಣದಿರಲು, ಇವರಿಬ್ಬರೂ ಅಲ್ಲಿಗೆ ಹೋಗಿರಬಹುದೆಂದೂಹಿಸಿ, ಮಹಾತ್ವರೆಯಿಂದ ಅವರ ಹಿಂದೆ ಹೊರಟು ಲೆಯಾಂಟಿಸನು ಸಂತೋಷದಿಂದಿರುವ ಸಮಯದಲ್ಲಿಯೇ ಅಲ್ಲಿಗೆ ಬಂದನು.

ಪೊಲಿಕ್ಸನೆಸನು ಈ ಸರ್ವಸಾಮಾನ್ಯವಾದ ಸಂತೋಷದಲ್ಲಿ ಭಾಗಿಯಾದನು. ಆತನು ಲೆಯಾಂಟಿಸನು ತನ್ನ ಮೇಲೆ ಕ್ರೋಧಪಟ್ಟುದನ್ನು ಕ್ಷಮಿಸಿ, ಬಾಲ್ಯದಲ್ಲಿದ್ದಂತೆಯೇ ಇನ್ನೊಮ್ಮೆ ಸ್ನೇಹಿತರಾದರು.

ಆಗ ಪೊಲಿಕ್ಸನೆಸನು ತನ್ನ ಮಗನು ಪೆರ್ಡಿಟಳನ್ನು ಮದುವೆಯಾಗುವುದಕ್ಕೆ ಪ್ರತಿಬಂಧಕಮಾಡುತ್ತಾನೆನ್ನುವ ಭಯವೇನೂ ಇರಲಿಲ್ಲ. ಈಗ ಅವಳು ಕುರುಬ ಹುಡುಗಿಯಲ್ಲ, ಸಿಸಿಲಿಯ ಸಿಂಹಾಸನಕ್ಕೂ ಕಿರೀಟಕ್ಕೂ ಬಾಧ್ಯಸ್ಥಳು.

ಈ ರೀತಿಯಾಗಿ ಬಹುಕಾಲದಿಂದಲೂ ದುಃಖವನ್ನು ಅನುಭವಿಸುತ್ತಿದ್ದ ಹೆರ್ಮೈಯೊನಿ ತನ್ನ ಸಹನೆಯೇ ಮೊದಲಾದ ಗುಣಗಳಿಗಾಗಿ ಬಹುಮಾನಿತಳಾದಳು. ಆ ಶ್ರೇಷ್ಠಳಾದ ಹೆಂಗಸು ತನ್ನ ಗಂಡನಾದ ಲೆಯಾಂಟಿಸನೊಡನೆಯೂ ಮಗಳಾದ ಪೆರ್ಡಿಟಳೊಡನೆಯೂ ಸತೀಶಿರೋಮಣಿಯಾಗಿ ಉತ್ತಮವಾದ ಮಾತೆಯಾಗಿ ಚಿರಕಾಲ ಸುಖದಿಂದಿದ್ದಳು.

## VII. THE TEMPEST

## ೭. ಬಿರುಗಾಳಿಯು

ಒಂದಾನೊಂದು ಸಮುದ್ರದಲ್ಲಿ ಒಂದು ದ್ವೀಪವಿತ್ತು. ಅದರಲ್ಲಿ ಪ್ರಾಸ್ಪೆರೊ ಎಂಬ ಒಬ್ಬ ವೃದ್ಧನು, ಮಿರಾಂಡ ಎಂಬ ಬಹು ಸುಂದರಿಯಾದ ಅವನ ಮಗಳು ಇವರಿಬ್ಬರೇ ವಾಸವಾಗಿದ್ದರು. ಮಿರಾಂಡಳು ಬಲು ಚಿಕ್ಕ ವಯಸ್ಸಿನವಳಾಗಿದ್ದಾಗಲೇ ಈ ದ್ವೀಪಕ್ಕೆ ಬಂದಕಾರಣ ಇವಳಿಗೆ ತನ್ನ ತಂದೆಯ ಮುಖವನ್ನು ವಿನಾ ಇನ್ನಾವ ಮನುಷ್ಯನ ಮುಖವನ್ನು ನೋಡಿದುದೂ ಜ್ಞಾಪಕವಿರಲಿಲ್ಲ. ಇವರು ಅಲ್ಲೊಂದು ಗವಿಯಲ್ಲಿ ವಾಸಿಸುತ್ತಿದ್ದರು. ಆ ಗವಿಯಲ್ಲಿ ಅನೇಕ ಭಾಗಗಳಿದ್ದುವು. ಒಂದರಲ್ಲಿ ಪ್ರಾಸ್ಪೆರೊವು ತನ್ನ ಪುಸ್ತಕಗಳನ್ನಿಟ್ಟುಕೊಂಡು ವ್ಯಾಸಂಗಮಾಡುವನು. ಇವನ ವ್ಯಾಸಂಗಗಳಲ್ಲಿ ಮುಖ್ಯವಾದುದು ಆ ಕಾಲದ ವಿದ್ಯಾವಂತರಿಂದ ಬಹುಕಾಲ ವಿನಿಯೋಗಿಸಲ್ಪಡುತ್ತಿದ್ದ ಯಕ್ಷಿಣೀ ವಿದ್ಯೆಯಾಗಿತ್ತು. ಈ ಕಲೆಯ ಅಭ್ಯಾಸವು ಇವನಿಗೆ ಆಗ ಬಹು ಪ್ರಯೋಜನಕರವಾಗಿಯೂ ಇತ್ತು. ಏಕೆಂದರೆ ಇವರು ಆಕಸ್ಮಿಕವಾಗಿ ನಿಲ್ಲಬೇಕಾಗಿ ಬಂದ ಈ ದ್ವೀಪವು ಇವರು ಅಲ್ಲಿಗೆ ಬರುವುದಕ್ಕೆ ಸ್ವಲ್ಪಕಾಲದ ಹಿಂದೆ ಕುಲಾಧೀನಳಾಗಿದ್ದ ಸೈಕೊರಾಕ್ಸ್ ಎಂಬ ಮಾಟಗಾತಿಯಿಂದ ವೈಲಕ್ಷಣ್ಯವಾಗಿ ತೋರುವಂತೆ ಮಾಡಲ್ಪಟ್ಟಿತ್ತು. ಸೈಕೊರಾಕ್ಸಳ ಅಪ್ಪಣೆಯಂತೆ ನೀಚ ಕಾರ್ಯಗಳನ್ನು ಮಾಡಲೊಡಂಬಡದೆ ಹೋದುದರಿಂದ ಮಹಾವೃಕ್ಷಗಳಲ್ಲಿ ಬಂಧಿಸಲ್ಪಟ್ಟಿದ್ದ ಒಳ್ಳೆಯವರಾದ ಯಕ್ಷರನ್ನು ಇವನು ತನ್ನ ಇಂದ್ರಜಾಲವಿದ್ಯೆಯ ಬಲದಿಂದ ಬಿಡುಗಡೆಮಾಡಿದ್ದನು. ಅಲ್ಲಿಂದ ಈಚೆಗೆ ಅವರು ಇವನಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಇವರಲ್ಲಿ ಎರಿಯಲ್ ಎಂಬುವನು ಮುಖ್ಯನಾಗಿದ್ದನು.

ಎರಿಯಲನು ಸ್ವಾಭಾವತಃ ದುರ್ಬುದ್ಧಿಯುಳ್ಳವನಲ್ಲದಿದ್ದರೂ ಸೈಕೊರಾಕ್ಸಳ ಮೇಲಿನ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ ಅವಳ ಮಗನಾದ ಕೆಲಿಬಾನ್ ಎಂಬ ವಿಕಾರಿಯಾದ ಪ್ರಾಣಿಯನ್ನು ಹಿಂಸಿಸುವುದರಿಂದ ಸಂತುಷ್ಟನಾಗುತ್ತಿದ್ದನು. ಪ್ರಾಸ್ಪೆರೊವಿಗೆ ಕೆಲಿಬಾನನು ಒಂದು

ಸಣ್ಣದಾದ ಕಪಿಯಂತೆ ಕಾಣಬಂದನು. ಇವನು ಅವನನ್ನು ತನ್ನ ಗುಹಾ ಮಂದಿರಕ್ಕೆ ತೆಗೆದುಕೊಂಡು ಹೋಗಿ, ಮಾತನಾಡುವುದಕ್ಕೆ ಕಲಿಸಿದನು. ಕೆಲಿಬಾನನು ಮಾತೃಲಬ್ಧವಾದ ದುರ್ಗುಣಗಳಿಂದ ಒಳ್ಳೆಯದಾಗಿಯೂ ಉಪಯುಕ್ತವಾಗಿಯೂ ಇರುವ ಯಾವುದನ್ನೂ ಕಲಿಯಲು ಆಗದೇ ಹೋಗದಿದ್ದರೆ ಪ್ರಾಸ್ಪೆರೊವಿನಿಂದ ಅವನು ಮತ್ತಷ್ಟು ಉಪಯೋಗ ಪಡೆಯಬಹುದಾಗಿತ್ತು. ಆದುದರಿಂದ ಅವನು ಜೀತಗಾರನಂತೆ ಅಡವಿಯಿಂದ ಸೌದೆ ತರುವುದೇ ಮೊದಲಾದ ಅನೇಕ ಕಠಿಣೋದ್ಯೋಗಗಳಲ್ಲಿ ನಿಯಮಿಸಲ್ಪಟ್ಟನು. ಅವನಿಂದ ಬಲಾತ್ಕಾರವಾಗಿ ಕೆಲಸಮಾಡಿಸಲು ಎರಿಯಲನು ಅಧಿಕಾರವನ್ನು ಹೊಂದಿದ್ದನು. ಕೆಲಿಬಾನನು ಕೆಲಸಗಳಲ್ಲಿ ಅಶ್ರದ್ಧೆಯನ್ನು ವಹಿಸಿದಾಗ ಪ್ರಾಸ್ಪೆರೊವಿಗಲ್ಲದೆ ಉಳಿದವರಿಗೆ ಅಗೋಚರನಾಗಿದ್ದ ಎರಿಯಲನು ನಿಶ್ಶಬ್ದವಾಗಿ ಬಂದು ಅವನನ್ನು ಚಿಗುಟಿ, ಕೆಸರಿನಲ್ಲಿ ಉರುಳಿಸಿ, ಮಂಗನ ರೂಪದಿಂದ ಅವನನ್ನು ಅಣಕಿಸುತ್ತಿದ್ದನು. ಬಳಿಕ ಬಲುಬೇಗನೆ ಮುಳ್ಳುಹಂದಿಯಾಗಿ ಕೆಲಿಬಾನನ ದಾರಿಗಡ್ಡವಾಗಿ ನಿಂತು ತನ್ನ ಬರಿಗಾಲನ್ನು ಅದು ನೋಯಿಸಿಬಿಡಬಹುದೋ ಯೆನ್ನುವಂತೆ ಅವನನ್ನು ಭಯ ಪಡಿಸುವುದೇ ಮೊದಲಾದ ನಾನಾ ಹಿಂಸೆಗಳನ್ನು ಕೊಡುತ್ತಿದ್ದನು.

ಈ ಯಕ್ಷರಾಕ್ಷಸರನ್ನು ತನ್ನ ಆಜ್ಞೆಗೆ ಒಳಪಡಿಸಿಕೊಂಡಿದುದರಿಂದ ಪ್ರಾಸ್ಪೆರೊವು ಗಾಳಿಯನ್ನೂ ಸಮುದ್ರವನ್ನೂ ಆಜ್ಞೆಮಾಡುವಷ್ಟು ಸಾಮರ್ಥ್ಯವುಳ್ಳವನಾಗಿದ್ದನು. ಇವನು ತನ್ನ ಆಜ್ಞೆಯಂತೆ ಸಾಗರದಲ್ಲಿ ಅಲ್ಲೋಲಕಲ್ಲೋಲವಾಗಿ ತರಂಗಗಳುಂಟಾಗಲು ಅದರ ಮಧ್ಯದಲ್ಲಿ ಸಿಕ್ಕಿಕೊಂಡು ನುಂಗಿಬಿಡುವಂತೆ ಏಳುವ ತರಂಗಗಳಿಂದ ಭೀತಿಯನ್ನು ಹೊಂದಿದ ಒಂದು ಮನೋಹರವಾದ ದೊಡ್ಡ ಹಡಗನ್ನು ಮಗಳಿಗೆ ತೋರಿಸಿ—"ಅದರ ತುಂಬಾ ನಮ್ಮಂತಿರುವ ಜೀವಿಗಳಿದ್ದಾರೆ" ಎಂದನು. ಇದನ್ನು ಕೇಳಿ ಮಗಳು—" ಓ! ಜನಕನೇ, ನಿನ್ನ ವಿದ್ಯಾ ಕೌಶಲ್ಯದಿಂದಲೇ ಇಂಥಾ ಭಯಂಕರವಾದ ಬಿರುಗಾಳಿಯುಂಟಾಗಿದ್ದರೂ ಅವರ ಮೇಲೆ ಕೃಪೆಯನ್ನು ವಹಿಸು. ನೋಡು! ಆ ಹಡಗು ಬಂಡೆಗೆ ಬಡಿದು ಚೂರುಚೂರಾಗುವುದು! ಅಯ್ಯೋ! ನಿರ್ಭಾಗ್ಯರಿರಾ! ಅವರೆಲ್ಲಾ ನಾಶವಾಗಿ ಹೋಗುವರಲ್ಲಾ! ನನಗೆ ಸಾಮರ್ಥ್ಯವಿದ್ದರೆ ಹಡಗು ಒಡೆದು ಅದರಲ್ಲಿರುವ ಪ್ರಾಣಿಗಳು ಪ್ರಾಣಬಿಡುವುದಕ್ಕೆ ಬದಲಾಗಿ ಸಮುದ್ರವೇ ಭೂಮಿಯಲ್ಲಿ ಇಳಿದುಹೋಗುವಂತೆ ಮಾಡುತ್ತಿದ್ದನು" ಎಂದಳು.

ಪ್ರಾಸ್ಪೆರೊ—“ ಕುವರಿಯೇ ! ಭ್ರಾಂತಳಾಗಬೇಡ. ಇದರಿಂದ ಕೇಡೇನೂ ಆಗಲಿಲ್ಲ. ಯಾರಿಗೂ ಸ್ವಲ್ಪವೂ ಬಾಧೆಯಾಗದಿರುವಂತೆಯೂ ಆಜ್ಞೆ ಮಾಡಿದ್ದೇನೆ. ಓ! ನನ್ನ ಮುದ್ದು ಮಗುವೇ, ನಾನು ಹೀಗೆ ಮಾಡಿದುದು ನಿನ್ನ ಶ್ರೇಯಸ್ಸಿಗೆಂದರಿ. ನೀನು ಯಾರು ? ಎಲ್ಲಿಂದ ಬಂದೆ ? ನನ್ನನ್ನು ನಿನ್ನ ಜನಕನೆಂಬ ತಿಳುವಳಿಕೆ ಹೊರತು ಇನ್ನೇನನ್ನೂ ಅರಿಯದೆ ಈ ಗವಿಯಲ್ಲಿ ವಾಸವಾಗಿರುವಿ. ನಾನು ಇಲ್ಲಿಗೆ ಬರುವುದಕ್ಕೆ ಮೊದಲು ನಡೆದ ಸಂಗತಿಗಳು ನಿನ್ನ ಜ್ಞಾಪಕದಲ್ಲಿವೆಯೇ ? ಬಹುಶಃ ಇರಲಾರವು ಆಗ ನಿನಗೆ ಇನ್ನೂ ಮೂರು ವರುಷಗಳೂ ತುಂಬಿರಲಿಲ್ಲ. ”

ಮಿರಾಂಡ—“ ತಂದೆಯೇ, ಜ್ಞಾಪಕವಿದೆ. ಆದರೆ ಒಂದು ಕನಸ್ಸಿನ ಜ್ಞಾಪಕದಂತಿರುವುದು. ನನ್ನನ್ನು ಒಂದು ತಡವೆ ನಾಲ್ಕೈದು ಮಂದಿ ಹೆಂಗಸರು ಉಪಚರಿಸುತ್ತಿರಲಿಲ್ಲವೇ ? ”

ಪ್ರಾಸ್ಪೆರೊ—“ ಮಗುವೆ, ದಿಟ. ಅಷ್ಟುಮಾತ್ರವೇ ಅಲ್ಲ. ಇನ್ನೂ ಹೆಚ್ಚಾಗಿಯೇ ಪರಿಚಾರಿಣಿಯರಿದ್ದರು. ಇದು ಹೇಗೆ ಇನ್ನೂ ನಿನ್ನ ಜ್ಞಾಪಕದಲ್ಲಿದೆ ! ನಿನಗೆ ಇನ್ನೇನಾದರೂ ಜ್ಞಾಪಕದಲ್ಲಿದೆಯೋ ? ”

ಮಿರಾಂಡ—“ ತಂದೆಯೇ, ಅಷ್ಟುಮಾತ್ರವೇ. ”

ಪ್ರಾಸ್ಪೆರೊ—“ ಮಿರಾಂಡ, ಹನ್ನೆರಡು ವರ್ಷಗಳ ಕೆಳಗೆ ನಾನು ಮೈಲಾನಿನ ಡ್ಯೂಕಾಗಿದ್ದೆನು. ನೀನು ರಾಜಕುಮಾರಿಯಾಗಿಯೂ ಯುವರಾಜ್ಞಿಯಾಗಿಯೂ ಇದ್ದೆ. ನನಗೆ ಆಂಟೊನಿಯೊ ಎಂಬೊಬ್ಬ ತಮ್ಮನಿದ್ದನು. ನಾನು ವಿಶ್ರಾಂತಿಯನ್ನೂ ವ್ಯಾಸಂಗದಲ್ಲಿ ವಿಶೇಷಾಸಕ್ತಿಯನ್ನೂ ಹೊಂದಿದುದರಿಂದ ವಿಶಿಷ್ಟವನ್ನೂ ಅವನ ಅಧೀನಮಾಡಿ, ರಾಜ್ಯದ ಆಡಳಿತವನ್ನು ಅವನ ಕೈಯಲ್ಲಿರಿಸಿದೆನು. ಆದರೆ ಅವನ ಅಸಹೋದರತ್ವದ ನೀಚಗುಣವು ಆಮೇಲೆ ತಿಳಿಯಿತು. ನಾನು ರಾಜಕೀಯ ಕಾರ್ಯಗಳನ್ನೆಲ್ಲಾ ಬಿಟ್ಟು, ಪುಸ್ತಕಗಳ ರಾಶಿಯಲ್ಲಿ ಮಗ್ನನಾಗಿ ಜ್ಞಾನ ಸಂಪಾದನೆಯಲ್ಲೇ ಕಾಲವನ್ನೆಲ್ಲಾ ಕಳೆಯುತ್ತಿದ್ದೆನು. ಹೀಗೆ ನನ್ನ ತಮ್ಮನಾದ ಆಂಟೊನಿಯೊ ನನ್ನ ಅಧಿಕಾರದಲ್ಲಿರುವಾಗ್ಗ ತಾನೇ ದಿಟವಾಗಿಯೂ ರಾಜನೆಂದು ತಿಳಿದುಕೊಂಡುಬಿಟ್ಟನು. ನನ್ನ ಪ್ರಜೆಗಳಲ್ಲಿ ಪರಿಚಯ ಮಾಡಿಕೊಳ್ಳುವುದಕ್ಕೆ ಅನುಕೂಲಿಸಿದ ಆ ಸಮಯವು ಅವನಿಗೆ ನನ್ನಿಂದ ರಾಜ್ಯವನ್ನು ಕಸುಕೊಳ್ಳಬೇಕೆಂಬ ಮಹದಹಂಕಾರದ

ದುರಾಶೆಯನ್ನು ಹುಟ್ಟಿಸಿ, ಅವನ ಆ ನೀಚವಾದ ಸ್ವಭಾವವನ್ನು ಪ್ರೇರಿಸಿತು. ಆವನು ತನ್ನಭೀಷ್ಟವನ್ನು ನನ್ನ ಹಗೆಯಾದ ಬಲಾಢ್ಯನಾದ ನೇಪಲ್ಸಿನ ಅರಸಿನ ಸಹಾಯದಿಂದ ಜಾಗ್ರತೆಯಾಗಿಯೇ ಪಡೆದು ಕೊಂಡನು.''

ಮಿರಾಂಡ—''ತಂದೆಯೇ, ಅವರು ಆ ಸಮಯದಲ್ಲಿ ನಮ್ಮ ನ್ನೇಕೆ ಕೊಲ್ಲಿಸಲಿಲ್ಲ?''

ಪ್ರಾಸ್ಪೆರೊ—''ಮಗುವೇ, ನನ್ನ ಪ್ರಜೆಗಳಿಗೆಲ್ಲಾ ನನ್ನಲ್ಲಿ ಅಮಿತ ವಾದ ಪ್ರೇಮವಿದುದರಿಂದ ಅವರು ಹಾಗೆ ಮಾಡಲು ಧೈರ್ಯವಿಲ್ಲದ ವರಾದರು. ಆಂಟೊನಿಯೊವು ನಮ್ಮನ್ನು ಒಂದು ಹಡಗಿಗೆ ಕರೆದು ಕೊಂಡು ಹೋಗಿ, ಸಮುದ್ರದಲ್ಲಿ ಸ್ವಲ್ಪ ದೂರ ಹೋದ ಒಡನೆಯೇ, ದೋಣಿ ನಡಿಸುವ ಹಲಗೆಗಳಾಗಲಿ, ಧ್ವಜವಾಗಲಿ, ಪಟವಾಗಲಿ; ಇಲ್ಲದೆ ಇರುವ ಒಂದು ಸಣ್ಣ ದೋಣಿಗೆ ನಮ್ಮನ್ನು ಬಲತ್ಕಾರವಾಗಿಳಿಸಿ, ನಾವು ನಾಶ ಹೊಂದುವೆವೆಂದು ಭಾವಿಸಿಕೊಂಡು ಹೋದನು. ಆದರೆ ನನ್ನಲ್ಲಿ ಬಹು ಭಕ್ತಿ ವಿಶ್ವಾಸಗಳುಳ್ಳ ನನ್ನ ಆಸ್ಥಾನದ ಶ್ರೀಮಂತನು ಗೋಪ್ಯ ವಾಗಿ ಆ ದೋಣಿಯಲ್ಲಿ ಆಹಾರ ವಸ್ತುಗಳನ್ನೂ ಕುಡಿಯುವುದಕ್ಕೆ ನೀರನ್ನೂ ವಸ್ತ್ರಗಳನ್ನೂ ನಾನು ರಾಜ್ಯಕ್ಕಿಂತಲೂ ಅಧಿಕವೆಂದರಿತಿರುವ ಕೆಲವು ಪುಸ್ತಕಗಳನ್ನೂ ಇಟ್ಟಿದ್ದನು.''

ಮಿರಾಂಡ—''ಜನಕನೇ, ಹಾಗಾದರೆ ನನ್ನಿಂದ ನಿನಗೆ ಎಷ್ಟು ತೊಂದರೆಯಾಗಿರಬೇಕು?''

ಪ್ರಾಸ್ಪೆರೊ ''ನನ್ನ ಮುದ್ದು ಮಗುವೇ, ಹಾಗಲ್ಲ; ನೀನೇ ನನ್ನ ಪ್ರಾಣವನ್ನು ರಕ್ಷಿಸಿದ ದೇವತೆ. ದೌರ್ಭಾಗ್ಯದ ದುಃಖವನ್ನು ತಡೆ ದುಕೊಳ್ಳುವಂತೆ ಮಾಡಿದುದು ನಿನ್ನ ನಿಷ್ಕಳಂಕವಾದ ಮಂದಹಾಸ. ನಮ್ಮ ಆಹಾರ ಸಾಮಗ್ರಿಗಳು ನಾವೀನಿರ್ಜನ ದ್ವೀಪಕ್ಕೆ ಬರುವವರೆಗೆ ಸಾಕಾದುವು. ಮಗುವೇ, ನನ್ನ ಮುಖ್ಯವಾದ ಆನಂದವು ನಿನಗೆ ವಿದ್ಯೆ ಯನ್ನು ಕಲಿಸತಕ್ಕುದಾಗಿತ್ತು. ತದನುಗುಣವಾಗಿ ನೀನು ನನ್ನ ಶಿಕ್ಷೆ ಯನ್ನು ಹೊಂದಿ ಬಹು ಫಲವನ್ನು ಹೊಂದಿರುವಿ.''

ಮಿರಾಂಡ—''ಜನಕನೇ, ನಿನಗೆ ದೇವರು ಶುಭವನ್ನುಂಟುಮಾ ಡಲಿ; ನೀನು ಈ ಪ್ರಚಂಡವಾದ ಮಾರುತವನ್ನು ಏತಕ್ಕಾಗಿ ಉಂಟು ಮಾಡಿದೆ? ದಯೆಮಾಡಿ ಹೇಳು.''

ಪ್ರಾಸ್ಪೆರೊ—"ಹಾಗಾದರೆ ಹೇಳುವೆನು; ಕೇಳು. ಈ ಬಿರುಗಾಳಿಯಿಂದ ನನ್ನ ಹಗೆಗಳಾದ ನೇಪಲ್ಸಿನ ಅರಸೂ ಕ್ರೂರಾತ್ಮನಾದ ನನ್ನ ತಮ್ಮನೂ ಈ ದ್ವೀಪದ ದಡಕ್ಕೆ ತಂದು ಹಾಕಲ್ಪಡುವರು" ಎಂದು ಹೇಳಿ, ತನ್ನ ಕೈಯಲ್ಲಿದ್ದ ಯಕ್ಷಿಣೀದಂಡದಿಂದ ಅವಳನ್ನು ಮೃದುವಾಗಿ ಸ್ಪರ್ಶಿಸಲು, ಆಕೆಯು ನಿದ್ರಾವಶಳಾದಳು. ಆಗತಾನೇ ಎರಿಯಲನು ಈ ಚಂಡಮಾರುತದ ವಿವರವನ್ನೂ ಆ ಹಡಗಿನಲ್ಲಿದ್ದವರನ್ನು ಏನು ಮಾಡಿರುವನೆಂಬುದನ್ನೂ ತಿಳಿಸುವುದಕ್ಕಾಗಿ ತನ್ನ ಸ್ವಾಮಿಯ ಸನ್ನಿಧಿಗೆ ಬಂದಿದ್ದನು. ಈ ಯಕ್ಷರು ಮಿರಾಂಡಳ ದೃಷ್ಟಿಗೆ ಅಗೋಚರವಾಗಿದುದರಿಂದ ಅವಳಿಗೆ ವಿಜನವಾಗಿ ಕಾಣುವೆಡೆಯಲ್ಲಿ ತಾನು ಮಾತನಾಡುತ್ತಿರುವುದನ್ನು ಅವಳು ಕೇಳುವುದು ಇವನಿಗೆ ಇಷ್ಟವಿರಲಿಲ್ಲ.

ಪ್ರಾಸ್ಪೆರೊ—"ಎಲೈ, ಧೀರನಾದ ಎರಿಯಲನೇ, ನೀನು ನಿನ್ನ ಕೆಲಸವನ್ನು ಹೇಗೆ ನಿರ್ವಾಹಮಾಡಿರುವಿ?" ಎಂದು ಕೇಳಿದನು ಅದಕ್ಕೆ ಅವನು ಬಿರುಗಾಳಿಯ ವಿಚಾರವನ್ನೂ ನಾವಿಕರ ಭೀತಿಯನ್ನೂ ಸಾಗರವಶರಾದವರಲ್ಲಿ ಅರಸು ಮಗನಾದ ಫರ್ಡಿನಾಂಡನು ಹೇಗೆ ಮೊದಲನೆಯವನಾದನೆಂಬುದನ್ನೂ ತನ್ನ ಮುದ್ದುಮಗನು ಸಾಗರದ ಪಾಲಾಗಿ ಮೃತನಾದನೆಂದು ಅವನ ತಂದೆಯು ಹೇಗೆ ಶೋಕಿಸಿದನೆಂಬುದನ್ನೂ ಸಂಕ್ಷೇಪವಾಗಿ ವಿವರಿಸಿ—"ಫರ್ಡಿನಾಂಡನು ಈ ದ್ವೀಪದ ಒಂದು ಭಾಗದಲ್ಲಿ ಕೈಗಳ ಮಧ್ಯದಲ್ಲಿ ತಲೆಯನ್ನಿಟ್ಟುಕೊಂಡು ಜನಕನು ಮೃತನಾದನೆಂದು ನಿಷ್ಕರ್ಷಿಸಿ ಚಿಂತಾಕ್ರಾಂತನಾಗಿದ್ದಾನೆ" ಎಂದನು.

ಪ್ರಾಸ್ಪೆರೊ—"ಭಲ! ನನ್ನ ಮನೋಹರನಾದ ಎರಿಯಲನೇ, ಆ ರಾಜಕುಮಾರನನ್ನು ಇಲ್ಲಿಗೆ ಕರೆದುಕೊಂಡು ಬಾ. ಅವನನ್ನು ನನ್ನ ಕುವರಿಯು ನೋಡಲಿ. ಅರಸನೆಲ್ಲಿದ್ದಾನೆ? ನನ್ನ ತಮ್ಮನೆಲ್ಲಿದ್ದಾನೆ?"

ಎರಿಯಲ್—"ಫರ್ಡಿನಾಂಡನು ಸಾಗರದ ಪಾಲಾಗಿ ಮೃತನಾದುದನ್ನು ತಾವು ನೋಡಿದಂತೆ ಯೋಚಿಸುತ್ತ ನಿರಾಶರಾದಾಗ್ಯೂ ಅವನನ್ನು ಹುಡುಕಬೇಕೆಂದು ಅವರಿಗೆ ಭ್ರಮೆಯನ್ನುಂಟುಮಾಡಿ, ಅಲೆದಾಡಿಸುತ್ತಿದ್ದೇನೆ. ಅವರು ಒಬ್ಬರಿಗೊಬ್ಬರು ಸಿಕ್ಕದೇ ಹೋದರೂ ಪ್ರತಿಯೊಬ್ಬನೂ ಬದುಕಿರತಕ್ಕವನು ತಾನೊಬ್ಬನೇ ಎಂದು ತಿಳಿದುಕೊಂಡಿದ್ದರೂ ಹಡಗಿನಲ್ಲಿದ್ದವರಲ್ಲಿ ಯಾರೂ ಹೋಗಿಲ್ಲ ಅವರ ಹಡಗು ಅವರಿಗೆ ಅಗೋಚರವಾಗಿ ತೀರದಲ್ಲಿ ಸುರಕ್ಷಿತವಾಗಿಯೇ ಇದೆ"

ಪ್ರಾಸ್ಪೆರೊ—“ಎರಿಯಲನೇ, ನಿನ್ನ ಕೆಲಸವನ್ನು ಸ್ವಾಮಿಭಕ್ತಿಯಿಂದ ಮಾಡಿರುವಿ. ಆದರೂ ಮುಂದೆ ಇನ್ನೂ ಮಹತ್ತಾದ ಕಾರ್ಯವಿದೆ”

ಎರಿಯಲ್—“ಇನ್ನೂ ಹೆಚ್ಚಾಗಿಯೆ ಕೆಲಸವಿದೆಯೇ? ಸ್ವಾಮಿಯೇ, ತಮಗೆ ವಿಜ್ಞಾಪಿಸುತ್ತೇನೆ. ನನಗೆ ಸ್ವಾತಂತ್ರ್ಯವನ್ನು ಕೊಡುವುದಾಗಿ ತಾವು ವಾಗ್ದಾನಮಾಡಿದ್ದಿರಿ ನಾನು ತಮ್ಮನ್ನು ಬಹು ಶ್ರದ್ಧೆಯಿಂದ ಸೇವಿಸಿದ್ದೇನೆ. ಅನೃತವಾಡಿಲ್ಲ. ತಪ್ಪುಮಾಡಿಲ್ಲ. ತಮ್ಮನ್ನು ಅಸಂತೋಷದಿಂದ ಸೇವಿಸಿಲ್ಲ.”

ಪ್ರಾಸ್ಪೆರೊ—“ಓ! ಹೋ! ನಿನ್ನನ್ನು ಎಷ್ಟು ಭಯಂಕರವಾದ ವೇದನೆಗಳಿಂದ ಬಿಡುಗಡೆಮಾಡಿದ್ದೇನೆ. ಸ್ಮರಿಸಿಕೊ. ವಯಸ್ಸಿನಿಂದಲೂ ನೀಚತನದಿಂದಲೂ ಇಮ್ಮಡಿಯಾಗಿ ಬಾಗಿಹೋಗಿದ್ದ ಸೈಕೊರಾಕ್ಸ್ ಮಾಟಗಾತಿಯನ್ನು ಮರೆತೆಯೋ? ಅವಳೆಲ್ಲಿ ಹುಟ್ಟಿದುದು ಹೇಳು.”

ಎರಿಯಲ್—“ಸ್ವಾಮಿಾ, ಆಲ್‌ಜಿಯರ್ಸ್‌ನಲ್ಲಿ ಹುಟ್ಟಿದವಳು.”

ಪ್ರಾಸ್ಪೆರೊ—“ಹಾಗೆಯೇ, ನೀನು ಬಹುಶಃ ಮರೆತಂತಿರುವ ನಿನ್ನ ಹಿಂದಿನ ಸ್ಥಿತಿಯನ್ನ ನಿನಗೆ ಜ್ಞಾಪಕಕ್ಕೆ ತರಬೇಕಾಗಿದೆ. ಆ ನೀಚ ಮಾಟಗಾತಿಯಾದ ಸೈಕೊರಾಕ್ಸಳು ಮನುಷ್ಯರು ಕೇಳುವುದಕ್ಕೂ ಕೂಡ ಆಗದಷ್ಟು ಭಯಂಕರವಾದ ತನ್ನ ಶೂನ್ಯಗಳಿಗಾಗಿ ಆಲ್‌ಜಿಯರ್ಸ್‌ನಿಂದ ಗಡೀಪಾರು ಮಾಡಲ್ಪಟ್ಟು ಈ ದ್ವೀಪದಲ್ಲಿ ತಂದು ಬಿಡಲ್ಪಟ್ಟಳು. ನೀನು ಅವಳ ನೀಚಾಜ್ಞೆಗಳನ್ನು ನಡಿಸಲಾರದಂಥ ಮೃದುಗುಣವುಳ್ಳ ಯಕ್ಷನಾದುದರಿಂದಲೇ ಅವಳು ನಿನ್ನನ್ನು ಒಂದು ಮರದಲ್ಲಿ ಬಂಧಿಸಿದಳು. ನೀನು ಅಲ್ಲಿ ಗೋಳಿಡುತ್ತಿರುವಾಗ್ಗೆ ನಾನು ನಿನ್ನನ್ನು ನೋಡಿದೆನು.”

ಎರಿಯಲನು ಕೃತಘ್ನತೆಯ ಲಜ್ಜಾಭಾರದಿಂದ ಕೂಡಿ—“ಸ್ವಾಮಿಾ, ಕ್ಷಮಿಸಿರಿ. ತಮ್ಮ ಆಜ್ಞೆಗಳನ್ನು ಶಿರಸಾವಹಿಸುತ್ತೇನೆ”

ಪ್ರಾಸ್ಪೆರೊ—“ಹಾಗೆಯೇ ಮಾಡು. ನಿನಗೆ ಸ್ವಾತಂತ್ರ್ಯವನ್ನು ಕೊಡುತ್ತೇನೆ” ಎಂದು ಹೇಳಿ, ಮುಂದೆ ಮಾಡಬೇಕಾದುವುಗಳನ್ನು ತಿಳಿಸಿದನು. ಎರಿಯಲನು ಮೊದಲು ಫರ್ಡಿನಾಂಡನಿದ್ದ ಸ್ಥಳಕ್ಕೆ ಹೋಗಿ ನೋಡಲು ಅವನು ದುಃಖಿತನಾಗಿ ಹಿಂದಿನಂತೆಯೇ ಕುಳಿತ್ತಿದ್ದನು. ಇವನು ಅವನನ್ನು ನೋಡಿ—“ಎಲೈ! ಮಹಾಶಯನೇ, ನಿನ್ನನ್ನು ಇಲ್ಲಿಂದ

ಮಿರಾಂಡಳ ಬಳಿಗೆ ಕರೆದುಕೊಂಡು ಹೋಗುವೆನು. ಆಕೆಯು ನಿನ್ನ ರಮಣೀಯವಾದ ರೂಪವನ್ನು ನೋಡಬೇಕೆಂದು ಬಯಸಿದಂತೆ ನನಗೆ ತೋರುವುದು. ದಯೆಮಾಡಿ ನನ್ನ ಹಿಂದೆ ಬಾ'' ಹೀಗೆಂದು, ಈ ರೀತಿ ಯಾಗಿ ಹಾಡಲುಪಕ್ರಮಿಸಿದನು.

ನೀರಧಿಯ ತಲದಲ್ಲಿ ನಿನ್ನಯ |
ಏರಪಿತ ಬಿದ್ದಿಹ ತದಸ್ಥಿಯ |
ಭಾರಪವಳಗಳಾದವಕ್ಷಿಯು ದಿವ್ಯಮೌಕ್ತಿಕವು ||
ಸಾರವಲ್ಲದ ಹೃದಯವಸ್ತುಗ |
ಳೇರಿದುವು ಸಾಗರದ ಲಕ್ಷ್ಮಿಗೆ |
ಸಾರಿದಪವವು ನೂತನದ ವೈಭವದ ಬೆಳಸನ್ನು ||೧|
ಉರಗತರುಣೀ ಜನರು |
ಬಿರುಸಿಂಪೊಡೆಯುತಿಹ ಘಂಟಾನಿನಾದವು |
ಚರಮಪದ್ಯವನುಲಿದು ಪಾಡುತ್ತಿಹುದು ಸಂತತವು ||
ಪಿರಿದುರವವನು ಕೇಳುತಿರುವೆನು |
ಕರಗುವುದು ಕಿವಿಯೊಳಗೆ ನಾನೀ |
ಪರಿಘಣತ್ಕಾರಪನು ಲಾಲಿಸು ಸುತ್ತುಮುತ್ತುವುದಂ ||೨||

ತನ್ನ ಗತಿಸಿಹೋದ ತಂದೆಯ ವಿಚಾರವಾದ ಈ ಅಪೂರ್ವವಾರ್ತೆ ಯು ಅವನನ್ನು ಯೋಚನೆಯಿಂದ ಹುರಿದುಂಬಿಸಿತು. ಅವನು ಆಶ್ಚರ್ಯ ದಿಂದ ಕೂಡಿದವನಾಗಿ ಏರಿಯಲನ ಶಬ್ದವನ್ನೇ ಹಿಡಿದು, ಒಂದು ಮಹಾ ವೃಕ್ಷದ ಬುಡದಲ್ಲಿ ಕುಳಿತ್ತಿದ್ದ ಮಿರಾಂಡ ಪ್ರಾಸ್ಪೆರೊಗಳ ಬಳಿ ಗೆ ಬಂದನು. ಆದರೆ ಮಿರಾಂಡಳಾದರೋ ತನ್ನ ತಂದೆಯಲ್ಲದೆ ಈ ವರೆಗೂ ಯಾವ ಮನುಷ್ಯನನ್ನೂ ನೋಡಿಯೇ ಇರಲಿಲ್ಲ.

ಪ್ರಾಸ್ಪೆರೊ ''ಮಿರಾಂಡಾ, ನೀನು ಏನನ್ನು ನೋಡುತ್ತಿರುವಿ? ಹೇಳು.''

ಮಿರಾಂಡ ಅತ್ಯಾಶ್ಚರ್ಯಭರಿತಳಾಗಿ—''ತಂದೆಯೇ, ದಿಟವಾಗಿ ಯೂ ಅವನು ಯಕ್ಷನಲ್ಲವೇ? ಜನಕನೇ, ಅವನು ಹೇಗಿದ್ದಾನೆ! ಸತ್ಯ ವಾಗಿಯೂ ಅದು ಮನೋಹರವಾದ ಮೂರ್ತಿಯಲ್ಲವೆ!''

ಪ್ರಾಸ್ಪೆರೊ—''ಮಗುವೇ, ಅಲ್ಲ. ಅವನು ಎಲ್ಲಾ ಭಾಗಗಳ ಲ್ಲೂ ನಮ್ಮಂತೆಯೇ ಇದ್ದಾನೆ. ಈ ಯುವಕನು ಹಡಗಿನಲ್ಲಿದ್ದವನು.

ಇವನು ದುಃಖದಿಂದ ಖಿನ್ನನಾಗಿರದಿದ್ದರೆ, ಅತ್ಯಂತ ಸೌಂದರ್ಯಶಾಲಿಯೆಂದು ನೀನೇ ಹೇಳುತಿದ್ದೆ. ತನ್ನ ಒಡೆಗಾರರನ್ನೆಲ್ಲಾ ಕಳೆದುಕೊಂಡು ಅವರನ್ನು ಹುಡುಕಲು ಅಲೆದಾಡುತ್ತಿದ್ದಾನೆ.''

ಮನುಷ್ಯರೆಲ್ಲರಿಗೂ ಮಂದವಾದ ಮುಖವೂ ನರೆಗೂದಲೂ ಇರುತ್ತವೆಂದು ತಿಳಿದಿದ್ದ ಮಿರಾಂಡಳು ಈ ಸುಂದರನಾದ ರಾಜಕುವರನನ್ನು ನೋಡುತ್ತಲೇ ವಿಕಸಿತ ಹೃದಯಳಾದಳು ಇಂಥಾ ನಿರ್ಜನ ಪ್ರದೇಶದಲ್ಲಿ ಆಶ್ಚರ್ಯವಾದ ಧ್ವನಿಯು ಕೇಳಬಂದಿರುವುದರಿಂದ ಅದ್ಭುತಗಳಲ್ಲದೆ ಇನ್ನೇನೂ ಇರಲಾರದೆಂದೆಂದುಕೊಂಡಿದ್ದ ಫರ್ಡಿನಾಂಡನಾದರೋ ತಾನು ವೈಲಕ್ಷಣ್ಯವಾಗಿ ಕಾಣುವಂತೆ ಮಾಡಲ್ಪಟ್ಟಿರುವ ಒಂದು ದ್ವೀಪದಲ್ಲಿರುವಂತೆಯೂ ಆ ದ್ವೀಪಕ್ಕೆ ಮಿರಾಂಡಳು ಅಭಿಮಾನ ದೇವತೆಯಾಗಿರುವಂತೆಯೂ ತಿಳಿದುಕೊಂಡು, ಆಕೆಯನ್ನು ದೇವತೆಯೆಂದು ಸಂಬೋಧಿಸ ತೊಡಗಿದನು. ಇದಕ್ಕೆ ಆಕೆಯು ತಾನು ದೇವತೆಯಲ್ಲವೆಂದೂ ಒಬ್ಬ ಸಾಮಾನ್ಯಳಾದ ಕನ್ನಿಕೆಯೆಂದೂ ಗಂಭೀರವಾಗಿ ಉತ್ತರಕೊಟ್ಟು, ತನ್ನ ವೃತ್ತಾಂತವನ್ನು ತಿಳಿಸಲುದ್ಯುಕ್ತಳಾಗಲು ಪ್ರಾಸ್ಪೆರೊವು ಅಡ್ಡಿಮಾಡಿದನು. ಇವರಿಬ್ಬರೂ ಪ್ರಥಮ ಸಂದರ್ಶನದಿಂದಲೇ ಪರಸ್ಪರ ವಿಶ್ವಾಸವುಳ್ಳವರಾಗಿರುವುದನ್ನು ನೋಡಿ, ಒಬ್ಬರನ್ನೊಬ್ಬರು ಶ್ಲಾಘಿಸುತ್ತಿರುವುದಕ್ಕಾಗಿ ಅವನು ಬಹು ಸಂತುಷ್ಟನಾದನು ಆದರೆ ಫರ್ಡಿನಾಂಡನ ಸ್ಥೈರ್ಯವನ್ನು ಪರೀಕ್ಷಿಸುವುದಕ್ಕಾಗಿ ಇವರಿಗೆ ಸ್ವಲ್ಪಮಟ್ಟಿಗೆ ತೊಂದರೆಗಳನ್ನು ನೀಡಬೇಕೆಂದು ಸಂಕಲ್ಪಮಾಡಿಕೊಂಡು—''ಎಲೈ ! ಈ ದ್ವೀಪಕ್ಕೆ ಸ್ವಾಮಿಯಾದ ನನ್ನಿಂದ ನೀನು ಇದನ್ನು ಕಸುಕೊಳ್ಳಬೇಕೆಂದು ಒಬ್ಬ ಬೇಹುಗಾರನಾಗಿ ಇಲ್ಲಿಗೆ ಬಂದಿರುವಿ. ನಿನ್ನ ಕಾಲುತಲೆಗಳನ್ನು ಸೇರಿಸಿ ಕಟ್ಟಿಹಾಕುತ್ತೇನೆ. ನೀನು ಒಣಗಿದ ಗಡ್ಡೆ, ಗೆಣಸು, ಚಿಪ್ಪಿನಮೀನು, ಓಕ್ ಹಣ್ಣಿನಹೊಟ್ಟುಗಳನ್ನು ತಿಂದು, ಸಮುದ್ರದ ನೀರನ್ನು ಕುಡಿಯಬೇಕು ''ಎಂದನು.

ಫರ್ಡಿನಾಂಡ್—'' ನಿನಗಿಂತಲೂ ಬಹು ಬಲಶಾಲಿಯಾದ ಇನ್ನೊಬ್ಬ ಹಗೆಯನ್ನು ಕಾಣುವವರೆಗೆ ನಿನ್ನಿಂದ ಇಂಥಾ ಉಪಕಾರಗಳನ್ನು ಹೊಂದದಿರುವಂತೆ ಪ್ರಯತ್ನಿಸುವೆನು '' ಎಂದು ಹೇಳಿ ತನ್ನ ಕತ್ತಿಯನ್ನು ಹಿರಿದನು. ಆದರೆ ಪ್ರಾಸ್ಪೆರೊವು ತನ್ನ ಯಕ್ಷಿಣೀ ದಂಡದಿಂದ ಅವನು ನಿಂತಸ್ಥಳದಲ್ಲಿ ಅವನನ್ನು ಸ್ತಂಭೀಭೂತನನ್ನಾಗಿ ಮಾಡಿದುದರಿಂದ ಅಲುಗಾಡುವುದಕ್ಕೂ ಅಸಮರ್ಥನಾದನು.

ಮಿರಾಂಡ ತಂದೆಯನ್ನು ತಬ್ಬಿಕೊಂಡು—"ಜನಕನೇ, ನೀನೇಕೆ ಇಷ್ಟು ನಿರ್ದಯನಾಗಿದ್ದೀಯೆ ? ಕೃಪೆಮಾಡು. ಇವನ ವಿಷಯದಲ್ಲಿ ನಾನು ಹೊಣೆಯಾಗಿರುತ್ತೇನೆ. ನಾನು ಈವರೆಗೂ ನೋಡಿದ ಮಾನವರಲ್ಲಿ ಇವನೇ ಎರಡನೆಯವನು. ಸತ್ಯವಂತನಂತೆ ಕಾಣುತ್ತಾನೆ" ಎಂದಳು.

ಪ್ರಾಸ್ಪೆರೊ—"ಎಲೈ ! ಹುಡುಗಿಯೇ, ಬಾಯಿಮುಚ್ಚು. ಇನ್ನೊಂದು ಮಾತನಾಡಿದರೆ ನಿನ್ನನ್ನು ದಂಡಿಸಬೇಕಾಗುವುದು. ನಟನೆ ತೋರುವವನಿಗಾಗಿ ನೀನು ಹೊಣೆಯಾಗ ವಿಯಾ ? ನೀನು ಇವನನ್ನೂ ಕೆಲಿಬಾನನ್ನೂ ಮಾತ್ರವೇ ನೋಡಿರುವಿಯಾದುದರಿಂದ ಇವನಿಗಿಂತ ರೂಪವಂತರು ಯಾರೂ ಇಲ್ಲವೆಂದು ತಿಳಿದಿರುವಿ. ಹುಚ್ಚು ಹುಡುಗಿಯೇ, ಕೆಲಿಬಾನನಿಗಿಂತಲೂ ಇವನು ಸೌಂದರ್ಯಶಾಲಿಯಾಗಿರುವಂತೆ ಇನ್ನೂ ಎಷ್ಟೋ ಜನರು ಇವನಿಗಿಂತಲೂ ಸೌಂದರ್ಯವಂತರಾಗಿದ್ದಾರೆ" ಎಂದು ತನ್ನ ಮಗಳ ಸ್ಥೈರ್ಯಪರೀಕ್ಷಾರ್ಥವಾಗಿ ಹೇಳಲು, ಮಿರಾಂಡ—"ತಂದೆಯೇ, ನನ್ನ ಪ್ರೇಮವು ಒಹು ಸಾಧುವಾದುದು. ಇವನಿಗಿಂತಲೂ ಅತಿ ಸೌಂದರ್ಯಶಾಲಿಯನ್ನು ನೋಡುವುದಕ್ಕೆ ನನಗೆ ಅಭಿಲಾಷೆಯೇ ಇಲ್ಲ."

ಪ್ರಾಸ್ಪೆರೊ—"ಎಲೈ, ಯುವಕನೇ, ಬಾ ; ಅವಿಧೇಯನಾಗಿರಲು ನಿನಗೆ ಸಾಮರ್ಥ್ಯವೇ ಇಲ್ಲ."

ಫರ್ಡಿನಾಂಡ್—"ಸತ್ಯವಾಗಿಯೂ ಇಲ್ಲ" ಎಂದು ಹೇಳಿ ತನ್ನ ಸಾಮರ್ಥ್ಯವು ಹೋಗಿಬಿಟ್ಟಿರುವುದು ಯಕ್ಷಿಣೀಯಿಂದಲೇ ಎಂದು ಅರಿಯದ, ಪ್ರಾಸ್ಪೆರೊವನ್ನು ತಾನು ಹೀಗೆ ಹಿಂಬಾಲಿಸಿಕೊಂಡು ಹೋಗುತ್ತಿರುವದೇತಕ್ಕೆಂದು ಅತ್ಯಾಶ್ಚರ್ಯಭರಿತನಾಗಿ ಅವನ ಹಿಂದೆ ಗವಿಗೆ ಹೋಗುತ್ತ, ದೃಷ್ಟಿಪಥಕ್ಕೆ ಮರೆಯಾಗುವವರೆಗೂ ಮಿರಾಂಡಳನ್ನು ನೋಡುತ್ತ, ತನ್ನಲ್ಲಿ ತಾನೇ—"ನಾನು ಸ್ವಪ್ನಾವಸ್ಥೆಯಲ್ಲಿರುವಾಗ್ಗೆ ಹೇಗೋ ಹಾಗೆ ನನ್ನ ಸಾಮರ್ಥ್ಯವೇ ತಗ್ಗಿಸಲ್ಪಟ್ಟಿದೆ. ಆದರೆ ನನ್ನ ಬಂಧನದಲ್ಲಿಯೂ ಈ ಸುಂದರೀ ಮಣಿಯನ್ನು ಒಂದೆರಡು ತಡವೆ ನೋಡಲನುಕೂಲಿಸಿದರೆ ಈ ಮನುಷ್ಯನು ಹುಟ್ಟಿಸುವ ಭೀತಿಯೂ ನಾನು ಅನುಭವಿಸುವ ದೌರ್ಬಲ್ಯವೂ ಲಘುವಾದ ಕಷ್ಟಗಳೆಂದೇ ಭಾವಿಸುತ್ತೇನೆ" ಎಂದುಕೊಂಡನು. ಪ್ರಾಸ್ಪೆರೊವು ಫರ್ಡಿನಾಂಡನನ್ನು ಬಹು ಕಾಲ ಬಂಧನದಲ್ಲಿಡಲಿಲ್ಲ. ಜಾಗ್ರತೆಯಾಗಿಯೇ ಅವನನ್ನು

ಹೊರಕ್ಕೆ ತಂದು ಬಹು ಕಠಿಣವಾದ ಕಾರ್ಯಗಳಲ್ಲಿ ನಿಯಮಿಸಿ, ತಾನು ಅವನ ಮೇಲೆ ಹೊರಿಸಿದ ಕಾರ್ಯಭಾರವು ತನ್ನ ಮಗಳಿಗೆ ತಿಳಿಯ ಬರುವಂತೆ ಮಾಡಿ, ತಾನು ಓದುವುದಕ್ಕಾಗಿ ಹೋಗುವವನಂತೆ ಕಾಣಿಸಿಕೊಳ್ಳುತ್ತ ಗೋಪ್ಯವಾಗಿ ಇವರನ್ನು ಕಾದುಕೊಂಡಿದ್ದನು. ಅಡವಿಯಲ್ಲಿ ಮರದ ತುಂಡುಗಳನ್ನು ರಾಶಿಹಾಕುವಂತೆ ಫರ್ಡಿನಾಂಡನಿಗೆ ಪ್ರಾಸ್ಪೆರೊವು ಆಜ್ಞೆಮಾಡಿದ್ದನು ರಾಯುಗುವರರು ಇಂಥಾ ಕಷ್ಟತರವಾದ ಕೆಲಸಗಳಲ್ಲಿ ಅಭ್ಯಾಸವಿಲ್ಲದವರಾದುದರಿಂದ ದಣುವಿನ ದೆಸೆಯಿಂದ ತನ್ನ ಕಾಂತನು ಬಲುನೊಂದು ಸಂಕಟಪಡುತ್ತಿರುವುದನ್ನು ಮಿರಾಂಡಳು ನೋಡಿ— "ಅಯ್ಯೋ! ನೀನು ಇಷ್ಟು ಶ್ರಮಪಟ್ಟು ಆ ಕೆಲಸವನ್ನು ಮಾಡಬೇಡ. ನಮ್ಮ ತಂದೆಯು ಇನ್ನೂ ಮೂರು ಗಂಟೆಗಳ ಕಾಲ ವ್ಯಾಸಂಗದಲ್ಲಿರುವನು. ಆದುದರಿಂದ ದಯೆಮಾಡಿ ನೀನು ವಿಶ್ರಮಿಸಿಕೋ."

ಫರ್ಡಿನಾಂಡ್— "ಎಲೌ! ಮಂಗಳಾಂಗಿಯೇ, ನನಗೆ ಹಾಗೆ ಮಾಡಲು ಸಾಮರ್ಥ್ಯವಿಲ್ಲ. ವಿಶ್ರಾಂತಿಯನ್ನು ಹೊಂದುವುದಕ್ಕೆ ಮುಂಚಿತವಾಗಿ ನನ್ನ ಕೆಲಸವನ್ನು ಮಾಡಬೇಕು."

ಮಿರಾಂಡ— "ನೀನು ವಿಶ್ರಮಿಸಿಕೊಳ್ಳುವುದಾದರೆ ಆ ವೇಳೆಯಲ್ಲಿ ನಾನು ಅವುಗಳನ್ನು ಹೊತ್ತುಹಾಕುತ್ತೇನೆ" ಎಂದು ಹೇಳಿದುದು ಇವನಿಗೆ ಸರಿಬೀಳಲಿಲ್ಲ. ಇವರ ದೀರ್ಘವಾದ ಸಂಭಾಷಣೆಯಿಂದ ಮಿರಾಂಡಳು ಇವನಿಗೆ ಉಪಕಾರಿಣಿಯಾಗಿರುವುದಕ್ಕೆ ಬದಲಾಗಿ ಕೆಲಸಕ್ಕೆ ಅಡಚಣೆಯಾದಳು. ಮರದ ತುಂಡುಗಳನ್ನು ಪೇರಿಸುವ ಕೆಲಸವು ಬಹು ನಿಧಾನಕ್ಕೆ ಬಿತ್ತು.

ಇವರ ಮೈತ್ರಿಯು ಹೇಗಿದೆ ಎಂಬುವುದನ್ನು ನೋಡಲಿಚ್ಛೈಸಿ, ಈ ಕೆಲಸವನ್ನು ನೆಪಮಾತ್ರಕ್ಕೆ ಅವನ ಮೇಲೆ ಹೊರಿಸಿದ್ದ ಪ್ರಾಸ್ಪೆರೊವು ಮಿರಾಂಡಳ ಭಾವನೆಯಂತೆ ವ್ಯಾಸಂಗದಲ್ಲಿರಲಿಲ್ಲ. ಅಗೋಚರನಾಗಿ ಇವರಾಡುವ ಮಾತುಗಳನ್ನು ಕೇಳುತ್ತ, ಇವರ ಬಳಿಯಲ್ಲಿಯೇ ಇದ್ದನು. ಫರ್ಡಿನಾಂಡನು ಅವಳ ಹೆಸರನ್ನು ಕೇಳಲು ಅವಳು ತನ್ನ ಹೆಸರನ್ನು ಹೇಳಿ ತನ್ನ ತಂದೆಯು ಮಾಡಿದ ಆಜ್ಞೆಯನ್ನು ಉಲ್ಲಂಘಿಸಿದೆನಲ್ಲಾ ಎಂದು ಪೇಚಾಡಿದಳು. ಪ್ರಾಸ್ಪೆರೊವಿನ ಯಕ್ಷಿಣಿಯ ಬಲದಿಂದಲೇ ಮಿರಾಂಡಳು ಇಷ್ಟು ಜಾಗ್ರತೆಯಾಗಿ ಅವನಲ್ಲಿ ಮೋಹಗೊಂಡು,

ತಂದೆಯ ಆಜ್ಞೆಯಂತೆ ನಡೆವುದನ್ನು ಮರೆತು, ತನ್ನ ಪ್ರೇಮವನ್ನು ತೋರಿಸುತ್ತಾಳಾದುದರಿಂದ ಅವನು ಕೋಪಗೊಳ್ಳದೆ ಮಂದಸ್ಮಿತನಾದನು ಫರ್ಡಿನಾಂಡನು ತಾನು ಈವರಿವೆಗೆ ನೋಡಿರುವ ಇತರ ಎಲ್ಲಾ ವನಿತೆಯರನ್ನೂ ಉಳಿದು ಇವಳನ್ನು ಪ್ರೀತಿಸುವುದಾಗಿ ಹೇಳಿದ ಸವಿಸ್ತಾರವಾದ ವಾಕ್ಯಗಳನ್ನು ಕೇಳಿ ಅವನು ಸಂತೋಷಭರಿತನಾದನು.

ಇತರ ಎಲ್ಲಾ ವನಿತೆಯರಿಗಿಂತಲೂ ನೀನು ಮಹಾ ರೂಪವತಿಯೆಂಬುದಾಗಿ ಅವನು ಹೇಳಿದ ಶ್ಲಾಘನೆಯ ಮಾತುಗಳನ್ನು ಮಿರಾಂಡಳು ಕೇಳಿ— “ ನಾನು ಈ ವರಿವೆಗೂ ಯಾವ ಹೆಂಗಸಿನ ಮುಖವನ್ನೂ ನೋಡಿಲ್ಲ ನಿನ್ನ ಮತ್ತು ಪೂಜ್ಯನಾದ ನಮ್ಮ ತಂದೆಯ ಮುಖವನ್ನಲ್ಲದೆ ಇನ್ಯಾವ ಪುರುಷನನ್ನಾದರೂ ನೋಡಿಲ್ಲ. ಆದರೆ ಇನ್ನೂ ಎಷ್ಟು ಬಗೆಯ ಮುಖಭಾವವುಳ್ಳ ಜನರು ಲೋಕದಲ್ಲಿರುವರೋ ನಾನರಿಯೆನು. ಆದರೂ ಸತ್ಯವಾಗಿಯೂ ನೀನು ಹೊರತು ನನಗೆ ಯಾವ ಸಖನೂ ಬೇಕಾಗಿಲ್ಲ. ನಾನು ವಿಶ್ವಾಸಿಸುವ ನಿನ್ನ ರೂಪವಲ್ಲದ ಇನ್ನಾವ ರೂಪವಾದರೂ ನನ್ನ ಭಾವನೆಗೂ ಬರುವುದಿಲ್ಲ ಆಹಾ ! ನಮ್ಮ ತಂದೆಯ ಖಂಡಿತವಾದ ಆಜ್ಞೆಗಳನ್ನು ಮರೆತು ನಿನ್ನಲ್ಲಿ ಬಹು ಧಾರಾಳವಾಗಿ ಮಾತನಾಡಿರುವೆನು ” ಎನ್ನಲು, ಮರೆಯಲ್ಲಿದ್ದ ಪ್ರಾಸ್ಪೆರೊವು— “ ನನ್ನ ಇಷ್ಟದಂತೆ ನಡೆಯುತ್ತಿದೆ ನನ್ನ ಕುವರಿಯು ನೇಪಲ್ಸಿನ ರಾಣಿಯಾಗುವಳು ” ಎಂದು ಹೇಳುವುದಕ್ಕೆ ಬದಲು ತಲೆದೂಗಿದನು.

ಆ ಒಳಿಕ ಫರ್ಡಿನಾಂಡನು ತನ್ನ ಪ್ರೇಮಾಂತರಂಗವನ್ನು ತಿಳಿಸುತ್ತಾ ಇರುವ ನಿಷ್ಕಳಂಕಳಾದ ಮಿರಾಂಡಳನ್ನು ಕುರಿತು— “ ಎಲೈ, ಮಂಗಳಾಂಗಿಯೇ, ನಾನು ನೇಪಲ್ಸಿನ ಯುವರಾಜನು. ನೀನು ನನ್ನ ರಾಣಿಯಾಗುವಿಯಾ ? ” ಎಂದು ಹೇಳಿದನು

ಮಿರಾಂಡಳು— “ ಕಾಂತನೇ, ನಾನು ಏತರಿಂದ ಆನಂದವನ್ನು ಹೊಂದುವೆನೋ ಅಂಥಾ ಸಂದರ್ಭಗಳಲ್ಲಿ ನಯನಾಶ್ರುಗಳನ್ನು ಹಾಕುವವಳಾಗಿದ್ದೇನೆ. ನಾನು ವಿರಳವಾಗಿಯೂ ಶುದ್ಧನಿಷ್ಕಳಂಕವಾಗಿಯೂ ಉತ್ತರ ಹೇಳುವೆನು. ನೀನು ನನ್ನನ್ನು ಮದಿವೆಯಾದರೆ ನಾನು ನಿನ್ನ ಹೆಂಡತಿಯಾಗಿರುವೆನು. ”

ಫರ್ಡಿನಾಂಡನು ಇದಕ್ಕಾಗಿ ತನ್ನ ಕೃತಜ್ಞತೆಯನ್ನು ತೋರಿಸಬೇಕೆಂದಿರುವುದರೊಳಗಾಗಿ ಪ್ರಾಸ್ಪೆರೊವು ಅವರೆದುರಿಗೆ ಬಂದು— “ ಮಗು

ವೇ, ಭಯಪಡಬೇಡ. ನೀವು ಆಡುತ್ತಿದ್ದ ಮಾತುಗಳನ್ನೆಲ್ಲಾ ನಾನು ಕೇಳಿ ಸಮ್ಮತಿಸಿದ್ದೇನೆ. ''

"ಎಲೈ! ಫರ್ಡಿನಾಂಡನೇ, ನಾನು ನಿನ್ನನ್ನು ಕಾಠಿಣ್ಯದಿಂದ ಕಂಡಿದ್ದರೆ ನಿನ್ನ ಶ್ರಮಕ್ಕೆ ಬಲು ದೊಡ್ಡದಾದ ಸಂಭಾವನೆಯಾಗಿ ನನ್ನ ಕುವರಿಯನ್ನು ನಿನಗೆ ಕೊಡುವೆನು ನಾನು ಕೊಟ್ಟ ತೊಂದರೆಗಳೆಲ್ಲವೂ ನಿನ್ನ ಪ್ರೇಮದ ನಿಜಸ್ಥಿತಿಯನ್ನು ನೋಡುವುದಕ್ಕಾಗಿ ಮಾಡಿದ ಪರೀಕ್ಷೆಗಳಾಗಿವೆ ಅವುಗಳಲ್ಲಿ ನೀನು ಸರಿಯೆಂದೆನ್ನಿಸಿಕೊಂಡಿರುವಿ. ನಿನ್ನ ನಿಶ್ಚಯವಾದ ಪ್ರೇಮದಿಂದ ಸಂಪಾದಿಸಿಕೊಂಡಿರುವ ನನ್ನ ಕುವರಿಯನ್ನು ಮನಃಪೂರ್ವಕವಾಗಿ ನಿನಗೆ ಕೊಡುವೆನು. ಇವಳು ಅತ್ಯಂತ ಅಮೌಲ್ಯಳೆಂದು ನಾನು ಹಿಗ್ಗುತ್ತೇನೆಂಬುದಾಗಿ ನೀನು ನಗಬೇಡ. ನನಗೊಂದು ಆಗತ್ಯವಾದ ಕಾರ್ಯವಿದೆ ಅದಕ್ಕಾಗಿ ಹೋಗಿ ಬರುವವರೆಗೂ ನೀವಿಲ್ಲಿಯೇ ಕುಳಿತಿರಿ'' ಎಂದು ಹೇಳಿ, ಈ ಆಜ್ಞೆಯನ್ನು ಪರಿಪಾಲಿಸಲು ಮಿರಾಂಡಳಿಗೆ ಸ್ವಲ್ಪವೂ ಅಸಮಾಧಾನವಿಲ್ಲವೆಂಬುದನ್ನು ನೋಡಿ. ಅವನು ಹೊರಹೊರಟು ಏರಿಯಲನನ್ನು ಕರೆದೊಡನೆಯೇ ಅವನು ಇವನ ತಮ್ಮನನ್ನೂ ಮತ್ತು ನೇಪಲ್ಸಿನ ಅರಸನನ್ನೂ ಏನು ಮಾಡಿರುವನೆಂಬುದನ್ನು ತಿಳಿಸಲು ಇವನೆದುರಿಗೆ ಸಿದ್ಧನಾಗಿ—'ಅವರನ್ನು ಭಯ ಚಕಿತರನ್ನಾಗಿಯೂ ಸಂಪೂರ್ಣವಾಗಿ ಬುದ್ಧಿ ಸ್ವಾಧೀನವಿಲ್ಲದವರನ್ನಾಗಿಯೂ ಮಾಡಿರುತ್ತೇನೆ ಆಶ್ಚರ್ಯವಾದ ಧ್ವನಿಯನ್ನು ಕೇಳುವಂತೆಯೂ ವಸ್ತುಗಳನ್ನು ನೋಡುವಂತೆಯೂ ಮಾಡಿದ್ದೇನೆ. ಅಲೆದಾಟದಿಂದ ದಣುವೇರಿ ಆಹಾರಾಪೇಕ್ಷೆಯಿಂದ ಕಂಗೆಟ್ಟ ವೇಳೆಯಲ್ಲಿ ಬಹು ಮನೋಹರವಾದ ಘಮಘಮಿಸುವ ಔತಣದೂಟದಂಥಾ ವಸ್ತುಗಳನ್ನು ಕ್ಷಣಮಾತ್ರದಲ್ಲಿ ತೋರಿಸಿ ಅವರು ಊಟಕ್ಕೆ ಅಣಿಮಾಡಿಕೊಳ್ಳಲು, ಅವರೆದುರಿಗೆ ಮಹಾದ್ಭುತವಾದ ರಕ್ಕೆಗಳುಳ್ಳ ಭೀಕರ ಪಿಶಾಚ ರೂಪದಿಂದ ನಿಂತು, ಔತಣದೂಟವು ಮಾಯವಾಗುವಂತೆ ಮಾಡಿದೆನು. ಅವರು ಪರಮಾಶ್ಚರ್ಯಭರಿತರಾಗುವಂತೆ ಮಾಡಿ ನಿನ್ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದ ಕ್ರೌರ್ಯವನ್ನೂ ನಿನ್ನನ್ನೂ ನಿನ್ನ ಹಸುಗೂಸನ್ನೂ ಸಮುದ್ರದಲ್ಲಿ ಸಾಯುವಂತೆ ಬಿಟ್ಟುಬಿಟ್ಟುದನ್ನೂ ಜ್ಞಾಪಿಸುತ್ತಾ ಆ ಮಹಾನೀಚಕೃತ್ಯಗಳಿಗೆ ಪ್ರತಿಫಲವಾಗಿ ಈ ಕಷ್ಟಗಳನ್ನು ಅವರು ಅನುಭವಿಸುವಂತಾಯಿತು' ಎಂದು ಹೇಳಿದೆನು'' ಎಂದನು.

“ನೇಪಲ್ಸಿನ ಅರಸೂ ನಿನ್ನ ಅಯೋಗ್ಯ ಸಹೋದರನಾದ ಆಂಟೊನಿಯೊ ಇವರು ತಮ್ಮ ಅಕೃತ್ಯಗಳಿಗಾಗಿ ಬಹು ಪಶ್ಚಾತ್ತಾಪಪಟ್ಟರು. ಆದರೆ ಅವರು ತಮ್ಮ ದುಷ್ಕರ್ಮಕ್ಕೆ ತಕ್ಕ ಶಿಕ್ಷಾಫಲವನ್ನು ಅನುಭವಿಸಿರುವಂತೆ ಸತ್ಯವಾಗಿಯೂ ನನಗೆ ತೋರುತ್ತದೆ. ನಾನು ಯಕ್ಷನಾಗಿದ್ದಾಗ್ಯೂ ಅವರ ವಿಷಯದಲ್ಲಿ ನನಗೆ ಕನಿಕರವುಂಟಾಗುತ್ತದೆ” ಎಂದು ಎರಿಯಲನು ತನ್ನ ಸ್ವಾಮಿಗೆ ಹೇಳಿದನು.

ಪ್ರಾಸ್ಪೆರೊ—“ಎಲೈ! ಎರಿಯಲನೇ, ಯಕ್ಷನಾದ ನಿನಗೆ ಅವರ ಕಷ್ಟಗಳು ಇಷ್ಟರಮಟ್ಟಿಗೆ ಮನಮರುಗಿಸುವಂತಿದ್ದರೆ ಅವರಂತೆಯೇ ಮನುಷ್ಯನಾದ ನಾನು ಅವರ ಮೇಲೆ ಕನಿಕರಪಡಬೇಡವೇ! ನನ್ನ ಸರಸಿಯಾದ ಎರಿಯಲನೇ, ಅವರನ್ನು ಜಾಗ್ರತೆಯಲ್ಲಿ ಇಲ್ಲಿಗೆ ಕರೆದುಕೊಂಡು ಬಾ” ಎಂದನು. ಒಡನೆಯೇ ಎರಿಯಲನು ಅರಸನನ್ನೂ ಆಂಟೊನಿಯೊವನ್ನೂ ಅವರ ಅನುಚರನಾದ ಗ್ಯಾನ್ಸಲೊವನ್ನೂ ತನ್ನ ಸ್ವಾಮಿಯ ಬಳಿಗೆ ಕರೆದೊಯ್ಯುವುದಕ್ಕಾಗಿ ಹೊರಟು ಗಗನದಲ್ಲಿ ಅಸಂಸ್ಕೃತವಾದ ಗಾನವನ್ನು ಮಾಡಲು, ಅವರು ಆಶ್ಚರ್ಯಭರಿತರಾಗಿ ಇವನನ್ನು ಹಿಂಬಾಲಿಸಿ ಹೊರಟು ಪ್ರಾಸ್ಪೆರೊ ಬಳಿಗೆ ಬಂದರು. ಪ್ರಾಸ್ಪೆರೊವನ್ನು ನಾಶಹೊಂದಿಸಬೇಕೆಂದು ಅವನ ತಮ್ಮನು ಧ್ವಜಾದಿಗಳೇನೂ ಇಲ್ಲದ ದೋಣಿಯಲ್ಲಿ ಅವನನ್ನು ಬಿಟ್ಟು ಬಂದಾಗ ಬಲು ಕನಿಕರದಿಂದ ಆ ದೋಣಿಯಲ್ಲಿ ಆಹಾರ ಸಾಮಗ್ರಿಗಳನ್ನೂ ಪುಸ್ತಕಗಳನ್ನೂ ಒದಗಿಸಿಟ್ಟಿದ್ದ ಗ್ಯಾನ್ಸಲೊವೇ ಈ ಅನುಚರನಾಗಿದ್ದನು.

ಪ್ರಾಸ್ಪೆರೊವಿನ ಬಳಿಗೆ ಇವರು ಬಂದಾಗ ಅವನ ಗುರುತನ್ನು ಹಿಡಿಯಲು ಅವರು ವ್ಯಸನದಿಂದಲೂ ಭಯದಿಂದಲೂ ಮಂಕುಮುಚ್ಚಿ ಹೋಗಿದ್ದರು. ತನ್ನ ಪ್ರಾಣವನ್ನು ರಕ್ಷಿಸಿದವನೆಂದು ಪ್ರಾಸ್ಪೆರೊವು ಗ್ಯಾನ್ಸಲೊವನ್ನು ಸಂಬೋಧಿಸಿ, ತನ್ನ ಗುರುತನ್ನು ಅವನಿಗೆ ತಿಳಿಸಿದನು. ಇದರಿಂದ ಇವನ ತಮ್ಮನೂ ನೇಪಲ್ಸಿನ ರಾಜನೂ ತಮ್ಮಿಂದ ಬಾಧೆಪಟ್ಟ ಪ್ರಾಸ್ಪೆರೊವೇ ಇವನೆಂದು ತಿಳಿದುಕೊಂಡರು. ಆಂಟೊನಿಯೊ ವ್ಯಸನದಿಂದ ಕಣ್ಣೀರುಹಾಕುತ್ತ ದುಃಖಸೂಚಕವಾದ ಮಾತುಗಳನ್ನಾಡುತ್ತ ಬಹು ದೈನ್ಯದಿಂದ ತನ್ನ ಅಣ್ಣನ ಕ್ಷಮೆಯನ್ನು ಕೇಳಿಕೊಂಡನು. ಅರಸನಾದರೋ ಆಂಟೊನಿಯೊವಿಗೆ ತನ್ನ ಅಣ್ಣನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುವುದರಲ್ಲಿ ಸಹಾಯಮಾಡಿದುದಕ್ಕಾಗಿ ಮನಸ್ಸಾಕ್ಷಿಯಿಂದ

ಕೊಡಿದ ಪಶ್ಚಾತ್ತಾಪವನ್ನು ಹೇಳಿಕೊಂಡನು. ಪ್ರಾಸ್ಪೆರೊವು ಇವರನ್ನು ಕ್ಷಮಿಸಿ ಇವರು ತನ್ನ ರಾಜ್ಯವನ್ನು ಕೊಡುವುದರಲ್ಲಿ ಉದ್ಯುಕ್ತರಾದುದನ್ನು ನೋಡಿ, ಗವಿಯ ಒಂದು ಬಾಗಿಲನ್ನು ತೆಗೆದು ಫರ್ಡಿನಾಂಡನು ತನ್ನ ಮಗಳಾದ ಮಿರಾಂಡಳಿನೊಡನೆ ಚತುರಂಗವಾಡುತ್ತಿರುವುದನ್ನು ತೋರಿಸಿ—“ ಇದೋ ! ನನ್ನ ಭಂಡಾರದಲ್ಲಿ ನಿನಗೂ ಸಹ ಒಂದು ಅಮೌಲ್ಯವಾದ ಬಹುಮಾನವನ್ನು ಇಟ್ಟಿದ್ದೇನೆ ” ಎಂದು ನೇಪಲ್ಸಿನ ಅರಸನಿಗೆ ಹೇಳಿದನು.

ಮಗನು ಸಮುದ್ರದಲ್ಲಿ ಮುಳುಗಿಹೋದನೆಂದು ತಿಳಿದಿದ್ದ ತಂದೆಯೂ ತಂದೆಯು ಸಮುದ್ರದಲ್ಲಿ ಮುಳುಗಿಹೋದನೆಂದು ತಿಳಿದಿದ್ದ ಮಗನೂ ಈ ಅನಿರೀಕ್ಷಣೆಯವಾದ ಪರಸ್ಪರ ಸಂದರ್ಶನದಿಂದ ಪಡೆದ ಸಂತೋಷಕ್ಕಿಂತಲೂ ಆನಂದದಾಯಕವಾದುದು ಅವರಿಗೆ ಯಾವುದೂ ಇರಲಿಲ್ಲ. ಮಿರಾಂಡ ಇವರನ್ನೆಲ್ಲಾ ನೋಡಿ ಬಹು ಆಶ್ಚರ್ಯಾನಂದಭರಿತಳಾಗಿ ಇಂಥಾ ಜನರಿಂದ ಭರಿತವಾದ ಭೂಮಿಯು ಬಹು ಮಾನ್ಯವಾದುದೆಂದುಕೊಂಡಳು ನೇಪಲ್ಸಿನ ರಾಜನು ಮಿರಾಂಡಳ ರೂಪ ಗಾಂಭೀರ್ಯ ಭಾವಗಳನ್ನು ನೋಡಿ ತನ್ನ ಮಗನಂತೆಯೇ ಆಚ್ಚರಿಭರಿತನಾಗಿ—“ ಈ ಕನ್ನಿಕೆಯು ಯಾರಾಗಿರಬಹುದು ! ನಮ್ಮನ್ನು ಅಗಲಿಸಿ ಪುನಃ ಒಂದು ಕಡೆ ಸೇರುವಂತೆ ಮಾಡಿದ ಅಪ್ಸರಸ್ತ್ರೀಯಾಗಿರಬಹುದೇ !” ಎಂದನು. ಫರ್ಡಿನಾಂಡನು ತಾನು ಆಕೆಯನ್ನು ನೋಡಿದಾಗ ಯಾವ ರೀತಿಯಲ್ಲಿ ಆಕೆಯ ವಿಷಯದಲ್ಲಿ ಭ್ರಮೆಪಟ್ಟಿದ್ದನೋ ಹಾಗೆಯೇ ತನ್ನ ತಂದೆಯು ಭ್ರಮೆಗೊಂಡುದನ್ನು ನೋಡಿ ನಸುನಗುತ್ತ—“ ತಂದೆಯೇ, ಹಾಗಲ್ಲ. ಈಕೆಯು ನಿರ್ಜರಳಲ್ಲ. ಆದರೆ ಜರಮರಣವಿವರ್ಜಿತನಾದ ಭಗವಂತನ ದಯೆಯಿಂದ ನನ್ನ ವಶಳಾಗಿದ್ದಾಳೆ. ಜನಕನೇ ! ಈಕೆಯ ಪಾಣಿಗ್ರಹಣ ವಿಷಯದಲ್ಲಿ ನೀನು ಜೀವವಂತನಾಗಿಲ್ಲವೆಂದರಿತು ನಿನ್ನನುಮತಿಯನ್ನು ಪಡೆಯಲಾಗಲಿಲ್ಲ. ಯಾರನ್ನು ಈವರೆಗೂ ನಾನು ನೋಡಿರದೆ, ಕೇಳಿ ಅರಿತಿದ್ದೆನೋ ಆ ಪ್ರಖ್ಯಾತನಾದ ಮೈಲಾನಿನ ಡ್ಯೂಕ್ ಪ್ರಾಸ್ಪೆರೊವೇ ಈಕೆಯ ತಂದೆಯು. ಆತನು ನನಗೆ ಪ್ರಾಣದಾನವನ್ನು ಮಾಡಿದುದಲ್ಲದೆ ಈ ನಾರೀ ರತ್ನವನ್ನೂ ಕೊಟ್ಟು ನನಗೆ ಪಿತೃಸದೃಶನಾಗಿದ್ದಾನೆ” ಎಂದನು.

ನೇಪಲ್ಸಿನ ಅರಸನು ಇದನ್ನು ಕೇಳಿ—“ ಹಾಗಾದರೆ ನಾನೀಕೆಗೆ ಪಿತೃಸದೃಶನಾದೆನು. ಆಹಾ . ಆದರೆ ನನ್ನ ಸುತೆಯಾದ ಈಕೆಯ ಕ್ಷಮೆ

ಯನ್ನು ನಾನು ಕೇಳಬೇಕಾದುದು ಎಷ್ಟು ವಿಲಕ್ಷಣವಾಗಿದೆ'' ಎಂದನು.

ಪ್ರಾಸ್ಪೆರೊ—''ಆ ವಿಚಾರವನ್ನು ಬಿಡು. ನಮ್ಮ ಕಳೆದು ಹೋದ ಕಷ್ಟಗಳೆಲ್ಲವೂ ಆನಂದದಾಯಕಗಳಾಗಿ ಪರಿಣಮಿಸಿರುವುದರಿಂದ ಅವುಗಳನ್ನು ಸ್ಮರಿಸಿಕೊಳ್ಳದಿರೋಣ'' ಎಂದು ಹೇಳಿ, ತನ್ನ ತಮ್ಮನನ್ನು ಆಲಿಂಗನಮಾಡಿಕೊಂಡು, ಅವನ ತಪ್ಪನ್ನು ಮನ್ನಿಸಿರುವುದಾಗಿ ಪುನಃ ಭರವಸೆಕೊಟ್ಟನು. ಜಗದೇಕನಾಥನೂ ಸರ್ವಸಂರಕ್ಷಕನೂ ಆದ ಸ್ವಾಮಿಯು ನನ್ನನ್ನು ಆ ಚಿಕ್ಕದಾದ ರಾಜ್ಯದಿಂದ ಓಡಿಸಿದುದು ಈ ರಾಜಕುಮಾರನು ಈ ನಿರ್ಜನವಾದ ದ್ವೀಪಕ್ಕೆ ಬಂದು ನನ್ನ ಕುವರಿಯಾದ ಮಿರಾಂಡಳನ್ನು ಸಂಧಿಸಿ ಅವಳನ್ನು ಮೋಹಿಸಿ ವರಿಸಿ ನೇಪಲ್ಸಿನ ರಾಜ್ಞಿಯಾಗುವಂತೆ ಮಾಡುವುದಕ್ಕಲ್ಲವೇ! ಎಂದು ಮೊದಲಾಗಿ ತನ್ನ ತಮ್ಮನನ್ನು ಸಮಾಧಾನಗೊಳಿಸುವ ಅರ್ಥದಿಂದ ಅಣ್ಣನು ಆಡಿದ ಮಾತುಗಳಿಗೆ ಆಂಟೊನಿಯೊವು ಲಜ್ಜಾಪರಿತಾಪಗಳ ಭಾರದಿಂದ ನಿರುತ್ತರನಾಗಿದ್ದನು. ವೃದ್ಧನಾದ ಗ್ಯಾನ್ಸಲೊವು ಸರ್ವರಿಗೂ ಏಕರೀತಿಯಾಗಿ ಒದಗಿದ ಈ ಸಂತೋಷಕ್ಕಾಗಿ ಆನಂದಬಾಷ್ಪವನ್ನು ಕರೆಯುತ್ತ, ಈ ದಂಪತಿಗಳನ್ನು ರಕ್ಷಿಸೆಂದು ಜಗದೀಶ್ವರನನ್ನು ಪ್ರಾರ್ಥಿಸಿದನು.

ಈ ಸಮಯದಲ್ಲಿ ಪ್ರಾಸ್ಪೆರೊವು—''ನಿಮ್ಮ ಹಡಗು ನಾವಿಕರ ಸಹಿತವಾಗಿ ದಡದಲ್ಲಿ ಸುರಕ್ಷಿತವಾಗಿದೆ. ನಾನು ಪುತ್ರೀಸಮೇತನಾಗಿ ನಾಳೆ ನಿಮ್ಮೊಡನೆ ಪ್ರಯಾಣ ಮಾಡುವೆನು. ಈ ಮಧ್ಯೆ ನೀವು ಬಡವನಾದ ನನ್ನ ಆತಿಥ್ಯವನ್ನು ಪರಿಗ್ರಹಿಸಿರಿ. ನಾನೀನಿರ್ಜನ ಪ್ರದೇಶಕ್ಕೆ ಬಂದಾರಭ್ಯ ನನ್ನ ಯಾವದ್ವೃತ್ತಾಂತವನ್ನೂ ನಿಮಗೆ ವಿವರಿಸುತ್ತೇನೆ'' ಎಂದು ಹೇಳಿ ಕೆಲಿಬಾನನ್ನು ಕರೆದು ಅಡಿಗೆಯನ್ನು ಮಾಡಿ, ಗವಿಯನ್ನು ಸರಿಯಾಗಿಡುವಂತೆ ಆಜ್ಞಾಪಿಸಿದನು. ಅಲ್ಲಿದ್ದವರು ಈ ಅಪೂರ್ವಗಾತ್ರನಾದ ಅನಾಗರೀಕನಾಗಿ ಕಾಣಿಸುವ ಕುರೂಪಿಯಾದ ಅವನನ್ನು ನೋಡಿ ವಿಸ್ಮಿತರಾದರು. ಆಗ ಪ್ರಾಸ್ಪೆರೊವು—''ಇವನು ಒಬ್ಬನೇ ನನಗೆ ಸೇವಕನಾಗಿರುವವನು'' ಎಂದು ಹೇಳಿದನು. ಪ್ರಾಸ್ಪೆರೊವು ಈ ದ್ವೀಪವನ್ನು ಬಿಟ್ಟು ಹೋಗುವುದಕ್ಕೆ ಮುಂಚಿತವಾಗಿಯೇ ಏರಿಯಲನಿಗೆ ಸ್ವೇಚ್ಛಾವಿಹಾರಕ್ಕೆ ಅಪ್ಪಣೆಯನ್ನು ಕೊಟ್ಟನು. ಇವನು ತನ್ನ ಸ್ವಾಮಿಯಲ್ಲಿ ಭಕ್ತಿಶ್ರದ್ಧೆಗಳುಳ್ಳ ಸೇವಕನಾಗಿದ್ದರೂ ಇನಿದಾದ ಫಲಪುಷ್ಪಗ

ಳುಳ್ಳ ಹಸುರುಗಿಡಗಳಲ್ಲಿ ಸಂಚರಿಸಲಿಚ್ಛಿಸುವ ಅರಣ್ಯದ ಪಕ್ಷಿಯಂತೆ ಗಗನದಲ್ಲಿ ಸ್ವೇಚ್ಛೆಯಾಗಿ ವಿಹರಿಸುವುದಕ್ಕಾಗಿ ತಡೆಯಿಲ್ಲದ ಸ್ವಾತಂತ್ರ್ಯವನ್ನು ಬಹುಕಾಲದಿಂದ ಬಯಸುತ್ತಿದ್ದನು. ಎರಿಯಲನಿಗೆ ಇದರಿಂದ ಅಮಿತವಾದ ಆನಂದವುಂಟಾಯಿತು.

ಪ್ರಾಸ್ಪೆರೊವು ಈ ಗಗನಚರನನ್ನು ಕುರಿತು—“ ಎಲೈ ! ಸುಂದರನಾದ ಎರಿಯಲನೇ, ನಿನ್ನನ್ನು ಬಿಟ್ಟುಬಿಡುವುದು ನನಗೆ ಹಂಬಲಿಕೆಯಾಗಿದ್ದಾಗ್ಯೂ ನಿನಗೆ ಸಂತೋಷಪೂರ್ವಕವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದೇನೆ ” ಎಂದನು.

ಎರಿಯಲನು—“ ಸೇವಕರಲ್ಲಿ ವಿಶ್ವಾಸಾದರಗಳುಳ್ಳ ಸ್ವಾಮಿಯೇ ! ನನ್ನನ್ನು ಹರಸಿ, ಹಿಂದಿರುಗಲು ಅಪ್ಪಣೆ ಕೊಡುವುದಕ್ಕೆ ಮುಂಚಿತವಾಗಿ ನಿಮ್ಮ ಹಡಗು ಅನುಕೂಲವಾದ ತರಂಗಗಳನ್ನು ಪಡೆದು, ಸುರಕ್ಷಿತವಾಗಿ ಸ್ವಸ್ಥಾನವನ್ನು ತಲಪುವವರೆಗೂ ಅದರ ಜೊತೆಯಲ್ಲೇ ಬರುವುದಕ್ಕೆ ನನಗೆ ಅಪ್ಪಣೆ ಕೊಡಬೇಕು” ಎಂದು ಹೇಳಿ ಹೀಗೆ ಹಾಡಿದನು.

ಆರಡಿಗಳುಣುತಿರುವ ಕುಸುಮದ |
ಸೇರುವೆಯ ಉಂಬುವನು ಜೇನನು |
ಚೀರಿದನಿಯನು ತೋರ್ಪಗೂಗೆಗಳುಲಿವ ಸಮಯದಲಿ ||
ಸಾರಿಮೆರೆವ ವಸಂತಸಮಯದೆ |
ಸೇರಿ ಕನ್ನೈದಿಲೆಯ ತೊಟ್ಟಿಲೊ ,
ಳೇರಿ ಕನ್ನಡವಕ್ಕಿಗಳ ಸುಣ್ಣುಡಿಗೆ ನಲಿಯುವೆನು ||೧||
ಪೋಗುವೆನು ಮನವೊಲಿದು ನಿಲಯಕೆ |
ತಾಗುವೆನು ಮಕರಂದ ಪರಿಮಳ |
ಭೋಗವನು ಕೊಡುತಿರುವ ತರುವಿನ ತುದಿಯ ಸುಮಗಳನು||
ಬೇಗಸಾರುವೆನದರ ನೆಳಲನು |
ಸಾಗಿ ಸಂತೋಷಾಂಬುನಿಧಿಯೊಳು |
ತೂಗಿತೊಳಗುತ ಬಾಳುವೆನು ನಾನಧಿಕ ಹರ್ಷದಲಿ ||೨||

ಅನಂತರದಲ್ಲಿ ಪ್ರಾಸ್ಪೆರೊವು ತನ್ನ ಯಕ್ಷಿಣೀ ಪುಸ್ತಕಗಳನ್ನೂ ದಂಡವನ್ನೂ ಇನ್ನು ಮೇಲೆ ಉಪಯೋಗಿಸುವುದಿಲ್ಲವೆಂದು ನಿಷ್ಕರ್ಷಿಸಿ, ಅವನ್ನು ಭೂಮಿಯಲ್ಲಿ ಹೂತುಬಿಟ್ಟನು. ಈ ತೆರದಿಂದ ಪ್ರಾಸ್ಪೆರೊವು

ತನ್ನ ತಮ್ಮನ ನೇಪಲ್ಸಿನ ರಾಜನ ಅನ್ಯೋನ್ಯಾಂತಃಕರಣವುಳ್ಳವನಾಗಿ ಸ್ವದೇಶಕ್ಕೆ ಹಿಂತಿರುಗಿದನು. ಇವನ ಸಂತೋಷ ಪರಿಪೂರ್ಣತೆಗೆ ಪುನಃ ಕೈಗೊಳ್ಳುವುದೂ, ಯಾರ ವಿವಾಹವು ನೇಪಲ್ಸನ್ನು ತಲಪಿದೊಡನೆಯೇ ಬಹುವಿಜೃಂಭಣೆಯಿಂದ ನೆರವೇರಿಸಲ್ಪಡುವುದೆಂದು ನೇಪಲ್ಸಿನ ರಾಜನು ಹೇಳಿದ್ದನೋ ತನ್ನ ಕುವರಿಯಾದ ಮಿರಾಂಡ ರಾಯಗುವರನಾದ ಫರ್ಡಿನಾಂಡಿನ ವಿವಾಹವನ್ನು ನೋಡಬೇಕಾದುದೂ ಮಾತ್ರವೇ ಉಳಿದಿದುವು ಏರಿಯಲನು ಬೆಂಗಾವಲಿಗಾಗಿ ಬಂದಿರಲು ಇವರ ಪಯಣವು ಸಂತೋಷದಾಯಕವಾಗಿ ಮುಗಿದು ನೇಪಲ್ಸನ್ನು ತಲಪಿದರು.

## VIII. ALL'S WELL THAT ENDS WELL

# ೮. ಯಾವುದು ತೀರಿದ ಮೇಲೆ ಒಳ್ಳೆಯದೋ ಅದೇ ಒಳ್ಳೆಯದು

ಬೆರ್ಟ್ರಮನು ತನ್ನ ತಂದೆಯ ಮರಣಾನಂತರ ಆತನ ಆಸ್ತಿಯನ್ನೂ ರೂಸಿಲಾನಿನ ಕೌಂಟ್ ಪದವಿಯನ್ನೂ ಪಡೆದನು. ಫ್ರಾನ್ಸಿನ ದೊರೆಗೆ ಬೆರ್ಟ್ರಮನ ತಂದೆಯಲ್ಲಿ ಬಹಳ ವಿಶ್ವಾಸವಿತ್ತು. ಆದುದರಿಂದ ಆ ದೊರೆಯು ಆತನು ಮೃತನಾದನೆಂದು ಕೇಳಿದ ಕೂಡಲೆ ತಮ್ಮಿಬ್ಬರಿಗೂ ಇದ್ದ ವಿಶ್ವಾಸದ ಜ್ಞಾಪಕಾರ್ಥವಾಗಿ ಬೆರ್ಟ್ರಮನು ತನ್ನ ಆಸ್ಥಾನಕ್ಕೆ ಬರಬೇಕೆಂಬುದಾಗಿಯೂ ಅಲ್ಲಿ ತಾನು ಇವನನ್ನು ಮರ್ಯಾದೆಯಿಂದ ರಕ್ಷಿಸುವುದಾಗಿಯೂ ಹೇಳಿಕಳುಹಿಸಿದನು.

ಬೆರ್ಟ್ರಮನು ತನ್ನ ತಾಯಿಯೊಂದಿಗೆ ವಾಸಿಸುತ್ತಿದ್ದನು. ಇವನನ್ನು ದೊರೆಯ ಬಳಿಗೆ ಕರೆದುಕೊಂಡು ಹೋಗುವುದಕ್ಕಾಗಿ ಫ್ರೆಂಚ್ ಆಸ್ಥಾನದಿಂದ ಲೆಫ್ಯು ಎಂಬೊಬ್ಬ ವೃದ್ಧಶ್ರೀಮಂತನು ಇಲ್ಲಿಗೆ ಬಂದನು. ಫ್ರಾನ್ಸಿನ ದೊರೆಯು ನಿರಂಕುಶಪ್ರಭುವಾಗಿದ್ದನು. ಆತನು ಯಾರನ್ನಾದರೂ ತನ್ನ ಆಸ್ಥಾನಕ್ಕೆ ಕರಿಸಿಕೊಳ್ಳಬೇಕಾದರೆ ಖಂಡಿತವಾದ ಆಜ್ಞೆ ಮಾಡುತ್ತಿದ್ದನು ಅದನ್ನು ಯಾರೇ ಆಗಲಿ ವಿಾರಕೂಡದಾಗಿತ್ತು. ಆದುದರಿಂದ ಬೆರ್ಟ್ರಮನ ತಾಯಿಗೆ ತನ್ನ ಪ್ರಿಯಸುತನನ್ನು ಅಗಲಿರಬೇಕಾದ ದುಃಖವು ಮತ್ತೊಂದುಂಟಾದರೂ ಅವನನ್ನು ಒಂದು ದಿವಸವಾದರೂ ನಿಲ್ಲಿಸಿಕೊಳ್ಳುವುದಕ್ಕೆ ಧೈರ್ಯಸಾಲದೆ ಅವನ ಪ್ರಯಾಣಕ್ಕೆ ಬೇಕಾದ ಅನುಕೂಲಗಳನ್ನೆಲ್ಲಾ ತತ್ಕ್ಷಣವೇ ಸಿದ್ಧಪಡಿಸುವಂತೆ ಆಕೆಯು ಪರಿಜನರಿಗೆ ಆಜ್ಞಾಪಿಸಿದಳು. ಲೆಫ್ಯುವು ಗಂಡನ ವಿಯೋಗದಿಂದಲೂ ತನ್ನ ಮಗನ ಅಗಲುವಿಕೆಯಿಂದಲೂ ವ್ಯಥೆಪಡುತ್ತಿದ್ದ ಇವಳನ್ನು ಸಮಾಧಾನಪಡಿಸುವುದಕ್ಕೆ ಯತ್ನಿಸಿ—“ಅಮ್ಮಾ, ಭೂಪತಿಯು ಮಹಾ ದಯಾಪರನು. ಆತನೇ ನಿನಗೆ ದಿಕ್ಕಾಗಿಯೂ ನಿನ್ನ ಮಗನಿಗೆ ಪಿತೃಸದೃಶನಾಗಿಯೂ ಆಗಿರುವನು. ಆದರೆ ಏನು ಹೇಳಲಿ? ಅವನು ಮಹತ್ತಾದ ಒಂದು ಬೇನೆಯಿಂದ ನರಳುತ್ತಿರುವನು. ವೈದ್ಯರೆಲ್ಲಾ ಇದು ಗುಣವಾಗತ

ಕ್ಕುದಲ್ಲವೆಂದು ಹೇಳಿ ಬಿಟ್ಟರು '' ಎಂದನು. ಆಗ ಕೌಂಟನ ತಾಯಿಯು ದೊರೆಯ ಅನಾರೋಗ್ಯಸ್ಥಿತಿಯನ್ನು ಕೇಳಿ ಬಹು ದುಃಖಿತ ಳಾಗಿ ಲೆಪುವನ್ನು ಕುರಿತು—'' ಎಲೈ ಶ್ರೀಮಂತನೇ, ನನಗೆ ನೆರವಾಗಿರುವ ಹೆಲೀನಳ ತಂದೆಯು ಬದುಕಿದ್ದರೆ ಆತನ ರೋಗವನ್ನು ಗುಣಮಾಡುತ್ತಿದ್ದನು. ಹೆಲೀನಳು ನಾನು ಹೇಳಿದ ವೈದ್ಯನಾದ ಜೆರಾರ್ಡ್ ಡಿನಾರ್ಬನ್‌ನ ಮಗಳು ಅವನು ಸಾಯುವಾಗ ಇವಳನ್ನು ನನ್ನ ವಶಕ್ಕೊಪ್ಪಿಸಿದನು. ಅಂದಿನಿಂದಲೂ ಇವಳನ್ನು ನಾನೇ ಕಾಪಾಡುತ್ತಲಿದ್ದೇನೆ. ಇವಳ ಗುಣಗಳೂ ನಡತೆಯೂ ಅದ್ಭುತವಾಗಿರುವುವು. ಈ ಸದ್ಗುಣಗಳು ಯೋಗ್ಯನಾದ ತಂದೆಯಿಂದ ಇವಳಿಗೆ ಬಂದುವುಗಳು '' ಎಂದು ಮಾತನಾಡುತ್ತಿರುವಾಗ ಹೆಲೀನಳು ಮೌನವಾಗಿ ಅಳುವುದಕ್ಕೆ ಪ್ರಾರಂಭಿಸಿದಳು. ಕೂಡಲೆ ಬೆರ್ಟ್ರಮನು ತನ್ನ ತಾಯಿಯ ಅಪ್ಪಣೆಯನ್ನು ತೆಗೆದುಕೊಂಡು ಹೊರಡಲುದ್ಯುಕ್ತನಾದಾಗ ಆಕೆಯು ಕಣ್ಣೀರು ಸುರಿಸುತ್ತ ಬಹು ವ್ಯಸನಾಕ್ರಾಂತಳಾಗಿ ಲೆಪುವನ್ನು ಕುರಿತು—'' ಶ್ರೀಮಂತನೇ, ನನ್ನ ಮಗನು ಅನುಭವಶಾಲಿಯಲ್ಲವಾದುದರಿಂದ ನೀನು ಅವನಿಗೆ ಬುದ್ಧಿ ಹೇಳು. ನಿಮಗೆ ದೇವರು ಒಳ್ಳೆಯದುಮಾಡಲಿ ಹೋಗಿಬನ್ನಿ '' ಎಂದಳು. ಕೊನೆಗೆ ಬೆರ್ಟ್ರಮನು ಸಭ್ಯತೆಯಿಂದ ಹೆಲೀನಳು ಸುಖವಾಗಿರಲೆಂದು ದೇವರನ್ನು ಪ್ರಾರ್ಥಿಸಿ—'' ಓ ! ಹೆಲೀನಾ, ನಿನ್ನ ಯಜಮಾನಿಯಾದ ನನ್ನ ಮಾತೆಗೆ ಮನಸ್ಸೊಲಿಯುವಂತೆ ನಡೆಯುತ್ತ ಆಕೆಯನು, ಚೆನ್ನಾಗಿ ಉಪಚರಿಸು '' ಎಂದನು.

ಹೆಲೀನಳು ಬೆರ್ಟ್ರಮನನ್ನು ಬಹಳಕಾಲದಿಂದಲೂ ಪ್ರೀತಿಸುತ್ತಿದ್ದಳು. ಆದುದರಿಂದ ಇವಳು ಮೌನವಾಗಿ ಅತ್ತುದು ತನ್ನ ತಂದೆಯ ವಿಯೋಗಕ್ಕೋಸ್ಕರವಲ್ಲ. ಇವಳು ತನ್ನ ತಂದೆಯ ವಿಷಯದಲ್ಲಿ ದುಃಖಿತಳಾಗಿದ್ದಾಗ್ಗೂ ಸಧ್ಯದಲ್ಲಿ ಆ ವ್ಯಸನವನ್ನು ಬಿಟ್ಟು, ಬೆರ್ಟ್ರಮನು ಹೊರಟುದನ್ನು ನೋಡಿ ಇವನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದಳೇ ವಿನಾ ಮತ್ತಾವುದೂ ಅವಳ ನೆನಪಿಗೆ ಬರಲಿಲ್ಲ.

ಹೆಲೀನಳು ಬೆರ್ಟ್ರಮನನ್ನು ಬಹಳ ದಿವಸಗಳಿಂದಲೂ ಪ್ರೀತಿಸುತ್ತಿದ್ದಾಗ್ಗೂ—'' ಅವನು ಪ್ಯಾರಿಸಿನಲ್ಲಿ ಬಹಳ ಪುರಾತನ ವಂಶಜನು ; ನಾನು ಪ್ರಖ್ಯಾತ ವಂಶದವಳಲ್ಲ. ನನ್ನ ತಂದೆತಾಯಿಗಳು ಅಷ್ಟೇನೂ ಪ್ರಖ್ಯಾತರಲ್ಲ ; ಅವನ ಪೂರ್ವಿಕರೆಲ್ಲಾ ಬಹಳ ಘನವಂತರು '' ಎಂದು

ತಿಳಿದುಕೊಂಡು ಬೆಟ್ರ್ರಮನನ್ನು ತನ್ನ ಸ್ವಾಮಿಯಂತೆ ನೋಡುತ್ತಿದ್ದಳು. ಅವನ ದಾಸಿಯಾಗಿದ್ದು, ದಾಸಿಯಾಗಿಯೇ ಸಾಯಬೇಕೆಂಬ ಆಲೋಚನೆ ವಿನಾ ಮತ್ತಾವುದನ್ನೂ ಬಯಸಲು ಧೈರ್ಯಪಡಲಿಲ್ಲ. ಅವನ ಘನತೆ, ತನ್ನ ದೀನಸ್ಥಿತಿ, ಇವುಗಳನ್ನು ಹೋಲಿಸಿ ತನ್ನಲ್ಲೇ ತಾನು "ಒಂದು ಪ್ರಕಾಶವಾದ ಶ್ರೇಷ್ಠ ನಕ್ಷತ್ರವನ್ನು ಪ್ರೀತಿಸಿ ಅದನ್ನು ಮದುವೆಮಾಡಿಕೊಳ್ಳಲೆಳಸಿದ ಹಾಗಾಯಿತು" ಎಂದುಕೊಳ್ಳುವಳು.

ಬೆಟ್ರ್ರಮನು ಹೊರಟುಹೋದುದರಿಂದ ಇವಳ ನೇತ್ರಗಳು ನೀರಿನಿಂದಲೂ ಹೃದಯವು ದುಃಖದಿಂದಲೂ ಪೂರಿತವಾದುವು. ಇವಳು ಅವನನ್ನು ಪ್ರೀತಿಸುವುದು ನಿಷ್ಫಲವಾದರೂ ಅವನನ್ನು ಪ್ರತಿಗಳಿಗೆಯಲ್ಲೂ ನೋಡುತ್ತಿದ್ದುದೇ ಇವಳ ವಿಶೇಷವಾದ ಆನಂದಕ್ಕೆ ಕಾರಣವಾಗಿದ್ದಿತು.

ಹೆಲೀನಳು ಯಾವಾಗಲೂ ಕಣ್ಣೆದುರಿಲೆಯಂತಿರುವ ಅವನ ನೇತ್ರಗಳು, ಮನ್ಮಥನ ಧನುಷ್ಪಿನಂತಿರುವ ಹುಬ್ಬುಗಳು, ನೀಲಮಣಿಗಳ ಕಾಂತಿಯಂತಿರುವ ಮುಂಗುರುಳುಗಳು, ಇವುಗಳನ್ನೆಲ್ಲಾ ತನ್ನ ಹೃದಯದಲ್ಲಿ ಪ್ರತಿಫಲಿಸುವ ಮಟ್ಟಿಗೂ ದಿಟ್ಟಿಸಿ ನೋಡುತ್ತಿದ್ದಳು.

ಜೆರಾರ್ಡ್ ಡಿನಾರ್ಬನನು ಸಾಯುವಾಗ ತನ್ನ ಮಗಳಿಗೆ ಅಪೂರ್ವವಾದ ಗುಣಕಾರಿಯಾದ ಒಂದಾನೊಂದು ಔಷಧಪ್ರಯೋಗ ಕ್ರಮವನ್ನು ತಿಳಿಸಿಕೊಟ್ಟನು. ಇದು ಹೊರತು ಕೊಡುವುದಕ್ಕೆ ಅವನ ಬಳಿಯಲ್ಲಿ ಮತ್ತೇನೂ ಇರಲಿಲ್ಲ. ಈ ಔಷಧಗಳ ಪಟ್ಟಿಯಲ್ಲಿ (ಲೆಫ್ಯು ಹೇಳಿದಂತೆ) ದೊರೆಯು ಅನುಭವಿಸುತ್ತಲಿದ್ದ ರೋಗಕ್ಕೆ ತಕ್ಕುದಾದ ಔಷಧದ ಹೆಸರೂ ಬರೆಯಲ್ಪಟ್ಟಿತ್ತು. ಇದುವರೆಗೂ ಭರವಸೆಯಿಲ್ಲದವಳಾಗಿದ್ದ ಹೆಲೀನಳು ಅದನ್ನು ನೋಡಿದ ಮೇಲೆ ತಾನೇ ಪ್ಯಾರಿಸಿಗೆ ಹೋಗಬೇಕೆಂದೂ ಅಲ್ಲಿ ದೊರೆಯ ರೋಗವನ್ನು ಗುಣಮಾಡುವುದಕ್ಕೆ ಪ್ರಯತ್ನಿಸಬೇಕೆಂದೂ ಯೋಚಿಸಿದಳು. ಇವಳ ಬಳಿಯಲ್ಲಿ ಈ ಔಷಧಗಳ ಪಟ್ಟಿಯು ಇದ್ದಾಗ್ಯೂ ದೊಡ್ಡ ದೊಡ್ಡ ವೈದ್ಯರೇ ಆ ರೋಗವು ಗುಣವಾಗತಕ್ಕುದಲ್ಲವೆಂದು ಹೇಳಿಬಿಟ್ಟ ಮೇಲೆ ವೈದ್ಯವಿದ್ಯೆಯಲ್ಲಿ ಅಪರಿಚಿತಳಾದ ಈ ಒಡಕನ್ನೆಯು ತಾನು ಗುಣಪಡಿಸುವೆನೆಂದು ಹೇಳಿದರೆ ಆ ಮಾತು ನಂಬಿಕೆಗೆ ಬರುತ್ತದೆಯೇ? ತಾನು ಪ್ರಯತ್ನಮಾಡಿದಾಗ ಒಳಕ್ಕೆ ಬಿಡಲ್ಪಟ್ಟರೆ, ತನಗುಂಟಾಗಬಹುದಾದ ಜಯದ ವಿಷಯದಲ್ಲಿ

ಅವಳಿಗಿದ್ದ ಕೋರಿಕೆಗಳು ಅತ್ಯಂತ ಪ್ರಖ್ಯಾತನಾಗಿಯೂ ಅನುಭವಶಾಲಿಯಾಗಿಯೂ ಇದ್ದ ತನ್ನ ತಂದೆಯ ಬುದ್ಧಿ ಕುಶಲತೆಗಳಿಗಿಂತಲೂ ಹೆಚ್ಚಾಗಿ ತೋರಿಬಂದುವು. ಏಕೆಂದರೆ—“ತಾನು ರೂಸಿಲಾನಿನ ಕೌಂಟನ ಭಾರ್ಯೆಯಾಗಿ ಪದವಿಯನ್ನು ಹೊಂದುವಹಾಗೆ ಮಾಡುವುದಕ್ಕಾಗಿಯೇ, ದೇವತೆಗಳು ಅದನ್ನು ಪರಿಶೋಧಿಸಿರುವುದಾಗಿ” ಪೂರ್ಣಭರವಸೆಯುಳ್ಳವಳಾಗಿದ್ದಳು.

ಬೆರ್ಟ್ರಮನು ಹೊರಟುಹೋದ ಸ್ವಲ್ಪಕಾಲದ ಮೇಲೆ ಅವನ ತಾಯಿಯ ಭೃತ್ಯನೊಬ್ಬನು ಆಕೆಯ ಬಳಿಗೆ ಬಂದು—“ಅಮ್ಮಾ! ಹೆಲೀನಳು ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುತ್ತಿದ್ದಳು. ಅವಳು ಅಂದುಕೊಂಡ ಕೆಲವು ಮಾತುಗಳಿಂದ ಅವಳು ಬೆರ್ಟ್ರಮನನ್ನು ಪ್ರೀತಿಸುತ್ತಾಳೆಂದೂ ಅವನನ್ನು ಹುಡುಕಿಕೊಂಡು ತಾನು ಪ್ಯಾರಿಸಿಗೆ ಹೋಗಬೇಕೆಂದು ಆಲೋಚಿಸುತ್ತಾಳೆಂದೂ ನನಗೆ ತಿಳಿಯಬಂತು” ಎಂದನು. ಆಗ ಆಕೆಯು ಅವನನ್ನು ಕುರಿತು—“ಎಲೈ ಭೃತ್ಯನೇ, ನಾನು ಅವಳೊಡನೆ ಮಾತನಾಡಬೇಕೆಂದು ಹೆಲೀನಳಿಗೆ ಹೇಳು” ಎಂದು ಕಳುಹಿಸಿದಳು.

ಹೆಲೀನಳ ವಿಷಯದಲ್ಲಿ ಕೌಂಟನ ತಾಯಿಯು ಈಗತಾನೇ ಕೇಳಿದ ಮಾತುಗಳು ತಾನು ಮೊಟ್ಟಮೊದಲು ಬೆರ್ಟ್ರಮನ ತಂದೆಯನ್ನು ವರಿಸಬೇಕೆಂದು ಕುತೂಹಲಪಡುತ್ತಿದ್ದ ಕಾಲವನ್ನು ಈಕೆಯ ಜ್ಞಾಪಕಕ್ಕೆ ಬರುವಂತೆ ಮಾಡಿದುವು. ಆಕೆಯು—“ಯೌವನವತಿಯಾಗಿರುವಾಗ ನಾನೂ ಹಾಗೆಯೇ ಇದ್ದೆನು. ಪ್ರೀತಿಯು ಯೌವನವೆಂಬ ಗುಲಾಬೀ ಹೂವಿಗೆ ಮುಳ್ಳಿನಹಾಗಿರುವುದು. ಯೌವನಕಾಲದಲ್ಲಿ ಮಾಡುವುವುಗಳೆಲ್ಲಾ ತಪ್ಪುಗಳಲ್ಲವೆಂದು ನಾವು ಭಾವಿಸಿದರೂ ನಿಜವಾಗಿಯೂ ಅವುಗಳೆಲ್ಲಾ ತಪ್ಪುಗಳೇ” ಎಂದು ತನ್ನ ಯೌವನದ ಮೋಹಕರವಾದ ತಪ್ಪುಗಳನ್ನು ಕುರಿತು ಧ್ಯಾನಿಸುತ್ತಿರುವಾಗ ಹೆಲೀನಳು ಬಂದಳು.

ಕೌಂಟೆಸ್—“ಓ, ಹೆಲೀನ, ನಾನು ನಿನ್ನ ತಾಯಿಯೆಂದು ನಿನಗೆ ಗೊತ್ತಿದೆ.”

ಹೆಲೀನ—“ನೀನು ನನ್ನ ಘನತೆಯುಳ್ಳ ಯಜಮಾನಿ.”

ಕೌಂಟೆಸ್—“ನೀನು ನನ್ನ ಮಗಳು; ನಾನು ನಿನ್ನ ಮಾತೆಯು. ನಾನು ಹೇಳುವ ಮಾತುಗಳನ್ನು ಕೇಳಿ ಹೆದರಿ ಏಕೆ ಕಾಂತಿಹೀನಳಾಗುವಿ?”

ಹೆಲೀನ—(ಕೌಂಟೆಸ್ಸಳು ತನ್ನಲ್ಲಿ ಸಂಶಯಗೊಂಡಿರುವಳೆಂದು ಹೆದರಿ, ಗಾಬರಿಯಿಂದ ಕೂಡಿದವಳಾಗಿ) ‹‹ ಓ, ಪೂಜ್ಯಳೇ, ನೀನು ನನ್ನ ತಾಯಿಯಲ್ಲ. ರೂಸಿಲಾನಿನ ಕೌಂಟ್‌ನು ನನ್ನ ಸಹೋದರನಾಗಲಾರನು, ನಾನು ನಿನ್ನ ಮಗಳೂ ಅಲ್ಲ.''

ಕೌಂಟೆಸ್—‹‹ ಆದಾಗ್ಗೂ ನೀನು ನನ್ನ ಸೊಸೆಯಾಗಿರಬಹುದು. ನೀನೂ ಹಾಗೆಯೇ ಅಭಿಪ್ರಾಯಪಡುವಂತಿದೆ ‹ ತಾಯಿ,' ‹ ಮಗಳು,' ಎಂಬ ಮಾತುಗಳು ನಿನ್ನನ್ನು ಬಹಳವಾಗಿ ತೊಂದರೆಪಡಿಸುತ್ತಿವೆ. ಹೆಲೀನ, ನೀನು ನನ್ನ ಮಗನನ್ನು ಪ್ರೀತಿಸುತ್ತೀಯೋ ?''

ಹೆಲೀನ—‹‹ ತಾಯೇ, ನೀನೂ ಅವನನ್ನು ಪ್ರೀತಿಸುವುದಿಲ್ಲವೇ ?''

ಕೌಂಟೆಸ್—‹‹ ಇಂತಹ ನೆಪದ ಮಾತುಗಳನ್ನಾಡಬೇಡ. ನಿನ್ನ ಪ್ರೀತಿಪೂರ್ವಕವಾದ ಮಾತುಗಳು ಸಾಕು. ನೀನವನನ್ನು ಮೋಹಿಸಿರುವುದು ಸ್ಪಷ್ಟವಾಗಿದೆ.''

ಈಗ ಹೆಲೀನಳು ಮಹಾ ನಮ್ರತೆಯಿಂದಲೂ ನಾಚಿಕೆಯಿಂದಲೂ ಭಯದಿಂದಲೂ ಕೂಡಿದವಳಾಗಿ ಆಕೆಯ ಕ್ಷಮೆಯನ್ನು ಕೇಳಿಕೊಂಡಳು.

ಕೌಂಟೆಸ್—‹‹ ಈಗ ಪ್ಯಾರಿಸಿಗೆ ಹೋಗಬೇಕೆಂಬ ಅಭಿಪ್ರಾಯವು ನಿನಗಿಲ್ಲವೇ ?''

ಹೆಲೀನ—‹‹ಅಹುದು. ದೊರೆಯು ರೋಗಪೀಡಿತನಾಗಿರುವನೆಂದು ಕೇಳಿದಂದಿನಿಂದಲೂ.''

ಕೌಂಟೆಸ್—‹‹ ನೀನು ಪ್ಯಾರಿಸಿಗೆ ಹೋಗಬೇಕೆಂದಿರುವುದು ಈ ಕಾರಣಕ್ಕೋಸ್ಕರವೇ ? ಸತ್ಯವಾಗಿ ಮಾತನಾಡು.''

ಹೆಲೀನ—‹‹ ನಿನ್ನ ಮಗನೂ ನನ್ನ ಯಜಮಾನನೂ ಆದ ಬೆಟ್ರ್ರಮನು ನಾನು ಹೀಗೆ ಯೋಚಿಸುವಂತೆ ಮಾಡಿದನು. ಇಲ್ಲದಿದ್ದರೆ ಪ್ಯಾರಿಸ್, ಔಷಧ, ದೊರೆ, ಇವುಗಳ ಗೊಡವೆಯೇ ನನಗಿರುತ್ತಿರಲಿಲ್ಲ.''

ಬೆಟ್ರ್ರಮನ ತಾಯಿಯು ಇವಳ ಮಾತಿಗೆ ಸಮ್ಮತಿಪಡಲೂ ಇಲ್ಲ, ಆಕ್ಷೇಪಣೆಮಾಡಲೂ ಇಲ್ಲ. ಆದರೆ ಅವಳು ಹೇಳಿದುದನ್ನೆಲ್ಲಾ ಕೇಳಿ, ದೊರೆಗೆ ಕೊಡಬೇಕೆಂದಿರುವ ಔಷಧದಿಂದ ಏನಾದರೂ ಆತನಿಗೆ ಗುಣ ಕಂಡುಬಂದೀತೆ ? ಎಂಬದಾಗಿ ಪ್ರಶ್ನಿಸಿ, ಆ ಔಷಧವು ಜೆರಾರ್ಡ್ ಡಿನಾರ್ಬ್‌ನಿಂದ ಬಹಳ ಸ್ತುತ್ಯವಾಗಿದ್ದು ಸಾಯುವಾಗ ಅವಳಿಗೆ ಕೊಡಲ್ಪಟ್ಟಿತೆಂದು ಆಕೆಯು ತಿಳಿದಳು. ಅವನ ಅವಸಾನಕಾಲದಲ್ಲಿ ತಾನು ಇವಳ

ವಿಷಯವಾಗಿ ಮಾಡಿದ್ದ ವಾಗ್ದಾನವನ್ನು ಸ್ಮರಿಸಿಕೊಂಡು ಹೆಲೀನಳ ಮನೋನಿಶ್ಚಯದ ವಿಷಯದಲ್ಲಿ ಯಾವ ಭರವಸೆಯನ್ನೂ ಇಡದಿದ್ದಾಗ್ಯೂ ದೊರೆಯನ್ನು ರೋಗರಹಿತನನ್ನಾಗಿ ಮಾಡುವುದೂ ಹೆಲೀನಳ ಮುಂದಿನ ಸುಖಕ್ಕೆ ಮಾರ್ಗವನ್ನು ಕಲ್ಪಿಸುವುದೂ ಇವೆರಡೂ ದೈವಸಂಕಲ್ಪವೆಂದು ಭಾವಿಸಿ, ಹೆಲೀನಳಿಗೆ ನಿನ್ನ ಇಷ್ಟಾನುಸಾರ ಮಾಡಬಹುದೆಂದು ಅನುಮತಿಯನ್ನೂ ಯಥೇಷ್ಟವಾದ ಹಣವನ್ನೂ ಕೊಟ್ಟು ತಕ್ಕ ಪರಿಚಾರಕರನ್ನು ಹಿಂದೆ ಕಳುಹಿಸಿದಳು.

ಹೆಲೀನಳು ಪ್ಯಾರಿಸನ್ನು ತಲಪಿ ಅಲ್ಲಿ ವೃದ್ಧ ಶ್ರೀಮಂತನಾದ ಲೆಫ್ಯುವಿನ ಸಹಾಯದಿಂದ ದೊರೆಯ ವಿಚಾರವನ್ನೆಲ್ಲಾ ತಿಳಿದುಕೊಂಡಳು. ಆದರೆ ಇವಳು ಇನ್ನೂ ಪ್ರಯಾಸಪಡಬೇಕಾಯಿತು. ಏಕೆಂದರೆ, ಈ ಯೌವನವತಿಯಾದ ವೈದ್ಯಳಿಂದ ಕೊಡಲ್ಪಟ್ಟ ಔಷಧವನ್ನು ಸೇವಿಸಲು ದೊರೆಯು ಒಪ್ಪಲಿಲ್ಲ. ಆದುದರಿಂದ ಅವಳು—“ನಾನು ಜೆರಾರ್ಡ್‌ನ ಮಗಳು. (ಇವನ ಯಶಸ್ಸು ದೊರೆಗೂ ತಿಳಿದಿದ್ದಿತು.) ಇದು ನನ್ನ ತಂದೆಯು ಬಹು ಅನುಬವದಿಂದ ಸಂಗ್ರಹಿಸಿಟ್ಟಿದ್ದ ಅಮೌಲ್ಯವಾದ ಔಷಧವು” ಎಂದು ಹೇಳಿ ಆ ಔಷಧವನ್ನು ಆತನಿಗೆ ಕೊಟ್ಟು—“ಇದರಿಂದ ನೀವು ಇನ್ನು ಎರಡು ದಿನಗಳೊಳಗೆ ಗುಣಹೊಂದದೇ ಇದ್ದರೆ, ನಾನು ನನ್ನ ಪ್ರಾಣವನ್ನೇ ಒಪ್ಪಿಸುವೆನು” ಎಂದಳು. ದೊರೆಯು ಇದಕ್ಕೆ ಸಮ್ಮತಿಸಿ ತಾನು ಎರಡು ದಿನಗಳಲ್ಲಿ ಗುಣಹೊಂದದೇ ಹೋದರೆ ಇವಳು ಮರಣದಂಡನೆಗೆ ಗುರಿಯಾಗಬೇಕು, ತಾನು ಗುಣಹೊಂದಿದರೆ ಇವಳು ಫ್ರಾನ್ಸಿನಲ್ಲಿರುವವರಲ್ಲಿ ಯಾರನ್ನು ವರಿಸುವಳೋ ಅಂಥವನಿಗೆ ಇವಳನ್ನು ಮದುವೆಮಾಡುವುದಾಗಿ ಒಪ್ಪಿಕೊಂಡನು. (ಇದೇ ಇವಳಿಗೆ ಬೇಕಾಗಿದುದು)

ಹೆಲೀನಳು ಈ ಔಷಧ ಪ್ರಯೋಗದ ವಿಷಯದಲ್ಲಿ ಮೋಸಹೋಗಲಿಲ್ಲ. ಎರಡು ದಿವಸಗಳ ಕೊನೆಯಲ್ಲಿ ದೊರೆಯು ಸಂಪೂರ್ಣವಾಗಿ ಗುಣಹೊಂದಿದನು ಆ ಮೇಲೆ ದೊರೆಯು ತಾನು ಮಾಡಿದ ಪ್ರತಿಜ್ಞೆಯ ಮೇರೆಗೆ ತನ್ನ ಆಸ್ಥಾನದಲ್ಲಿದ್ದ ಯುವಕರಾದ ಶ್ರೀಮಂತರನ್ನೆಲ್ಲಾ ಸಭೆ ಸೇರಿಸಿ, ಹೆಲೀನಳನ್ನು ಕುರಿತು—“ಎಲೌ ಮಾನಿನಿಯೇ, ಈ ಯುವಕರಲ್ಲಿ ನಿನಗೆ ಬೇಕಾದವನನ್ನು ವರಿಸು” ಎಂದನು. ಆಗ ಹೆಲೀನಳು ಅವರಲ್ಲಿ ಒಬ್ಬನನ್ನು ಬೇಗ ಆರಿಸಿದಳು. ಈ ಯುವಕರಲ್ಲಿ ರೂಸಿಲಾನಿನ ಕೌಂಟ

ನ್ನು ನೋಡಿ ಅವನ ಕಡೆಗೆ ತಿರುಗಿ—" ಇವನನ್ನೇ ನಾನು ವರಿಸುವುದು. ಓ, ಸ್ವಾಮಿಯೇ, ನಾನು ನಿನ್ನನ್ನು ವರಿಸುವೆನೆಂದು ಧೈರ್ಯವಾಗಿ ಹೇಳಲಾರೆನು. ಆದರೆ ನಾನು ಜೀವವಂತಳಾಗಿರುವ ವರೆಗೂ ನಿನ್ನ ಅಧೀನದಲ್ಲಿರುವೆನು" ಎಂದಳು. ದೊರೆಯು ಬೆರ್ಟ್ರಮನನ್ನು ಕುರಿತು— " ಎಲೈ ಯುವಕನೇ, ನೀನು ಇವಳನ್ನು ಸ್ವೀಕರಿಸು. ಇವಳು ನಿನ್ನ ಹೆಂಡತಿಯು" ಎಂದನು.

ಬೆಟ್ರಮನು—" ಇವಳು ದರಿದ್ರನಾದ ಒಬ್ಬ ವೈದ್ಯನ ಮಗಳು, ಅವನು ನನ್ನ ತಂದೆಯ ಪೋಷಣೆಯಲ್ಲಿದ್ದನು. ಈಗ ಇವಳು ನನ್ನ ತಾಯಿಯ ಪೋಷಣೆಯಲ್ಲಿರುವಳು" ಎಂದು ಅವಳನ್ನು ತಿರಸ್ಕರಿಸಿದನು.

ಹೆಲೀನಳು, ಅವನು ತನ್ನನ್ನು ಜರಿದು ಮಾತನಾಡಿದುದನ್ನು ಕೇಳಿ, ದೊರೆಯನ್ನು ಕುರಿತು—" ಪ್ರಭುವೇ, ಈಗ ನನಗೆ ಬಹಳ ಸಂತೋಷವಾಗಿದೆ ಉಳಿದವರು ಹೊರಡಲಿ" ಎಂದಳು. ಆದರೆ ದೊರೆಯು ತನ್ನ ಆಜ್ಞೆಯು ಉಲ್ಲಂಘಿಸಲ್ಪಡುವುದನ್ನು ಒಪ್ಪಲಿಲ್ಲ. ಏಕೆಂದರೆ, ತನ್ನ ಆಸ್ಥಾನದ ಶ್ರೀಮಂತರು ಇಂಥವರನ್ನೇ ಮದುವೆಮಾಡಿಕೊಳ್ಳಬೇಕೆಂದು ಕಟ್ಟುಮಾಡುವುದು ಫ್ರಾನ್ಸಿನ ದೊರೆಗಳ ಆಜ್ಞೆಗಳಲ್ಲಿ ಒಂದಾಗಿದ್ದಿತು. ಆದಕಾರಣ ಬೆರ್ಟ್ರಮನು ಅದೇ ದಿವಸವೇ ಹೆಲೀನಳನ್ನು ಬಲವಂತವಾಗಿ ಮದುವೆಮಾಡಿಕೊಳ್ಳಬೇಕಾಯಿತು. ಹೆಲೀನಳು ಯಾರನ್ನು ಮದುವೆಯಾಗುವುದಕ್ಕಾಗಿ ಹೇಳತೀರದ ತೊಂದರೆಗಳನ್ನು ಅನುಭವಿಸಿ ಕೊನೆಗೆ ಆತನನ್ನೇ ಕೈಹಿಡಿದಾಗ್ಯೂ ಬೆರ್ಟ್ರಮನು ಇವಳನ್ನು ಪ್ರೀತಿಸುವಂತೆ ಮಾಡುವುದು ದೊರೆಯ ಕೈಯಲ್ಲಾಗದುದರಿಂದ ಈ ವಿವಾಹವು ಇವಳಿಗೆ ಸಂತೋಷದಾಯಕವಾಗಲಿಲ್ಲ.

ಹೆಲೀನಳನ್ನು ಮದುವೆಯಾದ ಸ್ವಲ್ಪ ಕಾಲದಲ್ಲಿಯೇ ಬೆರ್ಟ್ರಮನು ತಾನು ಆಸ್ಥಾನವನ್ನು ಬಿಟ್ಟು ಕೆಲವು ದಿನಗಳು ಹೋಗಿಬರುವುದಕ್ಕೆ ಅಪ್ಪಣೆಯನ್ನು ತೆಗೆದುಕೊಂಡು ಬಾರೆಂದು ಹೆಲೀನಳನ್ನು ದೊರೆಯ ಬಳಿಗೆ ಕಳುಹಿಸಿದನು. ಅವಳು ಹೋಗಿ ಅಪ್ಪಣೆಯನ್ನು ತಂದ ಮೇಲೆ ಬೆರ್ಟ್ರಮನು ಅವಳನ್ನು ಕುರಿತು—" ಎಲೌ, ನಾನು ಈ ವಿವಾಹಕ್ಕೆ ಸಿದ್ಧನಾಗಿರಲಿಲ್ಲವಾದುದರಿಂದ ನನ್ನ ಮನಸ್ಸು ಅಸ್ಥಿರವಾಗಿದೆ. ಆದುದರಿಂದ ನಾನು ಹಿಡಿಯಬೇಕೆಂದಿರುವ ಮಾರ್ಗವನ್ನು ನೋಡಿ ಆಶ್ಚರ್ಯಪಡಬೇಡ" ಎಂದನು. ಹೆಲೀನಳು ಆಶ್ಚರ್ಯಗೊಳ್ಳದಿದ್ದಾಗ್ಯೂ ತನ್ನನ್ನು

ಅವನು ಬಿಡಬೇಕೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿದುಕೊಂಡಳು. ಅವನು ಅವಳನ್ನು ತನ್ನ ತಾಯಿಯ ಮನೆಗೆ ಹೋಗೆಂದು ಆಜ್ಞಾಪಿಸಿದನು. ಹೆಲೀನಳು ನಿದರ್ಶನವಾದ ಈ ತರದ ಮಾತುಗಳನ್ನು ಕೇಳಿ— “ಓ, ಪ್ರಭುವೇ, ಇದಕ್ಕೆ ನಾನು ಪ್ರತ್ಯುತ್ತರವನ್ನು ಹೇಳಲಾರೆನು. ಸ್ವಗೃಹದಿಂದುಂಟಾಗುವ ಸಂತೋಷಗಳು ನನ್ನ ಅಪಾರವಾದ ಅದೃಷ್ಟವನ್ನು ಸರಿಮಾಡಲಾರದಿರುವುದರಿಂದ ನಾನು ತಮ್ಮ ಅತ್ಯಂತ ವಿಧೇಯಳಾದ ದಾಸಿಯಾಗಿರುತ್ತ, ಆ ಯೋಗ್ಯತೆಯನ್ನು ವೃದ್ಧಿಪಡಿಸುವುದಕ್ಕೆ ದೃಢಮನಸ್ಸಿನಿಂದ ಪ್ರಯತ್ನಪಡುವೆನು” ಎಂದಳು. ಆದರೆ ಈ ದೈನ್ಯವಾದ ಮಾತುಗಳಿಂದಲೂ ಕೂಡ ಬೆಟ್ರ್ರಮನ ಎದೆಯು ಕರಗಲಿಲ್ಲ. ಅವನು ಮರ್ಯಾದೆಪೂರ್ವಕವಾದ ಮಾತುಗಳನ್ನು ಕೂಡ ಆಡದೆಯೇ ಅವಳನ್ನಗಲಿ ಹೊರಟುಹೋದನು.

ಆಗ ಆಶ್ರಯಹೀನಳಾದ ಹೆಲೀನಳು ಕೌಂಟೆಸ್‌ಳ ಬಳಿಗೆ ಹಿಂದಿರುಗಬೇಕಾಯಿತು. ಆದರೆ ಅವಳು ಮೊದಲು ಸುರಕ್ಷಿತವಾಗಿ ಪ್ಯಾರಿಸನ್ನು ಸೇರಿ ಅಲ್ಲಿ ದೊರೆಯ ರೋಗವನ್ನು ಗುಣಪಡಿಸಿ ತನಗೆ ಇಷ್ಟನಾದ ಬೆಟ್ರ್ರಮನನ್ನು ಮದುವೆಮಾಡಿಕೊಂಡು ಅತಿ ಖಿನ್ನಳಾಗಿ ತನ್ನತ್ತೆಯ ಮನೆಗೆ ಹಿಂತಿರುಗಿದವಳಾದಳು. ಮನೆಯನ್ನು ಪ್ರವೇಶಿಸುತ್ತಲೇ ಅವಳ ಎದೆಯನ್ನು ಆಗಲೇ ಕುಂದುವಹಾಗೆ ಮಾಡಿದ ಬೆಟ್ರ್ರಮನ ಕಾಗದವೂ ಇವಳಿಗೆ ತಲಪಿತು.

ಸಾಧ್ವಿಯಾದ ಕೌಂಟೆಸ್‌ಳು ಇವಳಿಗೆ ಮನಃಪೂರ್ವಕವಾದ ಸ್ವಾಗತವನ್ನಿತ್ತು ಬೆಟ್ರ್ರಮನು ಇವಳನ್ನು ಮದುವೆಯಾದ ದಿವಸವೇ ಇವಳನ್ನು ಅಗಲಿ ಜರಿದುದಕ್ಕಾಗಿ ವ್ಯಥೆಗೊಂಡು ಇವಳನ್ನು ಸಮಾಧಾನಪಡಿಸುವುದಕ್ಕಾಗಿ ಕೆಲವು ದಯಾಪೂರ್ವಕವಾದ ಮಾತುಗಳನ್ನಾಡಿದಳು. ಆದರೆ ಆ ಮಾತುಗಳು ಅವಳನ್ನು ಸಂತೋಷಪಡಿಸಲಾರದೆ ಹೋದುವು. ಆಗ ಹೆಲೀನಳು— “ಎಲೌ, ಪೂಜ್ಯಳೇ, ನಾನು ಪತಿಯಿಂದ ಬಿಡಲ್ಪಟ್ಟವಳಾದೆನು” ಎಂದು ಗೋಳಿಟ್ಟಳು. ಅನಂತರದಲ್ಲಿ ಬೆಟ್ರ್ರಮನ ಕಾಗದದಲ್ಲಿ— “ನನ್ನಿಂದ ಎಂದಿಗೂ ಬಿಡಲ್ಪಡದ ನನ್ನ ಉಂಗುರವನ್ನು ನೀನು ಹೊಂದಿದಾಗ ನನ್ನನ್ನು ಗಂಡನೆಂದು ಕರೆ. ಅಂತಹ ಸಂದರ್ಭದಲ್ಲಿ ನಾನೆಂದಿಗೂ ನಿನ್ನನ್ನು ಬಿಡುವುದಿಲ್ಲ” ಎಂದಿರುವುದನ್ನು ಓದಿ— “ಇದು ಭಯಂಕರವಾದ ಮಾತು!” ಎಂದಳು.

ಕೌಂಟೆಸ್——“ ಹೆಲೀನಾ, ಸ್ಥೈರಿಸು. ಈಗ ಬೆರ್ಟ್ರಮನು ಹೊರಟುಹೋಗಿರುವುದರಿಂದ ನೀನೇ ನನ್ನ ಮಗಳು. ಬೆರ್ಟ್ರಮನಂತಹ ಇಪ್ಪತ್ತು ಜನರಿಂದ ಸೇವಿತನಾಗುವ ಒಬ್ಬ ದೊಡ್ಡಮನುಷ್ಯನು ನಿನ್ನ ಪ್ರಿಯನಾಗಿರುವುದಕ್ಕರ್ಹನು.”

ಈ ರೀತಿಯಾದ ಉಪಚಾರದ ಮಾತುಗಳಿಂದ ಅವಳನ್ನು ಸಮಾಧಾನಪಡಿಸತೊಡಗಿದಳು. ಆದರೆ ಹೆಲೀನಳು ಕಾಗದವನ್ನೇ ನೋಡುತ್ತ——“ ನಾನು ಪತ್ನಿಹೀನನಾಗಿರುವ ವರೆಗೂ ನನಗೆ ಫ್ರಾನ್ಸಿನಲ್ಲೇನೂ ಕೆಲಸವಿಲ್ಲ ” ಎಂದು ಗಟ್ಟಿಯಾಗಿ ಓದಿದಳು.

ಕೌಂಟೆಸ್——“ ಕಾಗದದಲ್ಲಿ ಆ ಮಾತು ಇದೆಯೆ ? ”

ಹೆಲೀನ——“ ಪೂಜ್ಯಳೇ, ಇದೆ.”

ಮಾರನೇ ದಿವಸ ಹೆಲೀನಳು ಕಾಣಲಿಲ್ಲ. ಅವಳು ಒಂದು ಕಾಗದದಲ್ಲಿ ತಾನು ಇದ್ದುದಕ್ಕಿದ್ದಹಾಗೆ ಹೊರಟುಹೋದುದಕ್ಕೆ ಕಾರಣವನ್ನು ಬರೆದು ಅದನ್ನು ತಾನು ಹೊರಟುಹೋದ ಮೇಲೆ ಕೌಂಟೆಸ್‌ಗೆ ಕೊಡಿರೆಂದು ಅವಳ ಸೇವಕರಿಗೆ ಆಜ್ಞಾಪಿಸಿ ಹೋಗಿದ್ದಳು. ಈ ಕಾಗದದಲ್ಲಿ——“ ಸ್ವರಾಜ್ಯದಿಂದಲೂ ಸ್ವಗೃಹದಿಂದಲೂ ಬೆರ್ಟ್ರಮನನ್ನು ನಾನು ಓಡಿಸಿರುವುದಕ್ಕಾಗಿ ಬಹಳ ವ್ಯಸನಪಡುತ್ತೇನೆ. ಈ ಪಾಪಪರಿಹಾರಕ್ಕಾಗಿ ಪುಣ್ಯಕ್ಷೇತ್ರವಾದ ಸೆಂಟ್ ಜಾಕ್ವೆಸ್ ಲಿಗ್ರಾಂಡ್‌ಗೆ ಯಾತ್ರಾರ್ಥಿಯಾಗಿ ಹೋಗಿಬರುವೆನು. ಬೆರ್ಟ್ರಮನೇ, ನೀನು ದ್ವೇಷಿಸಿದ ನಿನ್ನ ಭಾರ್ಯೆಯು ಮನೆಗೆ ಎಂದೆಂದಿಗೂ ಬಾರಳು ” ಎಂದು ಬರೆದಿದ್ದಳು.

ಬೆರ್ಟ್ರಮನು ತಾನು ಪ್ಯಾರಿಸನ್ನು ಬಿಟ್ಟು ಹೋಗಿ ಫ್ಲಾರೆನ್ಸ್‌ನ್ನು ಸೇರಿ ಅಲ್ಲಿ ಡ್ಯೂಕನ ಸೈನ್ಯದಲ್ಲಿ ಒಬ್ಬ ಅಧಿಕಾರಿಯಾದನು. ಆ ಮೇಲೆ ಯುದ್ಧಗಳಲ್ಲಿ ಜಯಶೀಲನಾಗಿ ತನ್ನ ಧೀರತ್ವದಿಂದ ಪ್ರಸಿದ್ಧಿಹೊಂದಿರಲು ಹೆಲೀನಳು ತನ್ನನ್ನು ಇನ್ನು ಮೇಲೆ ತೊಂದರೆಪಡಿಸುವುದಿಲ್ಲವೆಂದು ತನ್ನ ತಾಯಿಯಿಂದ ಕೆಲವು ಕಾಗದಗಳು ತಲಪಿದವು ಇದನ್ನು ತಿಳಿದು ಬೆರ್ಟ್ರಮನು ತಾನು ಸ್ವರಾಜ್ಯಕ್ಕೆ ಹಿಂತಿರುಗಲು ಸಿದ್ಧನಾಗಿರುವಾಗ ಹೆಲೀನಳೂ ಒಬ್ಬ ಯಾತ್ರಾರ್ಥಿಯ ಉಡಿಗೆಯಲ್ಲಿ ಫ್ಲಾರೆನ್ಸ್‌ನಗರವನ್ನು ತಲಪಿದಳು. ಸೆಂಟ್ ಜಾಕ್ವೆಸ್ ಲಿಗ್ರಾಂಡ್‌ಗೆ ಹೋಗತಕ್ಕ ಯಾತ್ರಾರ್ಥಿಗಳೆಲ್ಲಾ ಫ್ಲಾರೆನ್ಸ್‌ನ ಮಾರ್ಗವಾಗಿ ಹೋಗುತ್ತಿದ್ದರು. ಹೆಲೀನಳು ಆ ಪಟ್ಟಣವನ್ನು ತಲಪಿ, ಅಲ್ಲಿ ಒಬ್ಬ ವಿಧವೆಯು ಇರುವಳೆಂದೂ

ಅವಳು ಯಾತ್ರಾರ್ಥಿಗಳಾಗಿ ಬರತಕ್ಕವರಿಗೆ ಸತ್ಕಾರಗಳನ್ನು ಮಾಡುವ ಳೆಂದೂ ತಿಳಿದಳು. ಆದುದರಿಂದ ಹೆಲೀನಳು ಆ ಮನೆಗೆ ಬಂದಳು. ಅವಳು ಇವಳನ್ನು ಆದರಿಸಿ—“ ಎಲೌ, ನಾರಿಯೇ, ಈ ಪ್ರಖ್ಯಾತವಾದ ಪಟ್ಟಣದಲ್ಲಿರುವ ಆಶ್ಚರ್ಯಗಳನ್ನೆಲ್ಲಾ ನೋಡಿಕೊಂಡು ಬರೋಣ, ನೀನು ಡ್ಯೂಕನ ಸೈನ್ಯವನ್ನು ನೋಡಲಿಚ್ಛಿಸಿದರೆ ಅದನ್ನೂ ನೋಡುವಿ. ಆ ಸೈನ್ಯದಲ್ಲಿ ಸಾಹಸಕಾರ್ಯಗಳಿಂದ ಪ್ರಸಿದ್ಧಿ ಹೊಂದಿದ ಕೌಂಟ್‌ರೂ ಸಿಲಾನ್ ಎಂಬ ನಿಮ್ಮ ದೇಶದವನೊಬ್ಬನಿದ್ದಾನೆ” ಎಂದಳು ಹೆಲೀ ನಳು ತಾನು ಬೆಟ್ರ್ರಮನನ್ನು ನೋಡುವೆನೆಂಬಾಶೆಯಿಂದ ಆಗಲೆಂದು ಒಪ್ಪಿದಳು. ಆದುದರಿಂದ ಇವಳು ಅವಳ ಹಿಂದೆಯೇ ಹೋದಳು ತನ್ನ ಗಂಡನ ಮುಖವನ್ನು ಮತ್ತೊಂದುಸಲ ನೋಡುವುದು ಅವಳಿಗೆ ಬಹಳ ವ್ಯಸನವನ್ನೂ ಸಂತೋಷವನ್ನೂ ಉಂಟುಮಾಡತಕ್ಕುದಾಗಿತ್ತು

ಛತ್ರದ ಯಜಮಾನಿ—“ ಅವನು ಸುಂದರಪುರುಷನಲ್ಲವೆ ? ”

ಹೆಲೀನ—“ ದಿಟವಾಗಿಯೂ ಸುಂದರನು ”

ಅವರು ಹೋಗುತ್ತಿದ್ದ ದಾರಿಯಲ್ಲೆಲ್ಲಾ ವಿಧವೆಯು ಬೆಟ್ರ್ರಮನ ವಿಷಯವಾಗಿಯೇ ಮಾತಾಡಿದಳು. ಬೆಟ್ರ್ರಮನ ವಿವಾಹದ ವಿಷಯ ವನ್ನೂ ಹೆಂಡತಿಯನ್ನು ಬಿಟ್ಟು ತಾನು ಪ್ರತ್ಯೇಕವಾಗಿ ವಾಸಿಸುವುದ ಕ್ಕೋಸ್ಕರ ಡ್ಯೂಕನ ಸೈನ್ಯವನ್ನು ಹೇಗೆ ಪ್ರವೇಶಿಸಿದನೆಂಬುದನ್ನೂ ಹೆಲೀ ನಳಿಗ ತಿಳಿಸಿದಳು. ತನ್ನ ದುರದೃಷ್ಟಗಳ ವಿಷಯವಾದ ಈ ವೃತ್ತಾಂತ ವನ್ನೆಲ್ಲಾ ಇವಳು ಕೇಳುತ್ತಿದ್ದಳು. ಇದು ಮುಗಿದ ಮೇಲೆ ವಿಧವೆಯು ಪುನಃ ಮತ್ತೊಂದು ವಿಷಯವನ್ನು ಪ್ರಾರಂಭಿಸಿ—“ ಅಮ್ಮಾ, ಅವನು ನನ್ನ ಮಗಳನ್ನು ಮೋಹಿಸಿದ್ದಾನೆ ” ಎಂದು ಹೇಳಿದಳು. ಈ ಮಾತುಗ ಳನ್ನು ಕೇಳಿ ಹೆಲೀನಳು ಎದೆಗುಂದಿದವಳಾದಳು.

ಬೆಟ್ರ್ರಮನು ದೊರೆಯಿಂದ ಬಲಾತ್ಕರಿಸಲ್ಪಟ್ಟು ಈ ವಿವಾಹಕ್ಕೆ ಒಪ್ಪದಿದ್ದಾಗ್ಯೂ ಸ್ತ್ರೀವ್ಯಾಮೋಹವನ್ನು ಬಿಟ್ಟಿರಲಿಲ್ಲವೆಂದು ಕಾಣುತ್ತ ದೆ. ಏಕೆಂದರೆ ಇವನು ಫ್ಲಾರೆನ್ಸ್‌ನ ಸೈನ್ಯಕ್ಕೆ ಸೇರಿದಂದಿನಿಂದಲೂ ಈ ವಿಧವೆಯ ಮಗಳಲ್ಲಿ ಮೋಹಗೊಂಡಿದ್ದನು ಇದಕ್ಕಾಗಿ ಅವನು ಪ್ರತಿ ರಾತ್ರಿಯೂ ನಾನಾವಿಧವಾದ ಗಾನಗಳನ್ನೂ ಅವಳ ರೂಪಲಾವಣ್ಯಗಳ ವರ್ಣನೆಯನ್ನು ಕುರಿತ ಕೀರ್ತನೆಗಳನ್ನೂ ಗಾಯನಮಾಡುತ್ತ ಪ್ರತಿದಿ ನವೂ ಅವಳಿದ್ದ ಕೊಠಡಿಯ ಕಿಟಿಕಿಯ ಬಳಿಯಲ್ಲಿ ನಿಂತು ತನ್ನನ್ನು ವರಿ

ಸೆಂದು ಅವಳನ್ನು ಬೇಡುತ್ತಿದ್ದನು. ಎಲ್ಲರೂ ನಿದ್ರೆಗೆಯ್ಯುತ್ತಿರುವಾಗ ಅವಳ ಬಳಿಗೆ ಹೋಗುವುದಕ್ಕಾಗಿ ಅವಳನುಮತಿಯನ್ನು ಪಡೆಯಲು ಪ್ರಯತ್ನಿಸುತ್ತಿದ್ದನು. ಆದರೆ ಡೈಯನಳು ಈ ಅಯುಕ್ತವಾದ ಪ್ರಾರ್ಥನೆಗಳಿಗೊಪ್ಪಲಿಲ್ಲ. ಅವನು ವಿವಾಹಿತನೆಂದು ತಿಳಿದುದರಿಂದ ಅವನ ಪ್ರಯತ್ನಗಳಿಗೆ ಪ್ರೋತ್ಸಾಹವನ್ನೂ ಕೊಡಲಿಲ್ಲ. ಏಕೆಂದರೆ ಈಗ ಈ ಸ್ಥಿತಿಯಲ್ಲಿದ್ದಾಗ್ಯೂ ಕಾಪ್ಯುಲೆಟ್ಸ್ ಎಂಬ ಪ್ರಖ್ಯಾತವಂಶಜಳಾಗಿಯೂ ವಿವೇಕಿನಿಯಾಗಿಯೂ ಇದ್ದ ಈ ವಿಧವೆಯು ಇವಳನ್ನು ವಿವೇಕವತಿಯಾಗಿ ಮಾಡಿದ್ದಳು.

ಈ ಸಾಧ್ವಿಯು ಇವುಗಳನ್ನೆಲ್ಲಾ ಹೆಲೀನಳಿಗರುಹಿ ತನ್ನ ಮಗಳು ಬಹಳ ವಿವೇಕಶಾಲಿಯಾಗಿಯೂ ಗುಣವತಿಯಾಗಿಯೂ ಇರುವ ಕನ್ಯೆಯೆಂದೂ ಆ ಸದ್ಗುಣಗಳು ತಾನು ಅವಳಿಗೆ ಕಲಿಸಿದ ವಿದ್ಯಾಬುದ್ಧಿಗಳಿಂದುಂಟಾದುವೆಂದೂ ಬೆಟ್ರ್ರಮನು ನಾಳೆಯ ದಿವಸ ಫ್ಲಾರೆನ್ಸ್‌ನು ಬಿಡಬೇಕೆಂದಿರುವುದರಿಂದ ಈ ರಾತ್ರಿ ಇವಳ ಭೇಟಿಗೆ ಬರಬೇಕೆಂದು ಬಹಳ ಕುತೂಹಲವುಳ್ಳವನಾಗಿರುವನೆಂದೂ ಹೇಳಿದಳು.

ಬೆಟ್ರ್ರಮನು ಈ ವಿಧವೆಯ ಮಗಳನ್ನು ಮೋಹಿಸಿರುವುದಾಗಿ ಕೇಳಿದುದರಿಂದ ಹೆಲೀನಳು ಬಹು ದುಃಖಿತಳಾದರೂ ತನ್ನ ಪ್ರಿಯನನ್ನು ಪುನಃ ಹೊಂದುವುದಕ್ಕೆ ಒಂದುಪಾಯವನ್ನು ಕಲ್ಪಿಸಿ, ವಿಧವೆಯನ್ನು ಕುರಿತು—" ಎಲೌ, ಪೂಜ್ಯಳೇ, ಬೆಟ್ರ್ರಮನಿಂದ ಬಿಡಲ್ಪಟ್ಟ ಹೆಲೀನಳು ನಾನೇ. ನೀನೂ ನಿನ್ನ ಮಗಳೂ ನನ್ನ ಕೋರಿಕೆಯನ್ನು ನೆರವೇರಿಸಬೇಕು. ನಾನು ಡೈಯನಳ ವೇಷವನ್ನು ಹಾಕಿಕೊಂಡು ಬೆಟ್ರ್ರಮನನ್ನು ಮೋಹಗೊಳಿಸುವೆನು. ಏಕೆಂದರೆ ಬೆಟ್ರ್ರವನು—'ನೀನು ನನ್ನ ಉಂಗುರವನ್ನು ತೆಗೆದುಕೊಂಡರೆ, ನನ್ನ ಪ್ರಿಯಳಾಗುವಿ' ಎಂದು ನನಗೆ ಹೇಳಿದ್ದನು. ಆ ಉಂಗುರವನ್ನು ತೆಗೆದುಕೊಳ್ಳುವುದಕ್ಕಾಗಿ ಇಷ್ಟೂ ಮಾಡಬೇಕಾಗಿ ಬಂದಿದೆ" ಎಂದಳು.

ವಿಧವೆಯೂ ಅವಳ ಮಗಳೂ ಈ ಕನ್ನಿಕೆಯ ನಿರ್ಭಾಗ್ಯತೆಯನ್ನು ನೋಡಿ ಕನಿಕರಗೊಂಡವರಾಗಿಯೂ ಇವಳು ಅವರಿಗೆ ಕೊಟ್ಟ ಹಣದ ಚೀಲಕ್ಕಾಗಿ ಬಹಳ ಸಂತೋಷಗೊಂಡವರಾಗಿಯೂ ಇವಳಿಗೆ ಸಹಾಯ ಮಾಡುವುದಾಗಿ ವಾಗ್ದಾನಮಾಡಿದರು. ಬೆಟ್ರ್ರಮನು ಹೆಲೀನಳ ಮರಣವಾರ್ತೆಯನ್ನು ಕೇಳುವುದರಿಂದ ಡೈಯನಳನ್ನು ವರಿಸಲು ಬಹಳ ಆತುರ

ಗೊಳ್ಳುವನೆಂದು ಯೋಚಿಸಿ ಅದೇ ದಿವಸವೇ ಆವಳು 'ಹೆಲೀನಳು ಸತ್ತಳು' ಎಂಬ ವದಂತಿಯನ್ನು ಹುಟ್ಟಿಸಿದಳು. ತಾನು ಆತನಿಂದ ಉಂಗುರವನ್ನೂ ಆತನಿಂದ ತನ್ನನ್ನು ವರಿಸುವೆನೆಂಬ ವಾಗ್ದಾನವನ್ನೂ ಹೊಂದಿದರೆ ಮುಂದೆ ತನ್ನ ಕಾರ್ಯವು ಫಲದಾಯಕವಾಗದಿರದೆಂದು ಭಾವಿಸಿದಳು.

ರಾತ್ರಿಯಾದ ಮೇಲೆ ಬೆರ್ಟ್ರಮನು ಡೈಯನಳ ಬಳಿಗೆ ಹೋಗಲನುಮತಿಯನ್ನು ಪಡೆದು ಕೊಠಡಿಯನ್ನು ಪ್ರವೇಶಿಸಲು, ಡೈಯನ ವೇಷದಲ್ಲಿದ್ದ ಹೆಲೀನಳು ಅವನನ್ನು ಸ್ವೀಕರಿಸುವುದಕ್ಕೆ ಸಿದ್ಧಳಾಗಿದ್ದಳು. ಅವನು ಹೆಲೀನಳಿಗೆ ಮಾಡಿದ ಸ್ತೋತ್ರಗಳೂ ಪ್ರೀತಿಪೂರ್ವಕವಾದ ಸಂಭಾಷಣೆಗಳೂ (ಡೈಯನವನ್ನು ಕುರಿತು ಹೇಳಿದುವಾದರೂ) ಇವಳಿಗೆ ಬಹಳ ಕರ್ಣಾನಂದವನ್ನುಂಟುಮಾಡಿದುವು. ಬೆರ್ಟ್ರಮನು ಅವಳನ್ನು ಬಹಳವಾಗಿ ಮೆಚ್ಚಿ ತಾನು ಅವಳ ಪತಿಯಾಗುವೆನೆಂದು ದೃಢ ವಾಗ್ದಾನವನ್ನು ಮಾಡಿದನು. ಯಾರ ಸಂಭಾಷಣೆಯು ಇವನಿಗೆ ಅತ್ಯಾನಂದವನ್ನುಂಟುಮಾಡಿತೋ ಅವಳು ತನ್ನ ಪೂರ್ವ ಪ್ರಿಯಳಾದ ಹೆಲೀನಳು ಎಂದು ಅವನಿಗೆ ಗೊತ್ತಾದಮೇಲೂ, ಅವನು ಮಾಡಿದ ವಾಗ್ದಾನಗಳು ಅಚಲವಾದುವುಗಳಾದರೆ, ತಾನು ಅನುಭವಿಸಿದ ಕಷ್ಟಗಳೆಲ್ಲಾ ಫಲಪ್ರದವಾದುವೆಂದು ಹೆಲೀನಳು ಭಾವಿಸಿದಳು.

ಬೆರ್ಟ್ರಮನು ಹೆಲೀನಳು ಇಷ್ಟು ಬುದ್ಧಿವತಿಯೆಂದು ಮೊದಲೇ ತಿಳಿದಿದ್ದರೆ, ಅವಳನ್ನು ತಾತ್ಸಾರ ಮಾಡುತ್ತಲೇ ಇರಲಿಲ್ಲ. ಅವಳನ್ನು ಪದೇ ಪದೇ ನೋಡುತ್ತಿದುದರಿಂದ ಅವಳ ಸೌಂದರ್ಯವು ಇವನನ್ನು ಮೆಚ್ಚಿಸಿರಲಿಲ್ಲ. (ಯಾವುದಾದರೊಂದು ಸುಂದರವಾದ ವಸ್ತುವಿನ ಪ್ರಥಮದರ್ಶನದಲ್ಲಿ ನಮಗೆ ಉಂಟಾಗುವಷ್ಟು ಆನಂದವು ಮುಂದೆ ಮುಂದೆ ಉಂಟಾಗುವುದಿಲ್ಲ.) ಅವಳು ಯಾವಾಗಲೂ ಅವನಿಗೆ ಪ್ರೀತಿ ಪೂರ್ವಕವಾದ ಮರ್ಯಾದೆಯನ್ನು ಮಾಡುತ್ತ ಮೌನವಾಗಿದುದರಿಂದ ಅವಳ ಬುದ್ಧಿ ಕುಶಲತೆಯ ವಿಷಯವಾಗಿ ಅವನಿಗೇನೂ ತಿಳಿದಿರಲಿಲ್ಲ. ಆದರೆ ಈಗ ತನ್ನ ಕೋರಿಕೆಯು ನೆರವೇರಿ ಮುಂದೆ ತಾನು ಅದೃಷ್ಟವತಿಯಾಗುವೆನೆಂಬ ಸಂಭ್ರಮದಿಂದ ಹೆಲೀನಳು ಅವನನ್ನು ಸಂತೋಷಪಡಿಸುವುದಕ್ಕೆ ತನ್ನ ಬುದ್ಧಿ ಶಕ್ತಿಯನ್ನೆಲ್ಲಾ ಪ್ರಕಾಶಪಡಿಸಿದಳು. ಇದನ್ನೆಲ್ಲಾ ನೋಡಿ ಬೆರ್ಟ್ರಮನು ಆಶ್ಚರ್ಯಭರಿತನಾಗಿ ಅವಳನ್ನು ತನ್ನ ಹೆಂಡತಿಯಾಗಿರಬೇಕೆಂದು ಕೇಳಿದನು. ಆಗ ಹೆಲೀನಳು ವಿಶ್ವಾಸದ ಗುರುತಾಗಿ ಉಂಗುರವನ್ನು ಕೊಡೆಂದು ಅವ

ನನ್ನು ಪ್ರಾರ್ಥಿಸಲು ಅವನು ತತ್ಕ್ಷಣವೇ ಅದನ್ನು ಕೊಟ್ಟುಬಿಟ್ಟನು. ತನಗೆ ಅತ್ಯಂತೋಪಯುಕ್ತವಾದ ಈ ಅಂಗುಳಿಯಕಕ್ಕೆ ಪ್ರತಿಯಾಗಿ ಅವಳು ತನಗೆ ದೊರೆಯು ಬಹುಮಾನವಾಗಿ ಕೊಟ್ಟಿದ್ದ ಉಂಗುರವನ್ನು ಅವನಿಗೆ ಕೊಟ್ಟು, ಬೆಳಗಿನ ಝಾಮದಲ್ಲಿಯೇ ಅವನನ್ನು ಕಳುಹಿಸಿದಳು. ಅನಂತರ ಅವನು ತನ್ನ ನಗರಕ್ಕೆ ಪ್ರಯಾಣ ಹೊರಟನು.

ಹೆಲೀನಳು ತನ್ನಿಷ್ಟ ಸಿದ್ಧಿಯಾಗುವವರೆಗೂ ಆ ವಿಧವೆ, ಡೈಯನ ಇವರ ಸಹಾಯವು ಅತ್ಯಂತ ಮುಖ್ಯವಾಗಿದುದರಿಂದ ಇವರನ್ನು ತನ್ನೊಡನೆ ಪ್ಯಾರಿಸಿಗೆ ಬರಬೇಕೆಂದು ಪ್ರಾರ್ಥಿಸಿದಳು. ಅವರು ಅಲ್ಲಿಗೆ ತಲಪಿದಾಗ ದೊರೆಯು ರೂಸಿಲಾನಿನ ಕೌಂಟೆಸ್‌ನ್ನು ನೋಡಿಕೊಂಡು ಬರುವುದಕ್ಕಾಗಿ ಅಲ್ಲಿಗೆ ಹೋಗಿದ್ದನು. ಹೆಲೀನಳೂ ಮಹಾತ್ವರೆಯಿಂದ ಅಲ್ಲಿಗೆ ಹೊರಟಳು.

ಆಗ ದೊರೆಯು ಸಂಪೂರ್ಣಾರೋಗ್ಯದಲ್ಲಿದ್ದನು. ತನ್ನ ಸುಸ್ಥಿತಿಗೆ ಕಾರಣಳಾದ ಹೆಲೀನಳಲ್ಲಿ ಬಹು ಕೃತಜ್ಞನಾಗಿದುದರಿಂದ ಆತನು ಕೌಂಟೆಸ್‌ನ್ನು ಕುರಿತು—“ ಕೌಂಟೆಸ್, ನಿನ್ನ ಕುಮಾರನು ಮೂರ್ಖತನದಿಂದ ಅಂಥಾ ಕನ್ಯಾರತ್ನವನ್ನು ಕಳೆದುಕೊಂಡನು ” ಎಂದನು. ಆದರೆ ಈ ಪ್ರಸ್ತಾಪವು ಹೆಲೀನಳ ಮರಣ ವಾರ್ತೆಯನ್ನು ಕೇಳಿ ಶೋಕಿಸುತ್ತಿದ್ದ ಆಕೆಯನ್ನು ಮತ್ತಷ್ಟು ದುಃಖಗೊಳಿಸುವುದೆಂದು ಯೋಚಿಸಿ— “ ಪೂಜ್ಯಳೇ, ನಾನೆಲ್ಲವನ್ನೂ ಕ್ಷಮಿಸಿ, ಮರೆತು ಇದ್ದೇನೆ ” ಎಂದನು. ಇವೆಲ್ಲವನ್ನೂ ಕೇಳುತ್ತಿದ್ದ ಯೋಗ್ಯನಾದ ಲೆಫ್ಯು—“ ಈ ಯುವಕನು ರಾಜಶಾಸನವನ್ನು ಮೀರಿದವನಾಗಿಯೂ ಮಾತೃ ದ್ರೋಹಿಯಾಗಿಯೂ ಕರ್ಣಾನಂದವನ್ನುಂಟುಮಾಡುವ ಮಾತುಗಳಿಂದಲೂ ನೇತ್ರಾನಂದವನ್ನುಂಟುಮಾಡುವ ಸೌಂದರ್ಯದಿಂದಲೂ ಹೃದಯಾನಂದವನ್ನುಂಟುಮಾಡುವ ಸುಗುಣಗಳಿಂದಲೂ ಸಂಪನ್ನೆಯಾದ ಸತಿಯನ್ನು ಕಳೆದುಕೊಂಡಿರುವನು ” ಎಂದನು. ದೊರೆಯು—“ ಕಳೆದು ಹೋದುದನ್ನು ಹೊಗಳುವುದರಿಂದ ಮನಸ್ಸಿಗೆ ಮತ್ತಷ್ಟು ವ್ಯಸನವಾಗುತ್ತದೆ. ಬೆರ್ಟ್ರಮನನ್ನು ಕರೆ ” ಎಂದನು.

ಅದೇ ಮೇರೆಗೆ ಬೆರ್ಟ್ರಮನು ದೊರೆಯ ಬಳಿಗೆ ಬಂದು, ತಾನು ಹೆಲೀನಳಿಗೆ ಮಾಡಿದ ಅಪರಾಧಕ್ಕಾಗಿ ವ್ಯಥೆಪಟ್ಟನು. ದೊರೆಯು ಅವನನ್ನು ಕ್ಷಮಿಸಿ ಎಂದಿನಂತೆ ಪ್ರೀತಿಸಿದನು. ಆದರೆ ದೊರೆಯ ಕಟಾ

ಕ್ಷವು ಮಾರ್ಪಾಟಾಯಿತು. ಏಕೆಂದರೆ ಆತನು ಹೆಲೀನಳಿಗೆ ಕೊಟ್ಟಿದ್ದ ಉಂಗುರವು ಬೆರ್ಟ್ರಮನ ಬೆರಳಿನಲ್ಲಿರುವುದನ್ನು ನೋಡಿ, ಅವಳು ಆ ಅಂಗುಳಿಯಕವನ್ನು ಎಂದಿಗೂ ಬಿಟ್ಟಿರಲಾರಳೆಂದೂ ಅವಳಿಗೆ ಯಾವುದಾದರೂ ಆಪತ್ತು ಸಂಭವಿಸಿದ ಪಕ್ಷದಲ್ಲಿ ಅದನ್ನು ತನಗೆ ಕಳಿಹಿಸುವುದಾಗಿ ಹೇಳಿದ್ದಳೆಂದೂ ದೊರೆಯು ಜ್ಞಾಪಕಮಾಡಿಕೊಂಡು ಬೆರ್ಟ್ರಮನನ್ನು ಕುರಿತು—“ಈ ಅಂಗುಳಿಯಕವು ನಿನಗೆ ಎಲ್ಲಿ ದೊರೆಯಿತು” ಎಂದು ಪ್ರಶ್ನಿಸಲು, ಅವನು ಯಾವಳೋ ಒಬ್ಬ ಹೆಂಗಸು ಕಿಟಿಕಿಯಿಂದಾಚೆಗೆ ಬಿಸುಟಿದ್ದಳೆಂದೂ, ಆ ಮದುವೆಯ ದಿನದಿಂದೀಚೆಗೆ ಹೆಲೀನಳನ್ನು ತಾನು ನೋಡಲೇ ಇಲ್ಲವೆಂದೂ ಅಸಂಭಾವ್ಯವಾದ ಕಥೆಯನ್ನು ಹೇಳಿದನು ಬೆರ್ಟ್ರಮನು ದ್ವೇಷದಿಂದ ಹೆಲೀನಳನ್ನು ನಾಶಮಾಡಿರಬಹುದೆಂದು ದೊರೆಯು ಹೆದರಿ, ಬೆರ್ಟ್ರಮನನ್ನು ಹಿಡಿದುಕೊಳ್ಳುವಂತೆ ಕಾವಲುಗಾರರಿಗೆ ಆಜ್ಞಾಪಿಸಿದನು. ಈ ವೇಳೆಗೆ ಡೈಯನಳೂ ಅವಳ ತಾಯಿಯೂ ಪ್ರವೇಶಿಸಿ, ದೊರೆಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿ, ಬೆರ್ಟ್ರಮನು ಡೈಯನಳನ್ನು ವರಿಸುವುದಾಗಿ ವಾಗ್ದಾನ ಮಾಡಿದುದರಿಂದ ಅವನು ಈ ಕನ್ಯೆಯನ್ನು ಮದುವೆಮಾಡಿಕೊಳ್ಳುವಂತೆ ಆಜ್ಞಾಪಿಸೆಂದು ಕೇಳಿಕೊಂಡರು. ಬೆರ್ಟ್ರಮನು ದೊರೆಯ ರೌದ್ರಕ್ಕೆ ಹೆದರಿ—“ನಾನು ಅಂತಹ ವಾಗ್ದಾನವನ್ನು ಮಾಡಲಿಲ್ಲ” ಎಂದನು ಆಗ ಡೈಯನಳು ತಾನು ಹೇಳಿದುದನ್ನು ದೃಢಮಾಡುವುದಕ್ಕಾಗಿ ಹೆಲೀನಳು ತನಗೆ ಕೊಟ್ಟಿದ್ದ ಉಂಗರವನ್ನು ತೋರಿಸಿ—“ಅವನು ನನ್ನನ್ನು ವರಿಸುವೆನೆಂದು ಹೇಳಿ ನನಗೆ ಕೊಟ್ಟ ಉಂಗುರಕ್ಕೆ ಪ್ರತಿಯಾಗಿ ನಾನು ಅವನಿಗೆ ಕೊಟ್ಟಿರುವ ಉಂಗರವನ್ನು ಧರಿಸಿರುತ್ತಾನೆ, ನೋಡಿರಿ” ಎಂದಳು. ಇದನ್ನು ಕೇಳಿ ದೊರೆಯು ಅವಳನ್ನು ಹಿಡಿಯಿರೆಂದು ಆಜ್ಞಾಪಿಸಿದನು. ಅವಳು ಉಂಗುರದ ವಿಷಯವಾಗಿ ಹೇಳಿದ ವೃತ್ತಾಂತವನ್ನು ಬೆರ್ಟ್ರಮನು ಒಪ್ಪದಿದುದರಿಂದ ದೊರೆಯ ಸಂಶಯಗಳು ದೃಢವಾದುವು. ಆದುದರಿಂದ ಅವರು ಹೆಲೀನಳ ಉಂಗರವನ್ನು ಪಡೆದ ರೀತಿಯನ್ನು ವ್ಯಕ್ತಪಡಿಸದಿದ್ದರೆ, ಅವರನ್ನು ಮರಣ ದಂಡನೆಗೆ ಗುರಿಮಾಡುವುದಾಗಿ ಹೇಳಿದನು. ಡೈಯನಳು—“ಮಹಾಸ್ವಾಮಿ, ಈ ಉಂಗುರವನ್ನು ನಮಗೆ ಮಾರಿದ ವರ್ತಕಳನ್ನು ಕರೆದು ತರುವುದಕ್ಕೆ ನನ್ನ ತಾಯಿಗೆ ಆಜ್ಞೆಮಾಡಿ” ಎಂದಳು. ದೊರೆಯು ಇದಕ್ಕೆ ಸಮ್ಮತಿಸಲು, ವಿಧವೆಯು ಹೊರಕ್ಕೆ ಹೋಗಿ ಹೆಲೀನಳನ್ನೇ ಒಳಕ್ಕೆ ಕರೆದುತಂದಳು.

ತನ್ನ ಮಗನು ಅಪಾಯಕ್ಕೆ ಗುರಿಯಾಗಿರುವುದನ್ನು ನೋಡಿ ಭಯಾಕ್ರಾಂತಳಾಗಿಯೂ ಹೆಲೀನಳನ್ನು ನಾಶಮಾಡಿರುವನೆಂಬ ಸಂಶಯದಿಂದ ವ್ಯಸನಾಕ್ರಾಂತಳಾಗಿಯೂ ಇದ್ದ ಕೌಂಟೇಸಳು ತನ್ನ ವಾತ್ಸಲ್ಯಕ್ಕೆ ಪಾತ್ರಳಾದ ಹೆಲೀನಳನ್ನು ನೋಡಿ, ಅಪಾರ ಸಂತೋಷ ಭರಿತಳಾದಳು. ದೊರೆಯು ಸಂತೋಷದಿಂದವಳನ್ನು ನೋಡಿ—" ಇವಳೇ ಬೆಟ್ರ್ರಮನ ಹೆಂಡತಿಯು " ಎಂದನು.

ಹೆಲೀನ—" ಪ್ರಭುವೇ, ಅಲ್ಲ. ಅವನ ಹೆಂಡತಿಯ ಪ್ರತಿಬಿಂಬವು. ಹೆಸರಿಗೆ ಮಾತ್ರ. ಅವಳೇ ಅಲ್ಲ."

ಬೆಟ್ರ್ರಮ್—" ಎರಡೂ ! ಎರಡೂ ! ಕ್ಷಮಿಸಿ. "

ಹೆಲೀನ—" ಪ್ರಿಯನೇ, ನಾನು ಈ ಸುಂದರಿಯ ವೇಷದಲ್ಲಿದ್ದಾಗ ನೀನು ಬಹಳ ಆಶ್ಚರ್ಯಕರವಾದ ರೀತಿಯಲ್ಲಿದ್ದೆ. ಇದೊ ! ಕಾಗದ " ಎಂದು ಬಹಳ ಸಂತೋಷಧ್ವನಿಯಿಂದ ಅವನು ತನಗೆ ಮೊದಲು ಬರೆದಿದ್ದ ಕಾಗದವನ್ನು ಓದಿದಳು.

" ಪ್ರಿಯನೇ, ನಿನ್ನ ಹೇಳಿಕೆಯಂತೆಯೇ ನಿನ್ನ ಉಂಗರವನ್ನು ಹೊಂದಿದ್ದೇನೆ. ನೀನು ಈಗ ನನ್ನ ಪತಿಯಾಗಿರುವಿಯಾ ? "

ಬೆಟ್ರ್ರಮ " ನಾನು ಆ ದಿವಸ ರಾತ್ರಿ ನಿನ್ನೊಡನೆಯೇ ಮಾತಾಡಿದೆನೆಂಬುದನ್ನು ನೀನು ದೃಢಪಡಿಸಿದರೆ ನಿನ್ನನ್ನು ಪ್ರೀತಿಸುವೆನು. ಸದಾ ಪ್ರೀತಿಸುವೆನು."

ಇದೇನೂ ಕಷ್ಟಕರವಾದ ಕೆಲಸವಾಗಿರಲಿಲ್ಲ. ಏಕೆಂದರೆ ವಿಧವೆಯೂ ಡೈಯನಳೂ ಹೆಲೀನಳೊಂದಿಗೆ ಬಂದು, ಅದನ್ನು ದೃಢಪಡಿಸಿದರು. ತನಗೆ ಮಹೋಪಕಾರವನ್ನು ಮಾಡಿದ ಹೆಲೀನಳಿಗೆ ಡೈಯನಳು ಮಾಡಿದ ಸಹಾಯಕ್ಕಾಗಿ ದೊರೆಯು ಬಹಳ ಆನಂದಭರಿತನಾಗಿ ಅವಳನ್ನು ಒಬ್ಬ ಶ್ರೇಷ್ಠನಾದ ವರನಿಗೆ ಕೊಟ್ಟು ವಿವಾಹ ಮಾಡುವದಾಗಿ ಸಂತೋಷದಿಂದ ಒಪ್ಪಿದನು. ಹೆಂಗಸರು ಪ್ರಸಿದ್ಧ ಕಾರ್ಯಗಳನ್ನು ಮಾಡಿದಾಗ ಅವರಿಗೆ ಸಲ್ಲಿಸತಕ್ಕ ಬಹುಮಾನವು ಇಂಥದುದೇ ಎಂದು ಹೆಲೀನಳ ವೃತ್ತಾಂತದಿಂದ ಆತನಿಗೆ ತಿಳಿಯ ಬಂತು.

ಈ ರೀತಿಯಾಗಿ ಹೆಲೀನಳು ತನ್ನ ಕೋರಿಕೆಯಂತೆ ಬೆಟ್ರ್ರಮನ ಹೆಂಡತಿಯಾಗಿ ಘನವಂತಳಾದ ಆ ಕೌಂಟೇಸ್‌ಳ ಸೊಸೆಯಾಗಿ ರೂಸಿಲಾನಿನ ಕೌಂಟೇಸ್ ಪದವಿಗೆ ಬಂದಳು.

PRINTED AT THE WESLEYAN MISSION PRESS,
MYSORE.